ಮಂಗಳೂರು
ಶನಿವಾರ, 14 ಮಾರ್ಚ್ 2026
ಸಂಪುಟ 47, ಸಂಚಿಕೆ 345, ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಭೀಕರ ಅಪಘಾತ: ಮೂವರ ಬಲಿ | 02
ಸಿಇಸಿ ಪದಚ್ಯುತಿಗೆ ಪ್ರತಿಪಕ್ಷಗಳ ನೋಟಿಸ್ | 02
ಈಶಾನ್ಯದಲ್ಲಿ ಬಿಜೆಪಿಯಿಂದ ಶಾಂತಿ ಖಾತ್ರಿ | 02

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ:ದಶಮಿ, ನಕ್ಷತ್ರ: ಉತ್ತರಾಷಾಢ

ದಿನದ ಮಾತು

ಸದ್ಗುಣವು ಜ್ಞಾನದಿಂದ ಮೆರೆಯುತ್ತದೆ. ಅಜ್ಞಾನವು ಸಹನೆಯಿಂದ ಮೆರೆಯುತ್ತದೆ.

▲ ನೀತಿ ಕುಸುಮ

ವಿಶುದ್ಧ ಚಕ್ರ ಜಾಗೃತ ಆಗುವುದು ನಿಜವೇ?

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಲೂರು

• ಪುಟ ೬

ಆರ್‌ಎಸ್‌ಎಸ್ ವಾರ್ಷಿಕ ವರದಿ ಅಂಕಿ ಅಂಶ

ಶತಾಬ್ದಿ ವರ್ಷದ ಸಂಭ್ರಮ

ಗೃಹ ಸಂಪರ್ಕ ಅಭಿಯಾನ
3,89,465 ಹಳ್ಳಿಗಳ 10.02 ಕೋಟಿ ಮನೆಗಳಿಗೆ ಭೇಟಿ

37,048 ಸ್ಥಳಗಳಲ್ಲಿ ಹಿಂದು ಸಮ್ಮೇಳನ

1,34,766 ಒಟ್ಟು ಶಾಖೆ, ಮಿಲನ್ ಮತ್ತು ಮಂಡಲಿಗಳು

3.49 ಕೋಟಿ ಜನರು ಭಾಗಿ

• ವಿಶೇಷ ಪುಟ 9

ಕಿರುಸುದ್ದಿ

ಒಮಾನ್‌ನಲ್ಲಿ ಡ್ರೋನ್ ದಾಳಿ: ಇಬ್ಬರು ಭಾರತೀಯರು ಬಲಿ, ಹತ್ತು ಮಂದಿಗೆ ಗಾಯ

• **ಮಸ್ಕತ್:** ಒಮಾನ್‌ನ ಸೊಹಾರ್ ನಗರದ ಅಲ್-ಅವಾಹಿ ಕೈಗಾರಿಕಾ ನಗರದ ಮೇಲೆ ನಡೆದ ಡ್ರೋನ್ ದಾಳಿಯಲ್ಲಿ ಇಬ್ಬರು ಭಾರತೀಯರು ಮೃತಪಟ್ಟು, ಇತರ 10 ಮಂದಿ ಗಾಯಗೊಂಡಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ವಿದೇಶಾಂಗ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಆಸೀಮ್ ಆರ್. ಮಹಾಜನ್, ಸೊಹಾರ್ ನಗರದಲ್ಲಿ ನಡೆದ ಘಟನೆಯಲ್ಲಿ ಇಬ್ಬರು ಭಾರತೀಯರು ಮೃತಪಟ್ಟಿದ್ದಾರೆ. ಅವರ ಕುಟುಂಬಗಳಿಗೆ ನಾವು ತೀವ್ರ ಸಂತಾಪ ಸೂಚಿಸುತ್ತೇವೆ. ಗಾಯಗೊಂಡ 11 ಜನರಲ್ಲಿ 10 ಮಂದಿ ಭಾರತೀಯರಾಗಿದ್ದಾರೆ. ಅವರಲ್ಲಿ ಐವರನ್ನು ಪ್ರಾಥಮಿಕ ಚಿಕಿತ್ಸೆಯ ನಂತರ ಬಿಡುಗಡೆ ಮಾಡಲಾಗಿದ್ದು, ಉಳಿದ ಐವರು ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಯಾರಿಗೂ ಗಂಭೀರ ಸ್ವರೂಪದ ಗಾಯಗಳಾಗಿರುವ ಬಗ್ಗೆ ವರದಿಯಾಗಿಲ್ಲ ಎಂದು ತಿಳಿಸಿದ್ದಾರೆ.

ರಾಯಭಾರ ಕಚೇರಿಯು ಸಂಬಂಧಪಟ್ಟ ಕಂಪನಿ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅಗತ್ಯವಿರುವ ಎಲ್ಲಾ ನೆರವು ಒದಗಿಸುತ್ತಿದೆ ಎಂದು ಮಹಾಜನ್ ಹೇಳಿದ್ದಾರೆ. ಒಮಾನ್‌ನ ಸರ್ಕಾರಿ ಸುದ್ದಿ ಸಂಸ್ಥೆಯನ್ನು ಉಲ್ಲೇಖಿಸಿ ವರದಿ ಮಾಡಿರುವ ಅಲ್‌ಜಜಿರಾ ಟಿವಿ ಡ್ರೋನ್ ದಾಳಿಯಲ್ಲಿ ಇಬ್ಬರು ವಿದೇಶಿ ಪ್ರಜೆಗಳು ಸಾವನ್ನಪ್ಪಿದ್ದಾರೆ ಎಂದು ತಿಳಿಸಿತ್ತು.

➡ಪುಟ ೪

ಎದ್ದೇಳದ ಸ್ಥಿತಿಯಲ್ಲಿ ಖಮೇನಿ ಉತ್ತರಾಧಿಕಾರಿ ಮೊಜ್ತಬಾ

ಇರಾನ್ ಸ್ಥಿತಿ ಗಂಭೀರ

• **ಹೊಸದಿಲ್ಲಿ:** ಇರಾನ್‌ನಲ್ಲಿ ರಾಜಕೀಯ ಗೊಂದಲ ಹೆಚ್ಚಾಗಿದ್ದು, ಸರ್ವೋಚ್ಚ ನಾಯಕತ್ವದ ವಿಚಾರದಲ್ಲಿ ಅನಿಶ್ಚಿತತೆ ಉಂಟಾಗಿದೆ. ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿದ ಸೇನಾ ದಾಳಿಗಳ ಬಳಿಕ ದೇಶದ ಪರಿಸ್ಥಿತಿ ಇನ್ನಷ್ಟು ತೀವ್ರಗೊಂಡಿದೆ.



ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಯಾದ ನಂತರ ಅವರ ಪುತ್ರ ಮೊಜ್ತಬಾ ಖಮೇನಿ ಅಧಿಕಾರ ವಹಿಸಿಕೊಂಡಿದ್ದರು. ಆದರೆ ಇತ್ತೀಚಿನ ವೈಮಾನಿಕ ದಾಳಿಯಲ್ಲಿ ಮೊಜ್ತಬಾ ಖಮೇನಿ ಗಂಭೀರವಾಗಿ ಗಾಯಗೊಂಡಿದ್ದು, ಅವರ ಒಂದು ಕಾಲು ಕತ್ತರಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ ಎಂಬ ಮಾಹಿತಿ ಅಮೆರಿಕ ಮೂಲಗಳಿಂದ ಬಂದಿದೆ. ಅವರು ರಹಸ್ಯ ಸ್ಥಳದಲ್ಲಿ ಚಿಕಿತ್ಸೆ ಪಡೆಯುತ್ತಿರುವುದಾಗಿ ವರದಿಯಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್, ಇರಾನ್‌ನಲ್ಲಿ ಈಗ ಯಾರು ಅಧಿಕಾರದಲ್ಲಿದ್ದಾರೆ ಎಂಬುದೇ ಸ್ಪಷ್ಟವಾಗಿಲ್ಲ ಎಂದು ವ್ಯಂಗ್ಯವಾಡಿದ್ದಾರೆ. ಪೆಂಟಗನ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊಜ್ತಬಾ ಖಮೇನಿ ಬಿಡುಗಡೆ ಮಾಡಿದ ಮೊದಲ ಹೇಳಿಕೆಯಲ್ಲಿ ಧ್ವನಿ ಅಥವಾ ವಿಡಿಯೋ ಇರಲಿಲ್ಲ ಎಂದು ಹೇಳಿದ್ದಾರೆ. ಇರಾನ್‌ನಲ್ಲಿ ಸಾಕಷ್ಟು ಕ್ಯಾಮೆರಾಗಳು ಇದ್ದರೂ ಲಿಖಿತ ಹೇಳಿಕೆ ಮಾತ್ರ ನೀಡಿರುವುದು ಅವರ ಸ್ಥಿತಿಗತಿ ಬಗ್ಗೆ ಅನುಮಾನ ಹುಟ್ಟಿಸುತ್ತಿದೆ ಎಂದು ಹೇಳಿದ್ದಾರೆ.

➡ಪುಟ ೪


ಮೊಜ್ತಬಾ





ಇರಾಕ್‌ನಲ್ಲಿ ಅಮೆರಿಕ ಇಂಧನ ಮರುಪೂರಣ ವಿಮಾನ ಪತನ

• ಪುಟ ೭

ಮೊಜ್ತಬಾಗೆ ಜೀವ ವಿಮೆ ಇಲ್ಲ: ನೆತನ್ಯಾಹು

ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧವು ನಿರೀಕ್ಷೆಗಿಂತ ಉತ್ತಮವಾಗಿ ನಡೆಯುತ್ತಿದೆ. ಇಸ್ರೇಲ್ ಎಂದಿಗಿಂತ ಬಲಶಾಲಿಯಾಗಿದೆ ಎಂದು ಹೇಳಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿಗೆ ಯಾವುದೇ ಜೀವ ವಿಮೆ ಇಲ್ಲ ಎಂದು ಕುಟುಕಿದ್ದಾರೆ. ಇಸ್ರೇಲ್ ಖಮೇನಿ ಮತ್ತು ಹೆಜ್ಬುಲ್ಲಾ ನಾಯಕ ನಯೀಮ್ ಖಾಸಿಮ್ ಅವರನ್ನು ಗುರಿಯಾಗಿಸಿದೆಯೇ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ನೆತನ್ಯಾಹು, ನಾನು ಭಯೋತ್ಪಾದಕ ಸಂಘಟನೆಗಳ ಯಾವುದೇ ನಾಯಕರ ಮೇಲೆ ಜೀವ ವಿಮಾ ಪಾಲಿಸಿಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ಬುರ್ಜ್ ಖಲೀಫಾ ಬಳಿ ಭಾರೀ ಸ್ಫೋಟ

ವಿಶ್ವದ ಅತ್ಯಂತ ಎತ್ತರದ ಕಟ್ಟಡ ದುಬೈನ ಬುರ್ಜ್ ಖಲೀಫಾ ಬಳಿ ಶುಕ್ರವಾರವೂ ಭಾರಿ ಸ್ಫೋಟದ ಸದ್ದು ಕೇಳಿಬಂದಿದೆ. ಭೀಕರ ಬಾಂಬ್ ಸದ್ದಿಗೆ ದುಬೈನಲ್ಲಿ ಕಟ್ಟಡಗಳು ಅಲುಗಾಡಿದ್ದು, ಆಕಾಶಕ್ಕೆ ಹೊಗೆ ಆವರಿಸಿದೆ. ವರದಿಗಳ ಪ್ರಕಾರ, ಘಟನೆಯ ನಂತರ ದುಬೈ ಪೊಲೀಸರು ಆ ಪ್ರದೇಶವನ್ನು ಸುತ್ತುವರಿದಿದ್ದಾರೆ. ಕಟ್ಟಡಕ್ಕೆ ಭಾರೀ ಹಾನಿಯಾಗಿದೆ.

➡ಪುಟ ೪

ಅಮೆರಿಕಗೆ ಇರಾನ್ ಎಚ್ಚರಿಕೆ

ತಮ್ಮ ಇಸ್ಲಾಮಿಕ್ ಗಣರಾಜ್ಯದ ಮೇಲೆ ದಾಳಿ ಮಾಡಿದ್ದಕ್ಕಾಗಿ ಅಮೆರಿಕ ವಿಷಾದಿಸುವಂತೆ ಮಾಡುವ ಪಣವನ್ನು ಇರಾನ್ ತೊಟ್ಟಿದೆ. ಇದೇ ವೇಳೆ, ಹಾರ್ಮುಜ್ ಜಲಮಾರ್ಗದ ಮೇಲೆ ಹಿಡಿತ ಸಾಧಿಸುವ ಮೂಲಕ ತೈಲ ಬೆಲೆಗಳನ್ನು ಗಗನಕ್ಕೇರಿಸುವ ಪ್ರತಿಜ್ಞೆ ಮಾಡಿದೆ. ಯುದ್ಧ ಈಗಾಗಲೇ ಜಾಗತಿಕವಾಗಿ ತೈಲ ಪೂರೈಕೆಗೆ ಅಡ್ಡಿಪಡಿಸಿದ್ದು, ಇತಿಹಾಸದಲ್ಲೇ ಮೊದಲ ಬಾರಿಗೆ ಅತಿ ದೊಡ್ಡ ಸರಕು ಸಾಗಣೆ ಪೂರೈಕೆಗೆ ಅಡಚಣೆಯಾಗಿದೆ ಎಂದು ಅಂತಾರಾಷ್ಟ್ರೀಯ ಇಂಧನ ಸಂಸ್ಥೆ ಎಚ್ಚರಿಸಿದೆ. ಇದಕ್ಕೆ ಪ್ರತಿಯಾಗಿ ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ ವ್ಯಕ್ತಪಡಿಸಿರುವ ಡೊನಾಲ್ಡ್ ಟ್ರಂಪ್, ಇರಾನ್ ಸೋಲಿಸುವುದು ಕಚ್ಚಾ ತೈಲ ಬೆಲೆಗಳಿಗಿಂತ ಮುಖ್ಯ ಎಂದು ತಿಳಿಸಿದ್ದಾರೆ.

➡ಪುಟ ೪

ಹಾರ್ಮುಜ್ ಜಲಸಂಧಿಯಲ್ಲಿ ಭಾರತೀಯರಿಗೆ ಪ್ರಾಮುಖ್ಯತೆ

ಇರಾನ್ ಭಾರತೀಯ ಧ್ವಜ ಹೊಂದಿರುವ ಹಡಗುಗಳಿಗೆ ಹಾರ್ಮುಜ್ ಜಲಸಂಧಿ ಮೂಲಕ ಸುರಕ್ಷಿತ ಸಂಚಾರಕ್ಕೆ ಅವಕಾಶ ನೀಡಿದೆ ಎಂದು ವರದಿಗಳು ತಿಳಿಸಿವೆ. ಈ ಹಿನ್ನೆಲೆಯಲ್ಲಿ ಕೆಲವು ಹಡಗುಗಳು ತಮ್ಮ ಗುರುತು ಸಂದೇಶಗಳಲ್ಲಿ ಸಂಪೂರ್ಣ ಭಾರತೀಯ ಸಿಬ್ಬಂದಿ (ಆಲ್ ಇಂಡಿಯಾ ಕ್ರೂ), ಭಾರತೀಯ ಸಿಬ್ಬಂದಿ ಹಡಗಿನಲ್ಲಿದ್ದಾರೆ (ಇಂಡಿಯನ್ ಕ್ರೂ ಆನ್ ಬೋರ್ಡ್) ಎಂಬ ಫಲಕಗಳನ್ನು ಪ್ರದರ್ಶಿಸುತ್ತಿರುವುದು ಗಮನಸೆಳೆದಿದೆ.

ಯುದ್ಧದ ತೀವ್ರತೆ ಮತ್ತಷ್ಟು ಹೆಚ್ಚಳ

ಪುಟ ೭

ರಾಜಕೀಯವಾಗಿ ಬೆನ್ನಿಗೆ ನಿಂತು ಡಾ.ಯತೀಂದ್ರ ಬೆಳೆಸಿ: ವರುಣ ಕ್ಷೇತ್ರದ ಜನರಿಗೆ ಸಿಎಂ ಮನವಿ

ಉಸಿರಿರುವವರೆಗೂ ರಾಜಕೀಯ ಮಾಡುವೆ



• **ಮೈಸೂರು:** ನನ್ನ 48 ವರ್ಷಗಳ ರಾಜಕೀಯ ಜೀವನದಲ್ಲಿ ಸೋಲು-ಗೆಲುವು ಎರಡನ್ನೂ ಕಂಡಿದ್ದೇನೆ. ಸೋತಾಗಲೂ ಜನರ ಸೇವೆಯನ್ನು ಪ್ರಾಮಾಣಿಕವಾಗಿ ಕೈಲಾದಷ್ಟು ಮಾಡಿಕೊಂಡು ಬಂದಿದ್ದೇನೆ. ಮುಂದೆಯೂ ಉಸಿರಿರುವವರೆಗೆ ರಾಜಕೀಯ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರು ತಾಲೂಕಿನ ವರಕೋಡು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಬೀರೇಶ್ವರಸ್ವಾಮಿ ದೇವಾಲಯವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ರಾಜಕೀಯ ಜೀವನದಲ್ಲಿ ಸೋಲು ಗೆಲುವು ಕಂಡಿದ್ದೇನೆ. ನಾಲ್ಕು ಸೋಲು, ಏಳು ಗೆಲುವು ಕಂಡಿದ್ದೇನೆ. ಆದರೆ, ಜನಸೇವೆಯನ್ನು ಮಾತ್ರ ಮರೆತಿಲ್ಲ. ಕೊನೆಯ ಉಸಿರು ಇರುವವರೆಗೂ ರಾಜಕೀಯ ಮಾಡುತ್ತೇನೆ. ಕೈಲಾದಷ್ಟು ಸೇವೆ ಮಾಡುವೆ ಎಂದು ಅಭಯ ನೀಡಿದರು.

ಚಾಮುಂಡೇಶ್ವರಿ ಮತ್ತು ವರುಣ ಕ್ಷೇತ್ರದ ಜನರು ನಿರಂತರವಾಗಿ ಬೆಂಬಲ ನೀಡುತ್ತಾ ಬಂದಿರುವ ಕಾರಣ ಎಂದಿಗೂ ಕ್ಷೇತ್ರದ ಜನರನ್ನು ಮರೆಯಲಾರೆನು. ಎರಡು ಬಾರಿ ಮುಖ್ಯಮಂತ್ರಿ, ಎರಡು ಬಾರಿ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡುವ ಜತೆಗೆ, 17 ಬಾರಿ ಬಜೆಟ್ ಮಂಡಿಸಿದ್ದೇನೆ. ಇಂತಹ ಅವಕಾಶ ನನ್ನ ಪಾಲಿಗೆ ದೊರೆಯಲು ಮೈಸೂರು ತಾಲೂಕು ವರುಣ ಹೋಬಳಿ ಜನರೇ ಕಾರಣರಾಗಿದ್ದಾರೆ ಎಂದರು.

➡ಪುಟ ೪

ಡಾ.ಯತೀಂದ್ರ ಬೆಳೆಸಿ

ವರುಣ ಕ್ಷೇತ್ರಕ್ಕೆ ಹೆಚ್ಚು ಬಾರಿ ಬರಲು ಸಾಧ್ಯವಾಗುತ್ತಿಲ್ಲ. ಆದರೆ, ವರುಣ ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಯತೀಂದ್ರ ಹೇಳಿದ ಎಲ್ಲಾ ಅಭಿವೃದ್ಧಿ ಕೆಲಸ ಮಾಡುತ್ತಿದ್ದೇನೆ. ರಾಜಕೀಯವಾಗಿ ಡಾ.ಯತೀಂದ್ರರನ್ನು ಬೆಳೆಸುವ ಕೆಲಸ ಮಾಡಬೇಕು. ಮುಂದೆಯೂ ಅವರನ್ನು ಕೈಹಿಡಿದು ಬೆಳೆಸುತ್ತೀರಿ ಎನ್ನುವ ನಂಬಿಕೆ, ವಿಶ್ವಾಸವಿದೆ ಎಂದಾಗ ಅಲ್ಲಿದ್ದವರು ಮಂತ್ರಿ ಮಾಡಬೇಕು. ಡಿಸಿಎಂ ಮಾಡಬೇಕೆಂದು ಜೋರಾಗಿ ಕೂಗಿದಾಗ ನಗುತ್ತಲೇ ಮಾತು ಮುಂದುವರಿಸಿದರು. ಈಗಿನ ಹುಂಡಿ ಗಳಗು (ಗ್ರಾಮಗಳು) ಅಂದಿನ ಹುಂಡಿ ಗಳಗು ವ್ಯತ್ಯಾಸ ಇದೆ. 1977ರಿಂದಲೂ ಪರಿಚಯವಿದೆ. ಮಲ್ಲಹಳ್ಳಿ ಗ್ರಾಮದ ಸಾಕಣ್ಣ 1977ರಿಂದಲೂ ಪರಿಚಯ. ನಮ್ಮ ಸರ್ಕಾರದಲ್ಲಿ ಎಲ್ಲಾ ಜಾತಿ, ಧರ್ಮ ದವರಿಗೆ ಯೋಜನೆಗಳನ್ನು ನೀಡಿದ್ದೇನೆ.

➡ಪುಟ ೪

ಆರೆಸ್ಸೆಸ್ ಸಹಸರಕಾರ್ಯವಾಹ ಮುಕುಂದ ಅಭಿಪ್ರಾಯ

ಯುದ್ಧ ಪರಿಸ್ಥಿತಿ ದೂರವಾಗಲಿ

• **ಸಮಲ್ಖಾ(ಹರಿಯಾಣ):** ಪಶ್ಚಿಮ ಏಷ್ಯದಲ್ಲಿ ಉಂಟಾಗಿರುವ ಯುದ್ಧದ ಸಂದರ್ಭದಲ್ಲಿ ಭಾರತ ಸರ್ಕಾರದ ನಿಲುವೇ ನಮ್ಮ ನಿಲುವು. ಆದಷ್ಟು ಬೇಗ ಈ ಪರಿಸ್ಥಿತಿ ಸರಿಯಾಗಬೇಕು ಎನ್ನುವುದು ನಮ್ಮ ಅಪೇಕ್ಷೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸಹಸರಕಾರ್ಯವಾಹ ಸಿ.ಆರ್. ಮುಕುಂದ ತಿಳಿಸಿದ್ದಾರೆ.



ಶುಕ್ರವಾರ ಆರ್‌ಎಸ್‌ಎಸ್ (ಸಂಘ) ಅಖಿಲ ಭಾರತೀಯ ಪ್ರತಿನಿಧಿ ಸಭಾದ ಉದ್ಘಾಟನೆಯ ನಂತರ ಸುದ್ದಿಗೋಷ್ಠಿ ನಡೆಸಿದ ಅವರು, ಈ ಸಂದರ್ಭದಲ್ಲಿ ಭಾರತ ಸರ್ಕಾರ ಏನು ಮಾಡಬೇಕೋ ಅದನ್ನು ಮಾಡುತ್ತಿದೆ. ಅದನ್ನು ಮಾಧ್ಯಮಗಳಲ್ಲಿ ನಾವು ಕೇಳಿದ್ದೇವೆ, ಓದಿದ್ದೇವೆ. ನಮ್ಮ ದೇಶದ ಪ್ರಧಾನಮಂತ್ರಿ, ವಿದೇಶಾಂಗ ವ್ಯವಹಾರಗಳ ಸಚಿವರು ವಿವಿಧ ದೇಶಗಳ ಪ್ರಮುಖರೊಂದಿಗೆ ಸಂವಾದದಲ್ಲಿ ನಿರತರಾಗಿದ್ದಾರೆ. ಭಾರತದ ನಿಲುವು ಏನಾಗಿರಬೇಕು ಎನ್ನುವುದನ್ನು ಕೇಂದ್ರ ಸರ್ಕಾರ ಹೇಳಿದೆ. ಸರ್ಕಾರದ ನಿಲುವೇ ನಮ್ಮ ನಿಲುವು ಎಂದರು.

ಆರ್‌ಎಸ್‌ಎಸ್ ಎಲ್ಲಾ ಅಂತಾರಾಷ್ಟ್ರೀಯ ವಿಷಯಗಳಿಗೂ ತನ್ನ ಅಭಿಪ್ರಾಯ ಹೇಳುವುದಿಲ್ಲ. ಆದರೆ, ಆಯಾ ದೇಶಗಳ ಸ್ಥಾನೀಯ ಸಮಾಜ ಮತ್ತು ನಮ್ಮ ಭಾರತೀಯ ಸಮಾಜದ ಎಲ್ಲರ ಹಿತರಕ್ಷಣೆಯಿಂದ ಒಳ್ಳೆಯದೇ ಆಗಬೇಕು ಎನ್ನುವುದು ನಮ್ಮ ಆದ್ಯತೆ. ವಿವಿಧ ದೇಶಗಳಲ್ಲಿನ ಹಿಂದು ಸಂಘಟನೆಗಳ ಜತೆ ಸಂಘದ ಸಂಪರ್ಕವಿದೆ. ಇಲ್ಲಿಯವರೆಗೆ ಭಾರತೀಯ ಸಮಾಜದ ಜನರಿಗೆ ಬಹುದೊಡ್ಡ ಆತಂಕ ಅಲ್ಲಿ ಎದುರಾಗಿಲ್ಲ. ಎಲ್ಲರೊಂದಿಗೆ ಎಲ್ಲಾ ರೀತಿಯಲ್ಲೂ ಸಂಪರ್ಕ, ಸಂಬಂಧ ಹೊಂದುವ ಎಲ್ಲಾ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು.

➡ಪುಟ ೪

ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾಗೊಳಿಸಿದ ನ್ಯಾಯಾಲಯ

ಮುಟ್ಟಿನ ರಜೆ ಕಡ್ಡಾಯಗೊಳಿಸಿದರೆ ಮಹಿಳೆಯರ ವೃತ್ತಿಗೆ ದಕ್ಕೆ: ಸುಪ್ರೀಂ

• **ಹೊಸದಿಲ್ಲಿ:** ವಿದ್ಯಾರ್ಥಿನಿಯರು ಹಾಗೂ ಮಹಿಳಾ ಉದ್ಯೋಗಿಗಳಿಗೆ ಋತುಸ್ರಾವ ರಜೆ ಕಡ್ಡಾಯಗೊಳಿಸುವ ರಾಷ್ಟ್ರೀಯ ನೀತಿಯೊಂದನ್ನು ಅಂಗೀಕರಿಸಬೇಕೆಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪುರಸ್ಕರಿಸಲು ಸರ್ವೋಚ್ಚ ನ್ಯಾಯಾಲಯ ನಿರಾಕರಿಸಿದೆ.

ಇಂತಹ ನೀತಿ ನಿಯಮಗಳು ಉದ್ದೇಶ ಪೂರ್ವಕವಲ್ಲದೆಯೇ ಲಿಂಗ ತಾರತಮ್ಯ ಧೋರಣೆಗಳನ್ನು ಬಲವರ್ಧಿಸಬಲ್ಲುದು. ಮಹಿಳೆಯರ ಔದ್ಯೋಗಿಕ ಭವಿಷ್ಯಕ್ಕೂ ಹೊಡೆತ ನೀಡುವ ಸಾಧ್ಯತೆಯಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.ಆದಾಗ್ಯೂ ಸಂಬಂಧಪಟ್ಟ ಅಧಿಕಾರಿಗಳು ಅಥವಾ ಪ್ರಾಧಿಕಾರ ಅರ್ಜಿದಾರರ ಅಹವಾಲನ್ನು ಪರಾಮರ್ಶಿಸಬಹುದು.

➡ಪುಟ ೪



ಸಾಮಾಜಿಕ ಪರಿಣಾಮ ಬಗ್ಗೆ ಸಿಜೆಐ ಕಳವಳ

ಕಡ್ಡಾಯ ಮುಟ್ಟಿನ ರಜೆಗಳು ಸಾಮಾಜಿಕವಾಗಿ ಬೀರಲಿರುವ ಪರಿಣಾಮಗಳ ಕುರಿತು ಮುಖ್ಯ ನ್ಯಾಯಮೂರ್ತಿ ಕಳವಳ ವ್ಯಕ್ತಪಡಿಸಿದ್ದಾರೆ. ಇಂತಹ ಕ್ರಮಗಳು ಅನುದ್ದೇಶಪೂರ್ವಕ. ಮಹಿಳೆಯರ ಕುರಿತ ಕೀಳರಿಮೆ ಭಾವದ ಬಲವರ್ಧಿಸುವ ಅಪಾಯವಿದೆ ಎಂದವರು ಎಚ್ಚರಿಸಿದ್ದಾರೆ.

70 ಪಲ್ಲಕ್ಕಿ ಸೇರಿ 115 ಹೊಸ ಬಸ್

• **ಬೆಂಗಳೂರು:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಹೊಸದಾಗಿ 45 ಕರ್ನಾಟಕ ಸಾರಿಗೆ ಹಾಗೂ 70 ಹವಾನಿಯಂತ್ರಣರಹಿತ ಸ್ಲೀಪರ್ ಪಲ್ಲಕ್ಕಿ ಬಸ್ ಸೇರಿದಂತೆ ಒಟ್ಟು 115 ಬಸ್‌ಗಳು ಸೇರ್ಪಡೆಗೊಂಡಿದ್ದು, ಶುಕ್ರವಾರದಿಂದಲೇ ಸಾರ್ವಜನಿಕ ಸೇವೆಗೆ ಮುಕ್ತವಾಗಿವೆ.

ನೂತನ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಿದ ಸಚಿವ ರಾಮಲಿಂಗಾರೆಡ್ಡಿ

ಕೆಎಸ್‌ಆರ್‌ಟಿಸಿ ವತಿಯಿಂದ ನಿಗಮದ ಕೇಂದ್ರ ಕಚೇರಿಯಲ್ಲಿ ನೂತನ 45 ಕರ್ನಾಟಕ ಸಾರಿಗೆ ಹಾಗೂ 70 ಪಲ್ಲಕ್ಕಿ ಬಸ್ಸುಗಳಿಗೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಶುಕ್ರವಾರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಹವಾನಿಯಂತ್ರಣರಹಿತ ಸ್ಲೀಪರ್ ಪಲ್ಲಕ್ಕಿಗಳಿಗೆ ಭಾರೀ ಬೇಡಿಕೆಯಿದ್ದು ಮುಂದಿನ ದಿನಗಳಲ್ಲಿ ಹಂತಹಂತವಾಗಿ ಇನ್ನಷ್ಟು ಪಲ್ಲಕ್ಕಿ ಬಸ್‌ಗಳನ್ನು ಕೆಎಸ್‌ಆರ್‌ಟಿಸಿಗೆ ಸೇರಿಸಲಾಗುವುದು ಎಂದರು.

➡ಪುಟ ೪

ಬೆಂಗಳೂರಿನ 3500 ಕಿಮೀ ರಸ್ತೆಗೆ ಶೀಘ್ರ ಇನ್ನಷ್ಟು ಸೇರ್ಪಡೆ

ಮತ್ತೆ ಪ್ಲಾಸ್ಟಿಕ್ ರಸ್ತೆ ಚಿಂತನೆ

▸ ಮಹೇಶ್ ಹೆಗಡೆ

• **ಬೆಂಗಳೂರು:** ಪರಿಸರ ಸಂರಕ್ಷಣೆ ದೃಷ್ಟಿಕೋನದಿಂದ ಅತ್ಯಂತ ಮಹತ್ವವಾಗಿರುವ ಪ್ಲಾಸ್ಟಿಕ್ ಬಳಸಿ ರಸ್ತೆ ಮಾಡುವಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಮುಂಚೂಣಿಯಲ್ಲಿದ್ದ ನಗರಗಳಲ್ಲಿ ಬೆಂಗಳೂರು ಸಹ ಒಂದು. 2002ರ ಆಸುಪಾಸಿನಲ್ಲಿ ಆರಂಭವಾದ ಈ ಚಿಂತನೆಯಲ್ಲಿ ಬೆಂಗಳೂರು ನಗರದಲ್ಲಿ ಸುಮಾರು 3,500 ಕಿ.ಮೀ.ಗೂ ಹೆಚ್ಚಿನ ಉದ್ದದ ರಸ್ತೆಯನ್ನು ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್(ಸಿಂಗಲ್‌ಯೂಸ್) ಬಳಸಿ ರಸ್ತೆ ನಿರ್ಮಿಸಲಾಗಿದೆ.

ಪದ್ಮಶ್ರೀ ಪ್ರೊ. ಆರ್. ವಾಸುದೇವನ್ ಅವರ ಪರಿಕಲ್ಪನೆಯ ಪ್ಲಾಸ್ಟಿಕ್ ಬಳಸಿ ರಸ್ತೆ ನಿರ್ಮಾಣ ಬೆಂಗಳೂರಿನಲ್ಲಿ 2002 ರಿಂದ 2016ರ ಅವಧಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಆಗಿತ್ತು. ನಂತರದಲ್ಲಿ ನಿಧಾನಗತಿಯಾಗಿದೆ. ಇದೀಗ ಮತ್ತೆ ನಗರದಲ್ಲಿ ಪ್ಲಾಸ್ಟಿಕ್ ಬಳಸಿ ರಸ್ತೆ ನಿರ್ಮಿಸುವುದಕ್ಕೆ ವೇಗ ನೀಡುವ ಚಿಂತನೆ ನಡೆಸಲಾಗುತ್ತಿದ್ದು, ಈ ಸಂಬಂಧ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಕಡಿಮೆ ಮೌಲ್ಯಯುತ ಪ್ಲಾಸ್ಟಿಕ್‌ನ್ನು ಡಾಂಬರೀಕರಣಕ್ಕೆ ಬಳಸಿಕೊಳ್ಳಲು ಸೂಚನೆ ನೀಡಿದ್ದಾರೆ.

➡ಪುಟ ೪



ನಿರ್ವಹಣಾ ವೆಚ್ಚದಲ್ಲಿ ಉಳಿತಾಯ

ರಸ್ತೆ ನಿರ್ಮಾಣದ ನಂತರ ನಿರ್ವಹಣೆ ಸವಾಲಿನ ಕೆಲಸ. ಆದರೆ ಪ್ಲಾಸ್ಟಿಕ್ ಬಳಸಿ ಮಾಡಿದ ರಸ್ತೆ ನಿರ್ವಹಣೆ ಸುಲಭ. ಸಮಾನ್ಯ ರಸ್ತೆಗಳಿಗಿಂತ ಸುಮಾರು 5 ವರ್ಷ ಹೆಚ್ಚು ಕಾಲ ಬಾಳಿಕೆ ಬರಲಿದೆ.ಇದರಿಂದ ರಸ್ತೆ ನಿರ್ವಹಣೆಗೆ ಬೇಕಾಗುವ ಹಣ ಉಳಿತಾಯವಾಗಲಿದೆ.

➡ಪುಟ ೪

ಕೆಂಪು ಕಲ್ಲಿನಂತೆ ಮರಳು ಸಮಸ್ಯೆಗೂ ಪರಿಹಾರ ಹುಡುಕಿ

• **ವಿಧಾನಸಭೆ:** ಕರಾವಳಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೆಂಪು ಕಲ್ಲು (ಲ್ಯಾಟರೈಟ್ ಕಲ್ಲು) ಸಮಸ್ಯೆಗೆ ಪರಿಹಾರ ಕಂಡುಕೊಂಡಂತೆ ಅಲ್ಲಿನ ಎಲ್ಲ ಜನಪ್ರತಿನಿಧಿಗಳು, ಅಧಿಕಾರಿಗಳ ಸಭೆ ಕರೆದು ಮರಳು ಸಮಸ್ಯೆಯನ್ನೂ ಬಗೆಹರಿಸುವಂತೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಹರೀಶ್ ಪೂಂಜ ವಿಷಯ ಪ್ರಸ್ತಾಪಿಸಿ, ನಮ್ಮೂರಿನಲ್ಲಿ ಒಂದು ಲೋಡ್ ಮರಳಿಗೆ 20-21 ಸಾವಿರ ರೂ. ಆಗಿದೆ. ನಾನ್ ಸಿಆರ್‌ಝಡ್ ವ್ಯಾಪ್ತಿಯಲ್ಲಿ 18 ಮರಳು ನಿಕ್ಷೇಪಗಳನ್ನು ಗುರುತಿಸಲಾಗಿದ್ದರೂ ಈವರೆಗೆ ಮರಳುಗಾರಿಕೆ ಆರಂಭವಾಗಿಲ್ಲ. ಜನರ ಕನಸಾಗಿರುವ ಮನೆ ನಿರ್ಮಾಣಕ್ಕೆ ಮರಳು ಸಿಗದೆ ಸಮಸ್ಯೆಯಾಗುತ್ತಿದೆ ಎಂದರು.

➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,70,500(2,69,500)	ಅಪರಂಜಿ ಚಿನ್ನ 15,900(15,980)	ಆಭರಣ ಚಿನ್ನ: 14,780(14,870)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)	ಷೇರು ಸೂಚ್ಯಂಕ	ಬಿಎಸ್‌ಇ 74,533(1470↓)	ಎನ್‌ಎಸ್‌ಇ 23,151(488↓)	$1=₹92.30





ಆರ್‌ಎಸ್‌ಎಸ್: ಅಖಿಲ ಭಾರತೀಯ ಪ್ರತಿನಿಧಿ ಸಭಾ ಪ್ರಾರಂಭ

ಸಮಾಲ್ಖಾ: ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ದ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ಹರಿಯಾಣದ ಸಮಾಲ್ಖಾದಲ್ಲಿರುವ ಮಾಧವ ಸೃಷ್ಟಿ ಆವರಣದಲ್ಲಿ ಶುಕ್ರವಾರ ಆರಂಭಗೊಂಡಿತು. ಭಾನುವಾರದವರೆಗೆ ನಡೆಯಲಿದೆ.

ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಭಾರತ ಮಾತೆಯ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದರು. ಬಳಿಕ ಹೊಸಬಾಳೆ ಅವರು ಸಂಘದ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಪ್ರಸ್ತುತ ಪಡಿಸಿದರು.

ಈ ಅಖಿಲ ಭಾರತೀಯ ಪ್ರತಿನಿಧಿ ಸಭಾವು ಪ್ರತಿವರ್ಷವೂ ನಡೆಯುತ್ತದೆ. ಈ ವರ್ಷ ಸಂಘ ಮತ್ತು ಸಂಘಪ್ರೇರಿತ 32 ಸಂಘಟನೆಗಳ ಅಖಿಲ ಭಾರತ ಮಟ್ಟದ ಹಾಗೂ ಪ್ರಾಂತ ಮಟ್ಟದ ಅಧಿಕಾರಿಗಳು ಸೇರಿದಂತೆ ಸಂಘದ ಎಲ್ಲಾ 45 ಪ್ರಾಂತಗಳಿಂದ 1,487 ಕಾರ್ಯಕರ್ತರು ಅಪೇಕ್ಷಿತರಿದ್ದಾರೆ. ಮೂರು ದಿನಗಳ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಹೆಚ್ಚು ಸಮಯ ಸಂಘಕಾರ್ಯದ ವಿಮರ್ಶೆ ಹಾಗೂ ಯೋಜನೆಗಳಿಗೆ ಮೀಸಲಿಡಲಾಗುತ್ತದೆ.

ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಸಮರ್ಪಣೆ: ರಾಷ್ಟ್ರಕ್ಕೆ ಮತ್ತು ಸಮಾಜಕ್ಕೆ ಕೊಡುಗೆಯನ್ನು ನೀಡಿ ಅಗಲಿದ ನಾಡಿನ ಪ್ರಮುಖರಿಗೆ, ಆರ್‌ಎಸ್‌ಎಸ್ ಹಿರಿಯ ಕಾರ್ಯಕರ್ತರಿಗೆ ಪ್ರತಿವರ್ಷ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆ. ಈ ಬಾರಿ ವಿದರ್ಭದ ಸದ್ಗುರುದಾಸ ಮಹಾರಾಜ್, ಕೇಂದ್ರದ ಮಾಜಿ ಗೃಹಮಂತ್ರಿ ಶಿವರಾಜ್ ಪಾಟೀಲ್, ಪುರಾತತ್ವ ಇಲಾಖೆಯ ಅಧ್ಯಕ್ಷರಾಗಿದ್ದ ಪದ್ಮಭೂಷಣ ಕೆ.ಎನ್. ದೀಕ್ಷಿತ್, ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್, ನಟ ಧರ್ಮೇಂದ್ರ, ತಮಿಳು ಚಿತ್ರ ನಿರ್ಮಾಪಕ ಎ.ವಿ.ಎನ್. ಸರವಣನ್, ಕೇರಳದ ಸಿನೆಮಾ ನಟ ಶ್ರೀನಿವಾಸನ್, ಕಮ್ಯುನಿಸ್ಟ್ ನಾಯಕ ಆರ್. ನಲ್ಲಕುನ್ನು, ಮಿಜೋರಾಂನ ಮಾಜಿ ರಾಜ್ಯಪಾಲ ಸ್ವರಾಜ್ ಕೌಶಲ್, ಒಡಿಶಾದ ಭಾಷಾತಜ್ಞೆ ಮಾಲತಿ ಮುರ್ಮು, ಅಸ್ಸಾಂನ ಕಲಾವಿದ ಸಮರ್ ಹಜಾರಿಕಾ, ಹಿರಿಯ ಪತ್ರಕರ್ತ ಪ್ರಫುಲ್ಲ ಗೋವಿಂದ ಬರುವಾ, ಬಂಗಾಲದ ಸಾಹಿತಿ ಮಣಿಶಂಕರ್ ಮುಖರ್ಜಿ ಸೇರಿದಂತೆ ಅನೇಕ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಡಾ.ವಿನಯ ಹೆಗ್ಡೆಗೆ ಶ್ರದ್ಧಾಂಜಲಿ: ಕರ್ನಾಟಕದಲ್ಲಿ ಗಣನೀಯ ಸೇವೆ ಸಲ್ಲಿಸಿ ಅಗಲಿರುವ ಗಣ್ಯರಿಗೂ ಪ್ರತಿನಿಧಿ ಸಭಾದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಪರಿಸರ ವಿಜ್ಞಾನಿ ಡಾ. ಮಾಧವ ಗಾಡ್ಗೀಲ್, ವೃಕ್ಷಮಾತೆ ಸಾಲುಮರದ ತಿಮ್ಮಕ್ಕ, ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜಕಾರಣಿ ಭೀಮಣ್ಣ ಖಂಡ್ರೆ, ಶಿಕ್ಷಣತಜ್ಞ ಮತ್ತು ಉದ್ಯಮಿ ಡಾ.ಎನ್. ವಿನಯ ಹೆಗ್ಡೆ, ಹಿಂದೂಸ್ತಾನಿ ಗಾಯಕ ಅಶೋಕ ಹುಗ್ಗಣ್ಣವರ್, ಹಿರಿಯ ರಾಜಕಾರಣಿ ಮತ್ತು ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹಾಗೂ ಹುಬ್ಬಳ್ಳಿಯ ಉದ್ಯಮಿ ಭರತ್ ಖಿಮ್ಜಿ ಅವರಿಗೆ ಗೌರವ ಸಲ್ಲಿಸಲಾಯಿತು.



ದೇಶವ್ಯಾಪಿ 55,683 ಸ್ಥಾನಗಳಲ್ಲಿ ನಿತ್ಯ ಶಾಖೆ

ಸಮಾಲ್ಖಾ: ಸಮಾಜದ ರಚನಾತ್ಮಕ ಶಕ್ತಿಗಳನ್ನು ಒಟ್ಟುಗೂಡಿಸುವುದು ಮತ್ತು ರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ಮುಂದುವರಿಯುವುದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಉದ್ದೇಶವಾಗಿದೆ. ಸಂಘವು ಪ್ರಪಂಚದಾದ್ಯಂತ ಎಲ್ಲರಿಗೂ ಶಾಂತಿ ಮತ್ತು ಕ್ಷೇಮವನ್ನು ಬಯಸುತ್ತದೆ ಎಂದು ಸಂಘದ ಸಹಸರಕಾರ್ಯವಾಹ ಸಿ.ಆರ್. ಮುಕುಂದ ಹೇಳಿದರು.

ಶುಕ್ರವಾರ ಅಖಿಲ ಭಾರತೀಯ ಪ್ರತಿನಿಧಿ ಸಭಾದ ಉದ್ಘಾಟನೆಯ ನಂತರ ಸುದ್ದಿಗೋಷ್ಠಿ ನಡೆಸಿದ ಅವರು, ಶತಾಬ್ದಿ ವರ್ಷವಾದ್ದರಿಂದ ಈ ಬಾರಿಯ ಅಖಿಲ ಭಾರತೀಯ ಪ್ರತಿನಿಧಿ ಸಭೆಯು ಮಹತ್ವಪೂರ್ಣವಾದದ್ದು. ಇಡೀ ದೇಶದಲ್ಲಿ ಸಂಘದ ಕಾರ್ಯಕರ್ತರು ಮತ್ತು ಸ್ವಯಂಸೇವಕರು ಸಂಘಕಾರ್ಯದ ವಿಸ್ತಾರ ಮತ್ತು ಸಮಾಜದ ಸಂಪರ್ಕ ಮತ್ತು ಜಾಗರಣದಲ್ಲಿ ಭಾಗಿಯಾಗಿದ್ದರು. ಅದರ ಸಂಪೂರ್ಣ ಮಾಹಿತಿಯನ್ನು ಪಡೆಯುವುದಕ್ಕೆ ಅವರಲ್ಲಿ ಕೆಲವರು ಈ ಪ್ರತಿನಿಧಿ ಸಭೆಯಲ್ಲಿ ಭಾಗಿಯಾಗುತ್ತಿದ್ದಾರೆ. ಸುಮಾರು 1400ಕ್ಕೂ ಅಧಿಕ ಮಂದಿ ಈ ಸಭೆಗೆ ಅಪೇಕ್ಷಿತರಿದ್ದಾರೆ ಎಂದರು.

ದೇಶಾದ್ಯಂತ ಒಟ್ಟು 55,683 ಸ್ಥಾನಗಳಲ್ಲಿ 88,949 ಶಾಖೆಗಳು ನಡೆಯುತ್ತಿವೆ. ಕಳೆದ ಒಂದು ವರ್ಷದಲ್ಲಿ 5,820 ಶಾಖೆಗಳು ಹೆಚ್ಚಾಗಿವೆ. ದೇಶವ್ಯಾಪಿ 32,606 ಸಾಪ್ತಾಹಿಕ (ಮಿಲನ್) ಶಾಖೆಗಳು ಜರುಗುತ್ತಿವೆ, ಕಳೆದ ವರ್ಷಕ್ಕಿಂತ 459 ಮಿಲನ್‌ಗಳು ಹೆಚ್ಚಾಗಿವೆ. ಪ್ರಸ್ತುತ ದೇಶಾದ್ಯಂತ ತಿಂಗಳಿಗೊಮ್ಮೆ ನಡೆಯುವ ಮಂಡಳಿಗಳು ಒಟ್ಟು 13,211 ಇವೆ. ಸಂಘದ ದೈನಂದಿನ ಶಾಖೆ, ಸಾಪ್ತಾಹಿಕ ಮಿಲನ್ ಮತ್ತು ಸಂಘ ಮಂಡಳಿಗಳನ್ನು ಸೇರಿಸಿದರೆ ದೇಶದಲ್ಲಿ ಒಟ್ಟು 1,34,766 ಶಾಖೆಗಳು ನಡೆಯುತ್ತಿವೆ ಮಾಹಿತಿ ನೀಡಿದರು.

ದೇಶದಲ್ಲಿ ಸಂಘಕಾರ್ಯವು ಸ್ಥಿರವಾಗಿ ಬೆಳೆಯುತ್ತಿದೆ, ಕಳೆದ ವರ್ಷದಲ್ಲಿ ಹಲವಾರು ಹೊಸ ಸ್ಥಳಗಳಲ್ಲಿ ಹೊಸ ಶಾಖೆಗಳು ಪ್ರಾರಂಭವಾಗಿವೆ. ಸಾಮಾಜಿಕ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರುವ ಉದ್ದೇಶದೊಂದಿಗೆ ಮುಂಬರುವ ವರ್ಷಗಳಲ್ಲಿ ಹಳ್ಳಿಗಳು ಮತ್ತು ಸಣ್ಣ ಪಟ್ಟಣಗಳಲ್ಲಿ ಹೆಚ್ಚು ಹೆಚ್ಚು ಶಾಖೆಗಳನ್ನು ಪ್ರಾರಂಭಿಸುವ ಗುರಿಯನ್ನು ಸಂಘ ಹೊಂದಿದೆ ಎಂದು ಅವರು ಹೇಳಿದರು.

ನಕ್ಸಲ್ ಸಮಸ್ಯೆ ಪರಿಹಾರ

ದೇಶದಲ್ಲಿದ್ದ ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಪರಿಸ್ಥಿತಿ ಸಹಜವಾಗುತ್ತಿದ್ದು, ಅಲ್ಲಿ ಶಾಂತಿ ಮತ್ತು ಅಭಿವೃದ್ಧಿಯನ್ನು ತರಲು ಸರ್ಕಾರ ಮಾಡುತ್ತಿರುವ ಪ್ರಯತ್ನಗಳನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ವಾಗತಿಸಿದೆ. ಮಣಿಪುರದಲ್ಲಿ ಇದುವರೆಗೂ ಬಿಗಡಾಯಿಸಿದ್ದ ಪರಿಸ್ಥಿತಿ ಈಗ ಸುಧಾರಿಸುತ್ತಿದೆ. ರಾಜಕೀಯ ಸ್ಥಿರತೆಯ ಜೊತೆಗೆ ಅದಕ್ಕಿಂತಲೂ ಮಿಗಿಲು ಅಲ್ಲಿನ ಸಮಾಜದ ಸಂಪೂರ್ಣ ಬುಡಕಟ್ಟು ಜನಾಂಗಗಳ ಪ್ರಮುಖರು ಒಟ್ಟಾಗಿ ಪರಿಹಾರ ಕಂಡುಕೊಳ್ಳಲು ಮುಂದಾಗಿದ್ದಾರೆ. ಈ ಪ್ರಯತ್ನಗಳಲ್ಲಿ ಸಂಘದ ಸ್ವಯಂಸೇವಕರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಮುಕುಂದ ಅವರು ಹೇಳಿದರು.

ಮಣಿಪುರದ ಮೈಥೇಯಿ, ಕುಕಿ, ನಾಗ ಸೇರಿದಂತೆ ಎಲ್ಲಾ ಬುಡಕಟ್ಟು ಜನಾಂಗಗಳೊಡನೆ ಸಂಘದ ಸಂಪರ್ಕವಿದೆ. ಆ ಸಮುದಾಯಗಳಲ್ಲಿ ಸ್ವಯಂಸೇವಕ, ಕಾರ್ಯಕರ್ತರು ಇದ್ದಾರೆ. ಅಲ್ಲಿನ ಸಂಘದ ಅಸ್ತಿತ್ವವನ್ನು ಆಧಾರವನ್ನಾಗಿಸಿಕೊಂಡು ಕೇವಲ ಈಗ ಸಮಸ್ಯೆಗಳು ಉಂಟಾದಾಗ ಮಾತ್ರವಲ್ಲದೇ ಉಳಿದ ಸಂದರ್ಭಗಳಲ್ಲೂ ಎಲ್ಲರ ನಡುವೆ ಉತ್ತಮ ಬಾಂಧವ್ಯ ಮೂಡುವಂತೆ ಮಾಡುವ ಪ್ರಯತ್ನಗಳಾಗಿತ್ತು ಮತ್ತು ಅದು ಜಾರಿಯಲ್ಲಿತ್ತು. ಸಂಘದ ನಮ್ಮ ಕಾರ್ಯಕರ್ತರು ಅಲ್ಲಿನ ಬುಡಕಟ್ಟು ಬಂಧುಗಳ ಪ್ರಮುಖರ ನಡುವೆ ಮಾತುಕತೆ ನಡೆಸಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ನಾವೆಲ್ಲರೂ ಭಾರತ ಮಾತೆಯ ಮಕ್ಕಳು ಎನ್ನುವ ಭಾವ ಮೂಡಿಸುವಲ್ಲಿ ಶ್ರಮವಹಿಸಿದರು. ಭಾರತೀಯ ಸಮಾಜದ, ಸ್ವಧರ್ಮದ ಸಂರಕ್ಷಣೆ ಮಾಡುವುದಕ್ಕೆ ನಾವೆಲ್ಲರೂ ಒಂದಾಗಿರಬೇಕು ಎಂಬ ಭಾವ ನಿರ್ಮಾಣ ಮಾಡುವುದು ನಮ್ಮ ಪ್ರಯತ್ನವಾಗಿತ್ತು. ರಾಜಕೀಯ ಸ್ಥಿರತೆ ತರುವ ಪ್ರಯತ್ನ ಸರ್ಕಾರ ಮಾಡಿತು. ನಾವು ಎಲ್ಲರನ್ನು ಒಂದುಗೂಡಿಸುವ ಪ್ರಯತ್ನ ಮಾಡಿದೆವು. ಕಳೆದ ಎರಡು ವರ್ಷಗಳಲ್ಲಿ ನಮ್ಮ ಪ್ರಯತ್ನ ಉತ್ತಮ ಪರಿಣಾಮವನ್ನುಂಟುಮಾಡಿದೆ ಎಂದರು.

ನಮ್ಮ ನೆರೆಯ ದೇಶ ಬಾಂಗ್ಲಾದಲ್ಲಿ ಹಿಂದುಗಳಿಗೆ ಕಠಿಣ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರಗಳು ಹಿಂದುಗಳ ಮಾನ ಸಂರಕ್ಷಣೆ, ಹಕ್ಕು ಮತ್ತು ಆಸಕ್ತಿಗಳ ಸಂರಕ್ಷಿಸುವುದಕ್ಕೆ ಪ್ರಯತ್ನಮಾಡಬೇಕೆಂದು ಸಂಘ ಆಗ್ರಹಿಸುತ್ತದೆ ಎಂದು ಮುಕುಂದ ಸಿ.ಆರ್. ಹೇಳಿದರು.

ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್, ಸಹ ಪ್ರಚಾರ ಪ್ರಮುಖರಾದ ನರೇಂದ್ರ ಠಾಕೂರ್ ಮತ್ತು ಪ್ರದೀಪ್ ಜೋಶಿ ಸುದ್ದಿಗೋಷ್ಠಿಯಲ್ಲಿದ್ದರು.

ಸಂಘ ಶತಾಬ್ದಿ ಕಾರ್ಯಕ್ರಮಗಳು

ಸಮಾಲ್ಖಾ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳನ್ನು ದೇಶಾದ್ಯಂತ ಆಯೋಜಿಸಲಾಗುತ್ತಿದೆ. ಸಮಾಜದ ಸಜ್ಜನ ಶಕ್ತಿಯ ಬೆಂಬಲ ಮತ್ತು ಭಾಗವಹಿಸುವಿಕೆಯು ಸ್ವಯಂಸೇವಕರನ್ನು ಬಹಳವಾಗಿ ಪ್ರೋತ್ಸಾಹಿಸಿದೆ ಎಂದು ಸಂಘದ ಸಹಸರಕಾರ್ಯವಾಹ ಮುಕುಂದ ಸಿ.ಆರ್. ಹೇಳಿದರು.

ಕಳೆದ ವರ್ಷ ಅಕ್ಟೋಬರ್ 2ರ ವಿಜಯದಶಮಿಯಲ್ಲಿ ನಾಗ್ಪುರದಲ್ಲಿ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರ ಭಾಷಣದೊಂದಿಗೆ ಶತಾಬ್ದಿ ವರ್ಷದ ಕಾರ್ಯಕ್ರಮಗಳು ಪ್ರಾರಂಭಗೊಂಡವು. ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಭಾಗವಹಿಸಿದರು. ಅದಕ್ಕಿಂತ ಒಂದು ದಿನ ಮೊದಲು ಸಂಘ ಶತಾಬ್ದಿಯ ಹಿನ್ನೆಲೆಯಲ್ಲಿ ದಿಲ್ಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ನಾಣ್ಯ ಹಾಗೂ ಅಂಚೆಚೀಟಿಯನ್ನು ಬಿಡುಗಡೆ ಮಾಡಿದರು ಎಂದು ತಿಳಿಸಿದರು.

ಸಂಘ ಶತಾಬ್ದಿ ವರ್ಷದಲ್ಲಿ ಎರಡು ರೀತಿಯ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಮೊದಲನೆಯದ್ದು ಶಾಖೆಗಳ ಮೂಲಕ ಸಂಘಟನಾತ್ಮಕ ವಿಸ್ತಾರ; ಎರಡನೆಯದ್ದು ಸಮಾಜದ ಸಂಪರ್ಕಕ್ಕಾಗಿ, ಸಮಾಜದಲ್ಲಿ ಸದ್ಭಾವ ನಿರ್ಮಾಣಕ್ಕಾಗಿ, ಎಲ್ಲಾ ಸಜ್ಜನ ಶಕ್ತಿಯನ್ನು ಜೊತೆಯಲ್ಲಿರಿಸಿಕೊಂಡು ಸಮಾಜದ ಸಂಘಟನೆ, ಪರಿವರ್ತನೆ ಮತ್ತು ಜಾಗರಣದ ಕಾರ್ಯವನ್ನು ಮಾಡುವುದಾಗಿದೆ ಎಂದು ಹೇಳಿದರು.

ಪ್ರಮುಖ ನಾಗರಿಕ ಗೋಷ್ಠಿ ಮತ್ತು ಸದ್ಭಾವಗೋಷ್ಠಿ: ಪ್ರತಿ ಸ್ಥಾನದ ಪ್ರಮುಖ ನಾಗರಿಕರನ್ನು ತಲುಪುವ ದೃಷ್ಟಿಯಿಂದ ಪ್ರಮುಖ ನಾಗರಿಕ ಗೋಷ್ಠಿ; ಸಮಾಜದಲ್ಲಿ ಸದ್ಭಾವನೆಯನ್ನು ಮೂಡಿಸುವ ಸಲುವಾಗಿ ಸ್ಥಾನೀಯ ಸ್ತರದಲ್ಲಿ ಜಾತಿ ಸಮುದಾಯಗಳ ಪ್ರಮುಖರು, ಆಧ್ಯಾತ್ಮಿಕ ಸಂಸ್ಥೆಗಳ ಪ್ರಮುಖರು, ಧಾರ್ಮಿಕ ಕೇಂದ್ರಗಳ ಪ್ರಮುಖರು ಸೇರಿದಂತೆ ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವ ಮೂಲಕ ಸಮಾಜದಲ್ಲಿ ಸುಧಾರಣೆ ತರುವ ಪ್ರಯತ್ನಗಳ ಕುರಿತು ಚರ್ಚೆ ಸದ್ಭಾವನಾ ಗೋಷ್ಠಿಗಳಲ್ಲಿ ನಡೆಯಲಿದೆ ಎಂದು ವಿವರಿಸಿದರು.

10 ಕೋಟಿ ಗೃಹ ಸಂಪರ್ಕ

ಸಮಾಜದ ಸಂಪರ್ಕಕ್ಕಾಗಿ ಅನೇಕ ಪ್ರಯತ್ನಗಳನ್ನು ಶತಾಬ್ದಿ ಸಂದರ್ಭದಲ್ಲಿ ನಾವು ಮಾಡಿದ್ದೇವೆ. ಪ್ರಮುಖವಾಗಿ ಪ್ರತಿ ಗ್ರಾಮದ ಪ್ರತಿ ಮನೆಯನ್ನೂ ಸಂಪರ್ಕಿಸುವ ಪ್ರಯತ್ನವನ್ನು ನಾವು ಮಾಡಿದ್ದು ಇಲ್ಲಿಯವರೆಗೆ 3.90 ಲಕ್ಷ ಗ್ರಾಮಗಳ 10 ಕೋಟಿ ಮನೆಗಳನ್ನು ನಾವು ತಲುಪಿದ್ದೇವೆ. ಈ ಪ್ರಯತ್ನ ಇನ್ನೂ ಜಾರಿಯಲ್ಲಿದೆ. ಶತಾಬ್ದಿ ವರ್ಷ 2026ರ ಅಕ್ಟೋಬರ್‌ವರೆಗೆ ಇರಲಿದ್ದು ಕೆಲವು ಪ್ರಾಂತಗಳಲ್ಲಿ ಈ ಪ್ರಯತ್ನ ಪೂರ್ಣಗೊಂಡಿದೆ. ಕೆಲವು ಪ್ರಾಂತಗಳಲ್ಲಿ ನಡೆಯುತ್ತಿದೆ, ಇನ್ನು ಮೂರು ಅಥವಾ ನಾಲ್ಕು ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಗೃಹಸಂಪರ್ಕದ ಅನುಭವ ಬಹಳ ವಿಶೇಷವಾಗಿತ್ತು. ಸಮಾಜದ ಸರ್ವರನ್ನೂ ತಲುಪುವ ಪ್ರಯತ್ನ ನಮ್ಮದು ಎಂದರು.

ಮುಖ್ಯವಾಗಿ ಪಂಚಪರಿವರ್ತನೆಯ (ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ, ಸ್ವದೇಶಿ ಭಾವ ಜಾಗರಣ ಮತ್ತು ನಾಗರಿಕ ಶಿಷ್ಟಾಚಾರ) ವಿಷಯವನ್ನು ವಸತಿ ಅಥವಾ ಮಂಡಲ ಸ್ತರದಲ್ಲಿ ಎಲ್ಲರಿಗೂ ತಲುಪಬೇಕು ಎಂಬ ಪ್ರಯತ್ನವನ್ನು ಮಾಡಲಾಗುತ್ತಿದೆ. ಈ ವಿಷಯದ ಕುರಿತು ಸ್ಥಾನೀಯ ಪ್ರಮುಖರು, ವೈಚಾರಿಕ ವಲಯದ ಪ್ರಮುಖರ ಜೊತೆಗೆ ಚರ್ಚಿಸಿ, ಸಮಾಜದಲ್ಲಿ ಪಂಚಪರಿವರ್ತನೆಗೆ ಪೂರಕ ಮಾನಸಿಕತೆಯ ನಿರ್ಮಾಣಕ್ಕಾಗಿ ಪ್ರಯತ್ನಿಸಲಾಗುತ್ತಿದೆ. ಅದಕ್ಕಾಗಿ ಪ್ರಮುಖ ನಾಗರಿಕ ಗೋಷ್ಠಿ ಮತ್ತು ಸದ್ಭಾವ ಗೋಷ್ಠಿಗಳು ಸಹಕಾರಿ ಆಗಲಿವೆ ಎಂದು ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್‌ನ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳು ಅಕ್ಟೋಬರ್ 2026ರವರೆಗೆ ಮುಂದುವರಿಯಲಿದೆ. ಈ ಅವಧಿಯಲ್ಲಿ ವಿವಿಧ ಚಟುವಟಿಕೆಗಳನ್ನು ಯೋಜಿಸಲಾಗಿದೆ ಎಂದು ಮುಕುಂದ ಅವರು ತಿಳಿಸಿದರು.

ಗೃಹ ಸಂಪರ್ಕ ಅಭಿಯಾನ

ಸಂಪರ್ಕಿಸಿದ ಹಳ್ಳಿಗಳು	3,89,465
ಸಂಪರ್ಕಿಸಿದ ಬಸ್ತಿ (ವಸತಿ)	31,143
ಭೇಟಿ ನೀಡಿದ ಮನೆಗಳು	10,02,12,162
ಹಂಚಿದ ಕರಪತ್ರಗಳು	9,11,88,203
ಪುಸ್ತಕ ಮಾರಾಟ	84,13,552

ಹಿಂದು ಸಮ್ಮೇಳನ

ಮಂಡಲ ಸಮ್ಮೇಳನಗಳು	23,143
ಬಸ್ತಿ (ವಸತಿ) ಸಮ್ಮೇಳನಗಳು	13,905
ಮಹಿಳಾ ಭಾಗವಹಿಸುವಿಕೆ	1,55,95,124
ಪುರುಷರ ಭಾಗವಹಿಸುವಿಕೆ	1,93,40,087
ಒಟ್ಟು ಭಾಗವಹಿಸುವಿಕೆ	3,49,35,211

ಕಾರ್ಯವಿಸ್ತಾರ 2026

ಸ್ಥಾನಗಳು	55,683
ಶಾಖೆಗಳು	88,949
ಮಿಲನ್‌ಗಳು	32,606
ಮಂಡಳಿಗಳು	13,211
ಒಟ್ಟು	1,34,766

ವಿಜಯದಶಮಿ ಅಂಕಿ-ಅಂಶ

ವಿಜಯದಶಮಿ ಉತ್ಸವ

ಒಟ್ಟು ಉತ್ಸವ	62,555
ತರುಣರ ಭಾಗವಹಿಸುವಿಕೆ	27,08,186
ಬಾಲಕರ ಭಾಗವಹಿಸುವಿಕೆ	5,36,955
ಒಟ್ಟು ಭಾಗವಹಿಸುವಿಕೆ	32,45,141

ವಿಜಯದಶಮಿ ಸಂಚಲನ

ಸಂಚಲನ ಸ್ಥಳ	22,656
ತರುಣರ ಭಾಗವಹಿಸುವಿಕೆ	21,62,155
ಬಾಲಕರ ಭಾಗವಹಿಸುವಿಕೆ	3,83,663
ಒಟ್ಟು ಭಾಗವಹಿಸುವಿಕೆ	25,45,818







37,000 ಹಿಂದು ಸಮ್ಮೇಳನಗಳು

ದೇಶದಲ್ಲಿ ಶತಾಬ್ದಿ ವರ್ಷದ ನಿಮಿತ್ತ ಇಲ್ಲಿಯವರೆಗೆ 37,048 ಹಿಂದು ಸಮ್ಮೇಳನಗಳು ನಡೆದಿವೆ. ಇನ್ನೂ ಕೆಲವು ಕಡೆಗಳಲ್ಲಿ ನಡೆಯಲಿವೆ. ನಗರ ಪ್ರದೇಶ, ಗ್ರಾಮೀಣ ಪ್ರದೇಶ, ಬುಡಕಟ್ಟು ಪ್ರದೇಶಗಳು, ದೂರದ ಪ್ರದೇಶಗಳ ಸಹಿತ ಎಲ್ಲಾ ಕಡೆಗಳಲ್ಲಿ ಹಿಂದು ಸಮ್ಮೇಳನಗಳು ಜರುಗಿವೆ. ಅರುಣಾಚಲ ಪ್ರದೇಶದಲ್ಲಿ ದೂರದ ಪ್ರದೇಶವೊಂದರಲ್ಲಿ ಸಂಘದ ಸಹಸರಕಾರ್ಯವಾಹ ಅರುಣ್ ಕುಮಾರ್ ಅವರು ಭಾಗವಹಿಸಿದ್ದ ಹಿಂದು ಸಮ್ಮೇಳನದಲ್ಲಿ ಪಾಲ್ಗೊಂಡವರು – ಇದು ನಂಬಲಾಗುತ್ತಿಲ್ಲ. ಈ ಹಿಂದೆ ಯಾವತ್ತೂ ಹೀಗೆ ಸಮಾಜದ ಎಲ್ಲಾ ಬಂಧುಗಳು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿ ದೇಶ, ಸಮಾಜದ ಬಗ್ಗೆ ಯೋಚಿಸುವ ಕೆಲಸ ಆಗಿರಲಿಲ್ಲ ಎಂದು ಸಂಭ್ರಮಿಸಿದ್ದಾರೆ ಎಂದು ತಿಳಿಸಿದರು.

ಸ್ವಯಂಸೇವಕರಿಗೆ ಅಪೂರ್ವ ಸ್ವಾಗತ

ಕೇರಳದಲ್ಲಿ ನಾವು ಎಲ್ಲರ ಮನೆಗಳಿಗೆ ಭೇಟಿ ನೀಡಿದ್ದೇವೆ. ಅದರಲ್ಲಿ ಕಮ್ಯುನಿಸ್ಟ್ ಸಿದ್ಧಾಂತದ ಜನರ ಮನೆಗಳೂ ಸೇರಿದ್ದವು. ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯದವರ ಮನೆಗಳಿಗೂ ನಾವು ಭೇಟಿ ಕೊಟ್ಟಿದ್ದೇವೆ. ಬಹುತೇಕ ಸ್ಥಳಗಳಲ್ಲಿ ನಮಗೆ ಒಳ್ಳೆಯ ಸ್ವಾಗತ ಸಿಕ್ಕಿದೆ. ಕೇರಳದ ಸಣ್ಣದೊಂದು ಪ್ರದೇಶದಲ್ಲಿ ನಮ್ಮ ಸ್ವಯಂಸೇವಕರು 55,000 ಮುಸ್ಲಿಂ ಮನೆಗಳು ಮತ್ತು 54,000 ಕ್ರಿಶ್ಚಿಯನ್ ಮನೆಗಳಿಗೆ ಭೇಟಿ ಕೊಟ್ಟಿದ್ದಾರೆ. ಎಲ್ಲೆಡೆ ಪ್ರೀತಿಯಿಂದ ಸ್ವಾಗತಿಸಿದ್ದಾರೆ. ರಾಷ್ಟ್ರೀಯ ವಿಚಾರಗಳು, ಪಂಚ ಪರಿವರ್ತನೆಯ ವಿಷಯವಾಗಿ ನಾವು ಅವರಲ್ಲಿ ಚರ್ಚಿಸಿದ್ದು, ಎಲ್ಲರೂ ಅದನ್ನು ಸ್ವಾಗತಿಸಿದರು. ಹೀಗೆ ವಿಚಾರ, ಪೂಜಾ ಪದ್ಧತಿ, ವನವಾಸಿ, ಬುಡಕಟ್ಟು ಜನಾಂಗಗಳೂ ಸೇರಿದಂತೆ ಎಲ್ಲಾ ರೀತಿಯ ಜನರ ಮನೆಗಳ ಸಂಪರ್ಕವು ಉತ್ತಮ ರೀತಿಯಲ್ಲಿ ನಡೆದಿದೆ ಎಂದು ಮುಕುಂದ ಅವರು ಪ್ರಶಂಸಿಸಿದರು.

ನಾಲ್ಕು ಮಹಾನಗರಗಳಲ್ಲಿ ಸಂವಾದ ಕಾರ್ಯಕ್ರಮ

ದೇಶದ ನಾಲ್ಕು ಪ್ರಮುಖ ಮಹಾನಗರಗಳಲ್ಲಿ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರ ಉಪನ್ಯಾಸಮಾಲೆ ಮತ್ತು ಸಂವಾದ ಕಾರ್ಯಕ್ರಮಗಳು ಜರುಗಿದವು. ದಿಲ್ಲಿ, ಬೆಂಗಳೂರು, ಕೊಲ್ಕತ ಮತ್ತು ಮುಂಬೈನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಅದರ ಜೊತೆಗೆ ಸರಸಂಘಚಾಲಕರು ರಾಷ್ಟ್ರದ ಎಲ್ಲಾ ರಾಜ್ಯಗಳ ರಾಜಧಾನಿಗೆ ಭೇಟಿ ನೀಡಿ ಸಂವಾದದಲ್ಲಿ ಪಾಲ್ಗೊಂಡರು. ಈ ಕಾರ್ಯಕ್ರಮಗಳಲ್ಲಿ ಸರಸಂಘಚಾಲಕರ ಭಾಗವಹಿಸುವಿಕೆ ಮತ್ತು ಮಾರ್ಗದರ್ಶನ ಉತ್ತಮ ಪರಿಣಾಮವನ್ನು ಬೀರಿದೆ. ಎಲ್ಲಾ ಸಂವಾದಗಳಲ್ಲಿ ಹಲವು ರೀತಿಯ ಪ್ರಶ್ನೆಗಳಿಗೆ ಸರಸಂಘಚಾಲಕರು ನಮಗೆಲ್ಲರಿಗೂ ಮಾರ್ಗದರ್ಶನ ನೀಡುವಂತಹ ಉತ್ತರಗಳನ್ನು ನೀಡಿದ್ದಾರೆ. ಕೇವಲ ನಾಲ್ಕು ಮಹಾನಗರಗಳಲ್ಲಿ ನಡೆದ ಉಪನ್ಯಾಸಮಾಲೆ ಕಾರ್ಯಕ್ರಮಗಳಲ್ಲಿ ಸರಸಂಘಚಾಲಕರು ನಾಗರಿಕರೊಂದಿಗೆ ನೇರವಾಗಿ ಸಂವಹನ ನಡೆಸಿದ್ದಾರೆ. ಸಾವಿರಕ್ಕೂ ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ ಮತ್ತು 20 ತಾಸಿಗೂ ಅಧಿಕ ಸಮಯವನ್ನು ಪ್ರಶ್ನೋತ್ತರಕ್ಕಾಗಿಯೇ ನೀಡಿದ್ದಾರೆ.

ಶಿರಾಡಿ ಘಾಟಿಯಲ್ಲಿ ಭೀಕರ ಅಪಘಾತ: ಮೂರು ಮಂದಿ ಸಾವು

• ಉಪ್ಪಿನಂಗಡಿ: ಇಲ್ಲಿನ ಪೊಲೀಸ್ ಠಾಣಾ ವ್ಯಾಪ್ತಿಯ ಶಿರಾಡಿ ಘಾಟ್ ಸಮೀಪ ಹಾಸನದಿಂದ ಉಜಿರೆಯತ್ತ ಸಂಚರಿಸುತ್ತಿದ್ದ ಕಾರಿಗೆ ಧರ್ಮಸ್ಥಳದಿಂದ ತಿರುಪತಿಗೆ ಹೋಗುತ್ತಿದ್ದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ರಾಜಹಂಸ ಬಸ್ಸೊಂದು ಡಿಕ್ಕಿ ಹೊಡೆದ ಪರಿಣಾಮ ಮೂವರು ಸಾವನ್ನಪ್ಪಿ ಇನ್ನೋರ್ವ ಗಂಭೀರವಾಗಿ ಗಾಯಗೊಂಡ ಘಟನೆ ಶುಕ್ರವಾರ ಸಾಯಂಕಾಲ ಸಂಭವಿಸಿದೆ.

ಅಪಘಾತದಲ್ಲಿ ಮೃತಪಟ್ಟವರನ್ನು ಮಾಜಿ ಎಪಿಎಂಸಿ ಸದಸ್ಯ, ಕೊಕ್ಕಡದಲ್ಲಿನ ಕೊಬ್ಬರಿ ಎಣ್ಣೆ ಮಿಲ್ ಮಾಲಕ ಚಂದ್ರಶೇಖರ ಗೌಡ (57) ಶಿಶಿಲ, ಉಜಿರೆಯ ಉಮೇಶ್ ಯಾನೆ ಜನಾರ್ಧನ ಗೌಡ (58) ಕೇರಿಮಾರ್, ಫೈನಾನ್ಸ್ ಮಾಲಕ ಶ್ರೀಧರ ಗೌಡ ಮರಕ್ಕಡ (61), ಎಂದು ಗುರುತಿಸಲಾಗಿದ್ದು, ಉಜಿರೆಯ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಸುರೇಶ್ (58) ಉಜಿರೆ ಎಂಬವರು ಗಂಭೀರವಾಗಿ ಗಾಯಗೊಂಡು ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲ್ಪಟ್ಟಿದ್ದಾರೆ.

ಸಕಲೇಶಪುರದಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿ ಕಾರಿನಲ್ಲಿ ಕೊಕ್ಕಡದತ್ತ ಹಿಂತಿರುಗುತ್ತಿದ್ದಾಗ ಎದುರಿನಿಂದ ಬಂದ ಬಸ್ಸು ಡಿಕ್ಕಿ ಹೊಡೆಯಿತು. ಡಿಕ್ಕಿಯರಭಸಕ್ಕೆ ಕಾರಿನಲ್ಲಿದ್ದ ಪ್ರಯಾಣಿಕರೆಲ್ಲರೂ ಗಂಭೀರವಾಗಿ ಗಾಯಗೊಂಡು ಇಬ್ಬರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದರೆ, ಇನ್ನೋರ್ವರು ಆಸ್ಪತ್ರೆಗೆ ಸಾಗಿಸುವ ಯತ್ನದಲ್ಲಿ



ಅಪಘಾತಕ್ಕೀಡಾದ ಸ್ಥಳದಲ್ಲಿ ಜಖಂಗೊಂಡಿರುವ ಕಾರು ಹಾಗೂ ಬಸ್



ಅಪಘಾತದಲ್ಲಿ ಮೃತಪಟ್ಟ ಚಂದ್ರಶೇಖರ ಗೌಡ , ಜನಾರ್ಧನ ಗೌಡ, ಶ್ರೀಧರ ಗೌಡ

ಸಾವನ್ನಪ್ಪಿದರು. ಗಾಯಾಳುವನ್ನು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಪಡಿಸಲಾಗಿದೆಯಾದರೂ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದುಬಂದಿದೆ.

ಘಟನೆ ಸಂಭವಿಸಿದಾಕ್ಷಣ ನೆಲ್ಯಾಡಿ ಹೊರಠಾಣಾ ಪೊಲೀಸರು ಹಾಗೂ ಸ್ಥಳೀಯರು ರಕ್ಷಣಾ ಕಾರ್ಯಾಚರಣೆಗೆ ಧಾವಿಸಿ ಬಂದಿದ್ದು, ಅಪಘಾತದಿಂದ ನಜ್ಜುಗುಜ್ಜಾದ ಕಾರಿನಿಂದ ಗಾಯಾಳುಗಳನ್ನು ಹೊರತೆಗೆಯುವಲ್ಲಿ ಸಹಕರಿಸಿದರು. ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರೆದಿದೆ.

ಕಿರುಸುದ್ದಿ

ಸಿಎ ಫೌಂಡೇಷನ್ ಪರೀಕ್ಷೆಯಲ್ಲಿ ತೇರ್ಗಡೆ



• ಪುತ್ತೂರು: ಜನವರಿ 2026 ರಲ್ಲಿ ನಡೆದ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ನಡೆಸಿದ ಸಿಎ ಫೌಂಡೇಷನ್ ಪರೀಕ್ಷೆಯಲ್ಲಿ ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜಿನ ಹಿರಿಯ ವಿದ್ಯಾರ್ಥಿಗಳಾದ ನೀತಿ ಎನ್.ಬಿ. ಮತ್ತು ಇಬ್ರಾಹಿಂ ಶಾಹನ್ ಅವರು ಉತ್ತೀರ್ಣರಾಗುವ ಮೂಲಕ ಉತ್ತಮ ಸಾಧನೆಯನ್ನು ದಾಖಲಿಸಿದ್ದಾರೆ. ನೀತಿ ಕೊಲ್ಲಮೊಗ್ರು ನಿವಾಸಿ ಬಾಲಕೃಷ್ಣ ಗೌಡ ಮತ್ತು ಶಾರದಾ ದಂಪತಿಯ ಪುತ್ರಿ. ಇಬ್ರಾಹಿಂ ಶಾಹನ್ ಬಾರ್ಯ ನಿವಾಸಿ ಹೈದರ್ ಮತ್ತು ಉಮ್ಮುಲ್ ಸಲ್ಮಾ ದಂಪತಿ ಪುತ್ರ. ಮುಹಮ್ಮದ್ ರಿಯಾಜ್ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ. ಅವರು ಸಂಪ್ಯದ ನಿವಾಸಿ ಅಬೂಬಕ್ಕರ್ ಮತ್ತು ಸಾರಮ್ಮ ದಂಪತಿಯ ಪುತ್ರ.

ಬೆಂಚ್‌ಪ್ರೆಸ್ ಸ್ಪರ್ಧೆ: ಲಕ್ಷ್ಮಣರಿಗೆ ಎರಡು ಚಿನ್ನದ ಪದಕ

• ಮಂಗಳೂರು: ಹರ್ಯಾಣದ ಫರೀದಾಬಾದ್‌ನಲ್ಲಿ ನಡೆದ ರಾಷ್ಟ್ರೀಯ ಬೆಂಚ್‌ಪ್ರೆಸ್ ಸ್ಪರ್ಧೆಯ 66 ಕೆಜಿ ದೇಹತೂಕ ವಿಭಾಗದ ಮಾಸ್ಟರ್ 3ರಲ್ಲಿ ಮಂಗಳೂರಿನ ಬಾಲಾಂಜನೇಯ ಜಿಮ್ನಾಶಿಯಂ ಸದಸ್ಯರಾದ ಯು. ಲಕ್ಷ್ಮಣ ಅವರು ಎರಡು ಚಿನ್ನದ ಪದಕ ಗಳಿಸಿದ್ದಾರೆ. ಮಂಗಳೂರಿನ ಮುನ್ಸಿಫ್ ನ್ಯಾಯಾಲಯದ ನಿವೃತ್ತ ಉದ್ಯೋಗಿಯಾದ ಲಕ್ಷ್ಮಣ ಅವರು ಏಕಲವ್ಯ ಪ್ರಶಸ್ತಿ ವಿಜೇತ ಸತೀಶ್‌ಕುಮಾರ್ ಕುದ್ರೋಳಿ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.



ಗೃಹ ಬಳಕೆ ಎಲ್‌ಪಿಜಿ ಪೂರೈಕೆ ವ್ಯತ್ಯಯ ಇಲ್ಲ | ವಾಣಿಜ್ಯ ಎಲ್‌ಪಿಜಿ ಸಮಸ್ಯೆ ಪರಿಹಾರಕ್ಕೆ ಶ್ರಮ

ಭಯದಲ್ಲಿ ಸತತ ಬುಕ್ಕಿಂಗ್ ಬೇಡ

• ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೃಹ ಬಳಕೆಯ ಅಡುಗೆ ಅನಿಲ ಸರಬರಾಜಿನಲ್ಲಿ ಯಾವುದೇ ವ್ಯತ್ಯಯ ಆಗಿಲ್ಲ, ಆಗುವುದೂ ಇಲ್ಲ. 25 ದಿನಗಳಿಗೆ ಒಂದು ಸಿಲಿಂಡರ್ ಪೂರೈಕೆಯ ನಿಯಮದಂತೆ ಸಿಲಿಂಡರ್ ದೊರೆಯುತ್ತಿದ್ದು, ನಾಗರಿಕರು ಗಾಬರಿಗೊಂಡು ಎರಡೆರಡು ಸಿಲಿಂಡರ್ ಬುಕ್ ಮಾಡಬೇಕಾಗಿಲ್ಲ. ಅದಕ್ಕೆ ಅವಕಾಶವೂ ಇಲ್ಲ ಎಂದು ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

ಏಜೆನ್ಸಿಗಳವರು, ದಾಸ್ತಾನು ಕೇಂದ್ರಗಳಲ್ಲಿ ಹೆಚ್ಚುವರಿ ಗ್ಯಾಸ್ ಸಿಲಿಂಡರ್ ಶೇಖರಣೆ ಮಾಡಿಟ್ಟುಕೊಳ್ಳದಂತೆ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಮಂಗಳೂರು ಪೊಲೀಸ್ ಕಮಿಷನರೇಟ್ ಹಾಗೂ ಜಿಲ್ಲಾ ಪೊಲೀಸ್ ವ್ಯಾಪ್ತಿಯ ದಾಸ್ತಾನು ಕೇಂದ್ರಗಳಿಗೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಐಒಸಿಎಲ್, ಬಿಪಿಸಿಎಲ್, ಎಚ್‌ಪಿಸಿಎಲ್‌ನ ಜನರಲ್ ಮ್ಯಾನೇಜರ್ ಹಾಗೂ ಇತರ ಪ್ರಮುಖರ ಜತೆ ಸಭೆ ನಡೆಸಲಾಗಿದೆ. ಜಿಲ್ಲೆಯಲ್ಲಿ ಪೂರೈಕೆ ಮಾತ್ರವಲ್ಲ, ಹೈದರಾಬಾದ್, ತಮಿಳುನಾಡುವಿಗೆ ಇಲ್ಲಿಂದ ಪೂರೈಕೆಯಲ್ಲಿ ತೊಂದರೆ ಆಗದಂತೆ ಕ್ರಮ ವಹಿಸಲಾಗಿದೆ ಎಂದರು.

ಎಂಆರ್‌ಪಿಎಲ್‌ನಿಂದಲೂ ಎಲ್‌ಪಿಜಿ ಪೂರೈಕೆ ಆಗುತ್ತಿದ್ದು, ಅವರ ಉತ್ಪಾದನೆಯೂ ಕಡಿಮೆ ಆಗಿಲ್ಲ ಎಂಬ ಮಾಹಿತಿ ಅಲ್ಲಿನ ಆಡಳಿತ ನಿರ್ದೇಶಕರಿಂದಲೇ ದೊರಕಿದೆ. ಐಒಸಿಎಲ್‌ಗೆ ಆಗಬೇಕಾದ ಎಲ್‌ಪಿಜಿಯೂ ಆಮದಾಗುತ್ತಿದೆ. ಆದರೆ, ವಾಣಿಜ್ಯ ಬಳಕೆಯ ಎಲ್‌ಪಿಜಿ ಪೂರೈಕೆಗೆ ಸಂಬಂಧಿಸಿ ಕೇಂದ್ರ ಹಾಗೂ ರಾಜ್ಯ ಸರಕಾರದಿಂದ ಮಾನದಂಡ ಹೊರಡಿಸುವವರೆಗೂ ಪೂರೈಕೆ



> ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್‌ಗಳು, ವಸತಿಯುತ ಶಾಲೆಗಳು, ಮಿಲಿಟರಿ ಕ್ಯಾಂಟೀನ್‌ಗಳು, ಸಿಐಎಸ್‌ಎಫ್, ಜೈಲು ಸೇರಿದಂತೆ ಸಾರ್ವಜನಿಕ ವಲಯದ ತುರ್ತು ಸೇವಾ ಸಂಸ್ಥೆಗಳಿಗೆ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಆಗುವುದಿಲ್ಲ. ದೇವಸ್ಥಾನದ ಅನ್ನ ದಾಸೋಹ ಸೇರಿದಂತೆ, ಚರ್ಚ್, ಮಸೀದಿಗಳಿಗೂ ಎಲ್‌ಪಿಜಿ ಪೂರೈಕೆಗೆ ತೊಂದರೆಯಾಗದಂತೆ ಕ್ರಮ ವಹಿಸಲು ಜಿಲ್ಲಾಡಳಿತದ ವತಿಯಿಂದ ಮನವಿ ಮಾಡಲಾಗಿದೆ. ರೈಲ್ವೆ ಸ್ಟೇಷನ್‌ನಿಂದಲೂ ಎಲ್‌ಪಿಜಿಗಾಗಿ ಬೇಡಿಕೆ ಬಂದಿದ್ದು, ಈ ಬಗ್ಗೆಯೂ ಗಮನ ಹರಿಸಲಾಗಿದೆ.
>
> ■ ದರ್ಶನ್ ಎಚ್.ವಿ. ದ.ಕ.ಜಿಲ್ಲಾಧಿಕಾರಿ

ಸ್ಥಗಿತಗೊಂಡಿದೆ. ಈ ಸಮಸ್ಯೆ ಬಹಳ ದಿನ ಮುಂದುವರಿಯದಂತೆ ಸರಕಾರದ ಮಟ್ಟದಲ್ಲಿ ಕ್ರಮ ಆಗುತ್ತಿದೆ. ಸದ್ಯ ಗೃಹ ಬಳಕೆಗೆ ಯಾವುದೇ ಸಮಸ್ಯೆ ಇಲ್ಲ ಎಂದು ಅವರು ಹೇಳಿದರು.

ಪೂರೈಕೆ ವ್ಯತ್ಯಯ ತಾತ್ಕಾಲಿಕ ಸಮಸ್ಯೆ: ಸ್ವರೂಪ

• ಉಡುಪಿ: ಗೃಹ ಬಳಕೆ ಸಿಲಿಂಡರ್‌ಗಳ ಸರಬರಾಜಿನಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾಗಿರುವುದಿಲ್ಲ. ವಾಣಿಜ್ಯ ಬಳಕೆಯ ಅನಿಲ ಹೊರ ದೇಶಗಳಿಂದ ಪೂರ್ಣ ಪ್ರಮಾಣದಲ್ಲಿ ಆಮದು ಆಗುತ್ತಿದ್ದು, ಯುದ್ಧ ಭೀತಿಯಿಂದಾಗಿ ಅನಿಲ ಆಮದು ನಿಗದಿತ ಪ್ರಮಾಣದಲ್ಲಿ ಆಗದೆ ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ. ಇದು ತಾತ್ಕಾಲಿಕ ಸಮಸ್ಯೆ ಆಗಿದೆ. ಇದಕ್ಕೆ ಪರ್ಯಾಯ ಉರುವಲುಗಳ ಬಳಕೆಯೊಂದೇ ಮಾರ್ಗ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ. ಹೇಳಿದರು.

ಅವರು ಶುಕ್ರವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಾಣಿಜ್ಯ ಬಳಕೆ ಅನಿಲ ಸಿಲಿಂಡರ್ ಸರಬರಾಜು ಸಮಸ್ಯೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಈಗಾಗಲೇ ಜಿಲ್ಲೆಯಲ್ಲಿ ಕೆಲವು ಹೋಟೆಲ್ ಉದ್ಯಮಗಳು ಕಟ್ಟಿಗೆ, ವಿದ್ಯುತ್ ಸೇರಿದಂತೆ ಮತ್ತಿತರ ಉರುವಲುಗಳನ್ನು ಬಳಸಿ ಆಹಾರ ಪದಾರ್ಥಗಳನ್ನು ತಯಾರಿಸುತ್ತಿದ್ದಾರೆ. ಜಿಲ್ಲೆಯ ಎಲ್ಲ ಹೋಟೆಲ್ ಉದ್ಯಮಗಳು ಇದಕ್ಕೆ ಒತ್ತು ನೀಡುವುದರೊಂದಿಗೆ ಹೋಟೆಲ್ ಉದ್ಯಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಉದ್ಯೋಗವಕಾಶವನ್ನು ಮುಂದುವರೆಸುವುದು ಉತ್ತಮ. ಈಗಾಗಿರುವ ವ್ಯತ್ಯಯವು ತಾತ್ಕಾಲಿಕವಾಗಿದ್ದು, ಮುಂದೆ ಸಮಸ್ಯೆ ಸರಿಹೋಗಬಹುದಾಗಿದೆ ಎಂದರು.

ಜಿಲ್ಲೆಯಲ್ಲಿ 80 ಕ್ಕೂ ಹೆಚ್ಚು ಸಾಮಿಲ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಹೋಟೆಲ್ ಉದ್ಯಮಗಳಿಗೆ ಸಹಾಯವಾಗುವ ನಿಟ್ಟಿನಲ್ಲಿ ಕಟ್ಟಿಗೆ ಲಭ್ಯವಾಗುವಂತೆ ಸಹಕರಿಸಬೇಕು ಎಂದ ಅವರು ಹೋಟೆಲ್ ಉದ್ಯಮಿಗಳು ತಮ್ಮ ದೈನಂದಿನ ಚಟುವಟಿಕೆಗೆ ವಿದ್ಯುತ್ ಸ್ಟವ್‌ಗಳ ಬಳಕೆಗೆ ಮುಂದಾದಲ್ಲಿ ಅವರುಗಳಿಗೆ ವಿದ್ಯುತ್ ಶಕ್ತಿ ಸರಬರಾಜು ಮಾಡುವ ಕಾರ್ಯವನ್ನು ಶೀಘ್ರದಲ್ಲಿಯೇ ಕಲ್ಪಿಸಿಕೊಡಬೇಕೆಂದು ಮೆಸ್ಕಾಂ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿ, ವಿದ್ಯುತ್ ಶಕ್ತಿ ಆಧಾರಿತ ಉಪಕಾರಣಗಳ ಬಳಕೆಗೆ ಅನುಕೂಲವಾಗುವಂತೆ ಅದರ ಉತ್ಪಾದಕರು ಸಹ ಸಹಕರಿಸಬೇಕು ಎಂದರು.

ಹೋಟೇಲ್ ಮಾಲಿಕರ ಸಂಘದವರು ಪ್ರಸ್ತುತ ಈ ಹಿಂದೆ ಸರಬರಾಜಾಗುತ್ತಿದ್ದ ವಾಣಿಜ್ಯ ಸಿಲಿಂಡರ್‌ಗಳ ಶೇ.25 ರಷ್ಟು ನೀಡಿದಲ್ಲಿ ನಮಗೆ ಅನುಕೂಲವಾಗುತ್ತಿದೆ ಎಂಬ ಮನವಿ ಕೇಳಿ ಬರುತ್ತಿದೆ ಈ ಬಗ್ಗೆ ಸರಕಾರಕ್ಕೆ ಪತ್ರ ಬರೆದು ತಮ್ಮ ಬೇಡಿಕೆಯನ್ನು ಪೂರೈಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಸಾಮಿಲ್ ಮಾಲಕರ ಸಂಘದ ಪದಾಧಿಕಾರಿಗಳು ಮಾತನಾಡಿ, ಹೋಟೆಲ್ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸಾಮಿಲ್‌ಗಳಲ್ಲಿ ಕಟ್ಟಿಗೆಗಳನ್ನು ಪ್ರಸ್ತುತ ಇರುವ ಬೆಲೆಗೆ ಯಾವುದೇ ಬೆಲೆ ಏರಿಸದೆ ಮಾರಾಟ ಮಾಡುತ್ತೇವೆ ಎಂದರು.

ಸಭೆಯಲ್ಲಿ ಜಿಲ್ಲಾ ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕ ರವೀಂದ್ರ, ಸಾಮಿಲ್ ಮಾಲಿಕರ ಸಂಘ, ಹೋಟೆಲ್ ಮಾಲಿಕರ ಸಂಘ ಹಾಗೂ ಮತ್ತಿತರರ ಸಂಘಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



> ಜಿಲ್ಲೆಯಲ್ಲಿ 25000 ದಿಂದ 30000 ಕ್ಕೂ ಹೆಚ್ಚು ಜನರು ಹೋಟೇಲ್ ಉದ್ಯಮದ ಕಾರ್ಮಿಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಲ್ಲಿ ಹೆಚ್ಚು ಜನರು ಹೊರ ಜಿಲ್ಲೆ, ಹೊರ ರಾಜ್ಯಗಳಿಂದ ಆಗಮಿಸಿದ್ದಾರೆ. ಉದ್ಯಮದಲ್ಲಿ ವ್ಯತ್ಯಯ ಉಂಟಾಗಿ ಕಾರ್ಮಿಕರು ನಿರುದ್ಯೋಗಿಗಳಾಗಿ ಬೇರೆ ಉದ್ಯೋಗ ಅರಸಿ ಹೋದರೆ ಮುಂಬರುವ ದಿನಗಳಲ್ಲಿ ಹೋಟೇಲ್‌ಗಳಲ್ಲಿ ಕಾರ್ಮಿಕರ ಸಮಸ್ಯೆ ಉಂಟಾಗುತ್ತದೆ. ಹೀಗಾಗದಂತೆ ನೋಡಿಕೊಳ್ಳಬೇಕು.
>
> ■ ಸ್ವರೂಪ ಟಿ. ಕೆ., ಉಡುಪಿ ಜಿಲ್ಲಾಧಿಕಾರಿ

ಸಂಟ್ಯಾರು ಹಿಟ್ ಆಂಡ್ ರನ್ ಪ್ರಕರಣ: ಬಾಲಕನ ತಾಯಿ ಮೇಲೆ ಕೇಸು ದಾಖಲು

• ಪುತ್ತೂರು: ಮಾಣಿ–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಸಂಟ್ಯಾರು ಜಂಕ್ಷನ್‌ನಲ್ಲಿ ಕಾರೊಂದು ಸರಣಿ ಅಪಘಾತ ನಡೆಸಿ ನಿಲ್ಲಿಸದೆ ಪರಾರಿಯಾಗಲು ಯತ್ನಿಸಿದ ಘಟನೆ ಗುರುವಾರ ರಾತ್ರಿ ನಡೆದಿದ್ದು, ಕಾರು ಚಲಾಯಿಸಿದ ಅಪ್ರಾಪ್ತ ಬಾಲಕನ ತಾಯಿ ವಿರುದ್ಧ ಪ್ರಕರಣ ದಾಖಲಾಗಿದೆ. ಅಪಘಾತ ಕುರಿತು ಬಂಟ್ವಾಳ ನಿವಾಸಿ ರವಿ ಬಿ. (27) ಎಂಬವರು ದೂರು ನೀಡಿದ್ದರು.

ತಾನು ಸಂಜೆ ಕಾರ್ತಿಕ್ ಎಂಬಾತನ ಜತೆ ದ್ವಿಚಕ್ರ ವಾಹನದಲ್ಲಿ ಸಹ ಸವಾರನಾಗಿ ಸಂಟ್ಯಾರ್ ಜಂಕ್ಷನ್ ಎಂಬಲ್ಲಿ ತಲುಪಿದಾಗ, ಹಿಂದಿನಿಂದ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದು ಪರಾರಿಯಾಗಿದೆ. ಅಪಘಾತದ ಪರಿಣಾಮ ತಾನು ಮತ್ತು ಸವಾರ ಕಾರ್ತಿಕ್ ರಸ್ತೆಗೆ ಎಸೆಯಲ್ಪಟ್ಟು ಗಾಯಗೊಂಡಿದ್ದು, ಅಲ್ಲಿದ್ದ ಸಾರ್ವಜನಿಕರು ತಮ್ಮನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಿಸಿದ್ದರು. ಅಪಘಾತ ನಡೆದ ಬಳಿಕ ಕಾರಿನ ಚಾಲಕನು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಹಲವು ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆದು ಜಖಂಗೊಳಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗಿತ್ತು.

ಅಪಘಾತದ ಬಳಿಕ ಕಾರು ಚಾಲಕ ರೆಂಜ ಮಾರ್ಗದಲ್ಲಿ ತಪ್ಪಿಸಿಕೊಂಡು ಹೋಗುವಾಗ ಬಡಗನ್ನೂರು ಗ್ರಾಮದ ಪೆರಿಗೇರಿ ಹೊಸನಗರದಲ್ಲಿ ಸಾರ್ವಜನಿಕರು ಕಾರನ್ನು ನಿಲ್ಲಿಸಿ ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. 4 ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆದ ಕಾರಿನ ಚಾಲಕನು ಅಪ್ರಾಪ್ತನಾಗಿದ್ದಾನೆ. ಈ ಹಿನ್ನಲೆಯಲ್ಲಿ ವಾಹನದ ಮಾಲಕಿ, ಅಪ್ರಾಪ್ತಬಾಲಕನತಾಯಿಪುತ್ತೂರುನಿವಾಸಿ ಕೆ.ಎ. ಮಮ್ತಾಜ್ (42) ಎಂಬಾಕೆಯ ವಿರುದ್ಧ ಪ್ರಕರಣ ದಾಖಲಾಗಿದೆ.

ಮಾ. 21ರಂದು ಮಂಗಳೂರಿನಲ್ಲಿ ಆಳ್ವಾಸ್ ಸಾಂಸ್ಕೃತಿಕ ವೈಭವ: ಡಾ.ಎಂ.ಮೋಹನ ಆಳ್ವ

• ಮಂಗಳೂರು: ಆಳ್ವಾಸ್ ನುಡಿಸಿರಿ– ವಿರಾಸತ್ ಮಂಗಳೂರು ಘಟಕದ ಆಶ್ರಯದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿದ್ಯಾರ್ಥಿ ಕಲಾವಿದರಿಂದ ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ಮಾ.21ರಂದು ಸಂಜೆ 6ರಿಂದ ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ನಡೆಯಲಿದೆ. ನಮ್ಮ ಸಾಂಸ್ಕೃತಿಕ, ಜನಪದ ಹಾಗೂ ಶಾಸ್ತ್ರೀಯ ಕಲೆಗಳನ್ನು

ಜನಮಾನಸಕ್ಕೆ ತಲುಪಿಸುವುದು ಈ ಕಾರ್ಯಕ್ರಮದ ಆಶಯವಾಗಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ತಿಳಿಸಿದರು.

ನಗರದ ಸ್ಕೌಟ್ಸ್ ಮತ್ತು ಗೈಡ್ಸ್ ಭವನದಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ನಡೆಸಲಾಗಿದ್ದು, ಅಪಾರ ಜನಮನ್ನಣೆ ಗಳಿಸಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕ್ ಮಾತನಾಡಿ, ತಮ್ಮ ಹಿರಿಯರ ಆದರ್ಶದಲ್ಲಿ ನಡೆದು ಬಂದ ಡಾ.ಎಂ. ಮೋಹನ ಆಳ್ವ ಅವರು ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಎಂದೂ ಮರೆತವರಲ್ಲ. ಶಿಕ್ಷಣದ ಗುಣಮಟ್ಟವನ್ನು ಕಾಯ್ದು ಕೊಂಡು ಕಲೆ, ಸಂಸ್ಕೃತಿಗೆ ಪ್ರೋತ್ಸಾಹ ನೀಡುತ್ತಿರುವ ಡಾ.ಆಳ್ವ ಅವರು ಮೂಡುಬಿದಿರೆಯನ್ನು ಸಾಂಸ್ಕೃತಿಕ ಕೇಂದ್ರವಾಗಿಸಿ ಹೊಸ ಕ್ರಾಂತಿ ಮಾಡಿದ್ದಾರೆ ಎಂದರು.

ಮಾಜಿ ಶಾಸಕಿ ಶಕುಂತಳಾ ಟಿ.ಶೆಟ್ಟಿ, ಪ್ರಮುಖರಾದ ಡಾ. ಹರಿಕೃಷ್ಣ ಪುನರೂರು, ಪ್ರದೀಪ ಕುಮಾರ ಕಲ್ಕೂರ, ಪದ್ಮರಾಜ್ ಆರ್. ಪೂಜಾರಿ, ಡಾ.ಆಶಾಜ್ಯೋತಿ ರೈ, ಭಾಸ್ಕರ ರೈ ಕುಕ್ಕುವಳ್ಳಿ, ರತ್ನಾಕರ ಜೈನ್, ಲೀಲಾಕ್ಷ ಕರ್ಕೇರ, ಕದ್ರಿ ನವನೀತ ಶೆಟ್ಟಿ, ವಿದುಷಿ ರಾಜಶ್ರೀ ಉಳ್ಳಾಲ್, ಯುವಜನ ಕ್ರೀಡಾಧಿಕಾರಿ ಪ್ರದೀಪ್ ಡಿಸೋಜ, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ, ಆಳ್ವಾಸ್ ನುಡಿಸಿರಿ ವಿರಾಸತ್ ಮಂಗಳೂರು ಘಟಕದ ಅಧ್ಯಕ್ಷ ಸುಧೀರ್ ಕುಮಾರ್ ಶೆಟ್ಟಿ, ಸಂಘಟನಾ ಕಾರ್ಯದರ್ಶಿ ಪ್ರಸಾದ್ ರೈ ಕಲ್ಲಿಮಾರ್, ಖಜಾಂಚಿ ಶಶಿರಾಜ್ ರಾವ್ ಕಾವೂರು ಉಪಸ್ಥಿತರಿದ್ದರು. ಉಪನ್ಯಾಸಕ ಡಾ.ವೇಣು ಗೋಪಾಲ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.



> **ಶಿಕ್ಷಣ ಜತೆಗೆ ಸಾಂಸ್ಕೃತಿಕ ಶಿಕ್ಷಣ**
>
> ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು 3 ಸಾವಿರ ಮಕ್ಕಳಿಗೆ ಉಚಿತ ಶಿಕ್ಷಣದ ಜತೆಗೆ ನುಡಿಸಿರಿ, ವಿರಾಸತ್‌ನಂತಹ ಕಾರ್ಯಕ್ರಮಗಳ ಮೂಲಕ ನಮ್ಮ ನಾಡು, ನುಡಿ, ಕ್ರೀಡೆ ಹಾಗೂ ಕಲೆಗಳ ಪೋಷಣೆಗೆ ಶ್ರಮಿಸುತ್ತಿದೆ. ನಮ್ಮ ಶಾಸ್ತ್ರೀಯ, ಜನಪದ ಕಲೆಗಳು ಮರೆಯಾಗದಂತೆ ವಿದ್ಯಾರ್ಥಿಗಳಿಗೆ ಶಿಕ್ಷಣ ಜತೆಗೆ ಸಾಂಸ್ಕೃತಿಕ ಶಿಕ್ಷಣ ನೀಡುವುದು ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಮುಖ್ಯ ಉದ್ದೇಶವಾಗಿದೆ. ಮಂಗಳೂರಿನಲ್ಲಿ ನಡೆಯಲಿರುವ ಆಳ್ವಾಸ್ ಸಾಂಸ್ಕೃತಿಕ ವೈಭವಕ್ಕೆ ಸಮಾನ ಮನಸ್ಕರು ಕೈಜೋಡಿಸಬೇಕು.
>
> ■ ಡಾ.ಎಂ.ಮೋಹನ ಆಳ್ವ

ಮಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂಬರ್- 9

ಕುಳಾಯಿಯಲ್ಲೂ ಕಾಡುತ್ತಿದೆ ನೀರು!

ದಿಗಂತ ವಾಟರ್ ಚೆಕ್

• ಮಂಗಳೂರು: ವಾರ್ಡ್ ನಂಬರ್ 9 ಕುಳಾಯಿ ಪ್ರದೇಶವು ಸಮುದ್ರ ತೀರವನ್ನು ಒಳಗೊಂಡ ಬಹು ವಿಸ್ತಾರವಾದ ಪ್ರದೇಶ. ಈ ಭಾಗ ಕುಳಾಯಿ ಕೋಡಿ ಕೆರೆ ಹಾಗೂ ಎಂಎಸ್ ಇಝೆಡ್ ಪುನರ್ ವಸತಿ ಕೇಂದ್ರವನ್ನು ಹೊಂದಿರುವ ಅತಿ ದೊಡ್ಡ ಬಡಾವಣೆಯಾಗಿದೆ.

ಸಹಜವಾಗಿ ಈ ಭಾಗದಲ್ಲಿ ನೀರಿನ ಲಭ್ಯತೆ ಕಡಿಮೆ ಇದ್ದು ಬೇಸಿಗೆ ಬಂತೆಂದರೆ ಜನರು ನೀರಿನ ಸಮಸ್ಯೆ ಎದುರಿಸುತ್ತಾರೆ. ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಆಡಳಿತವಿರುವ ಸಂದರ್ಭ ಕನಿಷ್ಠಪಕ್ಷಟ್ಯಾಂಕರ್ ಮೂಲಕವಾದರೂ ನೀರಿನಪೂರೈಕೆಯನ್ನು ಹೆಚ್ಚುವರಿಯಾಗಿ ಮಾಡುವ ಮೂಲಕ ಸದಸ್ಯರು ಸ್ಪಂದಿಸುವುದು ಸಾಮಾನ್ಯ. ಆದರೆ ಇದೀಗ ಚುನಾಯಿತ ಕಾರ್ಪೊರೇಟರ್‌ಗಳು ಇಲ್ಲದೆ ಜಿಲ್ಲಾಡಳಿತವೇ ನೇರವಾಗಿ ನೀರಿನ ಸಮಸ್ಯೆಗೆ ಸ್ಪಂದಿಸಬೇಕಾಗುತ್ತದೆ.

ಆದರೆ ಅಧಿಕಾರಿಗಳು ಮಾತ್ರ ಪ್ರತಿ ವಾರ್ಡ್‌ಗಳಿಗೆ ಭೇಟಿ ನೀಡಿ ಜನರ ಕುಂದು ಕೊರತೆಗಳನ್ನು ಕೇಳುವ ಮನಸ್ಸು ಮಾಡಿಲ್ಲ ಎಂದು ಇಲ್ಲಿನ ನಿವಾಸಿಗಳು ದೂರುತ್ತಾರೆ.

ಹಲವೆಡೆ ನೀರಿನ ಬವಣೆ

ವಾರ್ಡ್ ವ್ಯಾಪ್ತಿಯ ಭಾರತಿ ಆಂಗ್ಲ ಮಾಧ್ಯಮ ಶಾಲೆಯ ಸುತ್ತಮುತ್ತ, ಕಾವಿನ ಕಲ್ಲು, ಮುಚ್ಚಿಕೆರೆ ಮತ್ತಿತರ ಬಡಾವಣೆಗಳಲ್ಲಿ ನೀರಿನ ಸಮಸ್ಯೆ ಉಂಟಾಗಿದೆ. ಇದರ ಜೊತೆಗೆ ಜಲಸಿರಿ, ಗೈಲ್ ಯೋಜನೆಗಾಗಿ ಪದೇ ಪದೇ ರಸ್ತೆಯನ್ನು ಅಗೆದು ಹಾಕಿರುವುದರಿಂದ ಅಲ್ಲಲ್ಲಿ ಕುಡಿಯುವ ನೀರಿನ ಪೈಪುಗಳು ಒಡೆದು ಹೋಗಿದ್ದು ಬಹಳಷ್ಟು ನೀರು ಸೋರಿಕೆಯಾಗುತ್ತಿದೆ ಮಾತ್ರವಲ್ಲ, ಪ್ರೆಶರ್ ಕೂಡ ಕಡಿಮೆಯಾಗಿದೆ. ಇದರಿಂದ ಎತ್ತರದ ಪ್ರದೇಶಗಳಿಗೆ ನೀರು ಸರಾಗವಾಗಿ ಪೂರೈಕೆಯಾಗದೆ ಜನತೆ ನೀರಿನ ಕೊರತೆ ಎದುರಿಸುವಂತಾಗಿದೆ. ಈ ಬಗ್ಗೆ ಅಧಿಕಾರಿಗಳು ಸಾರ್ವಜನಿಕರ ದೂರನ್ನು ಆಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಪಾಲಿಕೆಯ ನಿಕಟ ಪೂರ್ವ ಸದಸ್ಯೆ ವೇದಾವತಿ ಅವರಿಗೆ ಸಾರ್ವಜನಿಕರ ದೂರುಗಳು ಬಂದ ಮೇರೆಗೆ ಅಧಿಕಾರಿಗಳಲ್ಲಿ ಒತ್ತಡ ಹೇರಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಶ್ರಮವಹಿಸಿದ್ದಾರೆ.

ಆದರೆ ಇದೀಗ ಪಾಲಿಕೆಯಲ್ಲಿ ಟ್ಯಾಂಕರ್‌ನ ಕೊರತೆ ಎದುರಾಗಿದ್ದು, ಎಲ್ಲಾ ವಾರ್ಡ್‌ಗಳಿಗೆ ಹಂಚಿಕೊಡಲಾಗುತ್ತಿದ್ದು ಸಮಯಕ್ಕೆ ಸರಿಯಾಗಿ ನೀರಿನ ಪೂರೈಕೆಯಾಗದೆ ಜನರು ಸಮಸ್ಯೆ ಎದುರಿಸುವಂತಿದೆ. ಈಗಾಗಲೇ ನಮಗೆ ದೂರು ಬಂದ ವ್ಯಾಪ್ತಿಗಳಿಗೆ ಟ್ಯಾಂಕರ್ ನೀರು ಒದಗಿಸುವಂತೆ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಆದರ ಜೊತೆಗೆ ಪಾಲಿಕೆ ವ್ಯಾಪ್ತಿಯಲ್ಲಿ ಹೊಸ ಯೋಜನೆ ಪೈಪ್ ಲೈನ್ ವಿಳಂಬವಾಗುತ್ತಿದ್ದು, ಜನರಿಗೆ ನಿರಂತರ ನೀರು ಸಿಗುವ ಬಗ್ಗೆಯೂ ಶಂಕೆ ವ್ಯಕ್ತವಾಗುತ್ತಿದೆ. ಇದನ್ನು ಅಧಿಕಾರಿಗಳು ದೂರ ಮಾಡಬೇಕಿದೆ ಎಂದು ಹೇಳುತ್ತಾರೆ ವೇದಾವತಿ ಅವರು.



> **ಜನಪ್ರತಿನಿಧಿಗಳು ಸ್ಪಂದಿಸಬೇಕು**
>
> 
>
> ಪಾಲಿಕೆ ವ್ಯಾಪ್ತಿಯಲ್ಲಿ ನೀರು ಪೂರೈಕೆ ಸಮಸ್ಯೆಯನ್ನು ಬಗೆಹರಿಸಲು ಶಾಸಕರು ಹಾಗೂ ಸಂಸದರು ಅಧಿಕಾರಿಗಳ ಮೇಲೆ ಒತ್ತಡ ಹೇರಬೇಕು. ಇದರ ಜೊತೆಗೆ ನಿರಂತರ ರಸ್ತೆ ಅಗೆತದಿಂದಾಗಿ ಅಲ್ಲಲ್ಲಿ ಪೈಪ್ ಲೈನ್ ವ್ಯವಸ್ಥೆಗಳು ಕೆಟ್ಟು ಹೋಗಿದ್ದು ನೀರು ಸರಿಯಾಗಿ ಪೂರೈಕೆ ಆಗುತ್ತಿಲ್ಲ. ರಸ್ತೆಯನ್ನು ತಕ್ಷಣ ದುರಸ್ತಿ ಮಾಡುವ ಬಗ್ಗೆ ಅಧಿಕಾರಿಗಳು ಮುಂದಾಗಬೇಕು.
>
> ■ ಯೋಗೀಶ್ ಕುಳಾಯಿ

> **ಪ್ರತ್ಯೇಕ ಕಂಟ್ರೋಲ್ ರೂಮ್ ರಚನೆಯಾಗಲಿ**
>
> 
>
> ಬೇಸಗೆಯಲ್ಲಿ ನೀರು ಪೂರೈಸಲು ಮೂರು ತಿಂಗಳ ಮೊದಲೇ ಸನ್ನದ್ಧರಾಗಿರಬೇಕು. ನೀರಿನ ಸಮಸ್ಯೆ ಬಗೆಹರಿಸಲು ಪ್ರತ್ಯೇಕ ಕಂಟ್ರೋಲ್ ರೂಮ್ ಹಾಗೂ ತಂಡವನ್ನು ರಚಿಸಿ , ಮಾಹಿತಿ ಕಲೆ ಹಾಕಬೇಕು. ಇದರಿಂದ ಬೇಕಾದ ಕಡೆ ಟ್ಯಾಂಕರ್ ಮೂಲಕ ನೀರು ಪೂರೈಸಲು ಸಾಧ್ಯವಾಗುತ್ತದೆ.
>
> ■ ಬಾಲರಾಜ್, ಕುಳಾಯಿ

ಒಳಚರಂಡಿ ಅಭಿವೃದ್ಧಿ ಇಲ್ಲಿಯೂ ಅಗತ್ಯ

ಡ್ರೈನೇಜ್ ಸಮಸ್ಯೆ ಇಲ್ಲದ ವಾರ್ಡ್ ಇಲ್ಲ. ವಾರ್ಡ್ 9 ರಲ್ಲಿಯೂ ಹೆದ್ದಾರಿ ಬದಿ ನೀರು ನಿಲ್ಲುವುದು, ಕೃತಕ ನೆರೆ, ಮಳೆ ನೀರು ಹರಿಯುವ ತೋಡಿನಲ್ಲಿ ಡ್ರೈನೇಜ್ ನೀರು ಹರಿಯುವುದು ಮುಂತಾದ ಸಮಸ್ಯೆಗಳಿವೆ. ಇದಕ್ಕೆ ಪ್ರತ್ಯೇಕ ಯೋಜನೆ ರೂಪಿಸಿ ಬಗೆಹರಿಸಲು ಪ್ರಾಮಾಣಿಕವಾದ ಪ್ರಯತ್ನ ನಡೆಯಬೇಕಿದೆ.

ನಾಳೆ ವಾರ್ಡ್ 10: ಬೈಕಂಪಾಡಿ ಪ್ರದೇಶದ ಸ್ಥಿತಿಗತಿ

70 ಪಲ್ಲಕ್ಕಿ ಸೇರಿ 115 ಹೊಸ ಬಸ್

ಪುಟ ೧➡ ಈ ಬಸ್‌ನ ಮುಂಭಾಗಕ್ಕೆ ಡ್ಯಾಶ್ ಕ್ಯಾಮೆರಾ, ಹಿಂಭಾಗದ ಪಾರ್ಕಿಂಗ್ ಸಹಾಯಕ ಕ್ಯಾಮೆರಾ, ಬಸ್ಸಿನ ಒಳಭಾಗದಲ್ಲಿ ಕ್ಯಾಮೆರಾ, ವಿಎಲ್‌ಟಿ, ಪ್ಯಾನಿಕ್ ಬಟನ್, ವಾಹನ ಮೇಲ್ಭಾಗದ 2 ಭಾಗದಲ್ಲಿ ತುರ್ತುದ್ವಾರ, ಫೈರ್ ಡಿಟೆಕ್ಷನ್ ಹಾಗೂ ಅಲಾರ್ಮ್ ವ್ಯವಸ್ಥೆ, ಮೊಬೈಲ್ ಚಾರ್ಜಿಂಗ್ ಪಾಯಿಂಟ್, ಟಫೆಂಡ್ ವಿಂಡ್ ಶೀಲ್ಡ್ ಗ್ಲಾಸ್ ಪ್ಯಾನೆಲ್, ಸುರಕ್ಷತಾ ಹ್ಯಾಮರ್, ಬಸ್ಸಿನ ಹಿಂಭಾಗದಲ್ಲಿ ತುರ್ತು ದ್ವಾರ ಸೇರಿದಂತೆ ಮುಂತಾದ ವಿಶೇಷತೆಯಳಗೊಂಡಿದೆ ಎಂದರು.

ಎಲ್ಲೆಲ್ಲಿ ಸಂಚಾರ? ಪಲ್ಲಕ್ಕಿ ಬಸ್ಸುಗಳು ಉಡುಪಿ, ಮಂಗಳೂರು, ಮೈಸೂರು, ಧರ್ಮಸ್ಥಳ, ಶೃಂಗೇರಿ, ಹೊರನಾಡು, ಆಗುಂಬೆ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಹಂಪಿ, ರಾಯಚೂರು, ಜಮಖಂಡಿ, ಪುತ್ತೂರು, ಕಾಣಿಯೂರು, ಕುಕ್ಕೆ ಸುಬ್ರಹ್ಮಣ್ಯ, ಕಾಸರಗೋಡು, ಮಂತ್ರಾಲಯ, ತಿರುಚಿ, ಕೊಜಿಕ್ಕೋಡ್, ಮುನ್ನಾರ್, ಪಾಂಡಿಚೇರಿ, ತಂಜಾವೂರು, ಕೊಟ್ಟಾಯಂ, ಹೈದರಾಬಾದ್, ಚೆನ್ನೈ, ಪಣಜಿ, ಮಧುರೈ, ಕುಂಭಕೋಣಂ, ಎರ್ನಾಕುಲಂಗೆ ಕಾರ್ಯಾಚರಣೆ ಮಾಡಲಾಗುತ್ತದೆ. ಜತೆಗೆ 45 ಕರ್ನಾಟಕ ಸಾರಿಗೆ ಬಸ್‌ಗಳು 16 ವಿಭಾಗದ ವಿವಿಧ ಸ್ಥಳಗಳಲ್ಲಿ ಸಂಚರಿಸಲಿವೆ. ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ನಿರ್ದೇಶಕಿ ಗಾಯತ್ರಿ ಕೆ.ಎಂ., ವಿಜ್ಞಾನಿ ಡಾ.ಶುಭಾ ಉಪಸ್ಥಿತರಿದ್ದರು.



ಮಹಿಳೆಯರಿಗೂ ಸಮಾನ ಅವಕಾಶ ಒದಗಿಸಬೇಕು: ಕುಟುಂಬ, ಶಿಕ್ಷಣ, ವಿಜ್ಞಾನ, ಸಾಮಾಜಿಕ, ರಾಜಕೀಯ, ಆರ್ಥಿಕತೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರು ಮಹತ್ತರ ಸಾಧನೆಗಳನ್ನು ಮಾಡುತ್ತಿದ್ದಾರೆ. ಮಹಿಳೆಯರ ಸಬಲೀಕರಣವು ಸಮಾಜದ ಅಭಿವೃದ್ಧಿಗೆ ಅತ್ಯಂತ ಮುಖ್ಯವಾಗಿದ್ದು, ಅವರಿಗೆ ಸಮಾನ ಅವಕಾಶಗಳು ಮತ್ತು ಸುರಕ್ಷಿತ ವಾತಾವರಣವನ್ನು ಒದಗಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ರಾಮಲಿಂಗಾರೆಡ್ಡಿ ಹೇಳಿದರು.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ

• **ವಿಧಾನಪರಿಷತ್:** ಬಜೆಟ್‌ನಲ್ಲಿ ಹಲವು ಯೋಜನೆಗಳನ್ನು ಪ್ರಕಟಿಸಲಾಗಿದೆ. ಆದರೆ ಅದಕ್ಕೆ ಹಣ ಎಲ್ಲಿಂದ ಬರುತ್ತದೆ. ಮೀಸಲಿಟ್ಟ ಹಣವೆಷ್ಟು ಎಂಬ ಮಾಹಿತಿ ಸಿಗುತ್ತಿಲ್ಲ. ಶಾಲೆ, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕ, ಬೋಧಕರ ತೀವ್ರ ಕೊರತೆಯಿದೆ ಎಂದು ಬಿಜೆಪಿಯ ಸದಸ್ಯ ಕೇಶವ ಪ್ರಸಾದ್ ತಿಳಿಸಿದರು.

ಬಜೆಟ್ ಮೇಲಿನ ಸಾಮಾನ್ಯ ಚರ್ಚೆ ಕಲಾಪದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮುಖ್ಯಮಂತ್ರಿಗಳು 4.5 ಲಕ್ಷ ಕೋಟಿ ರೂ. ಜಿಎಸ್‌ಟಿ ದುಡ್ಡು ಕೇಂದ್ರಕ್ಕೆ ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ಹೇಗೆ ಹೋಗುತ್ತಿದೆ ಎಂಬ ಮಾಹಿತಿ ಸಿಗುತ್ತಿಲ್ಲ. ರಾಜ್ಯ ಸಾಲದ ಸುಳಿಗೆ ಸಿಲುಕಿರುವುದು ಸ್ಪಷ್ಟವಾಗಿದೆ ಎಂದು ಹೇಳಿದರು. ಈ ಹಿಂದೆ ಸಿದ್ದರಾಮಯ್ಯ ಅವರು ಹಣಕಾಸು ಸಚಿವರಾಗಿದ್ದರು. ಆ ಬಳಿಕ 1999ರಲ್ಲಿ ಎಸ್.ಎಂ. ಕೃಷ್ಣ ಅವರ ಸರ್ಕಾರ ಬಂದ ತಕ್ಷಣವೇ ಸಿದ್ದರಾಮಯ್ಯ ಅವರ ಅವಧಿಯ ಹಣಕಾಸು ಸ್ಥಿತಿಯ ಬಗ್ಗೆ ಶ್ವೇತ ಪತ್ರ ಹೊರಡಿಸಿತ್ತು. ಆ ಶ್ವೇತ ಪತ್ರ ಈಗ ಎಲ್ಲೂ ಸಿಗುತ್ತಿಲ್ಲ ಎಂದು ಹೇಳಿದರು. ಆಗ ಕಾಂಗ್ರೆಸ್ ಸದಸ್ಯ ರಮೇಶ್ ಬಾಬು ಅವರು, ಸಿದ್ದರಾಮಯ್ಯ ಅವರ ಬಜೆಟ್ ಅನ್ನು ಟೀಕೆ ಮಾಡುವವರು ಬೌದ್ಧಿಕ ದಿವಾಳಿಗಳು ಎಂದರು. ಅವರ ಈ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಮುಖ್ಯ ಸಚೇತಕ ಎನ್.ರವಿಕುಮಾರ್, ಸಿದ್ದರಾಮಯ್ಯ ಅವರು ಬಹಳ ಅನುಭವಿ ಸಿಎಂ. ಆದರೆ, ನಿರಂತರವಾಗಿ ಸಾಲದ ಪ್ರಮಾಣ ಹೆಚ್ಚಾಗಿದೆ ಎಂದರು.

ಇದೇ ವೇಳೆ ಮುಖ್ಯಮಂತ್ರಿಗಳನ್ನು ಸಮರ್ಥಿಸಿಕೊಂಡ ಸಚಿವ ಶರಣಪ್ರಕಾಶ ಪಾಟೀಲ್, ಸಾಲದ ಪ್ರಮಾಣ ಜಿಡಿಪಿಯ ಶೇ. 25ಕ್ಕಿಂತ ಹೆಚ್ಚಾಗಿದೆ. ಅಲ್ಲದೇ ಸಾಲದ ಪ್ರಮಾಣವನ್ನು ನಿಗದಿತ ಶೇ. 25ರ ಮಿತಿಯಲ್ಲಿ ಕಾಪಾಡಿಕೊಂಡಿದ್ದೇವೆ ಎಂದು ಹೇಳಿದರು. ಆಗ ಬಿಜೆಪಿಯ ಭಾರತಿ ಶೆಟ್ಟಿ, ಎನ್. ರವಿಕುಮಾರ್ ಅವರು, ನಾವು ಕೇಂದ್ರದ ಬಗ್ಗೆ ನೀವು ರಾಜ್ಯದ ಬಗ್ಗೆ ಚರ್ಚೆ ಮಾಡಲು ದಿನ ನಿಗದಿ ಮಾಡಿ ಎಂದು ಸವಾಲು ಹಾಕಿದರು. ಇದೇ ವೇಳೆ ಸಚಿವ ದಿನೇಶ್ ಗುಂಡೂರಾವ್, ರಾಜ್ಯ ಸರ್ಕಾರದ ಪರ ಮಾತನಾಡಲು ಮುಂದಾಗುವಾಗ ಕೂಡಲೇ ಎದ್ದುನಿಂತ ಸಿ.ಟಿ. ರವಿ, ಮೊದಲು ಆಸ್ಪತ್ರೆಗಳಲ್ಲಿ ಔಷಧಿ ನೀಡಿ ಎಂದರು.

ಇರಾನ್ ಸ್ಥಿತಿ ಗಂಭೀರ

ಪುಟ ೧➡ ಇದರ ನಡುವೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಶೀಘ್ರದಲ್ಲೇ ಶರಣಾಗಲಿದೆ ಎಂದು ಹೇಳಿಕೆ ನೀಡಿದ್ದಾರೆ. ಜಿ-7 ರಾಷ್ಟ್ರಗಳೊಂದಿಗೆ ನಡೆದ ವರ್ಚುವಲ್ ಸಭೆಯಲ್ಲಿ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದು, ಯುದ್ಧ ಯಾವಾಗ ಅಂತ್ಯವಾಗಲಿದೆ ಎಂಬುದನ್ನು ಸ್ಪಷ್ಟಪಡಿಸಲಿಲ್ಲ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೂಡ ಈ ಯುದ್ಧದಲ್ಲಿ ಇಸ್ರೇಲ್ ಬಲವಾಗಿ ಎದುರಿಸುತ್ತಿದೆ ಎಂದು ಹೇಳಿದ್ದಾರೆ. ಇರಾನ್‌ನಲ್ಲಿ ಆಡಳಿತ ಬದಲಾವಣೆಗೆ ಪರಿಸ್ಥಿತಿ ರೂಪುಗೊಳ್ಳುತ್ತಿದೆ ಎಂಬುದಾಗಿ ಅವರು ಸೂಚಿಸಿದ್ದಾರೆ. ಇನ್ನೊಂದೆಡೆ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಯುದ್ಧ ನಿಲ್ಲಿಸಲು ಮೂರು ಪ್ರಮುಖ ಷರತ್ತುಗಳನ್ನು ಮುಂದಿಟ್ಟಿದ್ದಾರೆ. ಇರಾನ್‌ನ ಕಾನೂನುಬದ್ಧ ಹಕ್ಕುಗಳಿಗೆ ಮಾನ್ಯತೆ ನೀಡಬೇಕು, ಯುದ್ಧದಲ್ಲಿ ಉಂಟಾದ ಹಾನಿಗೆ ಪರಿಹಾರ ನೀಡಬೇಕು, ಮುಂದಿನ ದಿನಗಳಲ್ಲಿ ದಾಳಿ ಮಾಡುವುದಿಲ್ಲ ಎಂಬ ಅಂತರರಾಷ್ಟ್ರೀಯ ಭರವಸೆ ನೀಡಬೇಕು ಎಂದು ಅವರು ತಿಳಿಸಿದ್ದಾರೆ.

ಈ ನಡುವೆ ಹಾರ್ಮುಜ್ ಜಲಸಂಧಿಯನ್ನು ಮುಚ್ಚುವ ಮೂಲಕ ಜಾಗತಿಕ ತೈಲ ಪೂರೈಕೆಗೆ ಅಡ್ಡಿಪಡಿಸುವ ಎಚ್ಚರಿಕೆಯನ್ನು ಇರಾನ್ ನೀಡಿದೆ.

ಇದರಿಂದ ಜಾಗತಿಕ ತೈಲ ಬೆಲೆಗಳು ಏರಿಕೆ ಕಾಣುವ ಸಾಧ್ಯತೆ ಹೆಚ್ಚಾಗಿದೆ. ಯುದ್ಧ ಮುಂದುವರಿದರೆ ಮಧ್ಯಪ್ರಾಚ್ಯದಲ್ಲಿ ಮತ್ತಷ್ಟು ಉದ್ವಿಗ್ನತೆ ಹೆಚ್ಚಾಗುವ ಆತಂಕ ವ್ಯಕ್ತವಾಗಿದೆ.

ಬುರ್ಜ್ ಖಲೀಫಾ ಬಳಿ ಭಾರೀ ಸ್ಫೋಟ

ಪುಟ ೧➡ ದುಬೈ ಇಂಟರ್‌ನ್ಯಾಷನಲ್ ಫೈನಾನ್ಷಿಯಲ್ ಸೆಂಟರ್ (ಡಿಐಎಫ್‌ಸಿ) ನಲ್ಲಿ ಈ ಘಟನೆ ನಡೆದಿದೆ. ಮಧ್ಯ ದುಬೈನ ಕಟ್ಟಡದ ಹೊರಭಾಗದಲ್ಲಿ ಸಣ್ಣ ಪ್ರಮಾಣದ ದಾಳಿಯಾಗಿದೆ ಆದರೆ ಯಾರೂ ಕೂಡಾ ಗಾಯಗೊಂಡಿಲ್ಲ ಎಂದು ದುಬೈ ಮಾಧ್ಯಮ ಕಚೇರಿ ಹೇಳಿದೆ. ಇಲ್ಲಿಯವರೆಗೂ ಯಾವುದೇ ಗಾಯದ ಕುರಿತು ವರದಿಯಾಗಿಲ್ಲ.

ಅಮೆರಿಕಗೆ ಇರಾನ್ ಎಚ್ಚರಿಕೆ

ಪುಟ ೧➡ ಅಮೆರಿಕಕ್ಕೆ ತಿರುಗೇಟು ನೀಡಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಇರಾನ್‌ನ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ, ಯುದ್ಧ ಆರಂಭಿಸುವುದು ಸುಲಭ. ಕೆಲವು ಎಕ್ಸ್ ಪೋಸ್ಟ್‌ಗಳ ಮೂಲಕ ಅದನ್ನು ಗೆಲ್ಲಲು ಸಾಧ್ಯವಿಲ್ಲ. ತಪ್ಪು ಲೆಕ್ಕಾಚಾರಕ್ಕೆ ನೀವು ವಿಷಾದಪಡುವಂತೆ ನಾವು ಮಾಡುತ್ತೇವೆ ಎಂದಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಹಳೇ ಸಾಲ ವಾಪಸ್ ಕೇಳಿದ್ದಕ್ಕೆ ಹಲ್ಲೆ
– ಸವಣೂರಿನ ಸುದ್ದಿ
– **ಕೊಟ್ಟವ ಕೋಡಂಗಿ, ಇಸಕೊಂಡವ ಈರಭದ್ರ ಎಂಬ ಗಾದೆ ಮಾತು ಸುಳ್ಳಾದೀತೇ?**

ದಿನ ಭವಿಷ್ಯ

ಮೇಷ ಅನ್ಯರ ದುರ್ವರ್ತನೆ ನಿಮ್ಮ ದಿನ ಕೆಡಿಸಲು ಅವಕಾಶ ಕೊಡಬೇಡಿ. ಅದರಿಂದ ವಿಮುಖರಾಗಿ ನಿಲ್ಲಿ. ದೈಹಿಕ ನೋವು ಇದ್ದವರಿಗೆ ನಿರಾಳತೆ.

ವೃಷಭ ನಿಮ್ಮ ಉದ್ದೇಶಕ್ಕೆ ಹಿರಿಯರ ಅನುಮತಿ ಸಿಗಲಿದೆ. ಅದರಿಂದ ನಿಮ್ಮ ಒತ್ತಡ ನಿವಾರಣೆ. ವಿದ್ಯಾರ್ಥಿಗಳ ಶ್ರಮಕ್ಕೆ ಸೂಕ್ತ ಪ್ರತಿಫಲ ಲಭ್ಯ.

ಮಿಥುನ ನಿಮ್ಮ ಪಾಲಿಗೆ ಅಚ್ಚರಿಯ ಬೆಳವಣಿಗೆ ಸಂಭವ. ನಿಮ್ಮಿಂದ ತಪ್ಪಾದರೆ ಬೇಗ ಸರಿಪಡಿಸಿಕೊಳ್ಳಿ. ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ.

ಕಟಕ ಕೆಲ ವಿಷಯ ಚಿಂತೆಗೆ ಕಾರಣವಾಗಲಿದೆ. ನಿಮಗೆ ಪೂರಕವಾಗಿ ಸಾಗುವುದಿಲ್ಲ. ತಾಳ್ಮೆಯಿಡಿ, ಬೇಗನೆ ಎಲ್ಲ ಸರಿಹೋಗಲಿದೆ. ಬಳಿಕ ನಿಮ್ಮ ಗುರಿ ಸಾಧನೆ.

ಸಿಂಹ ಇಂದು ಸಾಧಾರಣ ಯಶಸ್ಸು ಪಡೆಯುವಿರಿ. ಉದ್ದೇಶವು ಪೂರ್ಣ ಸಫಲವಾಗದು. ಬಂಧು ಅಸಹಕಾರ. ಹಣದ ವಿಚಾರದಲ್ಲಿ ಅತೃಪ್ತಿ.

ಕನ್ಯಾ ಆಪ್ತರ ಸಂಗದಲ್ಲಿ ಹರ್ಷೋಲ್ಲಾಸ. ಬಂಧು ಭೇಟಿ. ಆರ್ಥಿಕ ಸಂಕಷ್ಟ ನಿವಾರಣೆ. ವಿದ್ಯಾರ್ಥಿಗಳಿಗೆ ನಿರಾಳತೆ. ಶೈಕ್ಷಣಿಕ ಪ್ರಗತಿ.

ತುಲಾ ಕಠಿಣ ನಿರ್ಧಾರ ತಾಳಬೇಕಾಗಿ ಬಂದರೆ ಹಿಂಜರಿಯಬೇಡಿ. ಬೇರೆಯವರು ಏನು ತಿಳಿದುಕೊಂಡಾರು ಎಂಬ ಭಾವನೆ ತ್ಯಜಿಸಿ.

ವೃಶ್ಚಿಕ ಆತ್ಮೀಯ ಸಂಬಂಧ ಹಾಳಾಗಲು ಅವಕಾಶ ಕೊಡಬೇಡಿ. ನೀವೇ ಬಗ್ಗಿದರೂ ಪರವಾಗಿಲ್ಲ. ಹಠಮಾರಿ ಧೋರಣೆ ಕೆಟ್ಟದ್ದನ್ನೇ ಮಾಡಬಹುದು.

ಧನು ಹಣದ ವಿಚಾರದಲ್ಲಿ ಹೆಚ್ಚು ಶಿಸ್ತು ಪಾಲಿಸಿ. ಗಳಿಕೆ ಮತ್ತು ವೆಚ್ಚದ ಮಧ್ಯೆ ಸಮತೋಲನ ಇರಲಿ. ಇಲ್ಲವಾದರೆ ಸಂಕಷ್ಟಕ್ಕೆ ಸಿಲುಕುವಿರಿ.

ಮಕರ ಆರ್ಥಿಕ ಅಸ್ಥಿರತೆ. ಪಾಲುದಾರರ ಜತೆ ಭಿನ್ನಮತ. ಸಣ್ಣ ವಿಷಯವು ಚಿಂತೆಗೆ ಕಾರಣವಾಗುವುದು. ವಿದ್ಯಾರ್ಥಿಗಳಿಗೆ ಯಶ.

ಕುಂಭ ಸಂಬಂಧದಲ್ಲಿ ಬಿರುಕು ಉಂಟಾದೀತು. ಅದನ್ನು ದೀರ್ಘ ಎಳೆಯಬೇಡಿ. ಮುಖ್ಯ ಕೆಲಸ ಪೂರೈಸಲು ಕಾಲವ್ಯಯ ಮಾಡಬೇಡಿ.

ಮೀನ ಆತುರದ ಕ್ರಮ ತೆಗೆದುಕೊಳ್ಳಬೇಡಿ. ದೊಡ್ಡ ಪರಿಣಾಮ ಉಂಟಾದೀತು. ಏಕಾಂಗಿಗಳಿಗೆ ವಿವಾಹ ಸಂಬಂಧ. ವಿದ್ಯಾರ್ಥಿಗಳಿಗೆ ತುಸು ಕಠಿಣ ದಿನ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 6,2,9,4

ಈಗ ಊಹಾ ಪತ್ರಿಕೋದ್ಯಮದ ಹಾವಳಿ ಹೆಚ್ಚು: ಸಿಎಂ ಸಿದ್ದರಾಮಯ್ಯ

ಪತ್ರಿಕಾ ವೃತ್ತಿಧರ್ಮ ಕಾಪಾಡಿ



• **ಬೆಂಗಳೂರು:** ನಾವು ಯಾರ ಪರವಾಗಿ ಇದ್ದೇವೆ ಎನ್ನುವ ಸ್ಪಷ್ಟ ಅರಿವು ಮಾಧ್ಯಮದವರಿಗೆ ಇರಬೇಕು. ಸರ್ಕಾರ ಕಟ್ಟ ಕಡೆಯ ಮನುಷ್ಯರ ಪರವಾಗಿ ಇದೆಯಾ ಎನ್ನುವ ಬಗ್ಗೆ ಗಮನ ಹರಿಸಿ, ವೃತ್ತಿಧರ್ಮವನ್ನು ಬಹಳ ಮುಖ್ಯವಾಗಿ ಕಾಪಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಬ್ಯಾಂಕ್ವೆಟ್ ಸಭಾಂಗಣನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಯ್ಕೆಯಾದ ಪತ್ರಕರ್ತರಿಗೆ -2025ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ವಿತರಿಸಿ, ಸನ್ಮಾನಿಸಿ ಮಾತನಾಡಿದರು. ಪತ್ರಕರ್ತರೂ ಆಗಿದ್ದ ಮಹಾತ್ಮ ಗಾಂಧಿಯವರ ಮಾತಿನಂತೆ ಸರ್ವೋದಯ, ಅಂತ್ಯೋದಯದ ಪರವಾಗಿ ಪತ್ರಕರ್ತರು ಇರಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಇನ್ನೂ ಅಸಮಾನತೆ ಕಾಣುತ್ತಿದ್ದೇವೆ. ಅಂಬೇಡ್ಕರ್ ಅವರು ಸಹ ಪತ್ರಕರ್ತರಾಗಿದ್ದರು. ಈ ಅಸಮಾನತೆ ಹೋಗದೆ ಹೋದರೆ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎನ್ನುವ ಮಾತನ್ನು ಅಂಬೇಡ್ಕರ್ ಹೇಳಿದ್ದನ್ನು ಮುಖ್ಯಮಂತ್ರಿಗಳು ಉಲ್ಲೇಖಿಸಿದರು.


ನಾನು ನಿತ್ಯ ದಿನಪತ್ರಿಕೆಗಳನ್ನು ಓದಿದ ಬಳಿಕವೇ ಇತರೆ ಕಾರ್ಯಗಳಿಗೆ ಮುಂದಾಗುತ್ತೇನೆ. ಪತ್ರಿಕೆಗಳು ಇನ್ನೂ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿವೆ. ನಾನು ಟಿವಿ ನೋಡುವುದು ಕಡಿಮೆ ಎಂದರು. ಈಗ ಊಹಾ ಪತ್ರಿಕೋದ್ಯಮದ ಹಾವಳಿ ಹೆಚ್ಚುತ್ತಿದೆ. ಸತ್ಯ ಬರೆಯುವ ಮತ್ತು ಸಂಶೋಧನೆ ನಡೆಸಿ ಬರೆಯುವ ಪತ್ರಕರ್ತರ ಸಂಖ್ಯೆ ಸುಳ್ಳು ಬರೆಯುವ ಪತ್ರಕರ್ತರ ಸಂಖ್ಯೆಗಿಂತ ಹೆಚ್ಚಾಗಬೇಕು ಎಂದು ಕರೆ ನೀಡಿದರು. ಈ ವೇಳೆ ಶಾಸಕ ರಿಜ್ವಾನ್ ಅರ್ಷದ್, ಹಿರಿಯ ಸಾಹಿತಿ ಹಂಪನಾ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನಂ ಸೇರಿ ಹಲವು ಗಣ್ಯರು ಇದ್ದರು.

ವಾಸ್ತವಾಂಶಕ್ಕೆ ಕನ್ನಡಿಯಾಗಲಿ: ಮುಖ್ಯಮಂತ್ರಿ

ಒಂದು ಗುಂಪು ಅಥವಾ ಒಂದು ಸಿದ್ಧಾಂತಕ್ಕೆ ಮಾರು ಹೋಗದೆ ವಾಸ್ತವಾಂಶಕ್ಕೆ ಕನ್ನಡಿ ಹಿಡಿಯಬೇಕು ಸಿಎಂ ಸಿದ್ದರಾಮಯ್ಯ ಎಂದರು. ಹೊಸ ತಂತ್ರಜ್ಞಾನದ ಜತೆಗೆ ಮಾಧ್ಯಮ ರಂಗ, ಪತ್ರಕರ್ತರೂ ತಮ್ಮನ್ನು ತಾವು ಉನ್ನತೀಕರಿಸಿಕೊಳ್ಳಬೇಕು. ಹೊಸ ಸವಾಲುಗಳಿಗೆ ತಮ್ಮನ್ನು ತಾವು ಸಜ್ಜುಗೊಳಿಸಿ ಕೊಂಡು ಹದಗೊಳ್ಳಬೇಕು ಎಂದರು.

ಒಳ ಮೀಸಲಾತಿ ಗೊಂದಲ ಸರಿಪಡಿಸಿ: ಬೊಮ್ಮಾಯಿ

• **ಬೆಂಗಳೂರು:** ಸಿಎಂ ಸಿದ್ದರಾಮಯ್ಯ ಅವರು ಒಳ ಮೀಸಲಾತಿ ವಿರೋಧಿ ಗುಂಪಿನ ಒತ್ತಡಕ್ಕೆ ಮಣಿದಿದ್ದರಿಂದ ಗೊಂದಲ ಸೃಷ್ಟಿಸಿದ್ದಾರೆ. ಸರ್ಕಾರವು ಕೂಡಲೇ ಒಳ ಮೀಸಲಾತಿ ಗೊಂದಲ ಸರಿಪಡಿಸಬೇಕೆಂದು ಸಂಸದ ಬಸವ ರಾಜ ಬೊಮ್ಮಾಯಿ ಆಗ್ರಹಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸುಪ್ರೀಂ ಕೋರ್ಟ್ ಮಾರ್ಗದರ್ಶಿ ಸೂಚನೆಯಂತೆ ಒಳ ಮೀಸಲಾತಿ ನೀಡುವಂತೆ ನಾವು ಒತ್ತಾಯಿಸುತ್ತೇವೆ. ಇದಕ್ಕೆ ಎಲ್ಲ ರೀತಿಯ ಜನಜಾಗೃತಿಗೆ ನಾವು ಸಿದ್ಧರಿದ್ದೇವೆ. ಸಚಿವ ಮುನಿಯಪ್ಪನವರು ಮಾ.27ರಂದು ವಿಶೇಷ ಸಂಪುಟ ಸಭೆ ಮಾಡುವುದಾಗಿ ಹೇಳಿದ್ದಾರೆ. ಅದನ್ನು ಕಾದು ನೋಡುತ್ತೇವೆ. ಇಲ್ಲವಾದರೆ, ಈ ಜನಾಂಗವೇ ಎದ್ದು ನಿಂತು ಹೋರಾಟ ಮಾಡಲಿದೆ. ಈಗಾಗಲೇ ಒಂದು ದೊಡ್ಡ ಹೋರಾಟ ಗುರುವಾರ ನಡೆದಿದೆ ಎಂದರು.

ಕರ್ನಾಟಕದಲ್ಲಿ ನ್ಯಾಯಬದ್ಧ- ಕಾನೂನುಬದ್ಧ ಶೇ. 56 ಮೀಸಲಾತಿ ಇದ್ದು, ಅದು ಶಿಕ್ಷಣ ಕ್ಷೇತ್ರದಲ್ಲಿ 4 ವರ್ಷಗಳಿಂದ ಸಿಗುತ್ತಿದೆ. ಎಂಬಿಬಿಎಸ್, ಎಂಜಿನಿಯರಿಂಗ್ ಮೊದಲಾದವುಗಳಿಗೆ ಅನುಷ್ಠಾನವಾಗಿದೆ. ಇದೀಗ ನೇರ ನೇಮಕಾತಿ ವೇಳೆ ಸರ್ಕಾರ ಅದರಂತೆ ಒಳ ಮೀಸಲಾತಿಯನ್ನು ಜಾರಿ ಮಾಡಬೇಕು. ಸರ್ಕಾರಿ ವಕೀಲರು ಇದನ್ನು ಗಟ್ಟಿಯಾಗಿ ಹೇಳಲು ತಯಾರಿಲ್ಲ. ಸುಪ್ರೀಂ ಕೋರ್ಟ್ ಮತ್ತು ನ್ಯಾ. ನಾಗಮೋಹನ್ ದಾಸ್ ಸಮಿತಿ ಹೇಳಿದ್ದನ್ನು ಪರಿಗಣಿಸಿ ಜಾರಿ ಮಾಡಿ ಎಂದು ಒತ್ತಾಯಿಸಿದರು.

ಚುನಾವಣಾ ಗಿಮಿಕ್ ಎಂದಿದ್ದರು

ನಾವು ಮೀಸಲಾತಿ ಪ್ರಮಾಣ ಹೆಚ್ಚಿಸಿದಾಗ ಅದು ಚುನಾವಣಾ ಗಿಮಿಕ್ ಎಂದಿದ್ದರು. ನಾವು ನವೆಂಬರ್‌ನಲ್ಲೇ ಮೀಸಲಾತಿ ಪ್ರಮಾಣ ಹೆಚ್ಚಿಸಿದ್ದೆವು. ಏಪ್ರಿಲ್- ಮೇ ತಿಂಗಳಿನಲ್ಲಿ ಚುನಾವಣೆ ನಡೆದಿತ್ತು. ನಾವು ಅದನ್ನು ಸಂವಿಧಾನಬದ್ಧವಾಗಿ ಮಾಡಿದ್ದೇವೆ. ಒಳ ಮೀಸಲಾತಿ ಸಂಬಂಧ ನಮ್ಮ ನಿಲುವನ್ನೇ ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಕೆಲವು ಮಾನದಂಡಗಳನ್ನೂ ಅದು ನೀಡಿದೆ. ಇವರಿಗೆ ಒಲ್ಲದ ಮನಸ್ಸು, ಸಮುದಾಯಗಳ ಒತ್ತಡವೂ ಇತ್ತು. ಅದಕ್ಕಾಗಿ ನ್ಯಾ. ನಾಗಮೋಹನ್ ದಾಸ್ ಅವರ ಮತ್ತೊಂದು ಸಮಿತಿ ರಚಿಸಿದರು. ಅವರು ಸುಪ್ರೀಂ ಕೋರ್ಟ್ ಆದೇಶದಡಿ ಕೆಲ ನಿರ್ಣಯ ಮಾಡಿದರು. ಅವರ ಶಿಫಾರಸನ್ನೂ ಮಾಡಿಲ್ಲ, ಸುಪ್ರೀಂ ಕೋರ್ಟ್ ಆದೇಶವನ್ನೂ ಪಾಲಿಸಿಲ್ಲ. ಯಾವುದನ್ನೂ ಮಾಡದೇ ಸಚಿವ ಸಂಪುಟ ಸಭೆಯಲ್ಲಿ ಮೌಖಿಕವಾಗಿ ಕೆಲವು ಮೀಸಲಾತಿ ಮಾಡಿ ಪ್ರಕಟಿಸಿದರು. ಇದು ಕೋರ್ಟಿಗೆ ಹೋಗಲಿದೆ ನಿಲ್ಲುವುದಿಲ್ಲ ಎಂಬುದು ಅವರಿಗೂ ಗೊತ್ತಿತ್ತು.ಈಗ ಗೊಂದಲದಲ್ಲಿ ಬಿದ್ದಿದ್ದಾರೆ ಎಂದು ದೂರಿದರು.

ಉಸಿರಿರುವವರೆಗೂ ರಾಜಕೀಯ ಮಾಡುವೆ

ಪುಟ ೧➡ 1980ರಲ್ಲಿ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮೇಲೆ 46 ವರ್ಷ ಮಂತ್ರಿಯಾಗಿ ಕೆಲಸ ಮಾಡಿರುವೆ. ಈವರೆಗೆ 13 ಬಾರಿ ಚುನಾವಣೆ ಎದುರಿಸಿದ್ದೇನೆ. ನಾಲ್ಕು ಬಾರಿ ಸೋತಿದ್ದೇನೆ. ಸೋತಾಗಲೂ ಕ್ಷೇತ್ರದ ಜನರು ಕೈಬಿಟ್ಟಿಲ್ಲ. ರಾಜಕೀಯದಲ್ಲಿ ಬೆಳೆದಿದ್ದರೆ, ಮುಖ್ಯಮಂತ್ರಿ ಆಗಿದ್ದರೆ, ನೀವೆಲ್ಲರೂ ಕಾರಣ ಎಂದು ಹೇಳಿದರು. ನನ್ನ ರಾಜಕೀಯ ಜೀವನ ಕೊಟ್ಟಿದ್ದು ಇಲ್ಲಿಂದಲೇ ಎನ್ನುವುದು ಮುಖ್ಯ.

2006ರ ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಎಷ್ಟು ಮತಗಳು ಇತ್ತೋ, ಅಷ್ಟು ಮತಗಳನ್ನು ನನಗೆ ಕೊಟ್ಟಿದ್ದರು. 1978ರಲ್ಲಿ ತಾಲೂಕು ಬೋರ್ಡ್ ಚುನಾವಣೆಯಲ್ಲಿ ನಿಂತಿದ್ದಾಗ ವರಕೋಡು ಗ್ರಾಮದ ತಮ್ಮಯ್ಯ ಅವರು ಸೇರಿದಂತೆ ಅನೇಕರು ಸಹಾಯ ಮಾಡಿರುವುದನ್ನು ಮರೆಯಲ್ಲ ಎಂದರು. ವೀರಭದ್ರನ ಮಕ್ಕಳ ಕುಣಿತಕ್ಕೆ ಕುಣಿಯಲು ಹೋಗಿದ್ದರಿಂದ ನಮ್ಮಪ್ಪ ನನ್ನ ಸ್ಕೂಲ್‌ಗೆ ಸೇರಿಸಲಿಲ್ಲ. ಅಂದು ರಾಜಪ್ಪ ಮಾಸ್ಟರ್ ಬರದಿದ್ದರೆ ನಾನು ನೇರವಾಗಿ ಐದನೇ ತರಗತಿಗೆ ಸೇರಲು ಸಾಧ್ಯವಾಗುತ್ತಿರಲಿಲ್ಲ. ನಾನು ವಕೀಲನಾಗುತ್ತಿರಲಿಲ್ಲ, ರಾಜಕೀಯವಾಗಿ ಬೆಳೆದು ಮುಖ್ಯಮಂತ್ರಿಯಾಗುತ್ತಿರಲಿಲ್ಲ ಎಂದು ಸ್ಮರಿಸಿದರು.

ಡಾ.ಯತೀಂದ್ರ ಬೆಳೆಸಿ

ಪುಟ ೧➡ ಅನೇಕ ಭಾಗ್ಯ, ಗ್ಯಾರಂಟಿ ಯೋಜನೆಗಳನ್ನು ನೀಡಿದ್ದೇನೆ ಎಂದರು. ಬಡಗಲಹುಂಡಿ, ಹೊಸಹುಂಡಿ, ಮೂಡಲಹುಂಡಿ, ವರಕೋಡು ಗ್ರಾಮದ ಮುಖಂಡರು, ಯಜಮಾನರು, ಭಕ್ತಾದಿಗಳು ಸೇರಿಕೊಂಡು ನಿರ್ಮಾಣ ಮಾಡಿರುವ ದೇವಸ್ಥಾನಕ್ಕೆ ಬೇಕಾದ ಎಲ್ಲಾ ರೀತಿಯ ಅನುಕೂಲ ಕಲ್ಪಿಸಲಾಗುವುದು ಎಂದರು. ಕಾಗಿನೆಲೆ ಶಾಖಾಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಕಾರ್ಯಕ್ರಮದಲ್ಲಿದ್ದರು.

ಬೆಂಗಳೂರಲ್ಲಿ ಮತ್ತೆ ಪ್ಲಾಸ್ಟಿಕ್ ರಸ್ತೆ ಚಿಂತನೆ

ಪುಟ ೧➡ **ವೆಚ್ಚದ ವಿಶ್ಲೇಷಣೆ:** ರಸ್ತೆ ನಿರ್ಮಾಣವಷ್ಟೇ ಅಲ್ಲ, ನಗರದ ಪ್ಲಾಸ್ಟಿಕ್ ತ್ಯಾಜ್ಯವನ್ನು ವಿಲೇವಾರಿ ಮಾಡುವ ಒಂದು ಉತ್ತಮ ತಂತ್ರಜ್ಞಾನವಾಗಿದ್ದು, ಪ್ರತಿ ಟನ್ ಡಾಂಬರು ಮಿಶ್ರಣದಲ್ಲಿ ಸುಮಾರು ಶೇ.8ರಿಂದ 10ರಷ್ಟು ಪ್ಲಾಸ್ಟಿಕ್‌ನ್ನು ಬಳಸಲಾಗುತ್ತದೆ. ಇದರಿಂದ ಬಿಟುಮೆನ್ (ಡಾಂಬರು) ಬಳಕೆಯನ್ನು ಕಡಿಮೆ ಮಾಡಬಹುದಾಗಿದ್ದು, ಲಕ್ಷಾಂತರ ರೂಪಾಯಿಗಳ ಉಳಿತಾಯವಾಗುತ್ತದೆ ಮತ್ತು ರಸ್ತೆಗಳ ನಿರ್ವಹಣೆ ಸುಲಭವಾಗುತ್ತದೆ. ತ್ಯಾಜ್ಯ ಪ್ಲಾಸ್ಟಿಕ್ ಅಗ್ಗವಾಗಿ ಸಿಗುತ್ತದೆ. ಅಂದಾಜಿನ ಪ್ರಕಾರ, ಒಂದು ಕಿಲೋಮೀಟರ್ (3.75 ಮೀಟರ್ ಅಗಲದ) ರಸ್ತೆಗೆ ನಿರ್ಮಾಣ ಸಮಯದಲ್ಲಿ ಸುಮಾರು 60 ಸಾವಿರಕ್ಕೂ ಹೆಚ್ಚಿನ ಉಳಿತಾಯವಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಿರ್ವಹಣಾ ವೆಚ್ಚದಲ್ಲಿ ಉಳಿತಾಯ

ಪುಟ ೧➡ ಡಾಂಬರು ರಸ್ತೆಗಳಿಗೆ ನೀರು ಶತ್ರು. ಆದರೆ ಪ್ಲಾಸ್ಟಿಕ್ ರಸ್ತೆಗಳು ಜಲ ನಿರೋಧಕವಾಗಿರಲಿದ್ದು, ನೀರನ್ನು ಒಳ ಬಿಡದ ಕಾರಣ ರಸ್ತೆ ಬೇಗ ಕಿತ್ತುಬರುವುದಿಲ್ಲ ಹಾಗೂ ಗುಂಡಿಗಳು (ಪಾಟ್ ಹೋಲ್) ನಿರ್ಮಾಣವಾಗುವುದಿಲ್ಲ. ಜತೆಗೆ ರಸ್ತೆಗೆ ಪ್ಲಾಸ್ಟಿಕ್ ಬಳಕೆ ಮಾಡುವುದರಿಂದ ಪ್ಲಾಸ್ಟಿಕ್ ಪರಿಸರ ಸೇರುವ ಪ್ರಮಾಣ ಕಡಿಮೆಯಾಗಿ, ಪರಿಸರ ಸಂರಕ್ಷಣೆಗೆ ಮಹತ್ತರ ಪಾತ್ರ ವಹಿಸಲಿದೆ ಎಂದು ಪ್ಲಾಸ್ಟಿಕ್ ರಸ್ತೆ ನಿರ್ಮಾಣಕ್ಕೆ ಮೆಟೀರಿಯಲ್ ಪೂರೈಕೆ ಮಾಡುವ ಪೇಟೆಂಟ್ ಪಡೆದುಕೊಂಡ ಮೊದಲ ಕಂಪನಿ ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ನಿರ್ದೇಶಕರಾದ ಕೆ.ರಸುಲ್ ಖಾನ್ ಹೇಳುತ್ತಾರೆ.

ಒಮ್ಮೆ ರಸ್ತೆಗೆ ಪ್ಲಾಸ್ಟಿಕ್ ಬಳಸಿದ ನಂತರ ಅದು ಕರಗಲು 80-90 ಡಿಗ್ರಿ ಹೀಟ್ ಬೇಕಾಗುತ್ತದೆ. ನಮ್ಮ ವಾತಾವರಣದ ತಾಪಮಾನ ಅಷ್ಟಿಲ್ಲದ ಕಾರಣ ಏನೂ ಸಮಸ್ಯೆಯಾಗುವುದಿಲ್ಲ. ಇದು ಪರಿಸರಕ್ಕೆ ಪೂರಕವಾದ ಚಿಂತನೆಯಾಗಿದೆ.
■ **ಕೆ.ರಸುಲ್ ಖಾನ್,** ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ನಿರ್ದೇಶಕ

ಪ್ಲಾಸ್ಟಿಕ್ ರಸ್ತೆ ನಿರ್ಮಾಣದ ಹಂತಗಳು

- ಸಂಗ್ರಹಿಸಿದ ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್‌ನ್ನು ಚೆನ್ನಾಗಿ ತೊಳೆದು, ಒಣಗಿಸಿ, ನಂತರ ಶ್ರೆಡಿಂಗ್ ಯಂತ್ರದ ಮೂಲಕ 2 ಎಂಎಂನಿಂದ 4 ಎಂಎಂ ಗಾತ್ರದ ಚಿಕ್ಕ ತುಂಡುಗಳನ್ನಾಗಿ ಕತ್ತರಿಸಲಾಗುತ್ತದೆ
- ರಸ್ತೆ ನಿರ್ಮಾಣಕ್ಕೆ ಬಳಸುವ ಜಲ್ಲಿಕಲ್ಲನ್ನು ಸುಮಾರು 160ಕೆಸಿ - 170 ಕೆಸಿ ತಾಪಮಾನಕ್ಕೆ ಬಿಸಿ ಮಾಡಲಾಗುತ್ತದೆ
- ಬಿಸಿಯಾದ ಜಲ್ಲಿಕಲ್ಲಿನ ಮೇಲೆ ಚಿಕ್ಕದಾಗಿ ಕತ್ತರಿಸಿದ ಪ್ಲಾಸ್ಟಿಕ್ ತುಂಡುಗಳನ್ನು ಹಾಕಲಾಗುತ್ತದೆ (ಡ್ರೈ ಪ್ರೋಸೆಸ್)

ಇಬ್ಬರು ಭಾರತೀಯರು ಬಲಿ,

ಪುಟ ೧➡ **ಇರಾಕ್ ಕರಾವಳಿಯಲ್ಲಿ ಆತ್ಮಾಹುತಿ ದಾಳಿ:ಮುಂಬೈ ಇಂಜಿನಿಯರ್ ಸಾವು**


ಇದೇ ವೇಳೆ ಇರಾಕಿನ ಜಲಪ್ರದೇಶದಲ್ಲಿ ಅಮೆರಿಕ ಧ್ವಜವಿದ್ದ ಸೇಫ್ ಸಿ ವಿಷ್ಣು ಎಂಬ ತೈಲ ಟ್ಯಾಂಕರ್ ಮೇಲೆ ಇರಾನ್ ಮೂಲದ ದೋಣಿ ಮೂಲಕ ನಡೆಸಲಾದ ಆತ್ಮಹತ್ಯಾ ದಾಳಿಯಲ್ಲಿ ಭಾರತೀಯ ಪ್ರಜೆಯಾಗಿರುವ ಮುಂಬೈಯ ಕಂಡಿವಲಿ ಪೂರ್ವದ ನಿವಾಸಿ ದೇವಾನಂದನ್ ಪ್ರಸಾದ್ ಸಿಂಗ್ (50) ಎಂಬವರು ಬಲಿಯಾಗಿದ್ದಾರೆ.

ಯುದ್ಧ ಪರಿಸ್ಥಿತಿ ದೂರವಾಗಲಿ

ಪುಟ ೧➡ ಯುಜಿಸಿ ವಿಷಯದ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಅವರು, ಹಿಂದು ಸಮಾಜದ ಸಂಘಟನೆಗಾಗಿ ಮತ್ತು ಹಿಂದು ಸಮಾಜದಲ್ಲಿನ ಬೇಧಭಾವವನ್ನು ದೂರಗೊಳಿಸುವುದಕ್ಕಾಗಿಯೇ ಸಂಘದ ನಿರ್ಮಾಣವಾಗಿದೆ. ಸಮಾಜದ ಎಲ್ಲಾ ವರ್ಗಗಳ ಬಂಧುಗಳು ಒಂದು ಕಡೆ ಸೇರಿ ಇಂತಹ ವಿಷಯಗಳ ಕುರಿತು ಯೋಚಿಸಬೇಕು ಎಂದೇ ಹೇಳುತ್ತದೆ. ಹಾಗೆಯೇ ಈಗ ಎದ್ದಿರುವ ಯುಜಿಸಿ ವಿವಾದದ ಕುರಿತು ನ್ಯಾಯಾಲಯ ಮತ್ತು ಸರ್ಕಾರದ ಮಟ್ಟದಲ್ಲಿ ಅನೇಕ ಪ್ರಯತ್ನಗಳಾಗುತ್ತಿವೆ. ಆದರೆ, ಸಂಘದ ಪ್ರಯತ್ನ ಕೇವಲ ಈ ಸಮಯದಲ್ಲಿ ಮಾತ್ರವಲ್ಲದೆ ಸಮಾಜದ ಸರ್ವವರ್ಗಗಳ ಸರ್ವಬಂಧುಗಳನ್ನು ಸಂಘಟಿಸುವುದಾಗಿದೆ. ಸಮಾಜದ ಏಕತೆ, ರಾಷ್ಟ್ರದ ಏಕತೆ ಎನ್ನುವುದು ನಮ್ಮ ನಿಲುವು. ಸಂಘದ ಜನ್ಮವಾದದ್ದೇ ಹಿಂದು ಸಮಾಜದಲ್ಲಿನ ಶ್ರೇಷ್ಠ-ಕನಿಷ್ಠ ಬೇಧಭಾವಗಳನ್ನು ದೂರಗೊಳಿಸುತ್ತಾ ಸಮರಸತೆಯ ಸುಸಂಘಟಿತ ಸಮಾಜ ನಿರ್ಮಾಣ ಮಾಡುವುದಕ್ಕಾಗಿಯೇ ಎಂದರು. ಸಂಘದ ಸಂರಚನೆಯ ಕುರಿತಾದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಕಾಲಕಾಲಕ್ಕೆ ಕೆಲವು ಬದಲಾವಣೆಗಳು ಆಗುತ್ತಿರುತ್ತವೆ. ಅದು ವಿಶೇಷ ಸಂಗತಿಯೇನಲ್ಲ. ಈಗಲೂ ಕೆಲವು ಬದಲಾವಣೆಗಳ ಕುರಿತು ಚರ್ಚೆ ಜಾರಿಯಲ್ಲಿದೆ. ನಿರ್ಣಯದ ನಂತರ ತಿಳಿಸಲಾಗುತ್ತದೆ. ಇನ್ನು ಭೌಗೋಳಿಕ ರಚನೆಯ ಕುರಿತು ಸಮಯಕ್ಕೆ ಸರಿಯಾದ, ಸಂಘಟನಾತ್ಮಕ ಅವಶ್ಯಕತೆಗಳಿಗೆ ಅನುಗುಣವಾಗಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತದೆ ಎಂದರು.

ಮೇಟಿ ಕುಟುಂಬಸ್ಥರಿಗೆ ಟಿಕೆಟ್: ಸಚಿವ ಜಾರಕಿಹೊಳಿ

• **ಬೆಳಗಾವಿ:** ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ನಡೆಯಲಿರುವ ಉಪಚುನಾವಣೆಯಲ್ಲಿ ಅವರ ಕುಟುಂಬಸ್ಥರಿಗೆ ಟಿಕೆಟ್ ನೀಡಲಾಗುವುದು ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ ಗೆಲ್ಲಿಸಲು ಈಗಾಗಲೇ ಸಿದ್ಧತೆ ನಡೆಸಿದ್ದೇವೆ. ಹೈಕಮಾಂಡ್, ಕ್ಷೇತ್ರದ ಮತದಾರರ, ಕುಟುಂಬದ ಒಮ್ಮತದ ಆಧಾರದ ಮೇಲೆ ಅಂತಿಮ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು ಎಂದರು. ಕೆಪಿಸಿಸಿ ಅಧ್ಯಕ್ಷ ಸ್ಥಾನ ಬೆಳಗಾವಿ ಜಿಲ್ಲೆಗೆ ದೊರುಕತ್ತಿದೆ ಎಂಬ ಚರ್ಚೆ ನಡೆಯುತ್ತಿವೆ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ನಾಯಕತ್ವ ಬದಲಾವಣೆ ಗೊಂದಲ ಬಗೆಹರಿಸಬೇಕೆಂದು ಹೈಕಮಾಂಡ್ ಗೆ ಹೇಳಿದ್ದೇವೆ. ಅವರೇ ಈ ಗೊಂದಲ ಬಗೆಹರಿಸುತ್ತಾರೆ. ಇನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನ ಬೆಳಗಾವಿ ಜಿಲ್ಲೆಗೆ ದೊರಕುವ ಬಗ್ಗೆ ಚರ್ಚೆ ನಡೆದಿಲ್ಲ. ಕೆಪಿಸಿಸಿ ಸ್ಥಾನ ಸಿಕ್ಕಾಗ ಸಂತೋಷ ಪಡೋಣ ಎಂದರು. ಮಹಾರಾಷ್ಟ್ರದಿಂದ 2 ಟಿಎಂಸಿ ನೀರು ಬಿಡುಗಡೆಗೆ ಮನವಿ: ಹಿಪ್ಪರಗಿ ಬ್ಯಾರೇಜ್‌ನ 22ನೇ ಕ್ರಸ್ಟ್ ಗೇಟ್ ಮುರಿದು ಬಿದ್ದ ಪರಿಣಾಮ ಕೃಷ್ಣಾನದಿಯ ಅಪಾರ ಪ್ರಮಾಣದ ನೀರು ವ್ಯರ್ಥವಾಗಿ ಪೋಲಾಗಿದೆ. ಸುಮಾರು 2 ರಿಂದ 3 ಟಿಎಂಸಿ ಅಡಿ ನೀರು ಹರಿದು ಹೋಗಿದೆ. ನೀರಿನ ಕೊರತೆ ನೀಗಿಸಲು ಮಹಾರಾಷ್ಟ್ರ ಸರ್ಕಾರದಿಂದ ಸುಮಾರು 2 ಟಿಎಂಸಿ ನೀರು ಬಿಡುಗಡೆ ಮಾಡುವಂತೆ ವಿನಂತಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು ಹೇಳಿದರು.

ಕೆಂಪು ಕಲ್ಲಿನಂತೆ ಮರಳು ಸಮಸ್ಯೆಗೂ ಪರಿಹಾರ ಹುಡುಕಿ

ಪುಟ ೧➡ ಇದಕ್ಕೆ ಉತ್ತರಿಸಿದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಸ್ಥಳೀಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಸಲು ಒಟ್ಟು 11 ಮರಳು ನಿಕ್ಷೇಪ ಗುರುತಿಸಲಾಗಿದೆ. ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಮರಳು ತೆಗೆದು ವಿಲೇವಾರಿ ಮಾಡಲು ಅಧಿಸೂಚನೆ ಹೊರಡಿಸಿ, ಕಾರ್ಯಾದೇಶ ನೀಡಲಾಗಿತ್ತು. ಆದರೆ, ಪಂಚಾಯತ್‌ಗಳು ಮರಳು ತೆಗೆದು ವಿಲೇವಾರಿ ಮಾಡಿಲ್ಲ. ಪ್ರಸಕ್ತ ಆ ಮರಳು ನಿಕ್ಷೇಪಗಳ ಅವಧಿ ಮುಕ್ತಾಯವಾಗಿದೆ. ಮತ್ತೆ ಜಂಟಿ ಸ್ಥಳ ಪರಿಶೀಲನೆ ನಡೆಸಿ ಮರಳು ಲಭ್ಯತೆ ಖಚಿತಪಡಿಸಿಕೊಂಡು ಮರಳು ತೆಗೆಯಲು ಕಾರ್ಯಾದೇಶ ನೀಡಲು ಕ್ರಮ ವಹಿಸಲು ಸೂಚಿಸಲಾಗಿದೆ. ದ.ಕ. ಜಿಲ್ಲಾ ವ್ಯಾಪ್ತಿಯಲ್ಲಿ ಹೊಸದಾಗಿ 7 ಮರಳು ನಿಕ್ಷೇಪ ಗುರುತಿಸಿ ಅಧಿಸೂಚನೆ ಹೊರಡಿಸಲಾಗಿದೆ. ಈ ಪೈಕಿ ಒಂದು ಮರಳು ದಿಬ್ಬ ಪ್ರದೇಶಕ್ಕೆ ಮರಳು ತೆಗೆಯಲು ಸಂಬಂಧಪಟ್ಟ ಪಂಚಾಯತ್‌ಗೆ ಕಾರ್ಯಾದೇಶ ನೀಡಲಾಗಿದೆ ಎಂದರು.

ಉಡುಪಿ ಜಿಲ್ಲೆಯಲ್ಲಿ 2020-21ನೇ ಸಾಲಿನಿಂದ 30 ಮರಳು ನಿಕ್ಷೇಪಗಳಲ್ಲಿ ಒಟ್ಟು 80,389 ಮೆಟ್ರಿಕ್ ಟನ್ ಮರಳನ್ನು ತೆಗೆದು ಸಂಬಂಧಪಟ್ಟ ಗ್ರಾ.ಪಂ.ಗಳ ವ್ಯಾಪ್ತಿಯ ಸ್ಥಳೀಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಸಲಾಗಿದೆ ಎಂದು ಸಚಿವರು ತಿಳಿಸಿದರು.

ಈ ಉತ್ತರಕ್ಕೆ ತೃಪ್ತಿಗೊಳ್ಳದ ಶಾಸಕ ಪೂಂಜ, ಗಣಿ ಇಲಾಖೆಯಿಂದ ಅನುಮತಿ ನೀಡಿದರೂ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧೀನ ಗ್ರಾ.ಪಂ.ಗಳಿಂದ ಮರಳು ತೆಗೆದು ವಿಲೇ ಮಾಡುವಲ್ಲಿ ಲೋಪವಾಗಿದೆ. ಇದರಿಂದ ಕರಾವಳಿ ಭಾಗದವರಿಗೆ ಮರಳು ಸಿಗದೆ ತೀವ್ರ ಸಮಸ್ಯೆ ಎದುರಿಸುವಂತಾಗಿದೆ. ಇಂತಹ ನಿರ್ಲಕ್ಷ್ಯ ಯಾಕೆ ಎಂದು ಆಕ್ಷೇಪಿಸಿದರು.

ಮಧ್ಯಪ್ರವೇಶಿಸಿದ ಬಿಜೆಪಿ ಶಾಸಕ ಸುನೀಲ್ ಕುಮಾರ್, ನಾನ್ ಸಿಆರ್‌ಝಡ್ ವ್ಯಾಪ್ತಿಯಲ್ಲಿ ನಮ್ಮ ಎರಡು ಜಿಲ್ಲೆಗಳಲ್ಲಿ ಸಮಸ್ಯೆಗಳೇ ಬೇರೆ ಇವೆ. ಉಡುಪಿ ಜಿಲ್ಲೆಯಲ್ಲಿ 80,389 ಮೆಟ್ರಿಕ್ ಟನ್ ಮರಳಿನ ಪ್ರಮಾಣ ಗುರುತಿಸಿದರೂ 21,990 ಮೆ.ಟನ್ ಮರಳು ತೆಗೆದು ಪೂರೈಸಲಾಗಿದೆ ಎಂದು ಹೇಳಿದೆ. ಹಾಗಾದರೆ, ನಮ್ಮ ಮರಳಿನ ಬೇಡಿಕೆ ಎಷ್ಟು? ಅಲ್ಲಿರುವ ಮಾನದಂಡಗಳನ್ನು ನೋಡಿದರೆ ಯಾರೂ ಮರಳನ್ನು ತೆಗೆಯಲು ಸಾಧ್ಯವಿಲ್ಲ. ಅಕ್ರಮವಾಗಿ ಮರಳುಗಾರಿಕೆ ನಡೆಸುತ್ತಿರುವುದರಿಂದ ಸರ್ಕಾರದ ಆದಾಯಕ್ಕೂ ನಷ್ಟವಾಗುತ್ತಿದೆ. ಇದಕ್ಕಾಗಿ ನಮ್ಮ ಎರಡು ಜಿಲ್ಲೆಗಳಿಗೆ ಪ್ರತ್ಯೇಕ ಮರಳು ನೀತಿ ರೂಪಿಸುವಂತೆ ಒತ್ತಾಯಿಸುತ್ತಲೇ ಇದ್ದೇವೆ. ಇಲ್ಲಿರುವವರಿಗೆ ನಮ್ಮ ಜಿಲ್ಲೆಗಳ ಮರಳು ಮತ್ತು ಕೆಂಪು ಕಲ್ಲಿನ ಸಮಸ್ಯೆ ಅರ್ಥವೇ ಆಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಟ್ಟಿನ ರಜೆ ಕಡ್ಡಾಯಗೊಳಿಸಿದರೆ ಮಹಿಳೆಯರ ವೃತ್ತಿಗೆ ದಕ್ಕೆ: ಸುಪ್ರೀಂ

ಪುಟ ೧➡ ಸೂಕ್ತ ಮಾಧ್ಯಮಗಳ ಸಲಹೆ ಪಡೆದುಕೊಂಡು ಋತುಸ್ರಾವ ರಜೆಗಾಗಿ ನೀತಿ ರಚಿಸುವ ಸಾಧ್ಯತೆಗಳನ್ನು ಪರಿಗಣಿಸಬಹುದು ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜೋಯ್ಮಲ್ಯಾಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠ ಸಲಹೆ ನೀಡಿದೆ. ಅರ್ಜಿದಾರರ ಅಹವಾಲಿನ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶಿಸುವುದರೊಂದಿಗೆ ನ್ಯಾಯಪೀಠ ಅರ್ಜಿ ಇತ್ಯರ್ಥಗೊಳಿಸಿತು.

ಆತಂಕ ಮೂಡಿಸುತ್ತವೆ: ಈ ರೀತಿಯ ಅರ್ಜಿಗಳನ್ನು ಆತಂಕ ಮೂಡಿಸಲು ಸಲ್ಲಿಸಲಾಗುತ್ತೆ. ಋತುಸ್ರಾವ ತಮ್ಮ ಪಾಲಿನ ಅನಿಷ್ಟವೆಂಬುದಾಗಿ ಮಹಿಳೆಯರಲ್ಲಿ ಕೀಳರಿಮೆ ಹುಟ್ಟು ಹಾಕುವ ಅರ್ಜಿಗಳು ಇವಾಗಿವೆ. ಮುಟ್ಟಿನ ರಜೆ ಒಂದು ಸಮರ್ಥನೀಯ ಹಕ್ಕೆಂದು ಬಿಂಬಿಸಲಾಗುತ್ತಿದೆ. ಇಲ್ಲಿ ಮಹಿಳೆಗೆ ವೇತನಸಹಿತ ರಜೆ ಮಂಜೂರು ಮಾಡಬೇಕಾದ ಉದ್ಯೋಗದಾತನ ಪರಿಸ್ಥಿತಿಯನ್ನೂ ಅರ್ಥೈಸಿಕೊಳ್ಳುವುದು ಮುಖ್ಯವೆಂದು ನ್ಯಾಯಪೀಠ ಪ್ರತಿಪಾದಿಸಿದೆ.

ಶೈಲೇಂದ್ರ ಮಣಿ ತ್ರಿಪಾಠಿ ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರರು. ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ.ಆರ್. ಶಂಸದ್, ಕೆಲವು ರಾಜ್ಯಗಳು ಮುಟ್ಟಿನ ರಜೆ ನೀಡಲು ಈಗಾಗಲೆ ಕ್ರಮ ಕೈಗೊಂಡಿವೆ ಎಂದು ವಾದಿಸಿದರು. ಕೇರಳದಲ್ಲಿ ಶಾಲಾ ವಿದ್ಯಾರ್ಥಿನಿಯರಿಗೆ ಈ ವಿಚಾರದಲ್ಲಿ ರಿಯಾಯಿತಿ ಕಲ್ಪಿಸಲಾಗಿದೆ ಮತ್ತು ಹಲವು ಖಾಸಗಿ ಕಂಪನಿಗಳು ಕೂಡ ಮಹಿಳಾ ಉದ್ಯೋಗಿಗಳಿಗೆ ಸ್ವಯಂಪ್ರೇರಿತವಾಗಿ ಮುಟ್ಟಿನ ರಜೆ ನೀಡಿವೆ ಎಂದು ಗಮನ ಸೆಳೆದರು.

ಕಾನೂನು ಮುಖೇನ ಕಡ್ಡಾಯ ಅಪಾಯಕಾರಿ: ಪ್ರತಿಯಾಗಿ, ಶಾಲೆಗಳು ಅಥವಾ ಖಾಸಗಿ ಕಂಪನಿಗಳು ಸ್ವಇಚ್ಛೆಯಿಂದ ಮುಟ್ಟಿನ ರಜೆ ನೀಡುವುದರಲ್ಲಿ ತಪ್ಪಿಲ್ಲ. ಇಂತಹ ಸ್ವಯಂಪ್ರೇರಿತ ನೀತಿಗಳು ಸ್ವಾಗತಾರ್ಹ. ಆದರೆ, ಈ ರೀತಿ-ನೀತಿಗಳನ್ನು ಕಾನೂನು ಮೂಲಕ ಕಡ್ಡಾಯಗೊಳಿಸುವುದು ಅಪಾಯಕಾರಿ ಎಂದು ಸಿಜೆಐ ಎಚ್ಚರಿಸಿದರು. ಸ್ವಯಂಪ್ರೇರಿತವಾಗಿ ರಜೆ ನೀಡುವುದು ಅದ್ಭುತ. ಆದರೆ ನೀವಿದನ್ನು ಕಾನೂನು ಪ್ರಕಾರವೂ ಕಡ್ಡಾಯಗೊಳಿಸಿದಲ್ಲಿ ಮಹಿಳೆಯರಿಗೆ ಯಾರೂ ಉದ್ಯೋಗ ನೀಡಲಾರರು.

ಮಹಿಳೆಯರನ್ನು ಯಾರೂ ನ್ಯಾಯಾಂಗ ಅಥವಾ ಸರಕಾರಿ ಹುದ್ದೆಗಳಿಗೆ ಸೇರಿಸಲಾರರು. ಅರ್ಥಾತ್ ಅವರ ವೃತ್ತಿ ಭವಿಷ್ಯ ಮುಗಿದೇಬಿಡುವುದು. ಎಲ್ಲರಿಗೂ ಮಾಹಿತಿ ನೀಡಿದ ನಂತರ ನೀವು ಮನೆಯಲ್ಲೇ ಕುಳಿತುಬಿಡಿ ಎಂಬ ಮಾತನ್ನು ಉದ್ಯೋಗದಾತ ಸಂಸ್ಥೆಗಳಿಂದ ಮಹಿಳೆಯರು ಕೇಳಬೇಕಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಎಚ್ಚರಿಸಿದರು. ಇಂತಹ ಕ್ರಮಗಳು ಉದ್ಯೋಗ ಜಾಗದಲ್ಲಿ ತಪ್ಪು ಗ್ರಹಿಕೆಗೆ ಕಾರಣವಾಗುವ ಸಾಧ್ಯತೆಯಿದೆ. ಔದ್ಯೋಗಿಕ ರಂಗದಲ್ಲಿ ಮಹಿಳೆಯರ ಉನ್ನತಿ ಮೇಲೂ ಋಣಾತ್ಮಕ ಪರಿಣಾಮ ಬೀರುವ ಆತಂಕವಿದೆ ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ. ಅರ್ಜಿದಾರರು ಈಗಾಗಲೆ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕುರಿತು ಮನವಿ ಮಾಡಿರುವ ಕಾರಣ, ಮುಟ್ಟಿನ ರಜೆ ಕಡ್ಡಾಯಕ್ಕೆ ಆಗ್ರಹಿಸಿ ಪದೇಪದೆ ನ್ಯಾಯಾಲಯದ ಕದ ಬಡಿಯುವ ಅಗತ್ಯವಿಲ್ಲ ಎಂದು ನ್ಯಾಯಪೀಠ ಸಲಹೆ ನೀಡಿದೆ.

ಸಾಲಗಾರರ ರಕ್ಷಣಾ ಖಾಸಗಿ ವಿಧೇಯಕ

• **ವಿಧಾನಪರಿಷತ್:** ಹಣಕಾಸು ವ್ಯವಹಾರ ನಡೆಸುವ ಯಾವುದೇ ಸಂಸ್ಥೆ, ಕಂಪನಿ, ಹಣಕಾಸು ಸಂಸ್ಥೆ ಅಥವಾ ಬ್ಯಾಂಕ್ ಯಾವುದೇ ಸಾಲಗಾರನಿಗೆ ಸುಸ್ತಿ ದಿನಾಂಕದಿಂದ 180 ದಿನಗಳ ಕಾಲಾವಕಾಶ ನೀಡಿದ ನಂತರವಷ್ಟೆ ಅಡಮಾನವಿಟ್ಟ ಚಿನ್ನಾಭರಣಗಳನ್ನು ಹರಾಜು ಹಾಕಲು ಅನುಮತಿ ನೀಡಬೇಕು ಎನ್ನುವ ಕಾನೂನು ತರಲು ಖಾಸಗಿ ವಿಧೇಯಕ ಮಂಡಿಸಲಾಗಿದೆ.

ಶುಕ್ರವಾರ ವಿಧಾನ ಪರಿಷತ್‌ನ ಖಾಸಗಿ ಕಾರ್ಯ ಕಲಾಪದಲ್ಲಿ, ಕರ್ನಾಟಕ ಚಿನ್ನ ಅಡಮಾನವಿಟ್ಟ ಸಾಲಗಾರರ ರಕ್ಷಣಾ ವಿಧೇಯಕ, 2025 ಎನ್ನುವ ಖಾಸಗಿ ವಿಧೇಯಕವನ್ನು ಕಾಂಗ್ರೆಸ್ ಸದಸ್ಯ ರಮೇಶ್ ಬಾಬು ಮಂಡಿಸಿದ್ದಾರೆ. ಯಾವುದೇ ಹಣಕಾಸು ಸಂಸ್ಥೆಯಿಂದ ಸಾಲಗಾರರ ರಕ್ಷಣೆಗಾಗಿ ಹಾಗೂ ಅಡಮಾನವಿಟ್ಟ ಚಿನ್ನದ ಹರಾಜಿನ ಪ್ರಕ್ರಿಯೆಯನ್ನು ನಿಯಂತ್ರಿಸಲು ಈ ಖಾಸಗಿ ವಿದೇಯಕವನ್ನು ಮಂಡಿಸಲಾಗಿದೆ.

ಈ ವಿಧೇಯಕದಂತೆ ಸಾಲಗಾರನಿಗೆ ತಾನು ಅಡಮಾನವಿಟ್ಟ ಚಿನ್ನವನ್ನು ಹರಾಜು ಮಾಡುವುದಕ್ಕಿಂತ ಮೊದಲು ನ್ಯಾಯಯುತ ಹಾಗೂ ಸಮಂಜಸವಾದ ಅವಕಾಶವನ್ನು ಹಣಕಾಸು ಸಂಸ್ಥೆಗಳಿಂದ ಒದಗಿಸಲು ಈ ಖಾಸಗಿ ವಿಧೇಯಕ ಮಂಡಿಸಲಾಗಿದೆ.

180 ದಿನಗಳ ಕಾಲಾವಕಾಶ ನೀಡುವ ನೋಟಿಸ್ ಅವಧಿ ಯಲ್ಲಿ ಒಂದು ವೇಳೆ ಸಾಲಗಾರನು ತನಗೆ ಅನ್ವಯವಾಗುವ ಬಡ್ಡಿಯೊಂದಿಗೆ ಬಾಕಿ ಒತ್ತವನ್ನು ಪಾವತಿಸಿ ತಾನು ಅಡಮಾನವಿಟ್ಟ ಚಿನ್ನವನ್ನು ಬಿಡಿಸಿಕೊಳ್ಳಲು ಅವಕಾಶ ನೀಡುವ ಉದ್ದೇಶವನ್ನು ಈ ಖಾಸಗಿ ವಿಧೇಯಕ ಹೊಂದಿದೆ. ಅಲ್ಲದೇ ಸಾಲಗಾರನು ತನಗೆ ಹಣ ನೀಡಿದ ಸಂಸ್ಥೆಗೆ ಕೊನೆಯದಾಗಿ ತಿಳಿಸಿರುವ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ, ಇ-ಮೇಲ್, ಅಥವಾ ಎಸ್‌ಎಂಎಸ್‌ಗಳನ್ನು ಕಳುಹಿಸುವ ಮೂಲಕ ಹರಾಜು ಪ್ರಕ್ರಿಯೆಯ ಮಾಹಿತಿಯನ್ನು ಸಾಲಗಾರನ ಗಮನಕ್ಕೆ ಕಡ್ಡಾಯವಾಗಿ ತರಲು ಈ ವಿಧೇಯಕದಲ್ಲಿ ಮನವಿ ಮಾಡಿದ್ದಾರೆ.

ಹರಾಜು ಪ್ರಕ್ರಿಯೆ ನಿಯಂತ್ರಣ

ಸಾಲಗಾರನು ಅಡಮಾನವಿಟ್ಟ ಚಿನ್ನದ ಹರಾಜನ್ನು ರಾಜ್ಯಸ ಸರ್ಕಾರದಿಂದ ಅನುಮೋದಿತರಾಗಿರುವ ಪರವಾನಗಿ ಪಡೆದ ಹರಾಜುದಾರರ ಮೂಲಕ ಅಥವಾ ಸ್ಥಳೀಯ ತಹಶೀಲ್ದಾರ್, ಮಾತ್ರ ನಡೆಸತಕ್ಕದ್ದು, ಅಲ್ಲದೇ ಸಾಲಗಾರನಿಗೆ ಹರಾಜು ದಿನಾಂಕದ ಮಾಹಿತಿಯನ್ನು 15 ದಿನಗಳ ಮುಂಚಿತವಾಗಿ ನಿಡಲು ವಿಧೇಯಕದಲ್ಲಿ ಹೇಳಲಾಗಿದೆ.

ಪ್ರವಾಸೋದ್ಯಮ ಮೇಳಕ್ಕೆ ಚಾಲನೆ



ಬೆಂಗಳೂರು ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಆರಂಭವಾದ ಮೂರು ದಿನಗಳ ಪ್ರಯಾಣ ಮತ್ತು ಪ್ರವಾಸೋದ್ಯಮ ಮೇಳವನ್ನು (ಟಿಟಿಎಫ್) ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಚಾಲನೆ ನೀಡಿದರು. ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಕೆ.ವಿ.ತ್ರಿಲೋಕಚಂದ್ರ ಇದ್ದರು.

ಪಕ್ಷದ ವರಿಷ್ಠರಿಗೆ ಆಕಾಂಕ್ಷಿಗಳ ಹೆಸರು ರವಾನೆ: ವಿಜಯೇಂದ್ರ

• **ಬೆಂಗಳೂರು:** ಇಂದಿನ ಕೋರ್ ಕಮಿಟಿ ಸಭೆಯಲ್ಲಿ ಮುಂದೆ ಬರುವ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳು ಮತ್ತು ಆಕಾಂಕ್ಷಿಗಳ ಬಗ್ಗೆ ಚರ್ಚೆ ನಡೆದಿದೆ. ಕೋರ್ ಕಮಿಟಿಯಲ್ಲಿ ಚರ್ಚಿಸಿದ



ಹೆಸರುಗಳನ್ನು ಪಕ್ಷದ ವರಿಷ್ಠರಿಗೆ ಕಳುಹಿಸಿಕೊಡುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯ ಕೋರ್ ಕಮಿಟಿ ಸಭೆಯು ಇಂದು ನಡೆದಿದೆ. ಕರ್ನಾಟಕ ರಾಜ್ಯ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗ್ರವಾಲ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಪ್ರತಿಪಕ್ಷ ನಾಯಕರು ಮತ್ತು ಎಲ್ಲ ಕೋರ್ ಕಮಿಟಿ ಸದಸ್ಯರು ಭಾಗವಹಿಸಿದ್ದರು ಎಂದರು. ವಿಧಾನಪರಿಷತ್ ಚುನಾವಣೆಗೆ ಅಭ್ಯರ್ಥಿಗಳ ಹೆಸರು ಘೋಷಿಸಿದ್ದೇವೆ. ವಿಧಾನಸಭೆ, ವಿಧಾನಪರಿಷತ್ ಚುನಾವಣೆಯ ಅಭ್ಯರ್ಥಿಗಳನ್ನು ಗೆಲ್ಲಿಸುವ ನಿಟ್ಟಿನಲ್ಲಿ ನಾವೆಲ್ಲ ಒಂದಾಗಿ, ಒಟ್ಟಾಗಿ ಪ್ರಯತ್ನ ಮಾಡಬೇಕು; ಸಂಪೂರ್ಣ ಶ್ರಮ ಹಾಕಬೇಕೆಂದು ಈ ಸಭೆಯಲ್ಲಿ ತೀರ್ಮಾನ ಆಗಿದೆ ಎಂದು ತಿಳಿಸಿದರು.

ಪ್ರಲ್ಹಾದ್ ಜೋಶಿ, ಗೋವಿಂದ ಕಾರಜೋಳ ಮತ್ತು ನಾನು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಎಲ್ಲ ಆಕಾಂಕ್ಷಿಗಳು, ಪಕ್ಷದ ಪ್ರಮುಖರ ಜೊತೆ ಕುಳಿತು ಚರ್ಚಿಸಿ ಹಿಂದೆ ಆಗಿದ್ದನ್ನು ಮರೆತು, ಬದಿಗಿಟ್ಟು ನಾವೆಲ್ಲ ಒಟ್ಟಾಗಿ ಚುನಾವಣೆಯಲ್ಲಿ ಗೆಲ್ಲಲು ಶ್ರಮ ಹಾಕಬೇಕೆಂದು ಆ ಸಭೆ ನಡೆಸಿದ್ದೇವೆ ಎಂದು ಹೇಳಿದರು. ಒಟ್ಟಾರೆಯಾಗಿ ಕೋರ್ ಕಮಿಟಿಯಲ್ಲಿ ಚರ್ಚೆಯಾದ ಪ್ರಕಾರ ಹೆಸರುಗಳನ್ನು ಇವತ್ತು ಅಥವಾ ನಾಳೆ ದಿಲ್ಲಿಗೆ ಕಳಿಸಿಕೊಡುತ್ತೇವೆ. ಅಸಮಾಧಾನಿತರಿಗೆ ಏನು ಹೇಳಬೇಕೋ ಅದನ್ನು ನಾಲ್ಕು ಗೋಡೆ ಮಧ್ಯೆ ಹೇಳಿದ್ದೇವೆ. ಎಲ್ಲರನ್ನೂ ಕೂರಿಸಿ ಮಾತನಾಡಿದ್ದೇವೆ ಎಂದರು.

ಕಿರುಸುದ್ದಿ

ಆದ್ಯತೆ ಮೇರೆಗೆ ಇ-ಸ್ವತ್ತು

• **ವಿಧಾನಸಭೆ:** ಇ-ಆಸ್ತಿ ತಂತ್ರಾಂಶದಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಬಗೆಹರಿಸಲಾಗುತ್ತಿದೆ. ಸ್ವತ್ತಿನ ಮಾಲೀಕರು ಇ-ಖಾತಾ ಕೋರಿ ಕರ್ನಾಟಕ ಒನ್ ಹಾಗೂ ಸಿಟಿಜನ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವ ಬೈರತಿ ಸುರೇಶ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಜ್ಯೋತಿ ಗಣೇಶ್ ಜಿ.ಬಿ ಅವರು



ಇ-ತಂತ್ರಾಂಶದಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಆಸ್ತಿಯ ಮಾಲೀಕರಿಗೆ ಇ-ಸ್ವತ್ತು ಖಾತೆ ಮಾಡಿಕೊಡಲು ಕೋರಿದರು. ಇದಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ತಿದ್ದುಪಡಿಯಂತೆ 2024ರ ಸೆಪ್ಟೆಂಬರ್ 10ರ ಮೊದಲು ಅನಧಿಕೃತವಾಗಿ ರಚಿತವಾದ ಸ್ವತ್ತುಗಳಿಗೆ ಮಾತ್ರ ಖಾತಾ ನೀಡಲು ಇ-ಆಸ್ತಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಒಟ್ಟು ಎಸ್ಟೇಟ್ ನಿವೇಶನ ಅಥವಾ ಸ್ವತ್ತಿನ ಪೂರ್ಣ ಆಸ್ತಿಯನ್ನು ನಮೂದಿಸಲು ಅವಕಾಶವಿದೆ. ಕ್ರಯಪತ್ರದಲ್ಲಿರುವಂತೆ ಆಸ್ತಿಯನ್ನು ತಂತ್ರಾಂಶದಲ್ಲಿ ನಮೂದು ಮಾಡಬೇಕು. ಸ್ವತ್ತು ಎಂದರೆ ಖಾಲಿ ಭೂಮಿ ಅಥವಾ ಕಟ್ಟಡ ಎರಡೂ ಒಳಗೊಂಡಿರುತ್ತದೆ ಎಂದರು.

ಹಂತ ಹಂತವಾಗಿ ತೋಟಗಾರಿಕಾ ಮಹಾವಿದ್ಯಾಲಯಗಳ ಸ್ಥಾಪನೆ

• **ವಿಧಾನಸಭೆ:** ಕರ್ನಾಟಕ ರಾಜ್ಯದಲ್ಲಿ ಹಂತ ಹಂತವಾಗಿ ತೋಟಗಾರಿಕಾ ಮಹಾವಿದ್ಯಾಲಯಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಷಡಕ್ಷರಿ ಅವರು ತುಮಕೂರು ಜಿಲ್ಲೆ ತಿಪಟೂರಿನಲ್ಲಿ ತೋಟಗಾರಿಕೆ ಮಹಾವಿದ್ಯಾಲಯದ



ಅವಶ್ಯಕತೆ ಇದೆ. ಇದಕ್ಕಾಗಿ ಸರ್ಕಾರ ಸರ್ಕಾರ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ಕ್ರಮ ವಹಿಸ ಬೇಕೆಂದು ಕೋರಿದರು. ಇದಕ್ಕೆ ಉತ್ತರಿಸಿದ ಸಚಿವರು, ಹೊಸ ತೋಟಗಾರಿಕೆ ಮಹಾವಿದ್ಯಾಲಯಗಳನ್ನು ಸ್ಥಾಪಿಸಲು ಇರುವ ಸಾಧಕ-ಬಾಧಕಗಳನ್ನು ಪರಿಶೀಲಿಸಲು ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾ ಲಯದ ವಿಶ್ರಾಂತ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ತಿಪಟೂರು ತಾಲೂಕಿನ ಬಿದರೆಗುಡಿಕಾವಲಿ ನಲ್ಲಿ ತೋಟಗಾರಿಕೆ ಮಹಾವಿದ್ಯಾಲಯ ಸ್ಥಾಪಿಸುವುದು ಸೇರಿದಂತೆ ರಾಜ್ಯದ ವಿವಿಧ ಸ್ಥಳಗಳಲ್ಲಿ ತೋಟಗಾರಿಕೆ ಮಹಾವಿದ್ಯಾಲಯಗಳನ್ನು ಸ್ಥಾಪಿಸುವ ಬಗ್ಗೆ ಈ ಸಮಿತಿ ವಿವಿಧ ಆಯಾಮಗಳನ್ನು ಪರಿಶೀಲಿಸಿ ವರದಿ ನೀಡಿದೆ ಎಂದು ಸಚಿವರು ತಿಳಿಸಿದರು.

ಕಲಬುರಗಿಯಲ್ಲಿ ಶೀತಲೀಕರಣ ಘಟಕ: ಸಚಿವ

• **ವಿಧಾನಸಭೆ:** ಕಲಬುರಗಿ ಜಿಲ್ಲೆಯ ಆಳಂದ ಅಥವಾ ಕಲಬುರಗಿಯಲ್ಲಿ ಶೀತಲೀಕರಣ ಘಟಕಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಅನುದಾನದ ಲಭ್ಯತೆಯನುಸಾರ ಸ್ಥಳೀಯ ಎಪಿಎಂಸಿ ಜತೆ ಚರ್ಚಿಸಿ ಘಟಕ ಸ್ಥಾಪನೆ ಮಾಡುವ ಬಗ್ಗೆ ತೀರ್ಮಾನಿಸಲಾಗುವುದು ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಲಬುರಗಿ ಜಿಲ್ಲೆಯಲ್ಲಿ 13624 ಮೆ.ಟನ್ ಸಾಮರ್ಥ್ಯವುಳ್ಳ 4 ಶಿಥಲೀಕರಣ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ ಯೋಜನೆಯಲ್ಲಿ ನಿರ್ಮಿಸಲು ಉತ್ತೇಜನ ನೀಡಲಾಗುತ್ತಿದೆ ಎಂದರು.

915 ಎಕರೆ ಸರ್ಕಾರ ಭೂಸ್ವಾಧೀನ: ಸಚಿವ ಎಂ.ಬಿ. ಪಾಟೀಲ್

ವಿಮಾನ ನಿಲ್ದಾಣ ನಿರ್ಮಾಣ

• **ವಿಧಾನಸಭೆ:** ಬಳ್ಳಾರಿ, ಹೊಸಪೇಟೆ, ಹಂಪಿ, ಆನೆಗೊಂದಿ, ಸಂಡೂರು, ಕೊಪ್ಪಳ, ಕುರುಗೋಡು, ಸಿರುಗುಪ್ಪ ಮುಂತಾದ ಭಾಗಗಳಿಗೆ ಅನುಕೂಲವಾಗುವಂತೆ ವಿಮಾನ ನಿಲ್ದಾಣ ಬರಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ವಿಷಯ ಪ್ರಸ್ತಾಪಿಸಿ, 2010ರಲ್ಲಿ ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಜಾಗ ಗುರುತಿಸಿ 915 ಎಕರೆಯನ್ನು ಸರ್ಕಾರ ಭೂಸ್ವಾಧೀನ ಮಾಡಿದೆ. ಆದರೆ, 15 ವರ್ಷಗಳಾದರೂ ಇನ್ನೂ ವಿಮಾನ ನಿಲ್ದಾಣ ನಿರ್ಮಿಸಿಲ್ಲ. ಆ ಜಾಗವನ್ನು ಕೇಂದ್ರ ಸರ್ಕಾರಕ್ಕೆ ಹಸ್ತಾಂತರಿಸಿದರೆ 750 ಕೋಟಿ ರೂ. ವೆಚ್ಚದಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಅದು ತಯಾರಿದೆ ಎಂದು ಹೇಳಿದರು.

ಇದಕ್ಕೆ ಉತ್ತರಿಸಿದ ಸಚಿವ ಎಂ.ಬಿ. ಪಾಟೀಲ ಅವರು, ಬಳ್ಳಾರಿ ವಿಮಾನ ನಿಲ್ದಾಣದಿಂದ ಆ ಜಿಲ್ಲೆಯ ಜೊತೆಗೆ ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಜನರಿಗೂ ಪ್ರಯೋಜನ ಆಗಬೇಕು. ಬಳ್ಳಾರಿ ವಿಮಾನ ನಿಲ್ದಾಣದಿಂದ ನೆರೆಯ ಆಂಧ್ರಪ್ರದೇಶಕ್ಕೂ ಲಾಭವಾಗಲಿದೆ. ಈ ಯೋಜನೆಯ ಸಂಬಂಧ ಸದ್ಯದಲ್ಲೇ ಮೂರೂ ಜಿಲ್ಲೆಗಳ ಜನಪ್ರತಿನಿಧಿಗಳ ಸಭೆ ಕರೆದು, ಸಿಎಂ ಅಧ್ಯಕ್ಷತೆಯಲ್ಲಿ ಸಾಧಕ-ಬಾಧಕಗಳನ್ನು ಯೋಚಿಸಲಾಗುವುದು ಎಂದರು.

ಈಗ ಹೊಸದಾಗಿ ಗುರುತಿಸಿರುವ ಸ್ಥಳ ಬಳ್ಳಾರಿಯಿಂದ 19 ಕಿ.ಮೀ. ದೂರದಲ್ಲಿದೆ. ಅಲ್ಲಿಂದ ಹೊಸಪೇಟೆಗೆ 33 ಕಿ.ಮೀ., ಹಂಪಿಗೆ 26 ಕಿ.ಮೀ, ಸಂಡೂರಿಗೆ 33 ಕಿ.ಮೀ., ಕೊಪ್ಪಳಕ್ಕೆ 75 ಕಿ.ಮೀ., ಕುರುಗೋಡಿಗೆ 14 ಕಿ.ಮೀ., ತೋರಣಗಲ್ಲಿಗೆ 13 ಕಿ.ಮೀ. ಮತ್ತು ಸಿರುಗುಪ್ಪಕ್ಕೆ 43 ಕಿ.ಮೀ. ಆಗಲಿದೆ. ಆದರೆ, ಈಗ ಗುರುತಿಸಿರುವ ಜಾಗವು ವಿಮಾನ ನಿಲ್ದಾಣಕ್ಕೆ ಎಷ್ಟರ ಮಟ್ಟಿಗೆ ಸೂಕ್ತ ಎನ್ನುವುದನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ತೀರ್ಮಾನಿಸಬೇಕು. ಇದು ಕಾರ್ಯಸಾಧ್ಯ ಎನಿಸಿದರೆ ಎಲ್ಲ ಜನಪ್ರತಿನಿಧಿಗಳ ಜತೆ ಚರ್ಚಿಸಿ ಮುಂದಿನ ಹೆಜ್ಜೆ ಇಡಲಾಗುವುದು ಎಂದು ವಿವರಿಸಿದರು.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗುತ್ತಿದ್ದು ವಿಮಾನ ನಿಲ್ದಾಣ ನಿರ್ಮಿಸುವಾಗಲೇ ದೂರದೃಷ್ಟಿ ಇರಬೇಕು. ಇಲ್ಲದಿದ್ದರೆ ಹುಬ್ಬಳ್ಳಿ, ಬೆಳಗಾವಿ, ಬೀದರ್ ಇಲ್ಲೆಲ್ಲ ಆಗಿರುವ ತಪ್ಪುಗಳೇ ಮುಂದುವರಿಯುತ್ತವೆ. ಬೆಳಗಾವಿ ಮತ್ತು ಹುಬ್ಬಳ್ಳಿ ವಿಮಾನ ನಿಲ್ದಾಣದ ಮಧ್ಯೆ ಕೇವಲ 70 ಕಿ.ಮೀ. ಅಂತರವಿದೆ. ಇವೆರಡೂ ಜಿಲ್ಲೆಗಳಿಗೆ ಅನುಕೂಲವಾಗುವ ಹಾಗೆ ನಡುವೆ ನಿಲ್ದಾಣ ನಿರ್ಮಿಸಿದ್ದರೆ ಪ್ರಯಾಣಿಕರ ದಟ್ಟಣೆ ಪರಿಗಣಿಸಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಘೋಷಿಸುತ್ತಿದ್ದರು. ಬೆಳಗಾವಿಯಲ್ಲಿ ಭಾರತೀಯ ವಾಯುಪಡೆ ಇರುವುದು ನಮ್ಮ ಪ್ರಯೋಜನಕ್ಕೆ ಬಂದಿದೆ ಎಂದವರು ಹೇಳಿದರು.

ವಿಜಯಪುರದಲ್ಲೂ ಇದೇ ತಪ್ಪಾಗಿದೆ. ಈಗ ಉದ್ಘಾಟನೆಗೆ ಸಜ್ಜಾಗಿರುವ ವಿಮಾನ ನಿಲ್ದಾಣ ಕಲಬುರಗಿ ರಸ್ತೆಯಲ್ಲಿದೆ. ಅದರ ಬದಲು ಆಲಮಟ್ಟಿ ಕಡೆಗೆ ಮಾಡಿದ್ದರೆ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬಾಗಲಕೋಟೆ ಮುಂತಾದ ಸ್ಥಳಗಳಿಗೆ ಪ್ರಯೋಜನ ಸಿಗುತ್ತಿತ್ತು. ವಿಮಾನ ನಿಲ್ದಾಣ ನಿರ್ಮಿಸಿದ ನಂತರ ಅದು ಸ್ತಬ್ಧವಾದರೆ ಪ್ರಯೋಜನವೇನು? ಹೀಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಕೆಐಎಡಿಬಿಯಿಂದ 800 ಮತ್ತು 1,200 ಎಕರೆ ಇರುವ ಎರಡು ಹೊಸ ತಾಣಗಳನ್ನು ನೋಡಲಾಗಿದೆ ಎಂದು ತಿಳಿಸಿದರು.

ಉಡಾನ್ ಯೋಜನೆ ವಿಸ್ತರಣೆಗೆ ಪ್ರಸ್ತಾವ

ಜಿಲ್ಲಾ ಮತ್ತು ವಿಭಾಗೀಯ ಮಟ್ಟದ ಕೇಂದ್ರಗಳಲ್ಲಿರುವ ವಿಮಾನ ನಿಲ್ದಾಣಗಳು ಇಡೀ ದೇಶದಲ್ಲಿ ತೊಂದರೆ ಎದುರಿಸುತ್ತಿವೆ. ರಾಜ್ಯದ ಬೀದರ್ ವಿಮಾನ ನಿಲ್ದಾಣ ಸದ್ಯಕ್ಕೆ ಕೆಕೆಆರ್‌ಡಿಬಿ ನೆರವಿನಿಂದ ನಡೆಯುವಂತಾಗಿದೆ. ಆದ್ದರಿಂದ ರೀಜನಲ್ ಕನೆಕ್ಟಿವಿಟಿ ವಿಮಾನ ನಿಲ್ದಾಣ ಕೂಡ ಕಾರ್ಯಾಚರಣೆ ಮಾಡಬೇಕೆನ್ನುವ ಬೇಡಿಕೆ ಬಂದಿದ್ದು,



ಅದನ್ನು ಮಾಡುತ್ತೇವೆ. ಹೀಗಾಗಿ ಉಡಾನ್ ಯೋಜನೆಯನ್ನು 3ರಿಂದ 5 ವರ್ಷಗಳಿಗೆ ವಿಸ್ತರಿಸಬೇಕು. ನಂತರದ ಐದು ವರ್ಷಗಳ ಕಾಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 50:50 ಅನುಪಾತದಲ್ಲಿ ನಿರ್ವಹಿಸಬೇಕು ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವರ ಬಳಿ ನಾನು ಪ್ರಸ್ತಾಪ ಇಟ್ಟಿದ್ದೇನೆ. ಅಲ್ಲದೇ ಕರ್ನಾಟಕದಲ್ಲಿ ವಿಮಾನ ಯಾನ ನೀತಿ ತರುವುದಕ್ಕೆ ತಯಾರಿ ನಡೆಸಲಾಗುತ್ತಿದೆ ಎಂದು ಎಂ.ಬಿ. ಪಾಟೀಲ ತಿಳಿಸಿದರು.

ಬಜೆಟ್‌ನಲ್ಲಿ ಮನೆ ಘೋಷಣೆ ಇಲ್ಲ: ಶಾಸಕ ಸುರೇಶ ಗೌಡ

• **ವಿಧಾನಸಭೆ:** ಕಳೆದ ಮೂರು ವರ್ಷಗಳಲ್ಲಿ ಆಶ್ರಯ ಯೋಜನೆಯಡಿ ಜನರಿಗೆ ಒಂದೇ ಒಂದು ಮನೆ, ನಿವೇಶನ ನೀಡಿಲ್ಲ. ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಕೋಸ್ಟಲ್ ಟೂರಿಸಂ ಕಾರಿಡಾರ್ ನಿರ್ಮಾಣ ಮಾಡಬೇಕೆ ಬಗ್ಗೆ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿಯೇ ಇಲ್ಲ ಎಂದು ಬಿಜೆಪಿ ಶಾಸಕ ಸುರೇಶ ಗೌಡ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಈ ಬಾರಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೇವಲ 10.50 ಕೋಟಿ ರೂ. ಅನುದಾನ ಒದಗಿಸಿದೆ. ಇದು ಆನೆ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ ಎನ್ನುವಂತಾಗಿದೆ. ಈ ಹಿನ್ನೆಲೆಯಲ್ಲಿ ಕನಿಷ್ಠ 200 ಕೋಟಿ ರೂ. ಒದಗಿಸಬೇಕು. ಈ ಭಾಗದ ಜನರ ಜೀವನಾಡಿಯಾಗಿರುವ ಮತ್ಸ್ಯೋದ್ಯಮಕ್ಕೂ ನಿರೀಕ್ಷಿತ ಅನುದಾನ ಸಿಕ್ಕಿಲ್ಲ. ಮತ್ಸ್ಯಾಶ್ರಯ ಯೋಜನೆ ನೀಡುವ 1.20 ಲಕ್ಷ ರೂ. ಯಾವುದಕ್ಕೂ ಸಾಲದು. ಪ್ರತಿ ಕುಟುಂಬಕ್ಕೆ ಕನಿಷ್ಠ 5 ಲಕ್ಷ ರೂ. ಒದಗಿಸಬೇಕು.

ಉತ್ತರ ಕರ್ನಾಟಕದಿಂದ ವಲಸೆ ಬರುವ ಕಾರ್ಮಿಕರ ಮಕ್ಕಳ ಅನುಕೂಲಕ್ಕಾಗಿ ನಮ್ಮ ಭಾಗದಲ್ಲಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗ ಗಳ ವಸತಿ ಶಾಲೆಗಳ ನಿರ್ಮಾಣಕ್ಕೆ ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಬಡವರಿಗೆ ಒಂದೇ ಒಂದು ಆಶ್ರಯ ಮನೆ, ನಿವೇಶನ ಒದಗಿಸಿಲ್ಲ. ಗ್ರಾಮೀಣ ಜನರಿಗೆ ನೀರೊದಗಿಸುವ ಜೆಜೆಎಂ ಯೋಜನೆ ಸತ್ತುಹೋಗಿದೆ. ಶಾಸಕರು ಕ್ಷೇತ್ರದಲ್ಲಿ ತಲೆ ಎತ್ತಿಕೊಂಡು ತಿರುಗಾಡದ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ಅಸಹಾಯಕತೆಯನ್ನು ತೋಡಿಕೊಂಡ ಅವರು, ಕಳೆದ 3 ವರ್ಷಗಳಲ್ಲಿ ಘೋಷಿಸಿರುವ ಎಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ ಎಂಬುದನ್ನು ಸರ್ಕಾರ ಸದನಕ್ಕೆ ತಿಳಿಸಬೇಕು ಎಂದು ಸವಾಲು ಹಾಕಿದರು.



ವಿವಿಧ ದೇಶಗಳು ಕಡಲ ತೀರದಲ್ಲಿ ಸೃಷ್ಟಿಸಿರುವ ಪ್ರವಾಸೋದ್ಯಮ ಮಾದರಿಯಲ್ಲಿ ಮಂಗಳೂರು, ಉಡುಪಿ ಸೇರಿದಂತೆ ಕರಾವಳಿ ಭಾಗದಲ್ಲಿ 320 ಕಿ.ಮೀ. ಉದ್ದಕ್ಕೂ ಪ್ರವಾಸೋದ್ಯಮವನ್ನು ಉತ್ತೇಜಿಸಬೇಕು. ಪಿಪಿಪಿ ಮಾದರಿಯಲ್ಲಿ ಹೋಟೆಲ್, ರೆಸಾರ್ಟ್ ಹಾಗೂ ಹೋಂ ಸ್ಟೇಗಳನ್ನು ಸೃಷ್ಟಿಸಬೇಕು. ಆದ್ದರಿಂದ ಕೋಸ್ಟಲ್ ಟೂರಿಸಂ ರೂಪಿಸಬೇಕು.

■ **ಸುರೇಶ ಗೌಡ, ಬಿಜೆಪಿ ಶಾಸಕ**

ವೈದ್ಯರ ವರ್ಗಾವಣೆಗೆ ಸದಸ್ಯರ ಆಕ್ರೋಶ

• **ವಿಧಾನಸಭೆ:** ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯರ ವರ್ಗಾವಣೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ವಿಲೀನಗೊಳಿಸುವುದರ ವಿರುದ್ಧ ಪಕ್ಷಭೇದ ಮರೆತು ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪ್ರಶೋತ್ತರದ ಬಳಿಕ ಜೆಡಿಎಸ್ ಶಾಸಕಿ ಶಾರದಾ ಪೂರ್ಯಾ ನಾಯಕ್, ಶಿವಮೊಗ್ಗದಲ್ಲಿ ಸಮುದಾಯ ಆರೋಗ್ಯ ಕೇಂದ್ರದಲ್ಲಿದ್ದ ತಜ್ಞ ವೈದ್ಯರನ್ನು ತಾಲೂಕು ಆಸ್ಪತ್ರೆಗಳಿಗೆ ವರ್ಗಾವಣೆ ಮಾಡಲಾಗಿದೆ. ಹೀಗಾಗಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸರಿಯಾದ ಚಿಕಿತ್ಸೆ ಲಭಿಸುತ್ತಿಲ್ಲ. ವೈದ್ಯರನ್ನು ತಕ್ಷಣ ಕರ್ತವ್ಯದಿಂದ ಬಿಡುಗಡೆಯಾಗಿ ನಿಯೋಜಿಸಲಾದ ಸ್ಥಳದಲ್ಲಿ ವರದಿ ಮಾಡಿಕೊಳ್ಳುವಂತೆ ಬೆಂಗಳೂರಿನಿಂದ ಹಿರಿಯ ಅಧಿಕಾರಿಗಳು ಕರೆ ಮಾಡಿ, ಒತ್ತಡ ಹೇರುತ್ತಿದ್ದಾರೆ. ಈ ಬಗ್ಗೆ ಈ ಮೊದಲು ವಿಧಾನಸಭೆಯಲ್ಲಿ ಚರ್ಚಿಸಲಾಗಿತ್ತು. ಅರ್ಧ ತಾಸು ವಿಸ್ತೃತ ಚರ್ಚೆಗೆ ಅವಕಾಶ ನೀಡುವುದಾಗಿ ಸಭಾಧ್ಯಕ್ಷರು ಭರವಸೆ ನೀಡಿದ್ದರು. ಆದರಂತೆ ಈಗಾಗಲೇ ಚರ್ಚೆಗೆ ಅವಕಾಶ ನೀಡಿ ಎಂದು ಪಟ್ಟು ಹಿಡಿದರು.

ಇದಕ್ಕೆ ಬಿಜೆಪಿ ಶಾಸಕರಾದ ಸುನೀಲ್ ಕುಮಾರ್, ಚನ್ನಬಸಪ್ಪ, ಆರಗ ಜ್ಞಾನೇಂದ್ರ, ಕಾಂಗ್ರೆಸ್ ಶಾಸಕ ಅಶೋಕ್ ಕುಮಾರ್ ರೈ ಸೇರಿದಂತೆ ಹಲವಾರು ಮಂದಿ ಧ್ವನಿಗೂಡಿಸಿದರು. ಒಂದು ಹಂತದಲ್ಲಿ ಎಲ್ಲಾ ಶಾಸಕರು ಗದ್ದಲ ಮಾಡಿ ವೈದ್ಯರ ವರ್ಗಾವಣೆಯನ್ನು ಹಿಂಪಡೆಯಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮುಚ್ಚುವ ನಿರ್ಧಾರ ಕೈಬಿಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಸ್ವಯಂ ಪ್ರೇರಿತ ಹೇಳಿಕೆ ನೀಡಿ, ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ವೈದ್ಯರ ವರ್ಗಾವಣೆ ಮಾಡಬಾರದು ಎಂದು ಮುಖ್ಯಮಂತ್ರಿ ಅವರು ಸೂಚನೆ ನೀಡಿದ್ದಾರೆ ಎಂದರೂ ಸದಸ್ಯರು ಗದ್ದಲ ನಿಲ್ಲಿಸಲಿಲ್ಲ.

ಗೃಹ ಸಚಿವ ಪರಮೇಶ್ವರ್ ಮಧ್ಯ ಪ್ರವೇಶ ಮಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಲೀನದ ಬಗ್ಗೆ ಸಂಪುಟದಲ್ಲಿ ಚರ್ಚೆಗಳಾಗಿವೆ. ಒಂದು ವೇಳೆ ವೈದ್ಯರ ವರ್ಗಾವಣೆಯಾಗಿದ್ದರೆ ಅವರನ್ನು ಮರಳಿ ಕೆಲಸ ನಿರ್ವಹಿಸುತ್ತಿದ್ದ ಸ್ಥಳಕ್ಕೆ ವಾಪಸ್ ಕಳುಹಿಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಯವರು, ಆರೋಗ್ಯ ಸಚಿವರಿಗೆ ಸೂಚನೆ ನೀಡಿದ್ದಾರೆ. ತಾಲೂಕು ಆಸ್ಪತ್ರೆಗಳಲ್ಲಿ ಪ್ರಸೂತಿ ಮತ್ತು ಮಕ್ಕಳ ಆರೋಗ್ಯಕ್ಕೆ ಒತ್ತು ನೀಡುವ ಸಲುವಾಗಿ ತಜ್ಞ ವೈದ್ಯರನ್ನು ಪುನರ್ ನಿಯೋಜನೆ ಮಾಡುತ್ತಿರುವುದಾಗಿ ಆರೋಗ್ಯ ಸಚಿವರು ವಿವರಣೆ ನೀಡಿದ್ದಾರೆ. ಸದ್ಯಕ್ಕೆ ಅದ್ಯಾವುದನ್ನು ಮಾಡದಂತೆ ಮುಖ್ಯಮಂತ್ರಿ ತಿಳಿಸಿದ್ದಾರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಸೇವೆ ಮುಂದುವರಿಯಲಿದೆ ಎಂದು ತಿಳಿಸಿದರು.

ಸದಸ್ಯರು ಇದನ್ನು ಒಪ್ಪದೆ ವರ್ಗಾವಣೆ ಆದೇಶವಾಗಿರುವ ವೈದ್ಯರು ಬೇರೆಡೆ ಕರ್ತವ್ಯಕ್ಕೆ ವರದಿ ಮಾಡಿಕೊಂಡರೆ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸಮಸ್ಯೆಯಾಗುತ್ತದೆ ಎಂದು ಪ್ರತಿಪಾದಿಸಿದರು. ಕೊನೆಗೆ ಸಭಾಧ್ಯಕ್ಷರು ಮಧ್ಯಪ್ರವೇಶಿಸಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಲೀನವನ್ನು ಕೈ ಬಿಡಲು ಮತ್ತು ವೈದ್ಯರ ವರ್ಗಾವಣೆಯನ್ನು ಸ್ಥಗಿತಗೊಳಿಸಲು ಮುಖ್ಯಮಂತ್ರಿ ಸಂಪುಟದಲ್ಲಿ ಸೂಚಿಸಿರುವುದಾಗಿ ಸಚಿವರು ಹೇಳುತ್ತಿದ್ದಾರೆ. ಸದ್ಯಕ್ಕೆ ಎಲ್ಲವೂ ಯಥಾ ಸ್ಥಿತಿಯಲ್ಲಿರಲಿದೆ ಎಂದರು.

20 ಎಕರೆಯಲ್ಲಿ ಆಧುನಿಕ ಹೂವಿನ ಮಾರುಕಟ್ಟೆ

• **ವಿಧಾನಸಭೆ:** ಚಿಕ್ಕಬಳ್ಳಾಪುರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯಾಪ್ತಿಯ 20 ಎಕರೆಯಲ್ಲಿ ಆಧುನಿಕ, ಸುಸಜ್ಜಿತ ಹೂವಿನ ಮಾರುಕಟ್ಟೆ ಸ್ಥಾಪಿಸಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಶರತ್ ಬಚ್ಚೇಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ಎಂಪಿಎಂಸಿ ಮಾರುಕಟ್ಟೆ ಪ್ರಾಂಗಣದಲ್ಲಿರುವ ಜಮೀನಿನಲ್ಲಿ ಹೂವಿನ ಮಾರುಕಟ್ಟೆ ಅಭಿವೃದ್ಧಿಪಡಿಸುವ ಯೋಜನಾ ವರದಿ ತಯಾರಿಸಲಾಗಿದ್ದು, ಸದ್ಯದಲ್ಲೇ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಈ ಸಾಲಿನ ಬಜೆಟ್ ಭಾಷಣದಲ್ಲಿ ಚಿಕ್ಕಬಳ್ಳಾಪುರದಲ್ಲಿ ಹೂವಿನ ಮಾರುಕಟ್ಟೆ ಪ್ರಸ್ತಾವನೆ ಮಾಡಲಾಗಿದ್ದು, ಸುಮಾರು 20 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಇದಾದ ಬಳಿಕ ಹೊಸಕೋಟೆಯಲ್ಲಿ ಹೂವಿನ ಮಾರುಕಟ್ಟೆ, ಶೈತ್ಯಾಗಾರ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಒಂದು ಕಾಲದಲ್ಲಿ ನಾವು ಹೊರ ದೇಶಗಳಿಂದ ಪುಷ್ಪಗಳನ್ನು ಆಮದು ಮಾಡಿಕೊಳ್ಳುತ್ತಿದ್ದೆವು. ಈಗ ಪುಷ್ಪೋದ್ಯಮ ರಾಜ್ಯದಲ್ಲಿ ದೊಡ್ಡದಾಗಿ ಬೆಳೆದಿದ್ದು, ಪುಷ್ಪಗಳನ್ನು ರಫ್ತು ಮಾಡುವಷ್ಟು ಶಕ್ತಿ ಬಂದಿದೆ. ಸುಮಾರು 37 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಪುಷ್ಪ ಕೃಷಿ ಮಾಡಲಾಗುತ್ತಿದೆ. ರಾಜ್ಯದಲ್ಲಿ ಹೂವಿಗಾಗಿ ಸ್ವತಂತ್ರ ಮಾರುಕಟ್ಟೆ ಇಲ್ಲ. ಹಾಲಿ ಇರುವ 170 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ, ಇತರೆ ಅಧಿಸೂಚಿತ ಉತ್ಪನ್ನಗಳ ಜೊತೆಗೆ ಹೂವು ಉತ್ಪನ್ನದ ವಹಿವಾಟು ನಿಯಂತ್ರಣವಾಗುತ್ತಿದೆ ಎಂದರು.

ವಾರದಲ್ಲಿ ಸಿಲಿಂಡರ್ ಸಮಸ್ಯೆಗೆ ಪರಿಹಾರ: ಸಚಿವ ಮುನಿಯಪ್ಪ

• **ವಿಧಾನಪರಿಷತ್:** ಹೋಟೆಲ್‌ಗಳಿಗೆ ಸಿಲಿಂಡರ್ ಪೂರೈಸಲು ಸದ್ಯದ ಮಟ್ಟಿಗೆ ದಾಸ್ತಾನಿಲ್ಲ. ಒಂದು ವಾರದಲ್ಲಿ ಸಮಸ್ಯೆ ಪರಿಹಾರವಾಗುವ ವಿಶ್ವಾಸವಿದೆ. 10 ದಿನಗಳವರೆಗೆ ಮಾಲೀಕರು ತಾಳ್ಮೆಯಿಂದ ಇರಬೇಕಾಗುತ್ತದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು. ಶೂನ್ಯ ವೇಳೆಯಲ್ಲಿ ಕಾಂಗ್ರೆಸ್‌ನ ಐವಾನ್ ಡಿಸೋಜಾ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. ಹೋಟೆಲ್‌ಗಳಿಗೆ ವಾಣಿಜ್ಯ ಗ್ಯಾಸ್ ಸಿಲಿಂಡರ್ ಅನ್ನು ಬೇಡಿಕೆಗೆ ಅನುಗುಣವಾಗಿ ಒದಗಿಸಲು ಸದ್ಯ ಆಗುತ್ತಿಲ್ಲ. ಆದರೆ ಆಸ್ಪತ್ರೆ, ಹಾಸ್ಟೆಲ್, ವಸತಿ ಶಾಲೆಗಳಿಗೆ ಗ್ಯಾಸ್ ಒದಗಿಸಲಾಗುತ್ತದೆ ಎಂದರು.

ವಾಟಾಳ್‌ಗೆ ರಾಜ್ಯೋತ್ಸವ ಪ್ರಶಸ್ತಿ

• **ವಿಧಾನಪರಿಷತ್:** ಕರ್ನಾಟಕದಲ್ಲಿ ನೆಲ, ಜಲ, ಭಾಷೆಯ ಸಂರಕ್ಷಣೆಗೆ ಹೋರಾಟ ಮಾಡುವ ಸಂಘ ಸಂಸ್ಥೆಗಳಿಗೆ ಆರ್ಥಿಕ ಶಕ್ತಿ ಮತ್ತು ಇತರೆ ಸಂಪನ್ಮೂಲಗಳನ್ನು ನೀಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಆದರೆ, ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕಾಗಿದ್ದು ನಿಜ. ಈ ವರ್ಷ ಸಮಿತಿಯ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿ ಅವರ ಹೆಸರನ್ನು ಪರಿಗಣಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ತಿಳಿಸಿದರು.

ಶೂನ್ಯವೇಳೆಯಲ್ಲಿ ರಮೇಶ್ ಬಾಬು ಪ್ರಶ್ನೆಗೆ ಉತ್ತರಿಸಿದ ಅವರು, ವಾಟಾಳ್ ನಾಗರಾಜ್ ಅವರಂತಹ ಹಿರಿಯ ಹೋರಾಟಗಾರರು ಸೇರಿದಂತೆ ಇನ್ನೂ ಅನೇಕರಿಗೆ ಪ್ರಶಸ್ತಿ ನೀಡಬೇಕಿದೆ. ಪ್ರಸಕ್ತ ವರ್ಷ ಸಮಿತಿಯ ಮುಂದೆ ಈ ಪ್ರಸ್ತಾವನೆ ಇರಿಸಲಾಗುವುದು ಎಂದರು.

ಉತ್ತರ ನೀಡಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತಿಲ್ಲ

ಉತ್ತರ ನೀಡುವಲ್ಲಿ ಸರ್ಕಾರ ವಿಫಲ

• **ವಿಧಾನಪರಿಷತ್:** ಸದಸ್ಯರು ಕೇಳಿದ ಹಲವಾರು ಪ್ರಶ್ನೆಗಳಿಗೆ ಇನ್ನೂ ಉತ್ತರವೇ ಬಂದಿಲ್ಲ ಎಂಬ ಸದಸ್ಯ ಭೋಜೇಗೌಡ ಅವರ ಆಕ್ಷೇಪಕ್ಕೆ ಸಹಮತ ವ್ಯಕ್ತಪಡಿಸಿದ ಸಭಾಪತಿ ಬಸವರಾಜ ಹೊರಟ್ಟಿ ಅವರು, ಉತ್ತರ ನೀಡುವಲ್ಲಿ ವಿಫಲವಾದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.



ಉತ್ತರ ನೀಡಲು ವಿಫಲವಾದರೆ ಅಧಿಕಾರಿಗಳ ಮೇಲೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ. ಉತ್ತರ ಕೊಡುವುದಿಲ್ಲ ಎಂದಾದರೂ ಹೇಳಿ ನಾನು ಕೇಳುವುದನ್ನೇ ಬಿಟ್ಟುಬಿಡುತ್ತೇನೆ ಎಂದು ಖಾರವಾಗಿ ನುಡಿದರು. ಆಗ ಸ್ಪಷ್ಟೀಕರಣ ನೀಡಲು ಮುಂದಾದ ಸಭಾನಾಯಕ ಎನ್. ಎಸ್. ಭೋಸರಾಜು ಅವರು, ಈಗಾಗಲೇ ಉತ್ತರಗಳನ್ನು ನಿಯಮಿತವಾಗಿ ಒದಗಿಸಲು ಅಧಿಕಾರಿಗಳಿಗೆ ಮಾಹಿತಿ ನೀಡಿದ್ದೇವೆ. ವಾರದಲ್ಲಿ ಉತ್ತರ ದೊರಕಿಸುತ್ತೇವೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಹೊರಟ್ಟಿ, ಪ್ರತಿ ಬಾರಿಯೂ ಇದನ್ನೇ ಹೇಳುತ್ತೀರಿ, ಉತ್ತರ ಕೊಡಲು ವೈಫಲ್ಯವಾದ ಅಧಿಕಾರಿಗಳ ಮೇಲೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ, ಈ ವಿಷಯವಾಗಿ ವಿಳಂಬ ನೀತಿ ಅನುಸರಿಸುವ ಒಂದಿಬ್ಬರು ಅಧಿಕಾರಿಗಳ ಮೇಲೆ ಮೊದಲು ಕ್ರಮಕೈಗೊಳ್ಳಿ ಎಂದು ಹೇಳಿದರು.

ಪ್ರಾರಂಭದಲ್ಲೇ ಈ ವಿಷಯ ಪ್ರಸ್ತಾಪಿಸಿದ ಸದಸ್ಯ ಭೋಜೆಗೌಡ, ಪ್ರಸಕ್ತ ಅಧಿವೇಶನದಲ್ಲಿ ಸದಸ್ಯರು 740 ಪ್ರಶ್ನೆಗಳನ್ನು ಕೇಳಿದ್ದು ಅದರಲ್ಲಿ 182 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ. ಈ ರೀತಿ ಪ್ರಶ್ನೆಗಳಿಗೆ ಉತ್ತರವೇ ಬರದಿದ್ದರೆ ನಾವು ಪ್ರಶ್ನೆ ಏಕೆ ಕೇಳಬೇಕು ಎಂದು ಅಸಮಧಾನ ಹೊರಹಾಕಿದರು.

ಕಾನೂನು ತೊಡಕಿಲ್ಲದ ಪ್ರಶ್ನೆಗಳಿಗೆ ಉತ್ತರ

ಈ ವೇಳೆ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಎಚ್. ಕೆ. ಪಾಟೀಲ್, ಮಾ.20 ರಂದು ಉತ್ತರ ಬಾಕಿ ಇರುವ ಪ್ರಶ್ನೆಗಳ ಇಲಾಖೆಗಳ ಕಾರ್ಯದರ್ಶಿಗಳ ಜತೆ ಸಭೆ ನಡೆಸಲಾಗುವುದು. ಕಾನೂನು ತೊಡಕಿಲ್ಲದ ಪ್ರಶ್ನೆಗಳಿಗೆ ಮಾ.26ರ ಒಳಗೆಉತ್ತರ ಕೊಡಿಸಲಾಗುವುದು. ಒಂದು ವೇಳೆ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂದಿಸದಿದ್ದರೆ ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸುವುದಾಗಿ ಪಾಟೀಲ್ ಸ್ಪಷ್ಟಪಡಿಸಿದರು.

ಸುಮ್ಮನಿದ್ದೇನೆ ಎಂದರೆ ಅದನ್ನು ನನ್ನ ಬಲಹೀನತೆ ಎಂದು ಭಾವಿಸಬೇಡಿ

ಸದನದಲ್ಲಿ ಸಚಿವರಿಗೆ ವಿಧಾನಸಭಾಧ್ಯಕ್ಷ ಎಚ್ಚರಿಕೆ

• **ವಿಧಾನಸಭೆ:** ಶಾಸಕರು ಕೇಳುವ ಪ್ರಶ್ನೆಗಳಿಗೆ ಉತ್ತರ ಬಾರದಿದ್ದಾಗ ಸೌಮ್ಯವಾಗಿ ಹೇಳುತ್ತೇನೆಂದರೆ ಅದು ನನ್ನ ದೌರ್ಬಲ್ಯವಲ್ಲ. ಸುಮ್ಮನಿದ್ದೇನೆ ಎಂದರೆ ಅದನ್ನು ನನ್ನ ಬಲಹೀನತೆ



ಎಂದು ಭಾವಿಸಬೇಡಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸದನದಲ್ಲಿ ಸರ್ಕಾರ ಮತ್ತು ಸಚಿವರಿಗೆ ಎಚ್ಚರಿಕೆ ನೀಡಿದರು.

ಸದನದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಇಲಾಖೆಗಳಿಂದ ಸರಿಯಾಗಿ ಉತ್ತರ ಬರುತ್ತಿಲ್ಲ ಎಂಬ ಪ್ರತಿಪಕ್ಷ ಸದಸ್ಯರ ಮಾತಿಗೆ ದನಿಗೂಡಿಸಿದ ವಿಧಾನಸಭಾಧ್ಯಕ್ಷರು, ನಾನು ದಿನವೂ ಗಮನಿಸುತ್ತಿದ್ದೇನೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ ಅತಿ ಕಡಿಮೆ ಪ್ರಶ್ನೆಗಳಿಗೆ ಉತ್ತರ ನೀಡಲಾಗುತ್ತಿದೆ. ಇದು ಸರಿಯಲ್ಲ. ನಾನು ಸೌಮ್ಯದಿಂದ ಹೇಳುತ್ತಿದ್ದೇನೆ, ಸುಮ್ಮನಿದ್ದೇನೆ ಎಂದರೆ ಅದನ್ನು ನನ್ನ ಬಲಹೀತನೆ ಎಂಬುದಾಗಿ ಭಾವಿಸಬೇಡಿ ಎಂದು ಸಚಿವರಿಗೆ ನೇರವಾಗಿಯೇ ಹೇಳಿದರು.

ಸದಸ್ಯರು ಉತ್ತರಕ್ಕಾಗಿ ಆಸಕ್ತಿಯಿಂದ ಪ್ರಶ್ನೆ ಕೇಳುತ್ತಾರೆ. ಯಾವುದೇ ಒಂದು ಪ್ರಶ್ನೆ ಕೇಳಿದ ನಂತರ ಉತ್ತರ ಕೊಡಲು 10 ದಿನ ಸಮಯ ಇರುತ್ತದೆ. 10 ದಿನದ ನಂತರವೂ ಉತ್ತರ ಬರುವುದಿಲ್ಲ ಎಂದರೆ ಏನರ್ಥ? ಸದಸ್ಯರು ಪ್ರಶ್ನೆ ಯಾಕೆ ಕೇಳಬೇಕು, ಅಧಿವೇಶನಕ್ಕೆ ಏನು ಅರ್ಥವಿದೆ? ಇದನ್ನೆಲ್ಲ ಕೊನೆಗೊಳಿಸಬೇಕು. ಸದನದಲ್ಲಿ ಕೇಳಿದ ಪ್ರಶ್ನೆಗಳಿಗೆ ಸದಸ್ಯರು ದುಂಬಾಲು ಬೀಳದಿದ್ದರೆ ಒಂದು ವರ್ಷವಾದರೂ ಉತ್ತರ ಬರುವುದಿಲ್ಲ. ಹೀಗಾದರೆ ಹೇಗೆ? ಇದನ್ನು ಗಂಭೀರವಾಗಿ ತೆಗೆದುಕೊಳ್ಳಿ, ಉತ್ತರ ಕೊಡಿ. ಅಧಿಕಾರಿಗಳನ್ನು ಕರೆಸಿ ಸೂಚನೆ ನೀಡಿ, ಪರಿಶೀಲನೆ ನಡೆಸಿ ಎಲ್ಲಾ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಬರುವಂತೆ ನೋಡಿಕೊಳ್ಳಿ ಎಂದು ತಾಕೀತು ಮಾಡಿದರು.

ಸದನದಲ್ಲಿ ಇದುವರೆಗೂ ಉತ್ತರ ಬಾರದ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಸಂಬಂಧ ಉಪಸಭಾಧ್ಯಕ್ಷರ ನೇತೃತ್ವದಲ್ಲಿ ಸಮಿತಿ ರಚಿಸಿದ್ದೇನೆ. ಸೋಮವಾರ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಉತ್ತರಗಳು ಬಾಕಿ ಇವೆ ಎಂಬುದನ್ನು ಸದನದ ಮುಂದಿಡುತ್ತೇನೆ. ಉತ್ತರ ಕೊಡಲಾಗದಿದ್ದರೆ ಯಾವಾಗ ಉತ್ತರ ಕೊಡಲು ಸಾಧ್ಯ ಎಂಬುದನ್ನು ಪ್ರಶ್ನೆ ಕೇಳಿದ ಎಲ್ಲ ಶಾಸಕರಿಗೆ ಲಿಖಿತವಾಗಿ ಕೊಡಬೇಕು ಎಂದು ಸಭಾಧ್ಯಕ್ಷರು ಹೇಳಿದರು.

ಪ್ರತಿಪಕ್ಷ ನಾಯಕ ಆರ್. ಅಶೋಕ, ಈಗಾಗಲೇ ಸಭಾಧ್ಯಕ್ಷರು ಮೂರು ಬಾರಿ ಹೇಳಿದ್ದಾರೆ. ನಾಲ್ಕನೇ ಬಾರಿ ಹೇಳುವ ಸಂದರ್ಭ ಬರಬಾರದು. ಯಾವ ಇಲಾಖೆಯಿಂದ ಎಷ್ಟು ಪ್ರಶ್ನೆಗಳು ಬಾಕಿ ಇವೆ ಎಂಬ ಪಟ್ಟಿಯನ್ನು ಇಡಿ. ಕೆಲ ಅಧಿಕಾರಿಗಳು ಸೋಮಾರಿಗಳಿದ್ದಾರೆ. ಗಾಲ್ಫ್ ಆಡಲು ಹೋಗುತ್ತಾರೆ. ನಾವು ಇಲ್ಲಿ ಫುಟ್ಬಾಲ್ ಆಗಿದ್ದೇವೆ. ಸಚಿವರು ಉತ್ತರ ಕೊಡುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಶ್ನೆಗಳಿಗೆ ಉತ್ತರ ಒದಗಿಸುವ ಪ್ರಯತ್ನ: ಪರಂ

ಸರ್ಕಾರದ ಪರವಾಗಿ ಉತ್ತರ ನೀಡಿದ ಗೃಹ ಸಚಿವ ಡಾ. ಜಿ. ಪರಮೇಶ್ವರ, ಸಭಾಧ್ಯಕ್ಷರ ಮಾತುಗಳನ್ನು



ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಮುಖ್ಯಮಂತ್ರಿಗಳು ಈಗಾಗಲೇ ಎಲ್ಲಾ ಸಚಿವರಿಗೂ ಈ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ಅಪರೂಪಕ್ಕೆ ಸಭಾಧ್ಯಕ್ಷರು ಬಹಳ ಗಡುಸಾಗಿ ಮಾತನಾಡಿದ್ದಾರೆ. ಮುಂದಿನ ದಿನಗಳಲ್ಲಿ ಸದಸ್ಯರ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು.

ಸಂಪಾದಕೀಯ

ದಯಾಮರಣದ ಅನುಷ್ಠಾನ

ಸರ್ವೋಚ್ಚ ನ್ಯಾಯಾಲಯವು ಕಳೆದ 13 ವರ್ಷಗಳಿಂದ ಕೋಮಾದಲ್ಲಿರುವ ಹರೀಶ್ ರಾಣಾ ಎಂಬ ವ್ಯಕ್ತಿಗೆ ದಯಾಮರಣಕ್ಕೆ ಅವಕಾಶ ಕಲ್ಪಿಸುವುದರೊಂದಿಗೆ ದೇಶದ ಕಾನೂನು ವ್ಯವಸ್ಥೆಯಲ್ಲಿ ಹೊಸದೊಂದು ಅಧ್ಯಾಯ ತೆರೆದಿದೆ. 13 ವರ್ಷಗಳ ಹಿಂದೆ ಹರೀಶ್ ರಾಣಾ ಕಟ್ಟಡದಿಂದ ಕೆಳಬಿದ್ದು ಮೆದುಳಿಗೆ ಏಟು ಪಡೆದು, ಕೋಮಾ ಸ್ಥಿತಿಯಲ್ಲಿದ್ದಾನೆ. ಆತನಿಗೆ ದಯಾಮರಣ ಕಲ್ಪಿಸಬೇಕೆಂದು ಆಪ್ತ ಬಂಧುಗಳು ನ್ಯಾಯಾಲಯದ ಮೊರೆಹೋಗಿದ್ದರು.



ಆತ ಕೇವಲ ಜೀವರಕ್ಷಕ ವ್ಯವಸ್ಥೆಯ ಮೂಲಕವಷ್ಟೇ ಜೀವಂತವಾಗಿದ್ದಾನೆ ಎಂಬುದನ್ನು ವೈದ್ಯರಿಂದ ದೃಢಪಡಿಸಿಕೊಂಡ ನ್ಯಾಯಾಲಯವು ಜೀವರಕ್ಷಕ ವ್ಯವಸ್ಥೆಯನ್ನು ಕಿತ್ತು ಹಾಕುವ ಮೂಲಕ ದಯಾಮರಣಕ್ಕೆ ಅವಕಾಶ ಕಲ್ಪಿಸಬಹುದು ಎಂದು ತೀರ್ಪಿತ್ತಿದೆ. 'ಮನುಷ್ಯನಿಗೆ ಗೌರವದಿಂದ ಬದುಕುವ ಹಕ್ಕಿರುವಂತೆಯೇ ಗೌರವದಿಂದ ಸಾಯುವ ಹಕ್ಕೂ ಇದೆ' ಎಂಬುದಾಗಿ ನ್ಯಾಯಾಲಯವು ಅಭಿಪ್ರಾಯಿಸಿದೆ. ದಶಕದ ಹಿಂದೆಯೇ ನ್ಯಾಯಾಲಯವು ಅರುಣಾ ಶಾನ್‌ಭಾಗ್ ಪ್ರಕರಣದಲ್ಲಿ ಪರೋಕ್ಷ ದಯಾಮರಣಕ್ಕೆ ಸಮ್ಮತಿ ನೀಡಿತ್ತಾದರೂ, ಆಕೆಯನ್ನು ನೋಡಿಕೊಳ್ಳುತ್ತಿದ್ದ ಆಕೆಯ ಆಪ್ತರು ಅದಕ್ಕೆ ಸಮ್ಮತಿಸದ್ದರಿಂದ ದಯಾಮರಣವನ್ನು ಅನುಷ್ಠಾನಿಸಿರಲಿಲ್ಲ. ಹಾಗಾಗಿ ಹರೀಶ್ ರಾಣಾ ಪ್ರಕರಣವು ಭಾರತದಲ್ಲಿ ದಯಾಮರಣ ಅನುಷ್ಠಾನದ ಪ್ರಥಮ ನಿದರ್ಶನ ಎನ್ನಬಹುದು.

ದಯಾಮರಣದ ಕುರಿತಂತೆ ಬಹುಕಾಲದಿಂದಲೇ ಪರ-ವಿರೋಧ ಚರ್ಚೆ ನಡೆಯುತ್ತಿದೆ. ಕೊಲ್ಲುವ ಹಕ್ಕು ಯಾರಿಗೂ ಇಲ್ಲ ಎಂಬುದು ದಯಾಮರಣವನ್ನು ವಿರೋಧಿಸುತ್ತಿರುವವರ ವಾದವಾಗಿದೆ. ಆದರೆ ಹರೀಶ್ ರಾಣಾ ಪ್ರಕರಣದಲ್ಲಿ ನ್ಯಾಯಾಲಯವು ಜೀವರಕ್ಷಕ ವ್ಯವಸ್ಥೆಯನ್ನು ತೆಗೆದು ಆತನ ಸಾವಿಗೆ ಅವಕಾಶ ಕಲ್ಪಿಸಬಹುದು ಎಂದು ಹೇಳಿದೆಯೇ ಹೊರತು, ವಿಷದ ಔಷಧಿ ನೀಡಿ 'ಜೀವವನ್ನು ತೆಗೆಯುವ' ಕಾರ್ಯಕ್ಕೆ ಅನುಮತಿಸಿಲ್ಲ. ಸಾಯಲು ಬಯಸುವ ವ್ಯಕ್ತಿಗಳಿಗೆ ವಿಷಧ ಔಷಧ ನೀಡಿ ಜೀವನ ಕೊನೆಗಾಣಿಸಲೂ ಅವಕಾಶ ನೀಡಬೇಕು ಎಂದು ಕೆಲವರು ಪ್ರತಿಪಾದಿಸುವುದಿದೆ. ಭಾರತದಲ್ಲಿ ದಯಾಮರಣವನ್ನು ನೀಡುವ ಕಾನೂನು ಇಲ್ಲ. ನ್ಯಾಯಾಲಯವು ವಿಶೇಷ ಪ್ರಸಂಗಗಳಲ್ಲಿ ಇಂತಹ ತೀರ್ಪು ನೀಡಿದೆಯಷ್ಟೆ. ಸರಕಾರವು ಈ ನಿಟ್ಟಿನಲ್ಲಿ ಸೂಕ್ತ ಕಾನೂನು ತರುವಂತೆ ನ್ಯಾಯಾಲಯವು ಸಲಹೆ ನೀಡಿರುವುದನ್ನು ಕಡೆಗಣಿಸಲಾಗುವುದಿಲ್ಲ. ಆದರೆ ದಯಾಮರಣವನ್ನು ಕಾನೂನುಬದ್ಧಗೊಳಿಸಿದರೆ ಅದನ್ನು ದುರುಪಯೋಗ ಮಾಡುವ ಸಾಧ್ಯತೆಗಳೂ ಹೆಚ್ಚಿರುತ್ತವೆ. 'ಕೊಲೆ'ಗೆ ದಯಾಮರಣದ ಮುಖವಾಡ ತೊಡಿಸುವ ಸಾಧ್ಯತೆಗಳೂ ಇರುತ್ತವೆ. ಈ ನಿಟ್ಟಿನಲ್ಲಿ ಕಾನೂನು ತರುವ ಮುನ್ನ ಆ ಬಗ್ಗೆ ಹೆಚ್ಚಿನ ಪರಾಮರ್ಶೆಯ ಅಗತ್ಯವಿದೆ.

ವಿಶುದ್ಧ ಚಕ್ರ ಜಾಗೃತ ಆಗುವುದು ನಿಜವೇ?

ಆಧ್ಯಾತ್ಮಿಕವಾಗಿ ಬೆಳೆಯಲು ಅಪಾರ ಸಮಯ ಬೇಕು. ಅದು ನೀವು ಏನು ಮಾಡುವಿರಿ ಎನ್ನುವುದರ ಮೇಲೆ ನಿಂತಿಲ್ಲ. ನಿಮ್ಮ ಹೃದಯ ಮತ್ತು ಮಿದುಳಿನ ಕಾರ್ಯಕ್ಷಮತೆಯನ್ನು ಅವಲಂಬಿಸಿದೆ.

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಲೂರು
poornaprajnabelur@gmail.com



ಬೇರೆಲ್ಲಾ ಚಕ್ರಗಳು ಜಾಗೃತವಾದಾಗ ಆಗುವ ಅನುಭವಕ್ಕಿಂತಾ ಮೇಲಿನ ಚಕ್ರಗಳು ಜಾಗೃತವಾಗುವಾಗ ಆಗುವ ಅನುಭವಗಳೇ ಬೇರೆ ರೀತಿ ಇರುತ್ತದೆ. ಹೃದಯ ಚಕ್ರದವರೆಗೆ ಅಂದರೆ ಅನಾಹತ ಚಕ್ರದವರೆಗೆ ಜಾಗೃತವಾದಾಗ ಆಗುವ ಅನುಭವಗಳು ಒಂದು ರೀತಿಯಲ್ಲಿ ಗೋಚರ ಎನ್ನುವಂತೆ ಇದ್ದರೆ, ಇನ್ನು ಮುಂದಿನ ಚಕ್ರಗಳ ಜಾಗೃತಿ ಅನುಭವಗಳು ಸೂಕ್ಷ್ಮವಾಗಿ ಇರುತ್ತವೆ. ಅತ್ಯಂತ ನಿಧಾನವಾಗಿಯೂ ಇರಬಹುದು. ನಿಮಗೆ ಗೋಚರವಾಗುವುದೇ ಇಲ್ಲ. ಕೇವಲ ಅನುಭವಕ್ಕೆ ಮಾತ್ರ ಬರುತ್ತಿರುತ್ತದೆ. ಅದಕ್ಕಾಗಿ ನೀವು ಕಠಿಣ ಪರಿಶ್ರಮ ಪಡುವುದು ಅಗತ್ಯ. ಅಥವಾ ಮೌನವಾಗಿರುವುದು ಅಗತ್ಯ.

ಬ್ರಹ್ಮ ಗಂಟು

ಉದಾಹರಣೆಗೆ ವಿಶುದ್ಧ ಜಾಗೃತವಾದಾಗ ಜನ ನಿಮ್ಮ ಕಡೆಗೆ ಆಕರ್ಷಿತರಾಗುವುದು ಸಹಜ. ಈ ಆಕರ್ಷಣೆ ಎನ್ನುವುದು ನಿಮ್ಮ ಸೌಂದರ್ಯದಿಂದ, ನಿಮ್ಮ ವ್ಯಕ್ತಿತ್ವದಿಂದ, ನಿಮ್ಮ ನಡವಳಿಕೆಯಿಂದ, ನಿಮ್ಮ ಹಾಸ್ಯ ಪ್ರವೃತ್ತಿಯಿಂದ, ನಿಮ್ಮ ಗಂಭೀರವಾದ ನೋಟದಿಂದ, ನೀವು ಧರಿಸಿದ ಉಡುಗೆ ತೊಡುಗೆಗಳಿಂದ ಅಲ್ಲ, ಅದು ಕೇವಲ ನಿಮ್ಮ ವಿಚಾರಧಾರೆಯಿಂದ, ಅದನ್ನು ನೀವು ಪ್ರಸ್ತುತ ಪಡಿಸಿದ ರೀತಿಯಿಂದ, ಹಾಗೂ ನಿಮ್ಮ ಮಾತಿನ ದಾಟಿಯಿಂದ ಎನ್ನಬಹುದು. ಹೀಗೆ ನೀವು ಇದ್ದಕ್ಕಿದ್ದಂತೆ ಅವರ ಗಮನವನ್ನು ಸೆಳೆಯುತ್ತೀರಿ ಅಥವಾ ಅವರು ನಿಮ್ಮ ಆಕರ್ಷಣೆಗೆ ಒಳಗಾಗುತ್ತಾರೆ. ಆಗ ಒಮ್ಮೊಮ್ಮೆ ನೀವೂ ಸಹಾ ಅವರ ಪ್ರಭಾವದೊಳಕ್ಕೆ ಬೀಳುತ್ತೀರಿ. ಅವರ ಕಣ್ಣುಗಳು ನಿಮ್ಮ ಕಣ್ಣುಗಳನ್ನು ದಿಟ್ಟಿಸುತ್ತವೆ. ಆಗ ನಿಮಗೆ ಕ್ಷಣದಲ್ಲಿ ಎಚ್ಚರವಾಗಿ ಅವರನ್ನು ನಿಮ್ಮ ಸೆಳೆತಕ್ಕೆ ಸೇರಿಸುತ್ತೀರಿ. ಇದೆಲ್ಲಾ ಆಗುತ್ತಿರುವುದು ವಿಶುದ್ಧ ಚಕ್ರದ ಜಾಗೃತಿಯಿಂದ. ಒಂದೊಮ್ಮೆ ಅವರೂ ಸಹಾ ಚಕ್ರ ಸಾಧಕರಾಗಿದ್ದರೆ ನಿಮ್ಮ ಮಾತುಗಳು ಸರಳವಾದ ಮತ್ತು ಸಮಯಕ್ಕೆ ತಕ್ಕುದಾದ ಎನ್ನುವ ಅನುಭವ ಉಂಟಾಗುತ್ತದೆ. ನೀವು ನಿರಾಳವಾಗುತ್ತೀರಿ. ಕ್ಷಣದಲ್ಲಿ ನಿಮ್ಮ ಮುಖ ಶಾಂತಿಯನ್ನು ಸೂಸತೊಡಗುತ್ತದೆ.

ನಿಮಗೆ ಯಾರೋ ಒಬ್ಬರು ಹೊಸದಾಗಿ ಭೇಟಿ ಮಾಡುವರಿದೆ. ಆಗ ನೀವು ಅವರ ಬಗ್ಗೆ ತಿಳಿದುಕೊಳ್ಳುತ್ತೀರಿ. ಆಗ ನೀವು ಅರ್ಧ ಬಿದ್ದಂತೆ. ಕಾರಣ ನೀವು ನಿಮ್ಮ ಮೊದಲ ಭೇಟಿಯಲ್ಲಿ ನೋಡಿದ ವ್ಯಕ್ತಿ ಆಪಾದನಾಗಿರುವುದಿಲ್ಲ. ಅವನು ನಿಜವಾಗಿಯೂ ನಿಮ್ಮ ಮನದೊಳಗಿದ್ದ ಬೇರೆಯದೇ ಆದ ವ್ಯಕ್ತಿಯಾಗಿರುತ್ತಾನೆ; ನೀವು ಪರಿಕಲ್ಪನೆ ಮಾಡಿಕೊಂಡ ವ್ಯಕ್ತಿಯಾಗಿರುತ್ತಾನೆ. ಒಂದೊಮ್ಮೆ ಅವನು ನಿಮ್ಮ ಪರಿಕಲ್ಪನೆಗೆ ನಿಲುಕದಿದ್ದರೆ ನೀವು ಅವನ ದೂಷಣೆ ಮಾಡುತ್ತೀರಿ. ಏಕೆಂದರೆ ಅವನು ನಿಮ್ಮ ಊಹೆಯಲ್ಲಿ ಇದ್ದ ವ್ಯಕ್ತಿಯೇ ಅಲ್ಲ, ಬೇರೆಯವನು ಅಥವಾ ಅನ್ಯ. ಇಲ್ಲಿ ಅಸ್ತಿತ್ವದ ನಂಬಿಕೆ ಮತ್ತು ನಂಬದೇ ಇರುವಿಕೆಗಳ ನಡುವೆ ಹೊಡೆದಾಟ ಪ್ರಾರಂಭವಾಗುತ್ತದೆ. ನೀವು ನಂಬಿಕೆ ಇರದಿಂದ ಕಡೆ ಹೋಗುತ್ತೀರಿ. ಆಗ ವಿಶುದ್ಧ ಚಕ್ರವು ನಿಮ್ಮ ಸಹಾಯಕ್ಕೆ ಬರುತ್ತದೆ. ಅದರಿಂದಾಗಿ ನಿಮ್ಮಲ್ಲಿ ನಂಬಿಕೆಯ ಮೇಲಿನ ವಿಶ್ವಾಸ ಹೆಚ್ಚಿ ನೀವು ವಾಸ್ತವದ ಕಡೆ ನಡೆಯುತ್ತೀರಿ. ಆ ಸಮಯದಲ್ಲಿ ನಿಮ್ಮ ಕೊರಳಿಗೆ ಎಕೆ-47 ಇಟ್ಟರೂ ನೀವು ಅಂಜದೇ ನಗತೊಡಗುತ್ತೀರಿ. ಹೀಗೆ ನೀವು ನಿಮ್ಮನ್ನು ಗೆದ್ದಿರುತ್ತೀರಿ. ಮತ್ತು ಅವರನ್ನೂ ಸಹಾ ಗೆದ್ದಿರುತ್ತೀರಿ.

ನಿಮ್ಮೊಳಗೆ ಒಂದೊಮ್ಮೆ ಸಂದೇಹವಿದ್ದರೆ ಅದನ್ನು ನೀವು ವ್ಯಕ್ತಪಡಿಸುವ ಮೊದಲೇ ಪರಿಹಾರ ಸಹಾ ನಿಮಗೆ ಅಲ್ಲಿಯೇ ಗೋಚರಿಸುತ್ತದೆ. ಹೀಗಾಗಿ ನಿಮ್ಮ ಪ್ರತಿಕ್ರಿಯೆ ಸಕಾರಾತ್ಮಕವಾಗಿ ಇರುತ್ತದೆ. ನಿಮ್ಮ ಅಸ್ತಿತ್ವದ ಮೇಲಿನ ನಂಬಿಕೆ ಹೆಚ್ಚುತ್ತದೆ. ನೀವು ಮತ್ತು ಅವರು ಪರಸ್ಪರ ನಂಬಲು ಪ್ರಾರಂಭಿಸುತ್ತೀರಿ. ಇದು ಇಡೀ ಸಭೆಯನ್ನೇ ಸಂಮೋಹನಗೊಳಿಸುವ ಕ್ರಿಯೆಯಾಗಿರುತ್ತದೆ. ನಿಮ್ಮ ಮಾತೆಲ್ಲವೂ ಅಂತರಾಳದಿಂದ ಬಂದ ಕಾರಣ ಅವರೆಲ್ಲರೂ ಯಾವುದೇ ವಿರೋಧವಿಲ್ಲದೇ ಒಪ್ಪತೊಡಗುತ್ತಾರೆ.

ನೀವು ಇಂತಹಾ ಅನುಭವಕ್ಕೂ ಮೊದಲು ಬೇಕಾದಷ್ಟು ಸವಾಲುಗಳನ್ನು ಎದುರಿಸಿ ಅನುಭವ ಹೊಂದಿದ ಕಾರಣ ನೀವು ಯಾವುದೇ ಪ್ರಶ್ನೆ ಬಂದರೂ ತಕ್ಷಣ ಅದನ್ನು ಅರ್ಥ ಮಾಡಿಕೊಂಡು ಉತ್ತರಿಸಲು ತೊಡಗುತ್ತೀರಿ ಮತ್ತು ಸಮಾಧಾನವನ್ನೂ ನೀಡುತ್ತೀರಿ. ಮೊಂಡುವಾದ ಮಾಡುವವರನ್ನು ಗೊಂದಲಕ್ಕೆ ಸಿಲುಕಿಸುವುದೂ ಸಹಾ ನಿಮಗೆ ಪ್ರೀತಿಯ ಅಭ್ಯಾಸ. ಹೀಗೆ ನಿಮ್ಮ ನಗು ನಿಮ್ಮ ಮುಖದಿಂದ ಮಾಸುವುದೇ ಇಲ್ಲ. ನಿಮ್ಮ ಸ್ವರ ತಗ್ಗುವುದೇ ಇಲ್ಲ.

ವಿಷ್ಣು ಗಂಟು

ನೀವೀಗ ಬದಲಾಗಿದ್ದೀರಿ. ಎಲ್ಲವನ್ನೂ ನೀವು ಕರುಣೆಯಿಂದ ನೋಡಲು ಕಲಿತಿದ್ದೀರಿ. ನಿಮ್ಮೊಳಗೆ ಅಪಾರವಾದ ಶಕ್ತಿ ಇರುವುದು ನಿಮ್ಮ ಅರಿವಿಗೆ ಬಂದಿದೆ. ನೀವು ನಿಮ್ಮ ಸುತ್ತಲಿನ ಪರಿಸರ, ಜೀವಿಗಳು, ಬ್ರಹ್ಮಾಂಡ ಹೀಗೆ ಎಲ್ಲದರೊಂದಿಗೂ ಸೌಹಾರ್ದ ಸಂಬಂಧ ಹೊಂದಿದ್ದೀರಿ ಎನ್ನುವುದೂ ಸಹಾ ನಿಮ್ಮ ಅರಿವಿಗೆ ಬಂದಿದೆ. ನೀವೀಗ ಕೇವಲ ಪ್ರೀತಿ ಸ್ವರೂಪರು. ನೀವು ಅವರ ಎಲ್ಲಾ ಅನುಮಾನಗಳನ್ನು ಗುಣಪಡಿಸಬಲ್ಲಿರಿ. ಅವರ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬಲ್ಲಿರಿ. ನೀವು ಅವರ ಎಲ್ಲಾ ನೋವುಗಳನ್ನು ಶಮನ ಮಾಡಬಲ್ಲಿರಿ. ನೀವು ಅವರನ್ನು ಹೊಸ ವ್ಯಕ್ತಿಯನ್ನಾಗಿ ಮಾಡಬಲ್ಲಿರಿ.

ನೀವೀಗ ನಿಮ್ಮ ಕಣ್ಣುಗಳನ್ನು ಬಳಸುವುದನ್ನು ಕಲಿಯಿರಿ; ಆಗ ಸಂಮೋಹನ ಸುಲಭವಾಗುತ್ತದೆ. ನೀವು ನಿಮ್ಮ ಮುಖವನ್ನು ಬಳಸುವುದನ್ನು ಕಲಿಯಿರಿ; ಆಗ ಅವರನ್ನು ಸೆಳೆಯುವುದು ಸುಲಭವಾಗುತ್ತದೆ. ನೀವು ನಿಮ್ಮ ದೇಹವನ್ನು ಬಳಸುವುದನ್ನು ಕಲಿಯಿರಿ; ನಿಮ್ಮ ಕೆಲಸ ಸುಲಭವಾಗುತ್ತದೆ. ನೀವು ಪರಿಶುದ್ಧ; ಪಾರದರ್ಶಕ. ಪ್ರಾಮಾಣಿಕ. ಅದಕ್ಕಾಗಿ ನಿಮ್ಮ ಮನಸ್ಸು ಇನ್ನೊಬ್ಬರ ಮನಸ್ಸನ್ನು ಸುಲಭವಾಗಿ ಓದಬಲ್ಲದು. ನೆನಪಿಡಿ ನೀವು ಲೌಕಿಕದಲ್ಲಿ ಇದ್ದೀರಿ; ಅದಕ್ಕಾಗಿ ನಿಮ್ಮ ಶುದ್ಧತೆ ಸ್ವಲ್ಪ ಸಮಯದ್ದು, ಅನಿರ್ದಿಷ್ಟ ಅವಧಿಯದ್ದು, ಕ್ಷಣಿಕವಾದದ್ದು. ಅದಕ್ಕಾಗಿ ನೀವು ನಿಮ್ಮ ನಿರಂತರತೆಯನ್ನು ಕಾಯ್ದುಕೊಳ್ಳಬೇಕು. ನಿಮ್ಮ ಮಟ್ಟವನ್ನು ಉಳಿಸಿಕೊಳ್ಳಲು ಸತತ ಅನುಷ್ಠಾನವನ್ನು ಮಾಡಬೇಕು.

ನೀವು ಎಲ್ಲವನ್ನೂ ಹೊಂದಿದ್ದೀರಿ ಎಂದು ಭಾವಿಸಿದರೆ ಅಲ್ಲಿಂದ ನಿಮ್ಮ ಅವನತಿ ಪ್ರಾರಂಭವಾಗುತ್ತದೆ. ನೀವು ಗದ್ದಲದ ಮಧ್ಯೆ ಸಿಕ್ಕಿಕೊಳ್ಳುತ್ತೀರಿ. ನಿಮ್ಮ ಮತ್ತು ಸಭೆಯ ನಡುವೆ ವಾದ ನಡೆಯುತ್ತದೆ. ಅದು ವಿಕೋಪಕ್ಕೆ ಹೋಗುತ್ತದೆ. ನಿಮ್ಮ ಶಕ್ತಿ ವ್ಯಯವಾಗುತ್ತದೆ. ನೀವು ಸೋತು ಸೊಪ್ಪಾಗುತ್ತೀರಿ. ಬಾಡಿಹೋಗುತ್ತೀರಿ. ಅದೇ ನೀವು ತಟಸ್ಥವಾಗಿದ್ದರೆ; ನಿಮ್ಮ ರೂಪಾಂತರ ಎಲ್ಲರಿಗೂ ಗೋಚರವಾಗುತ್ತದೆ. ಅಲ್ಲೊಂದು ಮೌನ ಉಂಟಾಗುತ್ತದೆ. ಶಾಂತಿ, ನೆಮ್ಮದಿ ಇರುತ್ತದೆ. ಸುಸ್ಥಿರತೆ ಕಾಣಿಸುತ್ತದೆ. ಅಲ್ಲಿರುವುದು ನೀವೇ ಆದರೂ ನೀವಲ್ಲವೇನೋ ಎನ್ನುವ ಅನುಭವವೂ ಆಗುತ್ತದೆ.

ರುದ್ರ ಗಂಟು

ನೀವೀಗ ಸ್ಥಿರವಾದ ನಿಲುವನ್ನು, ವ್ಯಕ್ತಿತ್ವವನ್ನು, ಮನಸ್ಸನ್ನು ಹೊಂದಿದವರು. ನಿಮ್ಮಲ್ಲಿ ಯಾವುದೇ ದ್ವಂದ್ವ ಇಲ್ಲ. ನಿಮ್ಮ ಮಾತಿಗೆ ನೀವು ಬದ್ಧರು. ನಿಮ್ಮ ಅಸ್ತಿತ್ವಕ್ಕೆ ಬದ್ಧರು. ನೀವು ಈಗ ನಿಮ್ಮದೊಂದೇ ದೃಷ್ಟಿಯಿಂದಲ್ಲ, ಎಲ್ಲರ ದೃಷ್ಟಿಯಿಂದಲೂ ನೋಡುವುದನ್ನು ಕಲಿತಿದ್ದೀರಿ. ಹಾಗಾಗಿ ನೀವು ಒಂದೇ ವ್ಯಕ್ತಿಯಲ್ಲ; ಬಹುಮುಖಿಗಳು. ವಿಭಿನ್ನವಾದ ಆಯಾಮಗಳು ನಿಮಗೆ ಗೋಚರವಾಗಲು ತೊಡಗುತ್ತದೆ. ನೀವೀಗ ಎಲ್ಲವನ್ನೂ ಸಮಾನವಾಗಿ ತೆಗೆದುಕೊಳ್ಳಬಲ್ಲ ಆಧ್ಯಾತ್ಮಿಕರಾಗಿದ್ದೀರಿ. ನಿಮ್ಮೊಳಗಿನ ಸಾಕ್ಷಿಯನ್ನು ಯಾವಾಗಲೂ ಎಚ್ಚರದಿಂದ ಇಟ್ಟುಕೊಳ್ಳುತ್ತೀರಿ. ಯಾವುದೇ ಪೂರ್ವಾಗ್ರಹವಿಲ್ಲದೇ ಇರಬಲ್ಲಿರಿ. ನಿಮ್ಮೊಳಗಿನ ಉಪಪ್ರಜ್ಞೆ ಸದಾ ಎಚ್ಚರದಿಂದ ಇರುತ್ತದೆ. ನಿಮ್ಮ ಜೀವನದ ಉದ್ದೇಶ ಮತ್ತು ಸ್ಪಷ್ಟತೆ ನಿಮ್ಮ ಅರಿವಿಗೆ ಬಂದಿರುತ್ತದೆ. ನೀವು ಎಲ್ಲವನ್ನು ಸರಿಯಾಗಿಯೇ ಅದಿರುವಂತೆಯೇ ನೋಡಬಲ್ಲಿರಿ, ಅಥವಾ ಅವೆಲ್ಲಾ ನೈಜವಾಗಿಯೇ ಗೋಚರಿಸುತ್ತವೆ.

ನಿಮ್ಮ ಪೀಡಿತ ಮನಸ್ಸು ಮರಣ ಹೊಂದಿದೆ. ನಿಮ್ಮ ಅಹಂಕಾರ ಸತ್ತು ಹೋಗಿದೆ. ನಿಮ್ಮ ಅರಿಷಡ್ ವರ್ಗಗಳು ನಿರ್ನಾಮವಾಗಿವೆ. ಸುಳ್ಳು ಮತ್ತು ಭ್ರಮೆಗಳು ನಿಮ್ಮನ್ನು ಬಿಟ್ಟು ಓಡಿಹೋಗಿವೆ. ನೀವೀಗ ವಾಸ್ತವವಾದಿಗಳು, ಸಮನ್ವಯಕರು, ನ್ಯಾಯ ಚಿಂತಕರು, ಸಮಾಧಾನಿಗಳು, ಸುಸ್ಥಿರರು, ಶಾಂತಿದೂತರು.....ನೀವೀಗ ಮೊದಲ ಬಾರಿಗೆ ನಿಮ್ಮ ಆತ್ಮವನ್ನು ಭೇಟಿ ಮಾಡುತ್ತೀರಿ. ಮತ್ತು ಅದನ್ನು ನೋಡುತ್ತೀರಿ ಮಾತ್ರ. ಅಲ್ಲಿ ಗಂಡು ಹೆಣ್ಣು ಎನ್ನುವುದೇ ಇಲ್ಲ. ಅಲ್ಲಿ ಯಾವುದೂ ಎರಡು ಇಲ್ಲ; ಅಂದರೆ ಸತ್ಯ-ಸುಳ್ಳು, ನೋವು-ನಲಿವು, ಕಷ್ಟ-ಸುಖ, ಒಳಿತು- ಕೆಡುಕು, ಮೇಲು-ಕೀಳು ಹೀಗೆ ಯಾವುದೂ ಇಲ್ಲ. ಎಲ್ಲವೂ ಮಾಯವಾಗಿವೆ. ಮತ್ತು ನಿಮಗೆ ಅವೆಲ್ಲಾ ಇತ್ತು ಎಂದೂ ಸಹಾ ಅನಿಸುತ್ತಲೇ ಇಲ್ಲ.

ಆದರೆ ನಿಮ್ಮ ವಿಶುದ್ಧ ಚಕ್ರವು ತೆರೆಯಲು ನೀವು ಎಲ್ಲದರಿಂದ ಮುಕ್ತವಾಗಬೇಕು. ಆಧ್ಯಾತ್ಮಿಕವಾಗಿ ಬೆಳೆಯಲು ಅಪಾರವಾದ ಸಮಯ ಬೇಕು. ಅದು ನೀವು ಏನು ಮಾಡುವಿರಿ ಎನ್ನುವದರ ಮೇಲೆ ನಿಂತಿಲ್ಲ. ನಿಮ್ಮ ಹೃದಯ ಮತ್ತು ಮಿದುಳಿನ ಕಾರ್ಯಕ್ಷಮತೆಯನ್ನು, ಸಮನ್ವಯತೆಯನ್ನು ಅವಲಂಬಿಸಿದೆ. ನಿಮ್ಮೊಳಗಿನ ನೀವು ಮಾತ್ರ ಸಾರ್ವತ್ರಿಕ ಸತ್ಯ. ಅದು ಸುಲಭದಲ್ಲಿ ಅರಿವಾಗುವ ಸಂಗತಿಯಲ್ಲ. ಆಧ್ಯಾತ್ಮಿಕ ಸಾಧನೆ ಕಠಿಣವಾಗಿರುತ್ತದೆ. ನಿಯಂತ್ರಣದಲ್ಲಿ ಇರುತ್ತದೆ. ಪ್ರಯತ್ನ ಮಾತ್ರ ಇದನ್ನು ಸಾಧ್ಯವಾಗಿಸುತ್ತದೆ. ಪರಿಶ್ರಮ ಮಾತ್ರ ನಿಮಗೆ ಜ್ಞಾನವನ್ನು ನೀಡುತ್ತದೆ. ಜ್ಞಾನೋದಯವೇ ನಿಮ್ಮ ಗುರಿಯಾಗಿರುತ್ತದೆ.

ಬಡವನಾಗಿ ಸಾಯುವುದು ತಪ್ಪು

ಅಕಿಂಚನೋ ಜಾಯತೇ ಚೇತ್ ನರೋನ್ನೈವಾಪರಾಧ್ಯತಿ ।
ನೂನಂ ತಸ್ಯಾಪರಾಧೋಽಸ್ತಿ ಮ್ರಿಯತೇ ಚೇದಕಿಂಚನ ॥ –ಸುವಚನಶತಕಂ

ಬಡವನಾಗಿ ಹುಟ್ಟಿದರೆ ಅದು ಮನುಷ್ಯನ ತಪ್ಪಲ್ಲ. ಆದರೆ ಬಡವನಾಗಿ ಸತ್ತರೆ ಅದು ಅವನದೇ ತಪ್ಪು – ಎಂಬುದು ಶ್ಲೋಕಾರ್ಥ.

ಹುಟ್ಟು ಸಾವುಗಳೆರಡೂ ನಮ್ಮ ಕೈಯಲ್ಲಿಲ್ಲ. ಭಗವಂತನ ಸಂಕಲ್ಪದಂತೆ ಒಂದು ದಿನ ಹುಟ್ಟಿ ಇನ್ನೊಂದು ದಿನ ಸಾಯುತ್ತೇವೆ. ಆದರೆ ಹುಟ್ಟು ಸಾವುಗಳ ನಡುವಿನ ಬದುಕು ನಮ್ಮ ಕೈಯಲ್ಲಿದೆ. ಬದುಕನ್ನು ಎತ್ತರಕ್ಕೆ ಕೊಂಡೊಯ್ಯುವುದಕ್ಕೂ ಅಧಃಪತನಕ್ಕೆ ಒಯ್ಯುವುದಕ್ಕೂ ನಾವೇ ಕಾರಣವಾಗುತ್ತೇವೆ. ಧರ್ಮಯುಕ್ತ ಬದುಕಿಗೂ ಅಧರ್ಮದ ಬದುಕಿಗೂ ನಾವೇ ಕಾರಣರಾಗುತ್ತೇವೆ. ಧರ್ಮದ ನಡೆ ಉನ್ನತಿಗೆ ಕಾರಣವಾದರೆ ಅಧರ್ಮದ ನಡೆ ಅವನತಿಗೆ ಕಾರಣ.



ಹುಟ್ಟು ಎಲ್ಲಾಗುತ್ತದೆ? ಶ್ರೀಮಂತನ ಮನೆಯಲ್ಲೂ ಹುಟ್ಟಬಹುದು. ಬಡವನ ಮನೆಯಲ್ಲೂ ಹುಟ್ಟಬಹುದು. ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಶ್ರೀಮಂತ ಬದುಕನ್ನೇ ಬಾಳಬೇಕು. ಇದ್ದದನ್ನೆಲ್ಲ ಕಳೆದು ತಿರುಪೆ ಎತ್ತುವ ಮಟ್ಟಕ್ಕಿಳಿಯಬಾರದು. ಇರುವ ಮಟ್ಟದಿಂದ ಮೇಲಕ್ಕೆ ಇರಬೇಕು. ಆಗಲೇ ಹುಟ್ಟಿದ್ದು ಸಾರ್ಥಕ. ಬಡವನಾಗಿ ಹುಟ್ಟಿದರೆ ಅದು ಅವನ ತಪ್ಪಲ್ಲ. ಬಡವನಾಗಿಯೇ ಸತ್ತರೆ ಅದು ಅವನ ತಪ್ಪು. ಬಡವನಾದರೂ ಸಾಧಿಸಿ ಉನ್ನತ ಮಟ್ಟಕ್ಕೆ ಏರಿದವರ ಜೀವನ ಗಾಥೆ ಸಾಕಷ್ಟಿದೆ. ಇದು ಬಡವನಿಗೆ ಪ್ರೇರಣೆಯಾಗಬೇಕು. ತಾನು ಬಡವ ಎಂದುಕೊಂಡೇ ಬದುಕಿದರೆ ಪ್ರಯೋಜನವಿಲ್ಲ. ಬಡತನದ ಮೂಲವನ್ನು ಶೋಧಿಸಿ, ಅದರಿಂದ ಹೊರಬರಬೇಕು. ಇದಕ್ಕೆ ಪ್ರಾಮಾಣಿಕತೆ, ಪರಿಶ್ರಮ, ಅಧ್ಯಯನ, ವ್ಯವಹಾರ ಚತುರತೆ ಇವೆಲ್ಲವೂ ಬೇಕಾಗುತ್ತದೆ.

ಉತ್ತಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ನೂರಾರು ಮಾರ್ಗಗಳಿವೆ. ಅದನ್ನು ಕಂಡುಕೊಳ್ಳಬೇಕು. ಪ್ರಾಮಾಣಿಕ ಪರಿಶ್ರಮ ಚೆಲ್ಲುವವನಿಗೆ ಶ್ರೀಮಂತನಾಗುವುದಕ್ಕೆ, ಬಡತನದಿಂದ ಹೊರಬರುವುದಕ್ಕೆ ಸಾಕಷ್ಟು ಮಾರ್ಗಗಳಿವೆ. ಸನ್ನಿವೇಶವನ್ನು ಅರ್ಥ ಮಾಡಿಕೊಂಡು ಮುಂದುವರಿಯಬೇಕು. ಬಡತನವನ್ನೇ ಜಪಿಸುತ್ತ ತನ್ನನ್ನೇ ಹಳಿದುಕೊಳ್ಳುತ್ತ ದಿನವನ್ನು ಕಳೆಯುವವನು ಉದ್ಧಾರನಾಗಲಾರ.

ಹೀಗೊಂದು ಘಟನೆಯನ್ನು ಹೇಳುತ್ತಾರೆ. ತಂದೆ ಕುಡುಕ, ತಾಯಿ ಪರಿಶ್ರಮಿ. ಅವರಿಗೆ ಇಬ್ಬರು ಮಕ್ಕಳು. ಗಂಡ ಯಾವಾಗಲೂ ದುಡಿದ ಹಣವನ್ನು ಮದ್ಯದಂಗಡಿಗೆ ಹಂಚುತ್ತಿದ್ದ. ನಿತ್ಯವೂ ಕುಡಿದು ಬಂದು ಹೆಂಡತಿ, ಮಕ್ಕಳಿಗೆ ಬಡಿಯುತ್ತಿದ್ದ. ಇದನ್ನು ನೋಡಿ ಮಕ್ಕಳಿಬ್ಬರೂ ಬೆಳೆದರು. ಅವರಲ್ಲಿ ಒಬ್ಬ ತಂದೆಯಂತೆ ಕುಡುಕನಾದ. ಒಬ್ಬ ಶ್ರೀಮಂತನಾದ. ಕುಡುಕ ಮಗನಲ್ಲಿ 'ನೀನು ಹೀಗಾಗಲು ಕಾರಣವೇನು?' ಎಂದು ಕೇಳಲು 'ತಂದೆಯೇ ಇದಕ್ಕೆ ಕಾರಣ. ತಂದೆ ಓದಿಸಲಿಲ್ಲ, ಅವನನ್ನು ನೋಡಿ ನಾನು ಅವನಂತಾದೆ. ತಂದೆ ಒಳ್ಳೆಯವನಾಗಿದ್ದರೆ ನಾನೂ ಒಳ್ಳೆಯವನಾಗುತ್ತಿದೆ'' ಎಂದ.

ಶ್ರೀಮಂತನಾದ ಮಗನಲ್ಲಿ ನಿನ್ನ ಈ ಸ್ಥಿತಿಗೆ ಕಾರಣ ಯಾರು? ಎಂದು ಕೇಳಲು 'ತಂದೆಯೇ ಕಾರಣ' ಎಂದ. 'ಹೇಗೆ' ಎಂದು ಕೇಳಿದಾಗ ಆತ ತಂದೆಯ ''ದುರಭ್ಯಾಸ, ದುರ್ನಡತೆ, ಕುಡಿತದ ಚಟ, ಜನರು ಮಾಡುವ ಅಪಹಾಸ್ಯಗಳನ್ನು ನೋಡಿ, ನಾನೆಂದೂ ಹೀಗಾಗಬಾರದು, ಸಾಧಿಸಬೇಕು ಎಂದು ಸಂಕಲ್ಪ ಮಾಡಿ ಓದಿ, ದುಡಿದ ಕಾರಣದಿಂದಾಗಿ ಹೀಗಾದೆ. ಹೀಗಾಗಲು ತಂದೆ ಕಾರಣ'' ಎಂದ.

ಭಗವಂತ ಬುದ್ಧಿ ಕೊಟ್ಟಿದ್ದಾನೆ. ವಿವೇಕವಿತ್ತಿದ್ದಾನೆ. ಲೋಕ ವಿಶಾಲವಾಗಿದೆ. ದುಡಿಯುವವನಿಗೆ ಕೈತುಂಬ ಕೆಲಸವಿದೆ. ಆದ್ದರಿಂದ ಶ್ರಮ ವಹಿಸಿ ದುಡಿದು ಬಡತನದಿಂದ ಹೊರಬರಬೇಕು. ಜೀವನದಲ್ಲಿ ಸಾಧಿಸಬೇಕು. ಹೀಗೆ ಮಾಡದಿದ್ದರೆ ಅದು ಅವನದೇ ತಪ್ಪು.

ಯುಗಾದಿ: ಹಿಂದು ಹೊಸವರ್ಷ

ಒಳನೋಟ

• ಹೆ.ಬಾ. ಮಲ್ಯ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರಿಗೆ ಯುಗಾದಿ ಎರಡು ದೃಷ್ಟಿಯಿಂದ ಮಹತ್ವದ್ದಾಗಿದೆ. ಯುಗಾದಿ ಹಿಂದುಗಳ ಹೊಸವರ್ಷದ ದಿನ ಎಂಬುದು ಒಂದು. ಎರಡನೆಯದು ಸಂಘ ಸಂಸ್ಥಾಪಕ ಡಾಕ್ಟರ್ ಹೆಡ್ಗೇವಾರರ ಜನ್ಮದಿನವೂ ಯುಗಾದಿಯಂದೇ. ಸಂಘ ಆಚರಿಸುವ ಆರು ಉತ್ಸವಗಳಲ್ಲಿ ಯುಗಾದಿ ಉತ್ಸವ ಬಹಳ ಮಹತ್ವದ್ದು. ಡಾಕ್ಟರ್‌ಜೀ ಓರ್ವ ಯುಗಪುರುಷ ಎಂಬುದರಲ್ಲಿ ಸಂಶಯವಿಲ್ಲ. ಸಾವಿರ ವರ್ಷಗಳ ಸಂಘರ್ಷದಿಂದ ಸೋತು ಮಲಗಿದ್ದ ಹಿಂದು ಸಮಾಜವನ್ನು ಸಂಘಟಿಸಿ ಮತ್ತೆ ಅದರಲ್ಲಿ ಹೊಸಚೈತನ್ಯ, ಆತ್ಮವಿಶ್ವಾಸ ತುಂಬಿದ ಮಹಾನ್ ವ್ಯಕ್ತಿ ಡಾಕ್ಟರ್‌ಜೀ. ಸಂಘದಲ್ಲಿ ವ್ಯಕ್ತಿ ಆರಾಧನೆಯ ಪದ್ಧತಿ ಇಲ್ಲದಿದ್ದರೂ ಅಂಥ ಯುಗ ದ್ರಷ್ಟಾರನನ್ನು ಸ್ಮರಿಸುವುದು ಸೂಕ್ತವಾಗಿದೆ.

ನೂರು ವರ್ಷಗಳ ಹಿಂದೆ ಡಾಕ್ಟರ್‌ಜೀ ಸಂಘ ಸ್ಥಾಪನೆ ಮಾಡಿ ಹಿಂದೂ ಸಂಘಟನೆಯ ಕಾರ್ಯದಲ್ಲಿ ತೊಡಗಿದರು. ಅನಂತರ ಅವರು ಬದುಕಿದ್ದು 15 ವರ್ಷ ಮಾತ್ರ. ಆದರೆ ಅಷ್ಟರೊಳಗೆ ಸಂಘ ಕಾರ್ಯವನ್ನು ಸಣ್ಣ ರೂಪದಲ್ಲಾದರೂ ದೇಶಾದ್ಯಂತ ವಿಸ್ತರಿಸುವುದರಲ್ಲಿ ಯಶಸ್ವಿಯಾದರು. ಅವರ ಅದ್ಭುತ ಕಾರ್ಯಶೈಲಿ ಹಾಗೂ ಅವರ ನಿಷ್ಠೆ, ಪರಿಶ್ರಮ, ಪ್ರಾಮಾಣಿಕತೆ ಇದಕ್ಕೆ ಕಾರಣ. ನಂತರ ನೂರಾರು ಕಾರ್ಯಕರ್ತರು ಅವರ ಜೀವನದಿಂದ ಪ್ರೇರಣೆ ಪಡೆದು ಪೂರ್ಣಾವಧಿ ಪ್ರಚಾರಕರಾದರು. ಸಂಘ ಕಾರ್ಯವನ್ನು ಬೆಳೆಸಿದರು. ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲೂ ಸಂಘ ಕಾರ್ಯ ವಿಸ್ತರಿಸಿತು. ಹಿಂದು ತರುಣ ಪೀಳಿಗೆಯಲ್ಲಿ ಮತ್ತೆ ಹಿಂದುತ್ವದ ಬಗ್ಗೆ ಜಾಗೃತಿ ಮೂಡಿತು. ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ಕಾರ್ಯಕರ್ತರು ಸಂಘಟನೆಗಳನ್ನು ಕಟ್ಟಿ ಆಯಾ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾದರು.

ದೇಶದ ರಾಜಕೀಯ ಕ್ಷೇತ್ರದಲ್ಲಿ ಕೂಡಾ ಅದ್ಭುತ ಪ್ರಗತಿ ಆಗಿರುವುದನ್ನು ನಾವೆಲ್ಲರೂ ಕಾಣಬಹುದು. ಸಂಘದ ಪ್ರಚಾರಕ ನರೇಂದ್ರ ಮೋದಿಯವರು ಪ್ರಧಾನಿಯಾಗಿ ಅದ್ಭುತ ಕಾರ್ಯ ಮಾಡಿದ್ದಾರೆ. ಸಂಘ ನೂರು ವರ್ಷಗಳಲ್ಲಿ ಏನು ಸಾಧಿಸಿದೆ ಎಂದು ಕೇಳುವವರಿಗೆ, ಒಂದು ವೇಳೆ ಅಂದು ಡಾಕ್ಟರ್‌ಜೀ ಸಂಘ ಪ್ರಾರಂಭಿಸದೇ ಹೋಗಿದ್ದರೆ ಇಂದು ದೇಶದ ಪರಿಸ್ಥಿತಿ ಏನಾಗುತ್ತಿತ್ತು? ಎಂದು ಮರು ಪ್ರಶ್ನೆ ಕೇಳಬೇಕು. ಸಂಘ ಇಲ್ಲದೇ ಹೋಗಿದ್ದರೆ ಮೋದಿ ಪ್ರಧಾನಿಯಾಗುತ್ತಿರಲಿಲ್ಲ. ಮೋದಿ ಪ್ರಧಾನಿಯಾಗದೇ ಹೋಗಿದ್ದರೆ ಇಂದು ದೇಶದ ಆಡಳಿತ ಸೂತ್ರ ಯಾರ ಕೈಯಲ್ಲಿರುತ್ತಿತ್ತು ಎಂಬುದನ್ನು ಯೋಚಿಸಬೇಕು.

ಡಾಕ್ಟರ್‌ಜೀಯವರು ಸಂಘದ ತತ್ವ- ಸಿದ್ಧಾಂತಗಳನ್ನು ಮಾತ್ರ ಬೋಧಿಸಿದ್ದಲ್ಲ. ಪ್ರತ್ಯಕ್ಷ ಆದರ್ಶಗಳನ್ನು ಯುವ ಪೀಳಿಗೆಯ ಮುಂದಿಟ್ಟು ಹೋದರು. ಆ ಕಾಲದಲ್ಲಿ ಮಸೀದಿ ಮುಂದೆ ಹಿಂದುಗಳು ವಾದ್ಯ ಬಾರಿಸಿಕೊಂಡು ಹೋಗುವಂಥ ಪರಿಸ್ಥಿತಿ ಇರಲಿಲ್ಲ. ಡಾಕ್ಟರ್‌ಜೀ ಸ್ವತಃ ಡೋಲು ಬಾರಿಸುತ್ತಾ ಸ್ವಯಂಸೇವಕರೊಂದಿಗೆ ಮೆರವಣಿಗೆಯಲ್ಲಿ ಮಸೀದಿಯ ಮುಂದೆ ಸಾಗುವ ಧೈರ್ಯ ತೋರಿದರು. ಕಟುಕನೊಬ್ಬ ಕಸಾಯಿಖಾನೆಗೆ ಹಸುವನ್ನು ಕೊಂಡು ಹೋಗುತ್ತಿದ್ದುದನ್ನು ನೋಡಿ ಅವನೊಂದಿಗೆ ವಾದ ಮಾಡಿ ಆ ಹಸುವನ್ನು ಬಿಡಿಸಿಕೊಂಡರು. ಅದರ ಬೆಲೆಯನ್ನು ಅವನಿಗೆ ತನ್ನ ಜೇಬಿನಿಂದ ತೆತ್ತರು. ಲಕ್ಷ್ಮೀ ಪೂಜೆಯ ಸಂದರ್ಭದಲ್ಲಿ ಪ್ರತಿ ವರ್ಷ ವ್ಯಾಪಾರಸ್ಥರು ಅಂಗಡಿಯಲ್ಲಿ ಹಣದ ನೋಟುಗಳು, ಚಿನ್ನಾಭರಣ ಇಟ್ಟು ಪೂಜೆ ಮಾಡುವುದು ಪದ್ಧತಿ. ಅಂದು ಮುಸ್ಲಿಂ ಗೂಂಡಾಗಳು ಅಂಗಡಿಗಳ ಮೇಲೆ ದಾಳಿ ಮಾಡಿ ಹಣ -ಚಿನ್ನಾಭರಣಗಳನ್ನು ದೋಚಿಕೊಂಡು ಪರಾರಿಯಾಗುತ್ತಿದ್ದರು. ಅವರನ್ನು ತಡೆಯುವ ಧೈರ್ಯ ಯಾರಿಗೂ ಇರಲಿಲ್ಲ. ಒಂದು ವರ್ಷ ಡಾಕ್ಟರ್‌ಜೀ ತರುಣ ಸ್ವಯಂಸೇವಕರನ್ನು ಸಂಘಟಿಸಿ ದಂಡ (ಲಾಠಿ)ಗಳೊಂದಿಗೆ ಗಲ್ಲಿಯಲ್ಲಿ ನಿಲ್ಲಿಸಿದರು. ಗೂಂಡಾಗಳು ದೋಚಲು ಬರುತ್ತಿದ್ದಂತೆ ವಿಕಾಏಕಿ ಅವರ ಮೇಲೆ ಮುಗಿಬಿದ್ದು ದಂಡದ ರುಚಿ ತೋರಿಸಿದರು. ಅಂದಿನಿಂದ ಗೂಂಡಾಗಳ ಉಪಟಳ ನಿಂತು ಹೋಯಿತು. 1930ರಲ್ಲಿ ಬ್ರಿಟಿಷರ ವಿರುದ್ಧ ಸತ್ಯಾಗ್ರಹ ಮಾಡಿ ಜೈಲಿಗೆ ಹೋದರು. ಒಂದು ವರ್ಷ ಸೆರೆವಾಸ ಅನುಭವಿಸಿದರು. ಹೀಗೆ ತಮ್ಮ ಸ್ವಂತ ಮೇಲ್ಪಂಕ್ತಿಯಿಂದ ಸ್ವಯಂಸೇವಕರಲ್ಲಿ ಧೈರ್ಯ, ಪ್ರೇರಣೆ, ತ್ಯಾಗದ ಮನೋಭಾವನೆ ತುಂಬಿದರು. ಇವು ಸಾಂಕೇತಿಕ ಎನಿಸಿದರೂ ತರುಣರಿಗೆ ಬಲವಾದ ಸಂದೇಶಗಳಾದವು. ಹೀಗೆ ಡಾಕ್ಟರ್‌ಜೀ ದೂರದೃಷ್ಟಿ ಇಟ್ಟುಕೊಂಡು ಆರಂಭಿಸಿದ ಸಂಘ ಇಂದು ಜಗತ್ತಿನಲ್ಲೇ ಬಲಿಷ್ಠ ಸ್ವಯಂಸೇವಕ ಸಂಘಟನೆ ಎಂಬ ಖ್ಯಾತಿ ಪಡೆದಿದೆ.

ಯುಗಾದಿ ಮಹತ್ವ

ಯುಗಾದಿ ಹೊಸ ಸಂವತ್ಸರದ ಆರಂಭವಷ್ಟೇ ಅಲ್ಲದೆ ಖಗೋಳ ಶಾಸ್ತ್ರದ ದೃಷ್ಟಿಯಿಂದಲೂ ಮಹತ್ವ ಪಡೆದಿದೆ. ಪ್ರಾಚೀನ ಋಷಿಗಳು ಖಗೋಳ ಶಾಸ್ತ್ರದಲ್ಲಿ ಬಹಳ ಮುಂದಿದ್ದರು. ಕಾಲ ಗಣನ ವಿಜ್ಞಾನಕ್ಕೆ ಭದ್ರವಾದ ಅಡಿಗಲ್ಲನ್ನು ಹಾಕಿಟ್ಟರು. ಭಾರತದಿಂದಲೇ ಈ ಕಾಲಗಣನ ವಿಜ್ಞಾನ ಜಗತ್ತಿನ ಇತರ ದೇಶಗಳಿಗೆ ಹರಡಿತು.

ಭಾರತೀಯರ ಹೊಸ ವರ್ಷ ಆರಂಭವಾಗುವುದು ಜನವರಿ ಒಂದರಿಂದಲ್ಲ, ಯುಗಾದಿಯಿಂದ. ಹಿಂದೂ ಪಂಚಾಂಗವು ಗ್ರಹ, ನಕ್ಷತ್ರ, ಭೂಮಿಗಳ ಚಲನೆಯ ಆಧಾರದ ಮೇಲೆ ರಚಿತವಾಗುತ್ತದೆ. ಪಾಶ್ಚಾತ್ಯರದು ಕೃತಕ ಕಾಲಮಾನ. ಪ್ರಕೃತಿಯ ವಿದ್ಯಮಾನಗಳಿಗೂ ಅದಕ್ಕೂ ಸಂಬಂಧವಿಲ್ಲ. ಅನುಕೂಲತೆ ದೃಷ್ಟಿಯಿಂದ ಸದ್ಯಕ್ಕೆ ಅದನ್ನೇ ಅನುಸರಿಸುವುದರಲ್ಲಿ ತಪ್ಪೇನಿಲ್ಲ. ಅದೊಂದು ಅನಿವಾರ್ಯತೆ. ಆದರೆ ಭಾರತೀಯರಿಗೆ ಸ್ವದೇಶಿ ಕಾಲಗಣನೆಯ ಜ್ಞಾನ ಇರಬೇಕಾದದ್ದು ಅಗತ್ಯ. ಎಲ್ಲಾ ಹಬ್ಬ- ಹರಿದಿನ, ಗ್ರಹಣ, ಶ್ರಾದ್ಧ, ಹೋಮ, ಹವನ, ಯಾಗ, ಯಜ್ಞಗಳು, ಮದುವೆ, ಮುಂಜಿ, ಗೃಹಪ್ರವೇಶಗಳು ಮುಹೂರ್ತಕ್ಕೆ ಸರಿಯಾಗಿ ಇಂದಿಗೂ ನಡೆಯುತ್ತಿರುವುದು ಸಮಾಧಾನಕರ ಸಂಗತಿ.

ಯುಗಾದಿಯಿಂದ ವಸಂತ ಋತು ಆರಂಭವಾಗುತ್ತದೆ. ಈ ಬಾರಿ ಮಾರ್ಚ್ 19ರಂದು ಚಾಂದ್ರಮಾನ ಯುಗಾದಿ. ಏಪ್ರಿಲ್ 15ರಂದು ಸೌರಮಾನ ಯುಗಾದಿ. ವಸಂತ ಋತುವಿನಲ್ಲಿ ಆಹ್ಲಾದಕರ ವಾತಾವರಣವಿರುತ್ತದೆ. ಪ್ರಕೃತಿ ಮತ್ತೆ ಹಸಿರಿನಿಂದ ಕಂಗೊಳಿಸುತ್ತದೆ. ಹೂವು-ಹಣ್ಣುಗಳು ಬಿಡುವ ಕಾಲ. ಪ್ರಕೃತಿಯಲ್ಲಿ ಒಂದು ಆಹ್ಲಾದಕರ ಪರಿವರ್ತನೆಯ ಕಾಲ. ಅದಕ್ಕಾಗಿಯೇ ಪೂರ್ವಜರು ಯುಗಾದಿಯನ್ನು ವರ್ಷಾರಂಭ ಎಂದು ಪರಿಗಣಿಸಿದರು. ಅಂದು ಬೇವು ಬೆಲ್ಲ ಸ್ವೀಕರಿಸುವುದು ವಾಡಿಕೆ. ಮುಂಬರುವ ಜೀವನದಲ್ಲಿ ಸಿಹಿ-ಕಹಿಗಳೆರಡನ್ನೂ ಸಮಾನವಾಗಿ ಸ್ವೀಕರಿಸಬೇಕೆಂಬ ಸಂದೇಶವನ್ನು ಯುಗಾದಿ ಹಬ್ಬ ನೀಡುತ್ತದೆ.

ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಚಲಿಸುತ್ತಾ ಯುಗಾದಿಯಂದು ಭೂಮಧ್ಯ ರೇಖೆಯನ್ನು ತಲುಪುತ್ತಾನೆ. ಹಗಲು ಮತ್ತು ರಾತ್ರಿಯದ್ದು ಸಮಾನ ಅವಧಿ. ಇದನ್ನು ವಸಂತ ವಿಷುವ ಎನ್ನುತ್ತಾರೆ. 72 ವರ್ಷಗಳಿಗೊಮ್ಮೆ ಅಯನಬಿಂದು (Equinox) ವಿಷುವದ್ ವೃತ್ತದ ಮೇಲೆ ಒಂದು ಡಿಗ್ರಿಯಷ್ಟು ಅಂದರೆ ಒಂದು ದಿನದಷ್ಟು ಹಿಂದಕ್ಕೆ ಸರಿಯುತ್ತದೆ. ಇದು ಭೂಮಿಯ ಮೂರನೇ ಬಗೆಯ ಚಲನೆ. ಇದನ್ನು ಅಯನ ಚಲನೆ ಎನ್ನುತ್ತಾರೆ. ಈ ಹಿಂಸರಿತ (Precession)ದ ಕಾರಣ ಆರ್ಯಭಟನ ಕಾಲದಲ್ಲಿದ್ದ (ಕ್ರಿ.ಶ. 500) ಅಯನ ಬಿಂದು ಈ ಒಂದೂವರೆ ಸಾವಿರ ವರ್ಷದಲ್ಲಿ ಸುಮಾರು 22 ದಿನಗಳಷ್ಟು ಹಿಂದೆ ಸರಿದಿದೆ. ಅಂದರೆ ಉತ್ತರಾಯಣ ಬಿಂದು ಮಕರ ಸಂಕ್ರಾಂತಿಯಂದು ಇರದೆ ಧನುರ್ಮಾಸಕ್ಕೆ ಹಿಂದೆ ಸರಿದು ಡಿಸೆಂಬರ್ 21ಕ್ಕೆ ಹೋಗಿದೆ. ಅದೇ ರೀತಿ ಸೌರ ಯುಗಾದಿ ಮಾರ್ಚ್ 21ರಂದು ಘಟಿಸುತ್ತದೆ. ಮೊದಲು ಏಪ್ರಿಲ್ 14ರಂದು ಅಂದರೆ ಮೇಷ ಸಂಕ್ರಮಣದಂದು ಘಟಿಸುತ್ತಿತ್ತು.

ಚಾಂದ್ರಮಾನ ಪ್ರಕಾರ ಚೈತ್ರ ಮಾಸದ ಪ್ರಥಮ ತಿಥಿಯಂದು ಯುಗಾದಿ. ಅಶ್ವಿನಿ ನಕ್ಷತ್ರವೂ ಅಂದೇ ಅಥವಾ ಒಂದು ದಿನ ಆಚೆ ಈಚೆ ಇರುತ್ತದೆ. ಚೈತ್ರ ಮಾಸವು ಸಂವತ್ಸರದ ಮೊದಲ ಮಾಸ. ಅಶ್ವಿನಿ ಮೊದಲ ನಕ್ಷತ್ರ. ಈ ಬಾರಿ ವಿಶ್ವಾವಸು ಸಂವತ್ಸರ ಕಳೆದು ಪರಾಭವ ಸಂವತ್ಸರ ಕಾಲಿಡುತ್ತದೆ. ಸಂಕ್ರಮಣ ಎಂದರೆ ಮೇಷ, ವೃಷಭ ರಾಶಿಗಳಿಗೆ ಸಂಬಂಧಿಸಿದ ವಿದ್ಯಮಾನ. ಅವುಗಳು ಬದಲಾಗುವುದಿಲ್ಲ. ಏಕೆಂದರೆ ರಾಶಿಗಳು ಸ್ಥಿರ. ಅವುಗಳ ಸ್ಥಾನಗಳು ಬದಲಾಗುವುದಿಲ್ಲ. ಆದರೆ ಅಯನ ಬಿಂದುಗಳು ಹಿಂಸರಿತದ ಕಾರಣದಿಂದ ಸ್ಥಾನಪಲ್ಲಟವಾಗುತ್ತವೆ. ಹಿಂದೆ ಉತ್ತರಾಯಣ, ದಕ್ಷಿಣಾಯನ ಕ್ರಮವಾಗಿ ಮಕರ ಸಂಕ್ರಾಂತಿ, ಕರ್ಕಾಟಕ ಸಂಕ್ರಾಂತಿಯಂದೇ ಬರುತ್ತಿದ್ದವು. ಇಂದು ಅಯನ ಮತ್ತು ಸಂಕ್ರಾಂತಿಯ ನಂಟು ಮುರಿದಿದೆ. ಇಂದಿನ ಆಕಾಶದ ಚಿತ್ರ ಅಂದಿಗಿಂತ ಬದಲಾವಣೆಯಾಗಿದೆ. ಇಂದು ದೂರದರ್ಶಕಗಳಿವೆ. ಅವುಗಳ ಮೂಲಕ ಆಕಾಶವನ್ನು ಪರಾಂಬರಿಸಿದರೆ ಈ ಬದಲಾವಣೆ ಗೋಚರವಾಗುತ್ತದೆ. ಈ ಬದಲಾವಣೆ ಮನುಷ್ಯ ಮಾಡಿದ್ದಲ್ಲ. ಪ್ರಕೃತಿಯೇ ಮಾಡಿರುವಂಥದ್ದು. ವಿಜ್ಞಾನವು ಪ್ರಕೃತಿಯನ್ನು ಅನುಸರಿಸಿ ನಡೆಯಬೇಕಾಗುತ್ತದೆ.

ಹಿಂದಿನ ವೈಜ್ಞಾನಿಕ ಗ್ರಂಥಗಳಾದ ಸೂರ್ಯ ಸಿದ್ಧಾಂತ, ಆರ್ಯಭಟೀಯ, ಬೃಹತ್ ಸಂಹಿತೆ ಮುಂತಾದವುಗಳಲ್ಲಿ ದಾಖಲಾದ ಸಂಗತಿಗಳು ಕಳೆದ ಸಹಸ್ರಾರು ವರ್ಷಗಳಲ್ಲಿ ಬದಲಾಗಿವೆ. ಕಾಲಕಾಲಕ್ಕೆ ಈ ಸಿದ್ಧಾಂತಗಳಲ್ಲಿ ಪರಿಷ್ಕರಣೆ ಆಗಬೇಕಾದುದು ಅಗತ್ಯ. ಸುದೀರ್ಘ ಸಂಘರ್ಷದ ದೆಸೆಯಿಂದ ಈ ಕಾರ್ಯ ನಡೆಯಲಿಲ್ಲ. ಈಗಲಾದರೂ ಜ್ಯೋತಿಷಿಗಳು, ಮಠಾಧಿಪತಿಗಳು, ಆಧುನಿಕ ಖಗೋಳ ವಿಜ್ಞಾನಿಗಳು ಒಂದೆಡೆ ಕಲೆತು ಚರ್ಚಿಸಿ ಸೂಕ್ತ ಪರಿಷ್ಕರಣೆ ಮಾಡುವ ಅಗತ್ಯವಿದೆ.

ಈ ಬಾರಿ ಮಾರ್ಚ್ 19ರಂದು ಅಮಾವಾಸ್ಯೆ ಬಂದಿದೆ. ಯುಗಾದಿ ಅದರ ಮರುದಿನ ಪಾಡ್ಯದಂದು ಬರಬೇಕಾಗಿತ್ತು. ಆದರೆ ಅಮಾವಾಸ್ಯೆ ಅಂದು ಇರುವುದು ಮುಕ್ಕಾಲು ಗಳಿಗೆ (18 ನಿಮಿಷ) ಮಾತ್ರ. ಸೂರ್ಯೋದಯದಲ್ಲಿ ಯಾವ ತಿಥಿ ಇರುತ್ತದೋ ಅಂದು ಇಡೀ ದಿನ ಅದೇ ತಿಥಿ ಎಂದು ಪರಿಗಣಿಸಬೇಕೆಂಬುದು ಸಾಮಾನ್ಯ ನಿಯಮ. ಆದರೆ ಅಂದು ನಂತರ ಇಡೀ ದಿನ ಚೈತ್ರ ಶುದ್ಧ ಪ್ರತಿಪದೆ ಇರುತ್ತದೆ, ಮಾತ್ರವಲ್ಲ ಮರುದಿನ ಸೂರ್ಯೋದಯದೊಳಗೆ ಮುಕ್ತಾಯವಾಗುತ್ತದೆ. ಮರುದಿನ ಸೂರ್ಯೋದಯಕ್ಕೆ ಬಿದಿಗೆ ಇರುತ್ತದೆ. ಹಾಗಾಗಿ 19ರಂದು ಚಾಂದ್ರ ಯುಗಾದಿ ಆಚರಣೆ.

'ಹವ್ಯಕ' ಪತ್ರಿಕೆಯ ವಜ್ರಮಹೋತ್ಸವ: ಸಮುದಾಯ ಮಾಧ್ಯಮವೊಂದರ ಸಾರ್ಥಕ ಪಯಣ

ಒಂದು ಸಂಸ್ಥೆಯ ಅಭಿವೃದ್ಧಿ ಪಥದಲ್ಲಿ ಪತ್ರಿಕೆಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಹವ್ಯಕ ಮಹಾಸಭೆ ಇಷ್ಟೊಂದು ಎತ್ತರಕ್ಕೆ ಬೆಳೆದು ಹೆಸರು ಗಳಿಸಿದ್ದರ ಹಿಂದೆ ಪತ್ರಿಕೆಯ ಪಾಲು ದೊಡ್ಡದಿದೆ.

▸ ನಾರಾಯಣ ಭಟ್ ಹುಳೇಗಾರು



ವಿಶಿಷ್ಟ ಸಂಸ್ಕೃತಿ, ಮೌಲ್ಯಗಳಿಂದ ತನ್ನದೇ ಆದ ಛಾಪು ಮೂಡಿಸಿ ಸಾವಿರಾರು ವರ್ಷಗಳಿಂದ ಕನ್ನಡ ನೆಲದಲ್ಲಿ ನೆಲೆ ನಿಂತ ಒಂದು ಜನಾಂಗ ಹವ್ಯಕ ಸಮಾಜ. ಒಂದು ಅಪೂರ್ವ ಭಾಷೆಯನ್ನು, ವಿಶಿಷ್ಟ ತಳಿಯನ್ನು ಹೊಂದಿದ ಈ ಜನಾಂಗ ಸಂಘಟನೆಯ ದೃಷ್ಟಿಯಿಂದ ಬೆಂಗಳೂರಿನಲ್ಲಿ 1943ರಲ್ಲಿ ಶ್ರೀ ಅಖಿಲ ಹವ್ಯಕ ಮಹಾಸಭೆಯನ್ನು ಹುಟ್ಟುಹಾಕಿತು. ಇದೊಂದು ಪ್ರಾತಿನಿಧಿಕ ಸಂಸ್ಥೆಯಾಗಿ ಸಾರ್ಥಕ 82 ವಸಂತಗಳನ್ನು ಪೂರೈಸಿ ಸಮಾಜಕ್ಕೆ ಆತ್ಮವಿಶ್ವಾಸವನ್ನು ತುಂಬುವಲ್ಲಿ ತನ್ನೆಲ್ಲಾ ಶ್ರಮ ಹಾಕಿದೆ.

ಇದರ ಮುಖವಾಣಿಯಾಗಿ ಕಳೆದ ಅರವತ್ತು ವರ್ಷಗಳಿಂದ ನಿರಂತರವಾಗಿ ಪ್ರಕಟಗೊಳ್ಳುತ್ತಿರುವ 'ಹವ್ಯಕ ಪತ್ರಿಕೆ'ಯು ಇದೀಗ ವಜ್ರಮಹೋತ್ಸವ ಸಂಭ್ರಮದಲ್ಲಿದೆ. ಹವ್ಯಕ ಸಮಾಜದ ಚಿಂತನೆ, ನಡೆ ನುಡಿ, ಸಂಸ್ಕೃತಿ, ಸಂಪ್ರದಾಯ, ಸಂಸ್ಕಾರ, ಕೃಷಿ, ಸಾಹಿತ್ಯ, ಕಥೆ, ಕವನ ಮತ್ತು ಸಾಮಾಜಿಕ ಜಾಗೃತಿಗೆ ತನ್ನನ್ನು ತೆರೆದುಕೊಂಡ ಒಂದು ಮಹತ್ವಪೂರ್ಣ ಆಕರ ಸಂಚಿಕೆಯಾಗಿದೆ.

1966 ಜೂನ್ 1ರಂದು ಆರಂಭವಾದ ಈ ಪತ್ರಿಕೆ, 60 ವರ್ಷಗಳ ಕಾಲ ನಿರಂತರವಾಗಿ ಸಮಾಜದ ಧ್ವನಿಯಾಗಿ, ಮೌಲ್ಯಗಳ ಪ್ರತಿನಿಧಿಯಾಗಿ ಹಾಗೂ ಸಾಂಸ್ಕೃತಿಕ ಕೊಂಡಿಯಾಗಿಯೇ ಉಳಿದಿದೆ. ಆರಂಭಿಕ ದಿನಗಳಲ್ಲಿ ಪತ್ರಿಕೆ ತ್ರೈಮಾಸಿಕವಾಗಿ ಪ್ರಕಟವಾಗುತ್ತಿತ್ತು. ಅಚ್ಚು ಮೊಳೆ ಜೋಡಿಸಿ ಮುದ್ರಣ ಮಾಡಬೇಕಾಗಿತ್ತು. ಸೀಮಿತ ಸಂಪನ್ಮೂಲಗಳು, ವಿತರಣೆಯ ಅಡಚಣೆಗಳು ಮತ್ತು ಕಾಲದ ತಾಂತ್ರಿಕ ನಿರ್ಬಂಧಗಳ ನಡುವೆಯೂ ಅಖಿಲ ಮಹಾಸಭೆಯ ಮುಖವಾಣಿಯಾಗಿ ಡಿಜಿಟಲ್ ಮುದ್ರಣ ಪತ್ರಿಕೆಗೊಂದು ಹೊಸ ರೂಪವನ್ನು ತಂದಿತು. ಸಂಸ್ಥೆ ಬೆಳೆದಂತೆ, ಸಂಪರ್ಕ ಹೆಚ್ಚಿದಂತೆ 1981 ಜೂನ್ 1ರಿಂದ ಮಾಸ ಪತ್ರಿಕೆಯಾಗಿ ನಿರಂತರವಾಗಿ ಪ್ರಕಟವಾಗುತ್ತಾ ಬಂದಿದೆ. ಈ ರೂಪಾಂತರವು ವಿಷಯ ವೈವಿಧ್ಯತೆ, ಕಾಲಪ್ರಜ್ಞೆ ಮತ್ತು ಓದುಗರ ಸಂಪರ್ಕವನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಸಮಾಜದ ಆಗುಹೋಗುಗಳ ಬಗ್ಗೆ ಸೂಕ್ಷ್ಮ ದೃಷ್ಟಿಯನ್ನು ಬೀರಿ ಸಮುದಾಯಕ್ಕೆ ಸಮಾಚಾರವನ್ನು ತಲುಪಿಸುವ, ಹವ್ಯಕ ಮನಸ್ಸುಗಳನ್ನು ಸಾಂಸ್ಕೃತಿಕವಾಗಿ ಮುಟ್ಟುವ, ಗಟ್ಟಿಗೊಳಿಸುವ ಒಂದು ಸಮರ್ಥ ಮಾಧ್ಯಮವಾಗಿ ತನ್ನನ್ನು ತೆರೆದುಕೊಂಡಿದೆ.

ಇಂತಹ ಪತ್ರಿಕೆಗಳಲ್ಲಿ ಮುಖ್ಯವಾಗಿ 2 ವಿಧ. ಒಂದು ವ್ಯವಸಾಯಿ (ವಾಣಿಜ್ಯ) ಪತ್ರಿಕೆಗಳು. ಮತ್ತೊಂದು ಹವ್ಯಕದಂತಹ ಸಂಘ ಸಂಸ್ಥೆಗಳಿಂದ ಪ್ರಕಟವಾಗುವ ಅದರ ಮುಖವಾಣಿ. ಹವ್ಯಕದ ಉದ್ದೇಶ ಹಣ ಗಳಿಕೆಯಲ್ಲ. ಈ ರೀತಿಯ ಪತ್ರಿಕೆಗಳು ಆರ್ಥಿಕ ಮಿತಿ, ಲೇಖನಗಳ ಮಿತಿ, ಲೇಖಕರ ಮಿತಿ, ಓದುಗರ ಮಿತಿ, ಪುಟಗಳ ಮಿತಿ, ಅಂಚೆ



ಮಿತಿ ಇತ್ಯಾದಿ ಮಿತಿಗಳ ನಡುವೆ ಕೆಲಸ ಮಾಡಬೇಕಾಗುತ್ತದೆ. ಆದರೂ ಅದನ್ನು ಸವಾಲಾಗಿ ಸ್ವೀಕರಿಸಿದ ಹವ್ಯಕ ಪತ್ರಿಕೆ ಮೌಲಿಕವಾಗಿ ತನ್ನನ್ನು ಗುರುತಿಸಿಕೊಳ್ಳುತ್ತಾ ನಿರಂತರವಾಗಿ ಪ್ರಕಟವಾಗುತ್ತಿರುವುದು ಸಮಾಜಮುಖಿ ಸಂಸ್ಥೆಯ ಮೇಲಿನ ಅಭಿಮಾನದಿಂದ ಮತ್ತು ಅರ್ಥಪೂರ್ಣ ಕಾರ್ಯಕ್ರಮಗಳಿಂದ. ಇಂದು ಅನೇಕ ದೊಡ್ಡದೊಡ್ಡ ಸಂಸ್ಥೆಗಳಿಂದ ಪ್ರಕಟವಾಗುತ್ತಿರುವ ಪತ್ರಿಕೆಗಳು ತನ್ನ ರೆಗ್ಯುಲಾರಿಟಿಯನ್ನು ಕಳೆದುಕೊಂಡು ಸ್ಥಗಿತಗೊಂಡ ಉದಾಹರಣೆಗಳೇ ಹೆಚ್ಚು. ಆದರೆ 'ಹವ್ಯಕ' ಒಂದು ಸೀಮಿತ ಜನಾಂಗದ ಧ್ವನಿಯಾಗಿ ತನ್ನ ನಿರಂತರತೆಗೆ ಎಂದೂ ಬ್ರೇಕ್ ಹಾಕಿಲ್ಲ. ಸಾಮಾಜಿಕ ಪ್ರಜ್ಞೆಯನ್ನು ತನ್ನ ಪುಟ ಪುಟಗಳಲ್ಲಿ ಕಟ್ಟಿಕೊಡುತ್ತಾ 60 ಅನ್ನು ತುಂಬಿಕೊಂಡು, ಪ್ರತಿ ತಿಂಗಳು ಸುಮಾರು 30 ಸಾವಿರ ಕುಟುಂಬಗಳಿಗೆ ತಲುಪುತ್ತಿರುವುದು ಹೆಮ್ಮೆಯ ಸಂಗತಿ. ಕೇವಲ 3-4 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಜನಾಂಗದ ಸಂಸ್ಥೆಯಾಗಿದ್ದರೂ ಹವ್ಯಕ ಪ್ರಜ್ಞೆಯನ್ನು ಕಟ್ಟಿಕೊಡುವಲ್ಲಿ ಇಟ್ಟ ಹೆಜ್ಜೆಯನ್ನು ಹಿಂದಿಡಲಿಲ್ಲ.

ಒಂದು ಸಂಸ್ಥೆಯ ಅಭಿವೃದ್ಧಿ ಪಥದಲ್ಲಿ ಪತ್ರಿಕೆಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಹವ್ಯಕ ಮಹಾಸಭೆ ಇಷ್ಟೊಂದು ಎತ್ತರಕ್ಕೆ ಬೆಳೆದು ಹೆಸರು ಗಳಿಸಿದ್ದರ ಹಿಂದೆ ಪತ್ರಿಕೆಯ ಪಾಲು ದೊಡ್ಡದಿದೆ. ದೂರದ ಊರುಗಳು ಮತ್ತು ವಿದೇಶಗಳಲ್ಲಿರುವ ಹವ್ಯಕರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಮತ್ತು ಕೇಂದ್ರ ಸಂಸ್ಥೆಯೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ಇದು ಮುಖ್ಯ ಮಾಧ್ಯಮವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಪತ್ರಿಕೆಯು 8 ಪುಟಗಳಿಂದ 68 ಪುಟಗಳಿಗೆ ಬೆಳೆದಿದ್ದು, ವೈವಿಧ್ಯಮಯ ವಿಚಾರಗಳೊಂದಿಗೆ ಮಾಹಿತಿ ಪತ್ರಿಕೆಯಾಗಿ ಹೊರಬರುತ್ತಿದೆ. ಇದೀಗ ಹವ್ಯಕ ಪತ್ರಿಕೆಗೆ ಷಷ್ಟ್ಯಬ್ದದ ಸಂಭ್ರಮ. ಇದರ ಸವಿನೆನಪಿಗಾಗಿ ವೈವಿಧ್ಯಮಯ ವಿಷಯಗಳು ಹಾಗೂ ಹೆಸರಾಂತ ಲೇಖಕರ ಲೇಖನಗಳನ್ನೊಳಗೊಂಡ ಏಪ್ರಿಲ್ ಸಂಚಿಕೆಯು ವಿಶೇಷಾಂಕವಾಗಿ ಹೊರಬರಲಿದೆ.



ಯುದ್ಧದ ತೀವ್ರತೆ ಮತ್ತಷ್ಟು ಹೆಚ್ಚಳ

ಟೆಹ್ರಾನ್‌ನಲ್ಲಿ ಅಮೆರಿಕ- ಇಸ್ರೇಲ್ ವಿರುದ್ಧ ಜನ ಸೇರಿದ್ದ ಪ್ರತಿಭಟನೆ ಸಮೀಪದಲ್ಲೇ ಭಾರೀ ಸ್ಫೋಟ

ಟೆಹ್ರಾನ್/ದುಬೈ: ಇರಾನ್ ರಾಜಧಾನಿ ಟೆಹ್ರಾನ್‌ನ ಕೇಂದ್ರ ಭಾಗದಲ್ಲಿ ಶುಕ್ರವಾರ ಭಾರೀ ಸ್ಫೋಟ ಸಂಭವಿಸಿದೆ. ಸಾವಿರಾರು ಜನರು ಸೇರಿದ್ದ ಸರ್ಕಾರ ಪ್ರಾಯೋಜಿತ ಕುದ್ಸ್ ಡೇ ಪ್ರತಿಭಟನೆ ನಡೆಯುತ್ತಿದ್ದ ಪ್ರದೇಶದ ಸಮೀಪದಲ್ಲೇ ಈ ಸ್ಫೋಟ ಸಂಭವಿಸಿದೆ. ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಲು ಪ್ರತಿವರ್ಷ ನಡೆಯುವ ಈ ರ್‍ಯಾಲಿಯ ಸಮಯದಲ್ಲಿ ಈ ಸ್ಫೋಟ ಸಂಭವಿಸಿದೆ.

ಸ್ಫೋಟಕ್ಕೂ ಮೊದಲು ಕೇಂದ್ರ ಟೆಹ್ರಾನ್ ಪ್ರದೇಶವನ್ನು ಗುರಿಯಾಗಿಸಬಹುದು ಎಂದು ಇಸ್ರೇಲ್ ಎಚ್ಚರಿಕೆ ನೀಡಿತ್ತು. ಆದರೆ ತಕ್ಷಣದಂತೆ ಯಾವುದೇ ಸಾವುನೋವುಗಳ ಮಾಹಿತಿ ಲಭ್ಯವಾಗಿಲ್ಲ. ಆದರೂ ಈ ಘಟನೆ ಎರಡು ವಾರಗಳಿಂದ ಮುಂದುವರಿಯುತ್ತಿರುವ ಯುದ್ಧದ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಇರಾನ್ ಪ್ರತಿದಿನವೂ ಇಸ್ರೇಲ್ ಹಾಗೂ ಪರ್ಷಿಯನ್ ಗಲ್ಫ್ ಪ್ರದೇಶದ ಕೆಲವು ರಾಷ್ಟ್ರಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸುತ್ತಿದ್ದು, ಜಾಗತಿಕವಾಗಿ ವ್ಯಾಪಾರವಾಗುವ ತೈಲದ ಸುಮಾರು ಐದನೇ ಭಾಗ ಸಾಗುವ ಹಾರ್ಮುಜ್ ಜಲಸಂಧಿಯನ್ನು ಕೂಡ ಬಹುತೇಕ ಮುಚ್ಚಿದೆ. ಇದೇ ವೇಳೆ ಅಮೆರಿಕ ಮತ್ತು ಇಸ್ರೇಲ್ ಯುದ್ಧ ವಿಮಾನಗಳು ಇರಾನ್‌ನ ಸೇನಾ ಹಾಗೂ ಇತರ ಪ್ರಮುಖ ಗುರಿಗಳ ಮೇಲೆ ನಿರಂತರ ದಾಳಿಗಳನ್ನು ಮುಂದುವರಿಸುತ್ತಿವೆ.

ರ್‍ಯಾಲಿ ಪ್ರದೇಶದಲ್ಲಿ ಭಾರೀ ಸ್ಫೋಟ

ಶುಕ್ರವಾರ ಮಧ್ಯಾಹ್ನ ವೇಳೆಗೆ ಟೆಹ್ರಾನ್‌ನ ಫರ್ಡೋವ್ಸಿ ಚೌಕದ ಬಳಿ ಸ್ಫೋಟ ಸಂಭವಿಸಿದೆ. ಇಲ್ಲಿ ಸಾವಿರಾರು ಜನರು 'ಇಸ್ರೇಲ್‌ಗೆ ಮರಣ', 'ಅಮೆರಿಕಗೆ ಮರಣ' ಎಂಬ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟಿಸುತ್ತಿದ್ದರು.

ಸ್ಫೋಟಕ್ಕೂ ಸ್ವಲ್ಪ ಹೊತ್ತಿಗೆ ಮೊದಲು ಇಸ್ರೇಲ್ ಫಾರ್ಸಿ ಭಾಷೆಯ ಎಕ್ಸ್ ಖಾತೆಯ ಮೂಲಕ ಆ ಪ್ರದೇಶವನ್ನು ಖಾಲಿ ಮಾಡುವಂತೆ ಎಚ್ಚರಿಕೆ ನೀಡಿತ್ತು. ಆದರೆ ಯುದ್ಧ ಆರಂಭವಾದ ನಂತರದಿಂದ ಇರಾನ್‌ನಲ್ಲಿ ಇಂಟರ್ನೆಟ್ ಬಳಕೆ ಬಹುತೇಕ ಸ್ಥಗಿತಗೊಂಡಿರುವುದರಿಂದ ಬಹುತೇಕ ಜನರಿಗೆ ಈ ಸಂದೇಶ ತಲುಪಿರಲಿಲ್ಲ.

ಸ್ಫೋಟದ ನಂತರ ಪ್ರದೇಶದಲ್ಲಿ ಹೊಗೆ ಏರುತ್ತಿರುವ ದೃಶ್ಯಗಳು ಕಂಡುಬಂದಿದ್ದು, ಜನರು 'ಅಲ್ಲಾಹು ಅಕ್ಬರ್' ಎಂದು ಘೋಷಣೆಗಳನ್ನು ಕೂಗುತ್ತಿರುವ ವಿಡಿಯೋಗಳು ಹರಿದಾಡಿವೆ.

ಆ ಸಂದರ್ಭದಲ್ಲಿ ಇರಾನ್ ನ್ಯಾಯಾಂಗ ಮುಖ್ಯಸ್ಥ ಗೋಲಾಮ್‌ಹೊಸೇನ್ ಮೊಹ್ಸೆನಿ ಈ ಸ್ಥಳದಲ್ಲೇ ಸರ್ಕಾರಿ ಟಿವಿಗೆ ಸಂದರ್ಶನ ನೀಡುತ್ತಿದ್ದರು. ಸ್ಫೋಟದ ನಂತರ ಅವರ ಭದ್ರತಾ ಸಿಬ್ಬಂದಿ ಅವರನ್ನು ಸುತ್ತುವರಿದು ರಕ್ಷಣೆ ನೀಡಿದರು. ಈ ಸಂದರ್ಭದಲ್ಲೂ ಅವರು 'ಕ್ಷಿಪಣಿಗಳ ಮಳೆಯಲ್ಲಿಯೂ ಇರಾನ್ ಹಿಂದೆ ಸರಿಯುವುದಿಲ್ಲ' ಎಂದು ಘೋಷಿಸಿದರು. ಮತ್ತೊಬ್ಬ ಹಿರಿಯ ಭದ್ರತಾ ಅಧಿಕಾರಿ ಅಲಿ ಲಾರಿಜಾನಿ ಈ ದಾಳಿ 'ಇಸ್ರೇಲ್‌ನ ನಿರಾಶೆಯ ಸಂಕೇತ' ಎಂದು ಹೇಳಿದ್ದಾರೆ.

ಇದರ ಜತೆಗೆ ಕಳೆದ 24 ಗಂಟೆಗಳಲ್ಲಿ 200ಕ್ಕೂ ಹೆಚ್ಚು ಗುರಿಗಳನ್ನು ಹೊಡೆದಿದ್ದಾಗಿ ಇಸ್ರೇಲ್ ಘೋಷಿಸಿದೆ. ಕ್ಷಿಪಣಿ ಉಡಾವಣಾ ತಾಣಗಳು, ರಕ್ಷಣಾ ವ್ಯವಸ್ಥೆಗಳು ಮತ್ತು ಶಸ್ತ್ರಾಸ್ತ್ರ ಉತ್ಪಾದನಾ ಕೇಂದ್ರಗಳು ಇದರಲ್ಲಿ ಸೇರಿವೆ.

ಒಮಾನ್‌ಗೆ ಡ್ರೋನ್ ದಾಳಿ: ಇಬ್ಬರು ಭಾರತೀಯ ಬಲಿ

ಗಲ್ಫ್ ಪ್ರದೇಶದ ತೈಲ ಮತ್ತು ಇತರ ಮೂಲಸೌಕರ್ಯಗಳ ಮೇಲೂ ಇರಾನ್ ದಾಳಿಗಳನ್ನು ಮುಂದುವರಿಸಿದೆ. ಸೌದಿ ಅರೇಬಿಯಾದ ಪ್ರಕಾರ ಸುಮಾರು 50 ಡ್ರೋನ್‌ಗಳನ್ನು ಅವರು ಹೊಡೆದುರುಳಿಸಿದ್ದಾರೆ. ಒಮಾನ್‌ನ ಸೋಹಾರ್ ಕೈಗಾರಿಕಾ ಪ್ರದೇಶದಲ್ಲಿ ಎರಡು ಡ್ರೋನ್‌ಗಳು ಪತನಗೊಂಡ ಪರಿಣಾಮ ಇಬ್ಬರು ಭಾರತೀಯ ಬಲಿಯಾಗಿದ್ದಾರೆ ಎಂದು ಒಮಾನ್ ಸುದ್ದಿಸಂಸ್ಥೆ ತಿಳಿಸಿದೆ. ಬಹ್ರೈನ್‌ನಲ್ಲಿ ಕೂಡ ಕ್ಷಿಪಣಿ ಎಚ್ಚರಿಕೆ ಸೈರನ್‌ಗಳು ಮೊಳಗಿದರೆ, ದುಬೈನಲ್ಲಿ ತಡೆದ ಡ್ರೋನ್ ಅವಶೇಷಗಳಿಂದ ಕೈಗಾರಿಕಾ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ದುಬೈ ಅಂತಾರಾಷ್ಟ್ರೀಯ ಹಣಕಾಸು ಕೇಂದ್ರದಲ್ಲಿನ ಒಂದು ಕಟ್ಟಡಕ್ಕೂ ಅವಶೇಷಗಳು ಬಿದ್ದು ಹಾನಿಯಾಗಿದೆ. ಇರಾನ್ ಈ ವಾರದ ಆರಂಭದಲ್ಲಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳನ್ನು ಗುರಿಯಾಗಿಸುವುದಾಗಿ ಹೇಳಿತ್ತು.



ಇಸ್ರೇಲ್- ಹಿಜ್ಬುಲ್ಲಾ ಸಂಘರ್ಷ ಹೆಚ್ಚಳ

ಲೆಬನಾನ್‌ನ ಇರಾನ್ ಬೆಂಬಲಿತ ಹಿಜ್ಬುಲ್ಲಾ ಗುಂಪು ಉತ್ತರ ಇಸ್ರೇಲ್ ಕಡೆಗೆ ಹಲವಾರು ರಾಕೆಟ್ ದಾಳಿಗಳನ್ನು ನಡೆಸಿದೆ. ಇದರಿಂದ ಸುಮಾರು 60 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಬೇರುತ್‌ನ ದಕ್ಷಿಣ ಪಶ್ಚಿಮ ಭಾಗದಲ್ಲಿ ನಡೆದ ಇಸ್ರೇಲ್ ದಾಳಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ. ಮತ್ತೊಂದು ದಾಳಿಯಲ್ಲಿ ಒಂದು ಅಪಾರ್ಟ್‌ಮೆಂಟ್ ಕಟ್ಟಡ ಬೆಂಕಿಗಾಹುತಿಯಾಗಿದೆ.

ರಾಷ್ಟ್ರಗಳ ಗಮನಸೆಳೆದ ಕ್ವಾಡ್ ಕಾಪ್ಟರ್

ಕೈವ್: ಸಾಂಪ್ರದಾಯಿಕ ವೈಮಾನಿಕ ರಕ್ಷಣಾ ಮಾದರಿ ಬದಲಾಗುತ್ತಿದ್ದು, ಉಕ್ರೇನ್‌ನ ಕಡಿಮೆ-ವೆಚ್ಚದ ಇಂಟರ್‌ಸೆಪ್ಟರ್ ಡ್ರೋನ್‌ಗಳ ಬಳಕೆ ಪೆಂಟಗನ್ ಮತ್ತು ಮಧ್ಯಪ್ರಾಚ್ಯ ಮಿತ್ರರಾಷ್ಟ್ರಗಳ ಗಮನ ಸೆಳೆಯುತ್ತಿದೆ. ಇರಾನ್ ವಿನ್ಯಾಸದ ಶಾಹೆದ್-136 ಡ್ರೋನ್‌ಗಳ ನಿರಂತರ ದಾಳಿಯನ್ನು ಎದುರಿಸುತ್ತಿರುವ ಉಕ್ರೇನ್ ಪಡೆಗಳು, ಆರ್ಥಿಕ ಮತ್ತು ಯುದ್ಧತಂತ್ರದ ದೃಷ್ಟಿಯಿಂದ ಸುಸ್ಥಿರ ಡ್ರೋನ್ ವಿರೋಧಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿವೆ.


ವೆಚ್ಚ ಅಜಗಜಾಂತರ: ಆಧುನಿಕ ಯುದ್ಧದ ನಿರ್ಣಾಯಕ ವ್ಯತ್ಯಾಸ ವೆಚ್ಚವೇ ಆಗಿದೆ. ಒಂದು ಶಾಹೆದ್ ಡ್ರೋನ್‌ನ ಬೆಲೆ ಅಂದಾಜು 30,000 ಆಗಿದ್ದರೆ, ಅದನ್ನು ಹೊಡೆದುರುಳಿಸಲು ಬಳಸುವ ಪೇಟ್ರಿಯಾಟ್ ಪಿಎಸಿ-3 ಕ್ಷಿಪಣಿಗಳ ಬೆಲೆ ಲಕ್ಷಾಂತರ ಡಾಲರ್‌ಗಳು. ಇದನ್ನು ಸರಿಪಡಿಸಲು, ವೈಲ್ಡ್ ಹಾರ್ನೆಟ್ಸ್ ತಯಾರಿಸಿದ ಹೆಚ್ಚಿನ ವೇಗದ ಸ್ಟಿಂಗ್ ಕ್ವಾಡ್‌ಕಾಪ್ಟರ್‌ಗಳನ್ನು ನಿಯೋಜಿಸಲಾಗುತ್ತಿದೆ. ಅಂದಾಜು 2,500 ವೆಚ್ಚದ ಈ ಇಂಟರ್‌ಸೆಪ್ಟರ್‌ಗಳು, 2022 ರಿಂದ ಉಕ್ರೇನ್ ಮೇಲೆ ನಡೆದ 57,000ಕ್ಕೂ ಹೆಚ್ಚು ಡ್ರೋನ್ ದಾಳಿಗಳನ್ನು ಕಡಿಮೆ ವೆಚ್ಚದಲ್ಲಿ ತಡೆದಿವೆ ಎನ್ನಲಾಗಿದೆ.

ತಾಂತ್ರಿಕ ಶ್ರೇಷ್ಠತೆ: ಸ್ಟಿಂಗ್ ಡ್ರೋನ್ ಅನ್ನು ವಿಶೇಷವಾಗಿ ವಾಯುದಾಳಿಯನ್ನು ವಿಫಲಗೊಳಿಸಲು ವಿನ್ಯಾಸಗೊಳಿಸಲಾಗಿದೆ. ಗಂಟೆಗೆ 150-170 ಕಿಮೀ ವೇಗದಲ್ಲಿ ಚಲಿಸುವ ಈ ಬುಲೆಟ್ ಆಕಾರದ ಯುನಿಟ್‌ಗಳನ್ನು ವಿಶೇಷ ಪತ್ತೆ ಜಾಲಗಳ ಮೂಲಕ ನಿಯಂತ್ರಿಸಲಾಗುತ್ತದೆ. ಜನವರಿ 2026 ರ ಹೊತ್ತಿಗೆ ಸರಿಸುಮಾರು ಶೇ.70 ಶಾಹೆದ್ ಡ್ರೋನ್‌ಗಳನ್ನು ಇಂತಹ ಇಂಟರ್‌ಸೆಪ್ಟರ್ ಡ್ರೋನ್‌ಗಳ ಮೂಲಕವೇ ಹೊಡೆದುರುಳಿಸಲಾಗಿದೆ ಎಂದು ವರದಿಯಾಗಿದೆ. ಜೆಟ್ ಚಾಲಿತ ಗೆರಾನ್-3ನಂತಹ ವೇಗದ ಡ್ರೋನ್‌ಗಳನ್ನು ಎದುರಿಸಲು ಎಐ-ಸಂಯೋಜಿತ ಮಾರ್ಗದರ್ಶನ ಮತ್ತು ಜೆಟ್-ಬೂಸ್ಟೆಡ್ ಮಾದರಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಇವುಗಳ ಯಶಸ್ಸಿನ ಪ್ರಮಾಣ ಶೇ.90ಕ್ಕೆ ಏರುವ ನಿರೀಕ್ಷೆಯಿದೆ.

▸▸ ಜಾಗತಿಕ ಡ್ರೋನ್ ರಕ್ಷಣಾ ವ್ಯವಸ್ಥೆಯಲ್ಲಿ ಹೊಸ ಬದಲಾವಣೆ

ರಫ್ತಿನ ಕಡೆಗೂ ಗಮನ: ಪೆಂಟಗನ್ ಈ ಹೆಚ್ಚಿನ ವೇಗದ ಇಂಟಸೆರ್‌ಪ್ಟರ್‌ಗಳ ಮೇಲೆ ಗಮನ ಕೇಂದ್ರೀಕರಿಸಿದೆ. ವಿಶೇಷವಾಗಿ, ಈ ಹಿಂದೆ ಯುಎಸ್ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡಿದ್ದ ಗಲ್ಫ್ ಪ್ರದೇಶದಲ್ಲಿ ಇವುಗಳನ್ನು ಬಳಸಲು ಆಸಕ್ತಿ ವಹಿಸಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ, ಉಕ್ರೇನಿಯನ್ ಮಿಲಿಟರಿ ತಜ್ಞರನ್ನು ಕತಾರ್, ಯುಎಇ, ಸೌದಿ ಅರೇಬಿಯಾ ಮತ್ತು ಜೋರ್ಡಾನ್‌ಗೆ ಕಳುಹಿಸಿರುವುದನ್ನು ಖಚಿತಪಡಿಸಿದ್ದಾರೆ. ಈ ವಿನಿಮಯ, ಉಭಯ ದೇಶಗಳಿಗೆ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ.

ಉಕ್ರೇನಿಯನ್ ಡ್ರೋನ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ, ಮಿತ್ರರಾಷ್ಟ್ರಗಳು ತಮ್ಮ ದುಬಾರಿ ಕ್ಷಿಪಣಿಗಳನ್ನು ಬ್ಯಾಲಿಸ್ಟಿಕ್ ಬೆದರಿಕೆಗಳಿಗಾಗಿ ಉಳಿಸಿಕೊಳ್ಳಬಹುದು ಮತ್ತು ಕಡಿಮೆ ವೆಚ್ಚದ ಇಂತಹ ಆವಿಷ್ಕಾರಗಳನ್ನು ಹೆಚ್ಚು ಬಳಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಇದರ ಹಿಂದಿದೆ.



ಅಮೆರಿಕ ಇಂಧನ ಮರುಪೂರಣ ವಿಮಾನ ಇರಾಕ್‌ನಲ್ಲಿ ಪತನ

ವಾಷಿಂಗ್ಟನ್: ಮಿಲಿಟರಿ ಕಾರ್ಯಾಚರಣೆಯ ಸಂದರ್ಭದಲ್ಲಿ ಅಮೆರಿಕದ ಕೆಸಿ-135 ಇಂಧನ ಮರುಪೂರಣ ವಿಮಾನವೊಂದು ಪಶ್ಚಿಮ ಇರಾಕ್‌ನಲ್ಲಿ ಪತನಗೊಂಡಿದೆ. ವಿಮಾನದಲ್ಲಿದ್ದ ಅಮೆರಿಕ ಸೇನೆಯ ನಾಲ್ಕು ಸಿಬ್ಬಂದಿ ಮೃತರಾಗಿದ್ದಾರೆ. ಗುರುವಾರ ರಾತ್ರಿ ಆಪರೇಷನ್ ಎಪಿಕ್ ಫ್ಯೂರಿ ಭಾಗವಾಗಿ ಹಾರಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ ಎಂದು ಅಮೆರಿಕ ಸೇನೆ ತಿಳಿಸಿದೆ.

ಇರಾನ್ ಸಂಘರ್ಷಕ್ಕೆ ಸಂಬಂಧಿಸಿದ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾಗ ಒಂದು ವಿಮಾನ ಪಶ್ಚಿಮ ಇರಾಕ್‌ನಲ್ಲಿ ಪತನಗೊಂಡರೆ, ಎರಡನೆಯದು ಸುರಕ್ಷಿತವಾಗಿ ಇಳಿದಿದೆ. ಅಪಘಾತಕ್ಕೆ ಶತ್ರುಪಡೆಗಳ ಅಥವಾ ಮಿತ್ರಪಡೆಗಳ ದಾಳಿ ಕಾರಣವಲ್ಲ ಎಂದು ಹೇಳಲಾಗಿದೆ. ಆದರೆ, ಇರಾಕ್‌ನ ಇಸ್ಲಾಮಿಕ್ ರೆಸಿಸ್ಟೆನ್ಸ್ ಎಂಬ ಸಶಸ್ತ್ರ ಇರಾನ್ ಬೆಂಬಲಿತ ಗುಂಪು ವಿಮಾನವನ್ನು ಹೊಡೆದುರುಳಿಸಿರುವುದಾಗಿ ಹೇಳಿಕೊಂಡಿದೆ.

ಕೆಸಿ-135 ವಿಮಾನದ ಬಗ್ಗೆ: ಬೋಯಿಂಗ್ ಕೆಸಿ-135 ಸ್ಟ್ರಾಟೋಟ್ಯಾಂಕರ್ ವಿಮಾನವನ್ನು ಅಮೆರಿಕದ ವಾಯುಪಡೆಯ ಯುದ್ಧ ವಿಮಾನಗಳಿಗೆ ಆಕಾಶದಲ್ಲೇ ಇಂಧನ ತುಂಬಿಸಲು ಬಳಸುತ್ತದೆ. ಬೋಯಿಂಗ್ 707 ವಿಮಾನದ ವಿನ್ಯಾಸವನ್ನು ಆಧರಿಸಿದ ಇದು ಕಳೆದ ಆರು ದಶಕಗಳಿಂದ ಸೇವೆಯಲ್ಲಿತ್ತು. ಪ್ರಸ್ತುತ ಅಮೆರಿಕದ ವಾಯುಪಡೆ ಇಂತಹ 376 ವಿಮಾನಗಳನ್ನು ಹೊಂದಿದೆ.

ಸರಣಿ ವಿಮಾನ ಅಪಘಾತಗಳು: ಇರಾನ್ ವಿರುದ್ಧದ ಇಸ್ರೇಲ್ ಮಿಲಿಟರಿ ಕಾರ್ಯಾಚರಣೆಗೆ ಅಮೆರಿಕ ಕೈಜೋಡಿಸಿದ ಎರಡು ವಾರಗಳಲ್ಲಿ ಸಂಭವಿಸಿದ ನಾಲ್ಕನೇ ವಿಮಾನ ನಷ್ಟ ಇದಾಗಿದೆ. ಇದಕ್ಕೂ ಮೊದಲು, ಕುವೈತ್‌ನಿಂದ ತಪ್ಪಾಗಿ ನಡೆಸಿದ ದಾಳಿಯಿಂದ ಮೂರು ಅಮೆರಿಕನ್ ಫೈಟರ್ ಜೆಟ್‌ಗಳು ಪತನಗೊಂಡಿದ್ದವು. ಈ ಸಂಘರ್ಷದಲ್ಲಿ ಇದುವರೆಗೆ ಏಳು ಅಮೆರಿಕನ್ ಸೈನಿಕರು ಮೃತಪಟ್ಟಿದ್ದು, ಸುಮಾರು 140 ಮಂದಿ ಗಾಯಗೊಂಡಿದ್ದಾರೆ ಎಂದು ಪೆಂಟಗನ್ ವರದಿ ಮಾಡಿದೆ.

ಕಿರುಸುದ್ದಿ

ಇರಾನಿನ ರೆಡ್ ಕ್ರೆಸೆಂಟ್ ಸೊಸೈಟಿಗೆ ಚೀನಾ ಸಹಾಯ

ಬೀಜಿಂಗ್: ಮಧ್ಯಪ್ರಾಚ್ಯ ಯುದ್ಧದ ಮಧ್ಯೆ ಇರಾನಿನ ರೆಡ್ ಕ್ರೆಸೆಂಟ್ ಸೊಸೈಟಿಗೆ 2,00,000 ಡಾಲರ್ ಮೌಲ್ಯದ ಮಾನವೀಯ ನೆರವನ್ನು ಒದಗಿಸುತ್ತದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಗುವೊ ಜಿಯಾಕುನ್ ಘೋಷಿಸಿದ್ದಾರೆ. ವರದಿಗಳ ಪ್ರಕಾರ, ಸಂಘರ್ಷದ ವೇಳೆ ನಾಗರಿಕರು ಮತ್ತು ಸೈನಿಕೇತರ ಗುರಿಗಳ ಮೇಲೆ ವಿವೇಚನಾರಹಿತ ದಾಳಿಗಳನ್ನು ಗುವೊ ತೀವ್ರವಾಗಿ ಖಂಡಿಸಿದ್ದಾರೆ. ಈ ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಸಹಾಯ ಮಾಡಲು ಒಳಗೊಂಡಿರುವ ಎಲ್ಲಾ ಪಕ್ಷಗಳೊಂದಿಗೆ ಸಂವಹನವನ್ನು ನಿರ್ವಹಿಸಲು ಚೀನಾ ಸಿದ್ಧವಾಗಿದೆ ಎಂದು ಹೇಳಿದರು.

ವಾಯು ರಕ್ಷಣಾ ವ್ಯವಸ್ಥೆ ಬಲಪಡಿಸುವುದು ಅಗತ್ಯ

ಹೊಸದಿಲ್ಲಿ: ಪ್ರಸ್ತುತ ಜಗತ್ತಿನ ಯುದ್ಧ ಸನ್ನಿವೇಶಗಳ ಮಧ್ಯೆ, ಹೆಚ್ಚಿನ ಶಸ್ತ್ರಾಸ್ತ್ರ ವ್ಯವಸ್ಥೆಗಳು, ರಾಡಾರ್‌ಗಳು ಮತ್ತು ಇತರ ಕಾರ್ಯಾಚರಣೆಯ ಸಾಮರ್ಥ್ಯಗಳೊಂದಿಗೆ ಅತ್ಯಂತ ಬಲವಾದ ವಾಯು ರಕ್ಷಣೆ ನಿರ್ಮಿಸುವ ಅವಶ್ಯಕತೆಯಿದೆ ಮಾಜಿ ಐಎಎಫ್ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ. ಆರ್. ಚೌಧರಿ ಅವರು ಎಂದು ಹೇಳಿದ್ದಾರೆ.

ಪಾಕ್ ಮೇಲೆ ಅಫ್ಘಾನಿಸ್ತಾನ ಪ್ರತೀಕಾರದ ಡ್ರೋನ್ ದಾಳಿ

ಕಾಬೂಲ್: ಅಫ್ಘಾನ್ ವಾಯುಪಡೆ ಶುಕ್ರವಾರ ಪಾಕಿಸ್ತಾನದ ಕೊಹತ್ ಪ್ರದೇಶದ ಸೇನಾ ಕೋಟೆಯ ಮೇಲೆ ಪ್ರತೀಕಾರದ ಡ್ರೋನ್ ದಾಳಿಗಳನ್ನು ನಡೆಸಿದೆ. ಕಾಬೂಲ್ ಮತ್ತು ಕಂದಹಾರ್‌ನಲ್ಲಿ ಆರು ಮಂದಿಯನ್ನು ಬಲಿಪಡೆದ ಪಾಕಿಸ್ತಾನದ ರಾತ್ರಿಕಾಲದ ವೈಮಾನಿಕ ದಾಳಿಗೆ ಪ್ರತಿಯಾಗಿ ಅಫ್ಘಾನಿಸ್ತಾನ ಈ ಕ್ರಮ ಕೈಗೊಂಡಿದೆ.

ನಿರ್ದಿಷ್ಟ ಗುರಿಗಳ ಮೇಲೆ ದಾಳಿ : ಖೈಬರ್ ಪಖ್ತುಂಖ್ವಾದಲ್ಲಿರುವ ಕೊಹತ್ ಸೇನಾ ಕೋಟೆ ಬೆಳಗಿನ ಕಾರ್ಯಾಚರಣೆಯಲ್ಲಿ



ಧ್ವಂಸಗೊಂಡಿದೆ ಎಂದು ಅಫ್ಘಾನ್ ರಾಷ್ಟ್ರೀಯ ರಕ್ಷಣಾ ಸಚಿವಾಲಯ ದೃಢಪಡಿಸಿದೆ. ಇದರೊಂದಿಗೆ, ಡುರಾಂಡ್ ಲೈನ್ ಸಂಘರ್ಷದ ವಿಶೇಷ ಕಮಾಂಡ್ ಸೆಂಟರ್ ಮತ್ತು ಕಮಾಂಡರ್ ಕಚೇರಿಯನ್ನು ನಿಖರವಾಗಿ ಗುರಿಯಾಗಿಸಿ ದಾಳಿ ಮಾಡಲಾಗಿದೆ. ಈ ಕೇಂದ್ರಗಳು ಮುಖ್ಯ ಕೋಟೆಯ ಎರಡು ಕಿಲೋಮೀಟರ್ ವ್ಯಾಪ್ತಿಯಲ್ಲಿದ್ದವು.

ಪ್ರತೀಕಾರದ ಹಿನ್ನೆಲೆ ಅಫ್ಘಾನಿಸ್ತಾನದ ಪ್ರಮುಖ ನಗರಗಳ ಮೇಲೆ ಪಾಕಿಸ್ತಾನ ದಾಳಿ ನಡೆಸಿತ್ತು. ಇದರಿಂದ ಕಾಬೂಲ್‌ನಲ್ಲಿನ ಮನೆಗಳು ನಾಶವಾಗಿದ್ದವು ಮತ್ತು ಕಂದಹಾರ್ ವಿಮಾನ ನಿಲ್ದಾಣದ ಇಂಧನ ಡಿಪೋ ನಾಶವಾಗಿತ್ತು. ಗಡಿ ಘರ್ಷಣೆಯನ್ನು ಪಾಕಿಸ್ತಾನ ಇತ್ತೀಚೆಗೆ ಮುಕ್ತ ಯುದ್ಧ ಎಂದು ಕರೆದ ನಂತರ ಉಭಯ ರಾಷ್ಟ್ರಗಳ ನಡುವೆ ಉದ್ವಿಗ್ನತೆ ಹೆಚ್ಚಾಗಿದೆ. ಪರಮಾಣು ಶಸ್ತ್ರಸಜ್ಜಿತ ನೆರೆಯ ರಾಷ್ಟ್ರದ ಆಕ್ರಮಣದ ವಿರುದ್ಧ ತನ್ನ ಸಾರ್ವಭೌಮತ್ವವನ್ನು ರಕ್ಷಿಸಲು ಈ ದಾಳಿಗಳು ಅನಿವಾರ್ಯ ಎಂದು ಅಫ್ಘಾನ್ ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ.

ಈಗ ಸಿಇಸಿ ಪದಚ್ಯುತಿಗೆ ವಿಪಕ್ಷಗಳ ನೋಟಿಸ್!

ಹೊಸದಿಲ್ಲಿ: ಲೋಕಸಭಾ ಸಭಾಪತಿ ಓಂ ಬಿರ್ಲಾ ಪದಚ್ಯುತಿ ಯತ್ನ ವಿಫಲಗೊಂಡ ಬೆನ್ನಲ್ಲೇ, ಇದೀಗ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಪದಚ್ಯುತಿ ಆಗ್ರಹಿಸಿ, ವಿಪಕ್ಷ ಸಂಸದರು ಸಂಸತ್ತಿನ ಉಭಯ ಸದನಗಳಲ್ಲೂ ನೋಟೀಸ್ ಹೊರಡಿಸಿದ್ದಾರೆ. ಲೋಕಸಭೆಯ 130 ವಿಪಕ್ಷ ಸಂಸದರು ಹಾಗೂ ರಾಜ್ಯಸಭೆಯ 63ಸಂಸದರು ನೋಟೀಸ್‌ಗೆ ಸಹಿ ಹಾಕಿದ್ದಾರೆಂದು ಮೂಲಗಳು ತಿಳಿಸಿವೆ. ಇಂಡಿ ಕೂಟದ ಮಿತ್ರಪಕ್ಷಗಳ ಸದಸ್ಯರು ಮಾತ್ರವಲ್ಲ ವಿಪಕ್ಷ ಮಿತ್ರಕೂಟದ ಭಾಗವಲ್ಲದ ಆಪ್ ಸದಸ್ಯರು ಕೂಡ ಸಹಿ ಹಾಕಿದ್ದಾರೆಂದು ಮೂಲಗಳು ತಿಳಿಸಿವೆ. ಕೆಲವು ಪಕ್ಷೇತರ ಸಂಸದರು ಕೂಡ ನೋಟೀಸ್‌ಗೆ ಸಹಿ ಹಾಕಿದ್ದಾರೆ. ಇನ್ನು ಕೆಲವರು ಈ ಉಪಕ್ರಮಕ್ಕೆ ಕೈಜೋಡಿಸುವ ಆಸಕ್ತಿ ತೋರಿದ್ದಾರೆಂದು ಮೂಲಗಳು ವಿವರಿಸಿವೆ. ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಈ ತೆರ ನೋಟೀಸ್ ಹೊರಡಿಸಿದ್ದು ಇದೇ ಮೊದಲು. ಮುಖ್ಯ ಚುನಾವಣಾ ಆಯುಕ್ತರು ಪಕ್ಷಪಾತಿ, ತಾರತಮ್ಯ ಧೋರಣೆ ಹೊಂದಿದ್ದಾರೆ. ಚುನಾವಣಾ ವಂಚನೆ ತನಿಖೆಗೆ ಉದ್ದೇಶಪೂರ್ವಕ ತಡೆಯೊಡ್ಡುತ್ತಾರೆ. ಸಾಕಷ್ಟು ಮತದಾನ ಹಕ್ಕು ನಿರಾಕರಣೆ ಮಾಡುತ್ತಾರೆಂಬ ಆರೋಪ ಸಹಿತ ನೋಟೀಸ್‌ನಲ್ಲಿ ಜ್ಞಾನೇಶ್‌ಕುಮಾರ್ ಅವರ ವಿರುದ್ಧ ಇಂಡಿ ಕೂಟ ಏಳು ಆರೋಪಗಳನ್ನು ಮಾಡಿದೆ. ವೋಟ್‌ಬ್ಯಾಂಕ್‌ಗಾಗಿ ಧಾರಾಳ ಸಂಖ್ಯೆಯಲ್ಲಿ ಅಕ್ರಮ ನುಸುಳುಕೋರರನ್ನು ಮತದಾರ ಪಟ್ಟಿಗೆ ಸೇರ್ಪಡೆ ಮಾಡುವ ಮುಖೇನ ವಿವಿಧ ವಲಯಗಳ ಜನಸಂಖ್ಯಾ ಸ್ವರೂಪವನ್ನೇ ವ್ಯತ್ಯಯಗೊಳಿಸಿ, ರಾಷ್ಟ್ರೀಯ ಭದ್ರತೆಗೇ ಗಂಡಾಂತರ ಒಡ್ಡಿರುವ ವಿಪಕ್ಷ ಕೂಟ, ಇದಕ್ಕೆ ವಿರುದ್ಧವಾಗಿರುವ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಭಿಯಾನಕ್ಕೂ ವಿರೋಧ ವ್ಯಕ್ತಪಡಿಸಿದೆ.

ದೇಶ ರಕ್ಷಣೆಗೆ ನೂತನ ಆರ್ಥಿಕ ಸ್ಥಿರೀಕರಣ ನಿಧಿ

ಹೊಸದಿಲ್ಲಿ: ಅನಿರೀಕ್ಷಿತ ಜಾಗತಿಕ ಬಿಕ್ಕಟ್ಟುಗಳ ವಿರುದ್ಧ ರಾಷ್ಟ್ರೀಯ ಆರ್ಥಿಕತೆಯನ್ನು ರಕ್ಷಿಸಲು 1 ಲಕ್ಷ ಕೋಟಿ ರೂ. ಮೊತ್ತದ ಆರ್ಥಿಕ ಸ್ಥಿರೀಕರಣ ನಿಧಿ ಸ್ಥಾಪಿಸಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ ಘೋಷಿಸಿದರು. ಲೋಕಸಭೆ ಈ ನಿಧಿಗೆ ಧ್ವನಿಮತದ ಮೂಲಕ ಅನುಮೋದನೆ ನೀಡಿತು. ಪಶ್ಚಿಮ ಏಷ್ಯಾ ವಲಯದ ಅಸ್ಥಿರತೆ ಮತ್ತು ಪೂರೈಕೆ ಸರಪಳಿಯ ವ್ಯತ್ಯಯಗಳನ್ನು ಎದುರಿಸಲು ಈ ನಿಧಿಯನ್ನು ರೂಪಿಸಲಾಗಿದೆ. ಈ ಯೋಜನೆಗೆ ಒಟ್ಟು 1 ಲಕ್ಷ ಕೋಟಿ ರೂ. ನಿಗದಿಪಡಿಸಲಾಗಿದ್ದರೂ, ನಿವ್ವಳ ನಗದು ವೆಚ್ಚ 57,381 ಕೋಟಿ ರೂ.ಗೆ ಸೀಮಿತವಾಗಿದೆ. ಉಳಿದ ಮೊತ್ತವನ್ನು ಸರ್ಕಾರದ ಉಳಿತಾಯದಿಂದ ಪಡೆಯಲಾಗಿದೆ. ಈ ಹೆಚ್ಚುವರಿ ವೆಚ್ಚದ ಹೊರತಾಗಿಯೂ, 2025-26ರ ಹಣಕಾಸಿನ ಕೊರತೆಯನ್ನು ಜಿಡಿಪಿಯ ಶೇ.4.4 ರಷ್ಟರಲ್ಲಿಯೇ ಕಾಯ್ದುಕೊಳ್ಳುವ ನಿರೀಕ್ಷೆಯಿದೆ. ಸಾಮಾಜಿಕ ಮತ್ತು ಕೃಷಿ ಕ್ಷೇತ್ರಗಳಿಗೂ ಮಹತ್ವದ ಮೊತ್ತವನ್ನು ಮೀಸಲಿಡಲಾಗಿದೆ. ನರೇಗಾ ಬಾಕಿ ತೀರಿಸಲು 30,000 ಕೋಟಿ ರೂ., ರಸಗೊಬ್ಬರ ಸಬ್ಸಿಡಿಗಾಗಿ 19,230 ಕೋಟಿ ರೂ. ಮತ್ತು ಆಹಾರ ಸಬ್ಸಿಡಿಗಾಗಿ 23,641 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಇದಲ್ಲದೆ, ರಕ್ಷಣಾ ಸಚಿವಾಲಯಕ್ಕೆ 41,822 ಕೋಟಿ ರೂ.ಅನುಮೋದಿಸಲಾಗಿದೆ. ಕಳಪೆ ಬಜೆಟ್ ಎಂಬ ವಿರೋಧ ಪಕ್ಷದ ಆರೋಪಗಳನ್ನು ಸರ್ಕಾರ ತಳ್ಳಿಹಾಕಿದ ವಿತ್ತ ಸಚಿವೆ, ಆರ್ಥಿಕತೆಯಲ್ಲಿ ವಿಚಲಿತರಾಗದೆ ಬಾಹ್ಯ ಆಘಾತಗಳನ್ನು ಎದುರಿಸಲು ಸ್ಥೂಲ ಆರ್ಥಿಕ ಚೌಕಟ್ಟನ್ನು ಬಲಪಡಿಸಲಾಗಿದೆ ಎಂದರು.

ರಾಜ್ಯಗಳಿಗೆ ಹೆಚ್ಚುವರಿ ಸೀಮೆಎಣ್ಣೆ ಪೂರೈಕೆ

ಹೊಸದಿಲ್ಲಿ: ವಾಣಿಜ್ಯ ಅಡುಗೆ ಅನಿಲ ಪೂರೈಕೆಯಲ್ಲಿ ಕಂಡುಬಂದ ವ್ಯತ್ಯಯಗಳ ನಡುವೆಯೇ , ಕೇಂದ್ರ ಸರಕಾರವು ರಾಜ್ಯಗಳಿಗೆ 40,000ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಹೆಚ್ಚುವರಿಯಾಗಿ ಪೂರೈಸಿದೆ.ದೇಶದಲ್ಲಿ ಎಲ್‌ಪಿಜಿ ಉತ್ಪಾದನೆಯನ್ನು ಕಳೆದ 5ದಿನಗಳಲ್ಲಿ ಶೇ.28ರಷ್ಟು ಹೆಚ್ಚಳಗೊಳಿಸಿದೆ. ಅಲ್ಲದೆ ಇನ್ನಷ್ಟು ಪ್ರಮಾಣದಲ್ಲಿ ಎಲ್‌ಪಿಜಿ ಸಂಗ್ರಹಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.ಬುಕಿಂಗ್ ಬಳಿಕ ಸಿಲಿಂಡರ್ ವಿತರಣೆ ಅವಧಿ 2.5ದಿನಗಳೇ ಇರುತ್ತವೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ.ಹಾಗೆಯೇ ದೇಶದ 33ಕೋಟಿ ಕುಟುಂಬಗಳ ಅಡುಗೆ ಮನೆಗಳಿಗೆ ,ಹಾಗೆಯೇ ಬಡ ಮತ್ತು ದುರ್ಬಲವರ್ಗಗಳವರಿಗೆ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಕೇಂದ್ರ ಗರಿಷ್ಠ ಆದ್ಯತೆ ನೀಡಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್‌ಸಿಂಗ್ ಪುರಿ ತಿಳಿಸಿದ್ದಾರೆ. ಸಂಗ್ರಹ ಧಾವಂತ ಮತ್ತು ವಿತರಕರು ಮತ್ತು ಚಿಲ್ಲರೆ ಮಾರಾಟ ಮಟ್ಟದಲ್ಲಿ ಆತಂಕಿತ ಬುಕ್ಕಿಂಗ್‌ಗಳ ಬಗೆಗೆ ತಳಮಟ್ಟದಿಂದ ಬರುತ್ತಿರುವ ವರದಿಗಳು ಗ್ರಾಹಕರ ಆತಂಕದಿಂದ ಉದ್ಭವಾಗಿರುವಂಥವುಗಳೇ ವಿನಾ ವಾಸ್ತವಿಕ ಪೂರೈಕೆ ಕೊರತೆಗಳಿಂದಲ್ಲ ಎಂಬುದಾಗಿ ಸಚಿವರು ಸ್ಪಷ್ಟಪಡಿಸಿದರು.

ಸ್ಫೋಟದ ಸದ್ದು ಹಿಂದೆ ಈ ವಲಯದಲ್ಲಿ ಸಾಮಾನ್ಯವಾಗಿತ್ತು: ಮೋದಿ

ಈಶಾನ್ಯದಲ್ಲಿ ಬಿಜೆಪಿಯಿಂದ ಶಾಂತಿ ಖಾತ್ರಿ

ಗುವಾಹತಿ: ಬಾಂಬ್ ಸ್ಫೋಟದ ಸದ್ದು, ಗುಂಡಿನ ಸುರಿಮಳೆ ಈಶಾನ್ಯ ವಲಯದಲ್ಲಿ ಹಿಂದೆ ಮಾಮೂಲಾಗಿತ್ತು. ಆದರೆ, ಬಿಜೆಪಿ ಈ ವಲಯದಲ್ಲಿ ಶಾಶ್ವತವಾಗಿ ಶಾಂತಿ ನೆಲೆಯೂರುವಂತೆ ಮಾಡಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಸ್ವಾರ್ಥಯುಕ್ತ ರಾಜಕೀಯ ಹಿತಾಸಕ್ತಿಗಾಗಿ ವಿವಿಧ ಒಪ್ಪಂದಗಳಿಗೆ ಸಹಿ ಹಾಕಿತ್ತು ವಿನಾ ಜನರ ಮೇಲಿನ ಕಾಳಜಿಯಿಂದ ಅಲ್ಲ. ಯಾಕೆಂದರೆ ಕಾಂಗ್ರೆಸ್‌ಗೆ ಆಶ್ವಾಸನೆಗಳ ಸಾಕಾರದ ಧ್ಯೇಯವೇ ಇಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.



ಡಬಲ್ ಇಂಜಿನ್ ಸರಕಾರದಲ್ಲಿ ರಾಜ್ಯವು ಶಾಂತಿ ಮತ್ತು ಅಭಿವೃದ್ಧಿಯ ಹೊಸ ಅಧ್ಯಾಯ ಬರೆಯುತ್ತಿದೆ ಎಂದು ಪ್ರಧಾನಿ ಮೋದಿ ಗಮನ ಸೆಳೆದರು. ಮಳೆಯಿಂದಾಗಿ ಪ್ರವಾಸ ಪಟ್ಟಿಯಲ್ಲಿ ವ್ಯತ್ಯಾಸವಾದ್ದರಿಂದ, ಅಸ್ಸಾಂನ ಕೊಕ್ರಜಾರ್ ಜಿಲ್ಲೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬೇಕಿದ್ದ ಪ್ರಧಾನಿ ಮೋದಿ, ಗುವಾಹತಿಯಿಂದ ವರ್ಚ್ಯುಲ್ ನೆಲೆಯಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮಡಿಕೇರಿ: ಗುರುವಾರ ಹಾಡಹಗಲೇ ಬೆಳೆಗಾರರೊಬ್ಬರನ್ನು ಬಲಿಪಡೆದ ಸುಮಾರು 34 ವರ್ಷದ ಕಾಡಾನೆಯನ್ನು ಅರಣ್ಯ ಇಲಾಖೆ ನಡೆಸಿದ ಕಾರ್ಯಾಚರಣೆಯಲ್ಲಿ ಶುಕ್ರವಾರ ಸಂಜೆ ಪಾಲಿಬೆಟ್ಟ ಸಮೀಪದ ಚೆನ್ನಯ್ಯನಕೋಟೆ ಬಾಡಗ ಬಾಣಂಗಾಲ ಸಮೀಪದ ಕಾಫಿ ತೋಟದಲ್ಲಿ ಸೆರೆ ಹಿಡಿಯಲಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ತರಬೇತಿ ಪಡೆದ ಕಂಜನ್, ಸುಗ್ರೀವ, ಧನಂಜಯ್, ಪ್ರಶಾಂತ್ ಹರ್ಷ ಹಾಗೂ ಅಯ್ಯಪ್ಪ ಎಂಬ ಸಾಕಾನೆಗಳನ್ನು ಬಳಸಿಕೊಳ್ಳಲಾಯಿತು. ಪಶುವೈದ್ಯರಾದ ಡಾ. ರಮೇಶ್ ರಂಜನ್ ಅವರ ಮೇಲ್ವಿಚಾರಣೆಯಲ್ಲಿ ಕಾಡಾನೆಗೆ ಅರವಳಿಕೆ ಮದ್ದು ನೀಡಿ, ಸಾಕಾನೆಗಳ ಸಹಾಯದಿಂದ ಅದನ್ನು ಸುತ್ತುವರಿದು ಯಶಸ್ವಿಯಾಗಿ ಸೆರೆ ಹಿಡಿಯಲಾಯಿತು. ಈ ಕಾಡಾನೆ ಗುರುವಾರ ಸಿದ್ದಾಪುರ ಸಮೀಪದ ಕಾಫಿ ತೋಟದಲ್ಲಿ ದಾಳಿ ನಡೆಸಿ ಬೆಳೆಗಾರ ಗಣಪತಿ (49) ಅವರನ್ನು ಬಲಿ ಪಡೆದಿತ್ತು.

ಮಹಿಳೆಯ ಅತ್ಯಾಚಾರ ಯತ್ನ : ಆರೋಪಿ ಪರಾರಿ

ಮಂಗಳೂರು: ಕೆಲಸ ನೀಡುವುದಾಗಿ ಮಹಿಳೆಯೊಬ್ಬರನ್ನು ಕರೆದುಕೊಂಡು ಬಂದು ಅತ್ಯಾಚಾರಕ್ಕೆ ಯತ್ನಿಸಿದ ಘಟನೆ ನಗರದ ಲಾಲ್ ಬಾಗ್ ಬಳಿ ಶುಕ್ರವಾರ ನಡೆದಿದೆ. ಆರೋಪಿ ಸ್ಥಳದಿಂದ ಪರಾರಿಯಾಗಿದ್ದು, ಉರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಳಗ್ಗೆ 9 ಗಂಟೆ ವೇಳೆಗೆ ಉರ್ವಸ್ಟೋರ್ ಜಂಕ್ಷನ್‌ನಲ್ಲಿ ಕೂಲಿ ಕೆಲಕ್ಕೆಂದು ನಿಂತಿದ್ದ ಹೊರ ಜಿಲ್ಲೆಯ ಸುಮಾರು 35 ವರ್ಷದ ಮಹಿಳೆಯನ್ನು ಕೆಲಸ ಇದೆ ಎಂದು ನಂಬಿಸಿದ್ದಾನೆ. ಬಳಿಕ ಬಸ್ಸಿನಲ್ಲಿ ಲಾಲ್ ಬಾಗ್‌ಗೆ ಕರೆದುಕೊಂಡು ಬಂದಿದ್ದಾನೆ. ಬಳಿಕ ಹಳೆಯ ಮನೆಯೊಂದಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಆಕೆಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಮಹಿಳೆ ಬೊಬ್ಬೆ ಹಾಕಿದಾಗ ಸ್ಥಳೀಯರು ಒಟ್ಟಾಗಿದ್ದು, ಈ ವೇಳೆ ಆರೋಪಿ ಅಲ್ಲಿಂದ ಪರಾರಿಯಾಗಿದ್ದಾನೆ. ಘಟನೆಯಲ್ಲಿ ಮಹಿಳೆಯ ಕೈಗೆ ಗಾಯವಾಗಿದೆ.

ರಬ್ಬರ್ ಕೃಷಿಕನ ಶವ ಪತ್ತೆ

ಬದಿಯಡ್ಕ: ರಬ್ಬರ್ ಕೃಷಿಕನ ಮೃತದೇಹ ತೋಟದ ಶೆಡ್‌ನಲ್ಲಿ ಪತ್ತೆಯಾಗಿದೆ. ಬದಿಯಡ್ಕ ಪೊಲೀಸ್ ಠಾಣೆ ವ್ಯಾಪ್ತಿಯ ಚಂಬಲ್ತಿಮಾರ್ ಅಲಕ್ಕೆಲ್ ನಿವಾಸಿ ಜೋಸ್ ಅಲಕ್ಕೆಲ್ (70) ಮೃತಪಟ್ಟವರು. ಗುರುವಾರ ಮಧ್ಯಾಹ್ನ ವಿದ್ಯಾಗಿರಿಯ ಅವರ ರಬ್ಬರ್ ತೋಟಕ್ಕೆ ತೆರಳಿದವರು ಮರಳಿ ಬಾರದ ಹಿನ್ನೆಲೆಯಲ್ಲಿ ಶೋಧ ನಡೆಸಿದಾಗ ತೋಟದ ಶೆಡ್‌ನಲ್ಲಿ ಬಿದ್ದ ಸ್ಥಿತಿಯಲ್ಲಿ ಕಂಡುಬಂದಿದ್ದಾರೆನ್ನಲಾಗಿದೆ. ಮೃತರು ಪತ್ನಿ, ಪುತ್ರನನ್ನು ಅಗಲಿದ್ದಾರೆ.

ನಿಧನ ಸುದ್ದಿ

ಪುಂಡಲೀಕ್ ಭಂಡಾರ್‌ಕರ್



ಉಪ್ಪುಂದ: ಬಿಜೂರು ಗ್ರಾಮದ ಪಾಕತಜ್ಞ ಪುಂಡಲೀಕ್ ಭಂಡಾರ್‌ಕರ್ (58) ಅಲ್ಪಕಾಲದ ಅನಾರೋಗ್ಯದಿಂದ ಮಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಪದ್ಮನಾಭ ಎನ್. ರಾವ್



ಮಂಗಳೂರು: ಮಂಗಳೂರು ಪಿ.ವಿ.ಎಸ್ ಸರ್ಕಲ್ ಸಮೀಪದ ಮೆ. ರಾಮದಾಸ್ ಎಂಡ್ ಬ್ರದರ್ಸ್ ಜ್ಯುವೆಲ್ಲರ್ಸ್ (ಮುಂಬಯಿ ಹಾಗೂ ಮಂಗಳೂರು) ಸಂಸ್ಥೆಯ ಹಿರಿಯರಾದ ಪದ್ಮನಾಭ ಎನ್. ರಾವ್ ಅವರು ಗುರುವಾರ ರಾತ್ರಿ ನಿಧನರಾಗಿದ್ದಾರೆ. ಅವರು ಪತ್ನಿ ಹಾಗೂ ಮೂರು ಮಂದಿ ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಕುಂಞ ಮೋನು



ಕಡಬ: ಕಡಬ ತಾಲೂಕಿನ ಐತ್ತೂರು ಗ್ರಾಮದ ಕೊಡೆಂಕಿರಿ ನಿವಾಸಿ ಕುಂಞ ಮೋನು (55) ಅವರು ಅನಾರೋಗ್ಯದಿಂದ ಕಡಬದ ಖಾಸಗಿ ಆಸ್ಪತ್ರೆಯಲ್ಲಿ ಮಾರ್ಚ್ 13ರಂದು ನಿಧನ ಹೊಂದಿದರು. ಮೃತರು ಪತ್ನಿ ಹಾಗೂ ಪುತ್ರನನ್ನು ಅಗಲಿದ್ದಾರೆ. ಕಡಬ ಹಾಗೂ ಮರ್ದಾಳ ಪರಿಸರದಲ್ಲಿ ಸರ್ವಿಸ್ ಜೀಪ್ ಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅವರು ತನ್ನ ಸಮಾಜಮುಖಿ ಚಟುವಟಿಕೆಗಳ ಮೂಲಕ ಜನಾನುರಾಗಿ ಗುರುತಿಸಿಕೊಂಡಿದ್ದರು.

ಉಡುಪಿ ಜಿಲ್ಲೆಯಲ್ಲಿ 14, 15 ವರ್ಷದ ಹೆಣ್ಣುಮಕ್ಕಳಿಗೆ ಹೆಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ

ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕೆ ಸಹಕಾರಿ: ಸಂಸದ ಕೋಟ



ಉಡುಪಿ: ಆರೋಗ್ಯವಂತ ರಾಷ್ಟ್ರದ ಉದಯ ಆರೋಗ್ಯವಂತ ಮಹಿಳೆಯರಿಂದ ಆರಂಭವಾಗುತ್ತದೆ. ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಗರ್ಭಕಂಠ ಕ್ಯಾನ್ಸರ್ ತಡೆಗೆ ಹೆಚ್.ಪಿ.ವಿ ಲಸಿಕೆ ಸಹಕಾರಿಯಾಗಿದ್ದು, ಹೆಣ್ಣು ಮಕ್ಕಳ ಸದೃಢ ಆರೋಗ್ಯವನ್ನು ರಕ್ಷಿಸುವ ನಿಟ್ಟಿನಲ್ಲಿ ಈ ಲಸಿಕಾ ಅಭಿಯಾನ ಕಾರ್ಯಕ್ರಮವು ಒಂದು ಪ್ರಮುಖ ಮೈಲಿಗಲ್ಲಾಗಲಿದೆ ಎಂದು ಉಡುಪಿ -ಚಿಕ್ಕಮಗಳೂರು ಲೋಕಸಭಾ ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಅವರು ಶುಕ್ರವಾರ ನಗರದ ಬ್ರಹ್ಮಗಿರಿ ಸೈಂಟ್ ಸಿಸಿಲಿ ಪ್ರೌಢಶಾಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಉಡುಪಿ ಜಿಲ್ಲೆ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಹೆಚ್ .ಪಿ.ವಿ ಲಸಿಕಾ ಅಭಿಯಾನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಹ್ಯೂಮನ್ ಪ್ಯಾಪಿಲೋಮ ವೈರಸ್ ಗರ್ಭಕಂಠ ಸೇರಿದಂತೆ ಅನೇಕ ಮಾದರಿಯ ಕ್ಯಾನ್ಸರ್ ಹರಡಲು ಕಾರಣವಾಗುತ್ತದೆ. ಸಾಮಾನ್ಯವಾಗಿ ಮಹಿಳೆಯರಲ್ಲಿ ಕಂಡುಬರುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಉದ್ದೇಶದಿಂದ ಹೆಚ್.ಪಿ.ವಿ ಲಸಿಕಾ ಅಭಿಯಾನಕ್ಕೆ ಜಿಲ್ಲೆಯಲ್ಲಿ ಚಾಲನೆ ನೀಡಲಾಗಿದ್ದು, ಪ್ರಸ್ತುತ ಈ ಲಸಿಕೆಯನ್ನು 14 ವರ್ಷ ತುಂಬಿದ ಹಾಗೂ 15 ವರ್ಷ ವಯಸ್ಸಿನ ಒಳಗಿನ ಹೆಣ್ಣು ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿ ಅನುಸಾರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಜಿಲ್ಲಾ ಆಸ್ಪತ್ರೆಗಳು ಮತ್ತು ತಾಲೂಕು ಆಸ್ಪತ್ರೆಗಳಲ್ಲಿ ಸಂಪೂರ್ಣ ಉಚಿತವಾಗಿ ಲಸಿಕೆಯನ್ನು ನೀಡಲಾಗುವುದು ಎಂದ ಅವರು, ಲಸಿಕಾ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿ, ಸಿಬ್ಬಂದಿಗಳಿಗೆ ಈಗಾಗಲೇ ತರಬೇತಿ ನೀಡಿರುವುದಾಗಿ ತಿಳಿಸಿದರು.

ಗರ್ಭಕಂಠ ಕ್ಯಾನ್ಸರ್ ತಡೆಗಟ್ಟುವ ಹೆಚ್.ಪಿ.ವಿ ಲಸಿಕೆಯನ್ನು ದೇಶದಲ್ಲಿ 14 ವರ್ಷ ತುಂಬಿದ ಹಾಗೂ 15 ವರ್ಷ ವಯಸ್ಸಿನ 1 ಕೋಟಿ 15 ಲಕ್ಷ ವಿದ್ಯಾರ್ಥಿನಿಯರಿಗೆ ನೀಡಲು ನಿರ್ಧರಿಸಲಾಗಿದೆ. ರಾಜ್ಯದಲ್ಲಿ ಸುಮಾರು 6,89,620 ಅರ್ಹರನ್ನು ಗುರುತಿಸಲಾಗಿದೆ. ಈಗಾಗಲೇ 2,54,000 ಲಸಿಕೆಗಳನ್ನು ಆಯಾಯ ಜಿಲ್ಲಾ ಕೇಂದ್ರಕ್ಕೆ ರವಾನಿಸಲಾಗಿದೆ. ಜಿಲ್ಲೆಯಲ್ಲಿ ಸುಮಾರು 11,274 ಮಕ್ಕಳನ್ನು ಗುರುತಿಸಲಾಗಿದ್ದು, 4150 ಲಸಿಕೆಗಳು ಈಗಾಗಲೇ ಸರಬರಾಜಾಗಿದ್ದು, ಮುಂದಿನ ದಿನಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಲಸಿಕೆಗಳು ಲಭ್ಯವಾಗಲಿದೆ ಎಂದರು.

ಲಸಿಕೆಯಿಂದ ಅಡ್ಡ ಪರಿಣಾಮವಿಲ್ಲ

ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕೆಯೊಂದೆ ಸಹಕಾರಿಯಾಗಿದ್ದು, ಲಸಿಕೆ ಪಡೆದ ಅರ್ಹರು ಸುರಕ್ಷಿತರಾಗಿದ್ದಾರೆ, ಇದರಿಂದ ಯಾವುದೇ ಆರೋಗ್ಯದಲ್ಲಿ ವ್ಯತ್ಯಯ ಸಂಭವಿಸುವುದಿಲ್ಲ ಹಾಗೂ ಅಡ್ಡಪರಿಣಾಮಗಳಿಲ್ಲ ಎಂಬ ಬಗ್ಗೆ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೂ ಭೇಟಿ ನೀಡಿ, ಲಸಿಕೆ ಪಡೆಯುವದರಿಂದ ಆಗುವ ಪ್ರಯೋಜನದ ಕುರಿತು ಜನಸಾಮಾನ್ಯರಿಗೆ, ಸಮುದಾಯಗಳಲ್ಲಿ ಹಾಗೂ ಗ್ರಾಮೀಣ ಭಾಗಗಳಲ್ಲಿ ಹೆಚ್ಚಿನ ಅರಿವು ಮೂಡಿಸುವುದರೊಂದಿಗೆ ಹದಿಹರೆಯ ಬಾಲಕಿಯರ ಆರೋಗ್ಯ ರಕ್ಷಣೆಯಲ್ಲಿ ಕೈಜೋಡಿಸಬೇಕು ಎಂದ ಅವರು, ಹೆಚ್.ಪಿ.ವಿ ಲಸಿಕೆ ಪಡೆದ ವಿದ್ಯಾರ್ಥಿನಿಯರು ತಮ್ಮ ಸಹಪಾಠಿಗಳಿಗೂ ಸಹ ಲಸಿಕೆ ಪಡೆಯುವಂತೆ ಪ್ರೇರಿಸಬೇಕು ಎಂದರು.

ಕ್ಯಾನ್ಸರ್ ಮಾರಣಾಂತಿಕ ಕಾಯಿಲೆಯಲ್ಲ

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಆದರ್ಶ ಆಸ್ಪತ್ರೆಯ ಆಡಳಿತ ನಿರ್ದೇಶಕ ಡಾ.ಜಿ.ಎಸ್ ಚಂದ್ರಶೇಖರ್ ಮಾತನಾಡಿ, ಪ್ರತಿಯೊಬ್ಬ ವ್ಯಕ್ತಿಯೂ ಉತ್ತಮ ಹವ್ಯಾಸ, ಪೌಷ್ಠಿಕ ಆಹಾರ ಸೇವನೆ, ನಿಯಮಿತ ದೈಹಿಕ ಚಟುವಟಿಕೆ, ದೇಹದ ತೂಕದಲ್ಲಿ ಸಮತೋಲನ ಕಾಯ್ದುಕೊಂಡಲ್ಲಿ ಆರೋಗ್ಯಯುತ ಜೀವನ ನಡೆಸಬಹುದು. ಕ್ಯಾನ್ಸರ್ ಎನ್ನುವುದು ಮಾರಣಾಂತಿಕ ಕಾಯಿಲೆಯಲ್ಲ. ಕ್ಯಾನ್ಸರ್ ಸೇರಿದಂತೆ ಯಾವುದೇ ರೋಗಗಳ ಲಕ್ಷಣಗಳು ಕಂಡುಬಂದಲ್ಲಿ ಆರಂಭಿಕ ಹಂತದಲ್ಲಿ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆದುಕೊಂಡಲ್ಲಿ ಗುಣಮುಖರಾಗಿ ಆರೋಗ್ಯವಂತ ಜೀವನ ನಡೆಸಬಹುದು ಎಂದ ಅವರು, ದೇಶದಾದ್ಯಂತ ಹಮ್ಮಿಕೊಂಡಿರುವ ಹೆಚ್ .ಪಿ.ವಿ ಲಸಿಕಾ ಅಭಿಯಾನವು ಪ್ರತಿ ಅರ್ಹರ ಮನೆ ಬಾಗಿಲಿಗೂ ತಲುಪುವುದರೊಂದಿಗೆ ಅಭಿಯಾನವು ಯಶಸ್ವಿಯಾಗಲಿ ಎಂದು ಶುಭಹಾರೈಸಿದರು.

ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ. ಜ್ಯೋತ್ಸ್ನಾ ಬಿ.ಕೆ ಪ್ರಾಸ್ತಾವಿಕವಾಗಿ ಮಾತನಾಡಿ, ಹೆಚ್.ಪಿ.ವಿ ಲಸಿಕಾಕರಣ ಕಾರ್ಯಕ್ರಮವನ್ನು ರಾಷ್ಟ್ರೀಯ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಮಾರ್ಗಸೂಚಿ ಅನುಸಾರ ಆಯೋಜನೆ ಮಾಡಲಾಗುತ್ತಿದೆ. ಯೂ-ವಿನ್ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಂಡ 14 ವರ್ಷ ತುಂಬಿದ ಹಾಗೂ 15 ವರ್ಷ ವಯಸ್ಸಿನ ಒಳಗಿನ ಹೆಣ್ಣು ಮಕ್ಕಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ, ಜಿಲ್ಲಾ ಹಾಗೂ ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಲಸಿಕೆ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಎಲ್ಲಮ್ಮ, ಜಿಲ್ಲಾ ಸರ್ಜನ್ ಡಾ. ಅಶೋಕ್ ಹೆಚ್, ತಾಲೂಕು ಆರೋಗ್ಯಾಧಿಕಾರಿ ಡಾ. ವಾಸುದೇವ, ಸೈಂಟ್ ಸಿಸಿಲಿ ವಿದ್ಯಾಸಂಸ್ಥೆಯ ಜಂಟಿ ಕಾರ್ಯದರ್ಶಿ ಸಿಸ್ಟರ್ ಪ್ರಿಯಾ ಮರೀಯಾ, ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು, ಸಂಸ್ಥೆಯ ಅಧ್ಯಾಪಕ ವೃಂದದವರು, ವಿದ್ಯಾರ್ಥಿನಿಯರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶಶಿಧರ್ ನಿರೂಪಿಸಿ, ಚಂದ್ರಕಲಾ ವಂದಿಸಿದರು.

ಕೊಡಗು ಜಿಲ್ಲೆಯಲ್ಲಿ ಗೃಹ ಬಳಕೆ ಅಡುಗೆ ಅನಿಲಕ್ಕಿಲ್ಲ ತೊಂದರೆ

ಆತಂಕಪಡುವ ಅಗತ್ಯವಿಲ್ಲ ಎಂದ ಇಲಾಖೆ

ಮಡಿಕೇರಿ: ಅಮೇರಿಕಾ-ಇರಾನ್ ನಡುವಿನ ಯುದ್ಧದ ಎಫೆಕ್ಟ್ ಕೊಡಗು ಜಿಲ್ಲೆಯ ಮೇಲೂ ಬೀರಿದ್ದು, ದೇಶದ ಇತರೆ ಭಾಗಗಳಂತೆ ಕೊಡಗು ಜಿಲ್ಲೆಯಲ್ಲೂ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಕೊರತೆ ಎದುರಾಗಿದೆ.

ಕಳೆದ ನಾಲ್ಕು ದಿನಗಳಿಂದ ಜಿಲ್ಲೆಗೆ ವಾಣಿಜ್ಯ ಬಳಕೆಯ ಸಿಲಿಂಡರ್ ಸರಬರಾಜಾಗದ ಕಾರಣ ಮಡಿಕೇರಿ, ಕುಶಾಲನಗರ ಸೇರಿದಂತೆ ಜಿಲ್ಲೆಯ ಕೆಲವು ಪಟ್ಟಣಗಳಲ್ಲಿ ದೊಡ್ಡ ಮಟ್ಟದ ಹೊಟೇಲ್‌ಗಳು ಮುಚ್ಚಿದ್ದು, ಇನ್ನೂ ಕೆಲವು ಹೊಟೇಲ್ ಮಾಲಕರು ಇರುವ ಸಿಲಿಂಡರ್‌ಗಳನ್ನೇ ಮಿತವಾಗಿ ಬಳಸಲು ತೀರ್ಮಾನಿಸಿದ್ದಾರೆ. ಅಲ್ಲದೆ ಇನ್ನು ಕೆಲವರು ಪರ್ಯಾಯ ಇಂಧನಗಳತ್ತ ಮುಖ ಮಾಡಿದ್ದಾರೆ.

ಗೃಹ ಬಳಕೆ ಅನಿಲಕ್ಕಿಲ್ಲ ಕೊರತೆ

ಜಿಲ್ಲೆಯಲ್ಲಿ ವಾಣಿಜ್ಯ ಬಳಕೆಯ ಅಡುಗೆ ಸಿಲಿಂಡರ್‌ಗಳ ಕೊರತೆಯಿದೆ. ಆದರೆ ಗೃಹ ಬಳಕೆಯ ಅನಿಲ ಸಿಲಿಂಡರ್ ಸಾಕಾಗುವಷ್ಟು ಲಭ್ಯವಿದೆ. ಹಾಗಾಗಿ ಜನರು ಆತಂಕಪಡುವ ಅಗತ್ಯ ಇಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಜಿಲ್ಲೆಯಲ್ಲಿ ಅಡುಗೆ ಅನಿಲ ಸಿಲಿಂಡರ್‌ಗಳ ಕೊರತೆ ಎದುರಾಗದಂತೆ ತಡೆಯುವ ನಿಟ್ಟಿನಲ್ಲಿ ಕೊಡಗಿನ ಎಲ್ಲಾ 18 ಅನಿಲ ವಿತರಕ ಏಜೆನ್ಸಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ. ಎಲ್ಲೂ ಸಹ ಕಾಳಸಂತೆಯಲ್ಲಿ ಅಡುಗೆ ಅನಿಲ ಸಿಲಿಂಡರ್‌ಗಳು ಮಾರಾಟವಾಗದಂತೆ ತಡೆಯಲು ಕ್ರಮವಹಿಸಲಾಗಿದೆ. ಅಗತ್ಯ ಬಿದ್ದರೆ ಸಹಾಯವಾಣಿ ತೆರೆಯಲೂ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಇಲಾಖೆಯ ಉಪ ನಿರ್ದೇಶಕ ಭೀಮರಾಯ ಅವರು ಹೇಳಿದ್ದಾರೆ.

ಜಿಲ್ಲೆಯ ಹಾಸ್ಟೆಲ್‌ಗಳು, ಸರ್ಕಾರಿ ಆಸ್ಪತ್ರೆಗಳು, ಅಂಗನವಾಡಿಗಳು ಮತ್ತು ಶಾಲೆಗಳಿಗೆ ಪತ್ರ ಬರೆದು ಅಡುಗೆ ಅನಿಲ ಸಿಲಿಂಡರ್ ಕೊರತೆಯಾದರೆ ತಕ್ಷಣ ಗಮನಕ್ಕೆ ತರುವಂತೆಯೂ ಕೋರಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಪಡುಮಾರ್ನಾಡು: ಸುಮುಖ ಮಂದಿರ, ಸಭಾಭವನಕ್ಕೆ ಧರ್ಮಸ್ಥಳ ಯೋಜನೆ ದೇಣಿಗೆ



ಮೂಡುಬಿದಿರೆ: ಪಡುಮಾರ್ನಾಡು ಅಚ್ಚರಕಟ್ಟೆ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿಯ ಸುಮುಖ ಮಂದಿರ ಹಾಗೂ ಸಭಾಭವನದ ಅಭಿವೃದ್ಧಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆಯವತಿಯಿಂದ 1 ಲಕ್ಷ ರೂ. ದೇಣಿಗೆಯನ್ನು ಉಷಾ ಡಿ. ಪೈ-ದಯಾನಂದ ಪೈ ವೇದಿಕೆಯಲ್ಲಿ ಶುಕ್ರವಾರ ಹಸ್ತಾತರಿಸಲಾಯಿತು.

ತಾಲೂಕು ಯೋಜನಾಧಿಕಾರಿ ಧನಂಜಯ್ ಅವರು ದೇಣಿಗೆಯನ್ನು ಗಣೇಶೋತ್ಸವ ಸಮಿತಿಯ ಅಧ್ಯಕ್ಷ ಎಂ.ದಯಾನಂದ ಪೈ ಅವರಿಗೆ ಹಸ್ತಾಂತರಿಸಿದರು.

ದೇಣಿಗೆ ಸ್ವೀಕರಿಸಿ ಮಾತನಾಡಿ ದಯಾನಂದ ಪೈ, ಗಣೇಶೋತ್ಸವ ಸಮಿತಿ ಮಾತ್ರವಲ್ಲದೆ ಊರಿನ ಧಾರ್ಮಿಕ, ಶೈಕ್ಷಣಿಕ ಕೇಂದ್ರಗಳಿಗೆ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಧರ್ಮಸ್ಥಳ ಯೋಜನೆಯ ಮುಖೇನ ದೇಣಿಗೆ, ಸವಲತ್ತುಗಳು ಲಭಿಸಿವೆ. ಸಮಿತಿಯಿಂದ ಈಗಾಗಲೇ ಸುಸಜ್ಜಿತವಾದ ಸಭಾಭವನ ಹಾಗೂ ಮಂದಿರ ನಿರ್ಮಾಣಗೊಂಡಿದೆ. ಮುಂದೆ ಭೋಜನಾಲಯ, ಅಡುಗೆ ಕೋಣೆಯ ಯೋಜನೆಯನ್ನು ರೂಪಿಸಿದ್ದೇವೆ ಎಂದರು.

ಜನಜಾಗೃತಿ ವೇದಿಕೆಯ ತಾಲೂಕು ಅಧ್ಯಕ್ಷ ಸುಭಾಷ್ಚಂದ್ರ ಚೌಟ, ಬೆಳುವಾಯಿ ವಲಯಾಧ್ಯಕ್ಷ ಜಗತ್ಪಾಲ್ ಎಸ್. ಹೆಗ್ಡೆ, ಯೋಜನೆಯ ಮೇಲ್ವಿಚಾರಕಿ ಯಶೋಧ, ಒಕ್ಕೂಟದ ಅಧ್ಯಕ್ಷ ಶ್ಯಾಮ್ ಹೆಗ್ಡೆ, ಸೇವಾ ಪ್ರತಿನಿಧಿ ಉಷಾಕಿರಣ, ಗಣೇಶೋತ್ಸವ ಸಮಿತಿ ಕಾರ್ಯದರ್ಶಿ ಉದಯ ಪೂಜಾರಿ, ಸಂಚಾಲಯ ದಯಾನಂದ ಭಟ್, ಕೋಶಾಧಿಕಾರಿ ಜಯರಾಂ, ಕಾರ್ಯಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮನೆ ಕಳ್ಳತನ : 12 ಗಂಟೆಯಲ್ಲಿ ಆರೋಪಿಗಳ ಬಂಧನ





ಉಡುಪಿ: 80 ಬಡಗುಬೆಟ್ಟು ಗ್ರಾಮದ ಶಾಂತಿನಗರದಲ್ಲಿ ಹಾಡಹಗಲೇ ನಡೆದಿದ್ದ ಮನೆಕಳ್ಳತನಪ್ರಕರಣವನ್ನು ಮಣಿಪಾಲ ಪೊಲೀಸರು ಕ್ಷಿಪ್ರ ಕಾರ್ಯಾಚರಣೆಯ ಮೂಲಕ ಕೇವಲ 12 ಗಂಟೆಗಳ ಅವಧಿಯಲ್ಲಿ ಬೇಧಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಯುವಕರು ಹಾಗೂ ಇಬ್ಬರು ಬಾಲಕರು ಸೇರಿದಂತೆ ಒಟ್ಟು ನಾಲ್ವರನ್ನು ಬಂಧಿಸಿ, ಲಕ್ಷಾಂತರ ರೂಪಾಯಿ ಮೌಲ್ಯದ ಸೊತ್ತನ್ನು ವಶಪಡಿಸಿಕೊಳ್ಳಲಾಗಿದೆ.

ಬಂಧಿತರನ್ನು ವಿಜಯಪುರ ಮೂಲದ, ಪ್ರಸ್ತುತ ಉಡುಪಿ ಪುತ್ತೂರಿನ ಹನುಮಂತ ನಗರ ನಿವಾಸಿ ಸಂತೋಷ್ ಪೊಲೆಷಿ (20) ಮತ್ತು ಕಲ್ಮಾಡಿಯ ಚಿರಂತನ್ (21) ಎಂದು ಗುರುತಿಸಲಾಗಿದೆ.

ಶಾಂತಿನಗರದ ಸಂಗೀತ ಮಡಿವಾಳ ಎಂಬವರ ಮನೆಗೆ ಮಾರ್ಚ್ 12 ರಂದು ಬೆಳಿಗ್ಗೆ ಹೆಂಚು ತೆಗೆದು ನುಗ್ಗಿದ್ದ ಕಳ್ಳರು, ಕಪಾಟಿನಲ್ಲಿದ್ದ ಚಿನ್ನ, ಬೆಳ್ಳಿ ಆಭರಣಗಳು ಮತ್ತು ನಗದನ್ನು ದೋಚಿದ್ದರು. ಈ ಕುರಿತು ಮಣಿಪಾಲ ಠಾಣೆಯಲ್ಲಿ ದೂರು ದಾಖಲಾಗಿತ್ತು. ತನಿಖೆ ಆರಂಭಿಸಿದ ವಿಶೇಷ ಪೊಲೀಸ್ ತಂಡವು ಮಾರ್ಚ್ 13 ರಂದು ಸಿಂಬ್ರಾ ಸೇತುವೆ ಬಳಿ ಸಂಶಯಾಸ್ಪದವಾಗಿ ಓಡಾಡುತ್ತಿದ್ದ ನಾಲ್ವರನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಕಳ್ಳತನದ ಸತ್ಯಾಂಶ ಹೊರಬಂದಿದೆ.

ಆರೋಪಿಗಳಿಂದ ಒಟ್ಟು 4,47,000 ರೂಪಾಯಿ ಮೌಲ್ಯದ ಚಿನ್ನಾಭರಣಗಳು, ಬೆಳ್ಳಿಯ ವಸ್ತುಗಳು ಮತ್ತು ನಗದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್ ಅವರ ಮಾರ್ಗದರ್ಶನದಲ್ಲಿ ಮಣಿಪಾಲ ಪೊಲೀಸ್ ನಿರೀಕ್ಷಕ ಮಹೇಶ್ ಪ್ರಸಾದ್ ಮತ್ತು ತಂಡ ಈ ಯಶಸ್ವಿ ಕಾರ್ಯಾಚರಣೆ ನಡೆಸಿದೆ.

ಉಡುಪಿ ಅಬಕಾರಿ ಡಿಸಿಗೆ ತಟ್ಟಿತು ಲೋಕಾಯುಕ್ತ ಬಿಸಿ

9.57 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆ



ಉಡುಪಿ: ಜಿಲ್ಲೆಯ ಅಬಕಾರಿ ಇಲಾಖೆಯ ಉಪ ಆಯುಕ್ತರ ವಿರುದ್ಧ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಕೆ ಆರೋಪದಡಿ ಕರ್ನಾಟಕ ಲೋಕಾಯುಕ್ತ ಪೊಲೀಸರು ಬುಧವಾರ ಭರ್ಜರಿ ದಾಳಿ ನಡೆಸಿದ್ದಾರೆ. ಉಡುಪಿ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಧಿಕಾರಿಯ ಮನೆ ಹಾಗೂ ಕಚೇರಿ ಸೇರಿದಂತೆ ಒಟ್ಟು 15 ಸ್ಥಳಗಳಲ್ಲಿ ಏಕಕಾಲಕ್ಕೆ ಶೋಧ ನಡೆಸಲಾಗಿದೆ.

ಅಬಕಾರಿ ಡಿಸಿ ಶ್ರೀನಿವಾಸ್ ಟಿ. ಎಂ. ಅವರಿಗೆ ಸಂಬಂಧಿಸಿದ ಒಟ್ಟು ಆಸ್ತಿಯ ಮೌಲ್ಯ ಬರೋಬ್ಬರಿ 9.57 ಕೋಟಿ ರೂಪಾಯಿ ಎಂದು ಅಂದಾಜಿಸಲಾಗಿದೆ.

ಸ್ಥಿರ ಆಸ್ತಿ (6.90 ಕೋಟಿ ರೂ.): 11 ನಿವೇಶನಗಳು, 6 ವಾಸದ ಮನೆಗಳು ಹಾಗೂ 31 ಎಕರೆ ಕೃಷಿ ಜಮೀನನ್ನು ಅಧಿಕಾರಿ ಹೊಂದಿದ್ದಾರೆ.

8.69 ಕೋಟಿ ರೂಪಾಯಿ ಅಸಮತೋಲನ

ಅಧಿಕಾರಿಯ ಅಧಿಕೃತ ಆದಾಯದ ಮೂಲಗಳಿಗಿಂತ ಸುಮಾರು 8.69 ಕೋಟಿ ರೂಪಾಯಿ ಹೆಚ್ಚಿನ ಆಸ್ತಿಯನ್ನು ಹೊಂದಿದ್ದ ಬಗ್ಗೆ ಶೋಧನಾ ಸಮಯದಲ್ಲಿ ಮಾಹಿತಿ ಲಭ್ಯವಾಗಿದೆ. ಉಡುಪಿ ಸೇರಿದಂತೆ ರಾಜ್ಯದ ಒಟ್ಟು 15 ಸ್ಥಳಗಳಲ್ಲಿ ಬೆಳ್ಳಂಬೆಳಗ್ಗೆ ದಾಳಿ ನಡೆಸಿರುವ ಲೋಕಾಯುಕ್ತ ತಂಡವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದೆ.

ಚರ ಆಸ್ತಿ (2.66 ಕೋಟಿ ರೂ.)

ಚಿನ್ನಾಭರಣ: 1.47 ಕೋಟಿ ರೂಪಾಯಿ ಮೌಲ್ಯದ ಚಿನ್ನದ ಒಡವೆಗಳು. ನಗದು ಮತ್ತು ಠೇವಣಿ: 3.95 ಲಕ್ಷ ರೂ. ನಗದು ಹಾಗೂ 25.75 ಲಕ್ಷ ರೂ. ಬ್ಯಾಂಕ್ ಠೇವಣಿ. ವಾಹನ ಮತ್ತು ಇತರೆ: 17 ಲಕ್ಷ ರೂ. ಮೌಲ್ಯದ ವಾಹನಗಳು ಹಾಗೂ 72.68 ಲಕ್ಷ ರೂ. ಮೌಲ್ಯದ ಇತರೆ ಗೃಹೋಪಯೋಗಿ ವಸ್ತುಗಳು ಪತ್ತೆಯಾಗಿವೆ.

ಕಿರುಸುದ್ದಿ

ಸುಳ್ಯ ಕ್ರೈಂ ಎಸ್ಐ ಸರಸ್ವತಿ ಬಿ.ಟಿ. ವರ್ಗಾವಣೆ



ಸುಳ್ಯ: ಸುಳ್ಯ ಪೊಲೀಸ್ ಠಾಣೆಯ ತನಿಖಾ ವಿಭಾಗದ ಪೊಲೀಸ್ ಉಪ ನಿರೀಕ್ಷಕಿ ಸರಸ್ವತಿ ಬಿ.ಟಿ. ಬೆಂಗಳೂರಿನ ಅರಣ್ಯ ಸಂಚಾರಿ ಘಟಕಕ್ಕೆ ವರ್ಗಾವಣೆಗೊಂಡಿದ್ದಾರೆ. ಸುಳ್ಯ ಪೊಲೀಸ್ ಠಾಣೆಯಲ್ಲಿ ತನಿಖಾ ವಿಭಾಗದಲ್ಲಿ ಉಪ ನಿರೀಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವರು ಮೂಲತಃ ಕೊಡಗು ಜಿಲ್ಲೆಯವರಾಗಿದ್ದು ತರಬೇತಿ ಅವಧಿ ಸೇರಿದಂತೆ ಸುಮಾರು 4 ವರ್ಷಗಳ ಕಾಲ ಸುಳ್ಯ ಪೊಲೀಸ್ ಠಾಣೆಯಲ್ಲಿ ಅವರು ಕರ್ತವ್ಯ ನಿರ್ವಹಿಸಿ ಇದೀಗ ಬೆಂಗಳೂರಿನಲ್ಲಿ ಅರಣ್ಯ ಸಂಚಾರಿ ಘಟಕ್ಕೆ ವರ್ಗಾವಣೆಯಾಗಿದ್ದು ಅವರ ಖಾಲಿ ಹುದ್ದೆಗೆ ಇನ್ನಷ್ಟೆ ನೂತನ ತನಿಖಾ ಉಪ ನಿರೀಕ್ಷಕರ ನೇಮಕವಾಗಬೇಕಿದೆ.

ಹರ್ತಟ್ಟು ಪ್ರಿಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟ

ಕೋಟ: ಫ್ರೆಂಡ್ಸ್ ಹರ್ತಟ್ಟು ಆಯೋಜನೆಯಲ್ಲಿ ಹರ್ತಟ್ಟು ಪ್ರಿಮಿಯರ್ ಲೀಗ್ 2026 40ಗಜಗಳ ಲೀಗ್ ಮಾದರಿಯ ಕ್ರಿಕೆಟ್ ಪಂದ್ಯಾಟ ಶನಿವಾರದಂದು ಕಲ್ಲಟ್ಟು ಮಹಾಲಿಂಗೇಶ್ವರ ದೇವಸ್ಥಾನದ ಮೈದಾನದಲ್ಲಿ ನಡೆಯಿತು. ಕಾರ್ಯಕ್ರಮವನ್ನು ಗೀತಾನಂದ ಟ್ರಸ್ಟ್ ಪ್ರವರ್ತಕ ಆನಂದ್ ಸಿ ಕುಂದರ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಣೂರು ಮಹಾಲಿಂಗೇಶ್ವರ ದೇಗುಲದ ಅಧ್ಯಕ್ಷ ಸತೀಶ್ ಹೆಚ್ ಕುಂದರ್ ,ಕಲ್ಲಟ್ಟು ಮಹಾಲಿಂಗೇಶ್ವರ ದೇಗುಲದ ಅಧ್ಯಕ್ಷ ಸುರೇಶ ಗಾಣಿಗ ಶೇವಧಿ, ಕೋಟ ಪಂಚಾಯತ್ ಮಾಜಿ ಉಪಾಧ್ಯಕ್ಷ ಪಾಂಡು ಪೂಜಾರಿ, ಕೋಟ ಅಮೃತೇಶ್ವರಿ ದೇಗುಲದ ಟ್ರಸ್ಟಿಗಳಾದ ಎಂ.ಶಿವ ಪೂಜಾರಿ, ಗಣೇಶ್ ಕೆ. ನೆಲ್ಲಿಬೆಟ್ಟು, ಕಲ್ಲಟ್ಟು ದೇಗುಲದ ಅರ್ಚಕ ಸುಧೀರ್ ಐತಾಳ್ ,ಮಾಜಿ ಜಿ.ಪಂ ಸದಸ್ಯ ರಾಘವೇಂದ್ರ ಕಾಂಚನ್ ಬಾರಿಕೆರೆ, ಸಾಮಾಜಿಕ ಕಾರ್ಯಕರ್ತ ದಿನೇಶ್ ಗಾಣಿಗ ಕೋಟ ಉಪಸ್ಥಿತರಿದ್ದರು.

ಕೆಡಿಪಿಗೆ ನಾಮನಿರ್ದೇಶನ

ಪುತ್ತೂರು: ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿ ಅನುಷ್ಠಾನದ ಪರಿಶೀಲನೆಗಾಗಿ ಪುತ್ತೂರು ತಾಲೂಕು ಮಟ್ಟದ ತ್ರೈಮಾಸಿಕ ಕೆ.ಡಿ.ಪಿ. ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನಗೊಳಿಸಿದೆ. ನರಿಮೊಗರು ನೆಕ್ಕಿಲು ಮನೆಯ ರವೀಂದ್ರ ರೈ ನೆಕ್ಕಿಲು, ಉಪ್ಪಿನಂಗಡಿ ರಾಮನಗರದ ಸೋಮನಾಥ, ನರಿಮೊಗರು ನರಿಮೊಗೇರಿನ ವಿಶಾಲಾಕ್ಷಿ ಜಿ.ಪಿ. ಬಪ್ಪಳಿಗೆಯ ಮೂಸ ಕುಂಞ, ಕೆದಂಬಾಡಿ ಬೋಳೋಡಿಯ ಚಂದ್ರಹಾಸ ರೈ, ಬಪ್ಪಳಿಗೆಯ ಅಮರನಾಥ ಅವರನ್ನು ನೇಮಕಗೊಳಿಸಲಾಗಿದೆ.

ಉಡುಪಿ: ಯಕ್ಷಗಾನ ಕಲಾಕೇಂದ್ರದ ಹಿಂಭಾಗದ ಬಾವಿಯಲ್ಲಿ ಅಸ್ಥಿಪಂಜರ ಪತ್ತೆ

ಉಡುಪಿ:ನಗರದ ಡಿವೈನ್ ಪಾರ್ಕ್ ಎದುರಿರುವ ಯಕ್ಷಗಾನ ಕಲಾಕೇಂದ್ರದ ಹಿಂಭಾಗದ ಬಾವಿಯೊಂದರಲ್ಲಿ ಮಾನವನ ಅಸ್ಥಿಪಂಜರ ಪತ್ತೆಯಾಗಿದೆ.

ಶುಕ್ರವಾರ ಮಧ್ಯಾಹ್ನ ಈ ವಿಚಾರ ಬೆಳಕಿಗೆ ಬರುತ್ತಿದ್ದಂತೆ ಸ್ಥಳಕ್ಕೆ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಧಾವಿಸಿದ್ದಾರೆ. ಯಕ್ಷಗಾನ ಕಲಾಕೇಂದ್ರದ ಹಿಂಭಾಗದಲ್ಲಿರುವ ಹಳೆಯ ಬಾವಿಯೊಂದರಲ್ಲಿ ಮಾನವನ ಮೂಳೆಗಳು ಪತ್ತೆಯಾಗಿವೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಈ ಶವವು ಸುಮಾರು 8 ತಿಂಗಳ ಹಿಂದೆಯೇ ಬಾವಿಗೆ ಬಿದ್ದಿರಬಹುದು ಅಥವಾ ಎಸೆಯಲ್ಪಟ್ಟಿರಬಹುದು ಎಂದು ಶಂಕಿಸಲಾಗಿದೆ. ಶವವು ಸಂಪೂರ್ಣವಾಗಿ ಕೊಳೆತು ಕೇವಲ ಅಸ್ಥಿಪಂಜರ ಮಾತ್ರ ಉಳಿದಿರುವುದರಿಂದ ಮೃತರ ಗುರುತು ಪತ್ತೆ ಹಚ್ಚುವುದು ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ. ಸ್ಥಳಕ್ಕೆ ಧಾವಿಸಿದ ಪೊಲೀಸರು, ಅಗ್ನಿಶಾಮಕ ದಳ ವಿಷಯ ತಿಳಿಯುತ್ತಿದ್ದಂತೆಯೇ ಮಣಿಪಾಲ ಅಥವಾ ಉಡುಪಿ ನಗರ ಠಾಣೆಯ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ.ಅಗ್ನಿಶಾಮಕ ದಳದ ಸಿಬ್ಬಂದಿಯ ಸಹಾಯದೊಂದಿಗೆ ಬಾವಿಯಿಂದ ಅಸ್ಥಿಪಂಜರವನ್ನು ಹೊರತೆಗೆಯಲಾಗಿದೆ. ಈ ಅಸ್ಥಿಪಂಜರವು ಪುರುಷನದ್ದೇ ಅಥವಾ ಮಹಿಳೆಯದ್ದೇ ಎಂಬುದು ಇನ್ನು ದೃಢಪಡಬೇಕಿದೆ. ಕಳೆದ ಎಂಟು ತಿಂಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ನಾಪತ್ತೆಯಾದವರ ಪಟ್ಟಿಯನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ಇದು ಆಕಸ್ಮಿಕವಾಗಿ ಬಾವಿಗೆ ಬಿದ್ದು ಸಂಭವಿಸಿದ ಸಾವೇ ಅಥವಾ ಕೊಲೆ ಮಾಡಿ ಸಾಕ್ಷ್ಯ ನಾಶಪಡಿಸಲು ಬಾವಿಗೆ ಎಸೆಯಲಾಗಿದೆಯೇ ಎಂಬ ಬಗ್ಗೆ ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಬಂದ ನಂತರವಷ್ಟೇ ಸ್ಪಷ್ಟವಾಗಲಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಅಂಬ್ಲಮೊಗರು ಬಸ್ತಿಕಟ್ಟೆ ಹತ್ತು ಸಮಸ್ತರು
2. ಹಿಂದೂ ಧಾರ್ಮಿಕ ಸೇವಾ ಸಮಿತಿ (ರಿ) ಕುಡುಪು, ಕೆ.ಹೆಚ್. ಬಿ. ಲೇಔಟ್
3. ಅಕ್ಷಿತ್ ಚೌಟ, ಪಾತ್ರುಬೈಲು ಗುತ್ತು, ನಿಡ್ಡೋಡಿ, ಕಲ್ಲಮುಂಡ್ಕೂರು
4. ಸುಂದರಿ ಪೂಜಾರ?ತಿ ಮತ್ತು ಮಕ್ಕಳು, ಕೋಟೆಕಾರು, ಬೀರಿ, ಮಾಡೂರು
5. ಶ್ರೀ ದುರ್ಗಾಪರಮೇಶ್ವರೀ ಬಯಲಾಟ ಸೇವಾ ಸಮಿತಿ, ಬೆಳ್ತಂಗಡಿ
6. ಶ್ರೀ ದುರ್ಗಾಂಭ ಸೇವಾ ಟ್ರಸ್ಟ್, ಪೂಪಾಡಿಕಟ್ಟೆ, ನಾವೂರು, ಬಂಟ್ವಾಳ (ತಾ)
7. ಶ್ರೀ ದೇವಿ ಸಮಸ್ತ ಭಕ್ತ ವೃಂದ, ಕೂಳೂರು, ಮಂಗಳೂರು (ತಾ).

ಶ್ರೀ ಧರ್ಮಸ್ಥಳ ಮೇಳ
ಮಾರುತಿಪುರದಲ್ಲಿ
ಹತ್ತು ಸಮಸ್ತರು, ಮಾರುತಿಪುರ

ಶ್ರೀ ಸಾಲಿಗ್ರಾಮ ಮೇಳ
ಕುಮಟಾ ಗಿಲ್ ಹೈಸ್ಕೂಲ್ ಮೈದಾನದಲ್ಲಿ
ಲವಕುಶ- ಸತ್ಯವಾನ ಸಾವಿತ್ರಿ- ಮೈಂದದ್ವಿವಿಧ

ಶ್ರೀ ಪೆರ್ಡೂರು ಮೇಳ
ರಂಗಸ್ಥಳ ಮಂಗಳೂರು ಇದರ 11ನೇ ವಾರ್ಷಿಕೋತ್ಸವದ ಅಂಗವಾಗಿ ಕದ್ರಿ ಶ್ರೀ ದೇವಳದ ರಾಜಾಂಗಣದಲ್ಲಿ ಬಯಲಾಟ
- ಪ್ರಚಂಡ ಲಂಕೇಶ್ವರ

ಶ್ರೀ ಹನುಮಗಿರಿ ಮೇಳ
ಕಣ್ವತೀರ್ಥದಲ್ಲಿ

ಶ್ರೀ ಪಾವಂಜೆ ಮೇಳ
ಇರುವೈಲ್‌ನ ಕಟ್ಟಣಿಗೆ
ಶ್ರೀ ಅಶ್ವತ್ಥನಾರಾಯಣ ಕಟ್ಟೆಯಲ್ಲಿ
ಶ್ರೀ ದೇವಿ ಮಹಾತ್ಮೆ



ಶ್ರೀಮದ್ ಎಡನೀರು ಮಠದ ಮುಂಭಾಗದಲ್ಲಿ ಏಪ್ರಿಲ್ 9ರಂದು ನಡೆಯಲಿರುವ ಒತ್ತೆಕೋಲ (ಕೆಂಡ ಸೇವೆ) ದ ಆಮಂತ್ರಣ ಪತ್ರಿಕೆಯನ್ನು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಬಿಡುಗಡೆಗೊಳಿಸಿದರು.

ಬ್ಯಾಂಕ್ ಸೌಲಭ್ಯಗಳನು ಪಡೆದುಕೊಂಡು ಮಹಿಳೆ ಸ್ವಾವಲಂಬಿಯಾಗಲಿ: ವೀರಣ್ಣ ಕರೆ

ಸುಂಟಿಕೊಪ್ಪ: ಸರಕಾರಿ ಸಹಾಯ ಸೌಲಭ್ಯಗಳ ಜೋತೆಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಿಗುವ ಸಾಲಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲೀಕರಣಗೊಳ್ಳುವತ್ತ ಮನಸ್ಸು ಮಾಡಿ ಎಂದು ಸೋಮವಾರಪೇಟೆ ತಾಲೂಕು ಸಹಾಯಕ ಕೃಷಿ ನಿರ್ದೇಶಕ ಮತ್ತು ಕೊಡಗರಹಳ್ಳಿ ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ವೀರಣ್ಣ ಕರೆ ನೀಡಿದ್ದಾರೆ.

ಕೊಡಗರಹಳ್ಳಿ ಗ್ರಾಮ ಪಂಚಾಯತ್ ಮತ್ತು ಸಂಜೀವಿನಿ ಒಕ್ಕೂಟದ ವತಿಯಿಂದ ಆಯೋಜಿಸಲಾಗಿದ್ದ 2 ದಿನಗಳ ಮಾಸಿಕ ಸಂತೆಯನ್ನು ಕೊಡಗರಹಳ್ಳಿ ನೇತಾಜಿ ಭವನದಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಸರಕಾರವು ಮಹಿಳೆಯರ ಅಭಿವೃದ್ಧಿಗಾಗಿ ಸಾಕಷ್ಟು ಯೋಜನೆಗಳು ರೂಪಿಸಿ ಸಾಲ ಸೌಲಭ್ಯ ಮತ್ತು ರಿಯಾಯಿತಿ ದರದಲ್ಲಿ ಧನ ಸಹಾಯ ನೀಡುತ್ತಿದ್ದು ಮಹಿಳೆಯರು ಸ್ವಾಲಂಬಿಗಳಾಗಲು ವಿಫುಲ ಅವಕಾಶಗಳು ಇದೆ ಎಂದು ಹೇಳಿದರು.

ಯೂನಿಯನ್ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ಸಂಸ್ಥೆಯ ಕೊಡಿಗೆ ಕೇಂದ್ರದ ನವ್ಯ ಸಂಪನ್ಮೂಲ ವ್ಯಕ್ತಿಯಾಗಿದ್ದರು.

ಇದೇ ಸಂದರ್ಭದಲ್ಲಿ ಕಂಬಿಬಾಣೆಯ ಬ್ರಹ್ಮಜ್ಞಾನ ಮಂದಿರ ವತಿಯಿಂದ ಮಾಸಿಕ ಸಂತೆಯಲ್ಲಿ ಪಾಲ್ಗೊಂಡವರಿಗೆ ಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತರಿಗೆ ಉಚಿತವಾಗಿ ಶ್ರೀಮದ್ ಭಗವದ್ಗೀತಾ ಗ್ರಂಥವನ್ನು ವಿತರಿಸಲಾಯಿತು.

2 ದಿನಗಳ ಮಾಸಿಕ ಸಂತೆಯ ಕುರಿತು ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ ಶಿಕ್ಷಕಿ ಸುಮ ಮಾತನಾಡಿದರು .

ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಭುವನೇಶ್ವರಿ, ಉಪಾಧ್ಯಕ್ಷೆ ಇಂದಿರಾ, ಖಜಾಂಜಿ ಪುಷ್ಪಲತಾ, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ರವೀಶ್, ನಿಕಟಪೂರ್ವ ಸದಸ್ಯೆ ಕಲಾಮಣಿ, ಸಂಜೀವಿನಿ ಒಕ್ಕೂಟದ ಮುಖ್ಯಲೆಕ್ಕಾಧಿಕಾರಿ ಶಾರದ, ಮೇಲ್ವಿಚಾರಕಾರದ ಪದ್ಮಶ್ರೀ, ಸ್ಥಳೀಯ ಸಂಪನ್ಮೂಲ ವ್ಯಕ್ತಿ ಪೂರ್ಣಿಮ, ಸಂಜೀವಿನಿ ಒಕ್ಕೂಟದ ತಾಲೂಕು ವ್ಯವಸ್ಥಾಪಕ ರವಿ, ಕೃಷಿ ಉತ್ತೇಜನಕ್ಕೆ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆ ಸಬಲದ ರೇವಣ ಸಿದ್ದಪ್ಪ, ಪ್ರಸನ್ನ ಸೇರಿದಂತೆ 7ನೆ ಹೊಸಕೋಟೆ, ಸುಂಟಿಕೊಪ್ಪ, ನಾಕೂರು ಶಿರಂಗಾಲ, ಮಾದಾಪುರ ವ್ಯಾಪ್ತಿಯ ಪ್ರತಿನಿಧಿಗಳು ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಪುತ್ತೂರು ದೇವಸ್ಥಾನದಲ್ಲಿ ಕಾಂಗ್ರೆಸ್ ರಾಜಕೀಯ ಕಾರ್ಯಕ್ರಮ

ಭಕ್ತರ ಭಾವನೆಗಳಿಗೆ ಧಕ್ಕೆ: ಬಿಜೆಪಿ

ಮಂಗಳೂರು: ಪುತ್ತೂರಿನ ಐತಿಹಾಸಿಕ ಹಾಗೂ ಪವಿತ್ರ ಕ್ಷೇತ್ರವಾದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನವು ಶತಮಾನಗಳ ಕಾಲ ಭಕ್ತರ ನಂಬಿಕೆಯ ಕೇಂದ್ರವಾಗಿದೆ. ಆದರೆ ಇತ್ತೀಚೆಗೆ ದೇವಸ್ಥಾನದ ಸಭಾಭವನವನ್ನು ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಂಡಿರುವುದು ಮತ್ತು ಅದರ ಬ್ಯಾನರ್‌ಗಳು ದೇವಸ್ಥಾನದ ವೇದಿಕೆಯಲ್ಲಿ ಇನ್ನೂ ಪ್ರದರ್ಶಿತವಾಗಿರುವುದು ದೇವಸ್ಥಾನದ ಪಾವಿತ್ರ್ಯತೆಯನ್ನು ಹಾಳು ಮಾಡುವ ದುಃಖಕರ ಘಟನೆಯಾಗಿದೆ. ಈ ಘಟನೆಯನ್ನು ಭಾರತೀಯ ಜನತಾ ಪಾರ್ಟಿ ದಕ್ಷಿಣ ಕನ್ನಡ ಜಿಲ್ಲೆ ತೀವ್ರವಾಗಿ ಖಂಡಿಸುತ್ತದೆ ಎಂದು ಬಿಜೆಪಿ ಜಿಲ್ಲಾ ವಕ್ತಾರ ಅರುಣ್ ಜಿ. ಶೇಟ್ ಹೇಳಿದ್ದಾರೆ.



ದೇವಸ್ಥಾನದ ಸಭಾಭವನದಲ್ಲಿ ನಡೆದ 'ಮಹಿಳಾ ಸಂಭ್ರಮ' ಎಂಬ ಕಾರ್ಯಕ್ರಮದ ಬ್ಯಾನರ್‌ಗಳಲ್ಲಿ ಸ್ಪಷ್ಟವಾಗಿ ಕಾಂಗ್ರೆಸ್‌ನ ರಾಜಕೀಯ ವ್ಯಕ್ತಿಗಳ ಚಿತ್ರಗಳು ಮತ್ತು ಪ್ರಚಾರದ ಅಂಶಗಳು ಕಾಣಿಸುತ್ತಿವೆ. ದೇವಸ್ಥಾನದ ಆವರಣವನ್ನು ರಾಜಕೀಯ ವೇದಿಕೆಯಾಗಿ ಬಳಸುವುದು ಭಕ್ತರ ಭಾವನೆಗಳಿಗೆ ನೇರ ಅವಮಾನವಾಗಿದೆ.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿ ಕಾಯ್ದೆ 1997 ಪ್ರಕಾರ ದೇವಸ್ಥಾನಗಳ ಆವರಣವನ್ನು ಧಾರ್ಮಿಕ ಉದ್ದೇಶಗಳಿಗೆ ಮಾತ್ರ ಬಳಸಬೇಕೆಂಬ ನಿಯಮವಿದ್ದರೂ, ಅದನ್ನು ಉಲ್ಲಂಘಿಸಿರುವುದು ದೇವಸ್ಥಾನದ ಆಡಳಿತ ಮಂಡಳಿಯ ಜವಾಬ್ದಾರಿಯ ಕೊರತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ.

ದೇವಸ್ಥಾನದ ಆವರಣದಲ್ಲಿ ರಾಜಕೀಯ ಪ್ರಚಾರಕ್ಕೆ ಅವಕಾಶ ನೀಡಿರುವುದು ಸಂಪೂರ್ಣವಾಗಿ ಅಸ್ವೀಕಾರಾರ್ಹ. ದೇವಸ್ಥಾನಗಳು ದೇವರ ಆರಾಧನೆಗೆ ಮಾತ್ರ ಸೀಮಿತವಾಗಿರಬೇಕು, ಯಾವುದೇ ರಾಜಕೀಯ ಪಕ್ಷದ ಪ್ರಚಾರ ವೇದಿಕೆಯಾಗಬಾರದು. ದೇವಸ್ಥಾನದ ಆಡಳಿತ ಮಂಡಳಿ ತಕ್ಷಣವೇ ರಾಜಕೀಯ ಬ್ಯಾನರ್‌ಗಳನ್ನು ತೆರವುಗೊಳಿಸಿ, ಮುಂದಿನ ದಿನಗಳಲ್ಲಿ ದೇವಸ್ಥಾನದ ಸಭಾಭವನವನ್ನು ಯಾವುದೇರಾಜಕೀಯಕಾರ್ಯಕ್ರಮಗಳಿಗೆ ಬಳಸಬಾರದು ಎಂಬುದಾಗಿ ಬಿಜೆಪಿ ಆಗ್ರಹಿಸುತ್ತದೆ. ಇಲ್ಲವಾದಲ್ಲಿ ಭಕ್ತರ ಭಾವನೆಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಸಾರ್ವಜನಿಕ ಹೋರಾಟ ನಡೆಸಬೇಕಾದ ಪರಿಸ್ಥಿತಿ ಎದುರಾಗಬಹುದು ಎಂದು ಪ್ರಕಟಣೆಯಲ್ಲಿ ಅವರು ಹೇಳಿದ್ದಾರೆ.

ವಿಹಿಂಪ-ಬಜರಂಗ ದಳ ಖಂಡನೆ

ಪುತ್ತೂರು: ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ನಟರಾಜ ವೇದಿಕೆಯಲ್ಲಿ ಕಾಂಗ್ರೆಸ್ ಪಕ್ಷದ ದ.ಕ. ಜಿಲ್ಲಾ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ವತಿಯಿಂದ ರಾಜಕೀಯ ಕಾರ್ಯಕ್ರಮ ನಡೆಸಿರುವುದನ್ನು ಖಂಡಿಸಿರುವ ವಿಶ್ವ ಹಿಂದು ಪರಿಷದ್, ಬಜರಂಗದಳ ಈ ಕುರಿತು ಧಾರ್ಮಿಕ ದತ್ತಿ ಇಲಾಖೆಯು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದೆ.



ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವ ದೇವಸ್ಥಾನವಾಗಿದೆ. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಚಾರಿಟೇಬಲ್ ಎಂಡೋಮೆಂಟ್ ಕಾಯಿದೆಯ ಪ್ರಕಾರ ದೇವಸ್ಥಾನದ ಆಸ್ತಿ, ಹಾಲ್, ಕಟ್ಟಡಗಳು ಹಾಗೂ ಇತರೆ ಸೌಕರ್ಯಗಳು ಧಾರ್ಮಿಕ ಹಾಗೂ ಧರ್ಮಾರ್ಥ ಉದ್ದೇಶಗಳಿಗೆ ಮಾತ್ರ ಬಳಸಬೇಕು ಎಂದು ಕಾನೂನು ಸ್ಪಷ್ಟಪಡಿಸುತ್ತದೆ. ವಿಶೇಷವಾಗಿ ಈ ಕಾಯಿದೆಯ ಸೆಕ್ಷನ್ 19, 25 ಹಾಗೂ 63ರ ಪ್ರಕಾರ ದೇವಸ್ಥಾನದ ಆಸ್ತಿಗಳ ಬಳಕೆ ಮತ್ತು ಅದರ ನಿರ್ವಹಣೆ ಧಾರ್ಮಿಕ ಉದ್ದೇಶಗಳಿಗೆ ಮಾತ್ರ ಸೀಮಿತವಾಗಿರಬೇಕು ಮತ್ತು ಅವುಗಳ ದುರುಪಯೋಗವನ್ನು ತಡೆಯುವ ಜವಾಬ್ದಾರಿ ಆಡಳಿತಾಧಿಕಾರಿಗಳಿಗೆ ಇದೆ.

ಮಾ.8 ರಂದು ದೇವಸ್ಥಾನದ ನಟರಾಜ ವೇದಿಕೆಯಲ್ಲಿ ದ.ಕ. ಜಿಲ್ಲಾ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಇದರ ವತಿಯಿಂದ ಮಹಿಳಾ ಸಂಭ್ರಮ ಕಾರ್ಯಕ್ರಮವನ್ನು ಆಯೋಜಿಸಿರುವುದು ನಮ್ಮ ಗಮನಕ್ಕೆ ಬಂದಿದೆ. ದೇವಸ್ಥಾನದ ಪವಿತ್ರ ಆವರಣದಲ್ಲಿ ರಾಜಕೀಯ ಚಟುವಟಿಕೆಗಳನ್ನು ನಡೆಸುವುದು ದೇವಸ್ಥಾನದ ಧಾರ್ಮಿಕ ಸ್ವರೂಪಕ್ಕೆ ಧಕ್ಕೆ ತರುವಂತದ್ದು ಮತ್ತು ಮೇಲ್ಕಂಡ ಕಾಯಿದೆಯ ಉದ್ದೇಶ ಹಾಗೂ ನಿಯಮಗಳಿಗೆ ವಿರುದ್ಧವಾಗಿದೆ ಮತ್ತು ಈ ಕಾರ್ಯಕ್ರಮದಲ್ಲಿ ಅನ್ಯ ಮತೀಯ ವ್ಯಕ್ತಿಗಳು ಕೂಡ ಭಾಗಿಯಾಗಿರುವುದು ದೇವಸ್ಥಾನದ ಭಕ್ತರಾದ ನಮ್ಮ ಧಾರ್ಮಿಕ ಭಾವನೆಗೆ ಧಕ್ಕೆ ತರುವಂತಹ ಕಾರ್ಯ ನಡೆದಿದೆ. ದೇವಸ್ಥಾನದ ವೇದಿಕೆಯಲ್ಲಿ ಕುಳ್ಳಿರಿಸಿ ರಾಜಕೀಯ ಕಾರ್ಯ ಕ್ರಮ ಮಾಡಿದ ಕಾಂಗ್ರೆಸ್ ಕೃತ್ಯವನ್ನು ವಿಶ್ವ ಹಿಂದೂ ಪರಿಷತ್ ಭಜರಂಗದಳ ತೀವ್ರವಾಗಿ ಖಂಡಿಸುತ್ತದೆ ಎಂದು ವಿಶ್ವ ಹಿಂದೂ ಪರಿಷತ್ ಪುತ್ತೂರು ಜಿಲ್ಲಾಧ್ಯಕ್ಷ ಡಾ. ಕೃಷ್ಣ ಪ್ರಸನ್ನ ಮತ್ತು ಪ್ರಾಂತ ಉಪಾಧ್ಯಕ್ಷ ಯು. ಪೂವಪ್ಪ ತಿಳಿಸಿದ್ದಾರೆ.

ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯಲ್ಲಿ ದೀಪ ಪ್ರದಾನ ಕಾರ್ಯಕ್ರಮ



ಪುತ್ತೂರು: ಕನ್ನಡ ಮಾಧ್ಯಮದ ಕಲಿಕೆ ನನ್ನಲ್ಲಿ ವೈಯಕ್ತಿಕ ಮತ್ತು ಸಾಮಾಜಿಕಸೂಕ್ಷ್ಮತೆಯನ್ನುಬೆಳೆಸಿದೆ. ಮಾಧ್ಯಮ ಯಾವುದೆನ್ನುವುದಕ್ಕಿಂತಲೂ ವಿದ್ಯಾರ್ಥಿಯ ಕಲಿಕಾಸಕ್ತಿ, ಪೋಷಕರ ಸಹಕಾರ-ಬೆಂಬಲ ಮಗುವಿನ ವ್ಯಕ್ತಿತ್ವ ವಿಕಾಸದಲ್ಲಿ ಮಹತ್ತರ ಪಾತ್ರ ವಹಿಸುತ್ತದೆ ಎಂದು ಪುತ್ತೂರಿನ ಪ್ರಗತಿ ಸ್ಪೆಷಾಲಿಟಿ ಆಸ್ಪತ್ರೆಯ ಮಕ್ಕಳ ತಜ್ಞ ಡಾ. ಸಂದೀಪ್ ಹೇಳಿದರು.

ನಗರದ ವಿವೇಕಾನಂದ ಕನ್ನಡ ಶಾಲೆಯ ಪ್ರಸಕ್ತ ಸಾಲಿನ 10ನೇ ತರಗತಿಯ ಮಕ್ಕಳ ದೀಪ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು. ಭಗವದ್ಗೀತಾ ಶ್ಲೋಕದೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಶಾಲಾ ಹಿರಿಯ ಪೋಷಕ ದಂಪತಿ ಎಲ್. ರಾಧಾಕೃಷ್ಣ ಭಟ್ ಹಾಗೂ ಎಲ್. ಉಮಾಶಂಕರಿ ಭಟ್ ದೀಪ ಪ್ರಜ್ವಲಿಸಿ ಉದ್ಘಾಟಿಸಿದರು. ಆನಂತರ ಅಖಂಡ ಭಾರತದ ಸಂಕಲ್ಪದೊಂದಿಗೆ ಆಗಮಿಸಿದ ಪೋಷಕರು, ಮಕ್ಕಳು ಹಾಗೂ ಅಭ್ಯಾಗತರು ದೀಪ ಪ್ರಜ್ವಲಿಸಿದರು. ಬಳಿಕ ಮಾತೃ ವಂದನಾ ಜರುಗಿತು.

ಪ್ರಸ್ತುತ ಸಾಲಿನ 10ನೇ ತರಗತಿಯ ಮಕ್ಕಳು 9ನೇ ತರಗತಿಯ ಮಕ್ಕಳಿಗೆ ದೀಪ ಪ್ರದಾನಿಸಿ ಶಾಲಾ ಪಠ್ಯ ಮತ್ತು ಪಠ್ಯಪೂರಕ ಚಟುವಟಿಕೆಗಳನ್ನು ಮುಂದುವರಿಸುವ ಆಶಯದೊಂದಿಗೆ ಶುಭ ಹಾರೈಸಿದರು. ಶಾಲಾ ಅಧ್ಯಕ್ಷ ರಮೇಶ್ಚಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಚಾಲಕ ವಸಂತ ಸುವರ್ಣ, ಕೋಶಾಧಿಕಾರಿ, ಅಶೋಕ ಕುಂಬ್ಳೆ, ಸದಸ್ಯ ತಿರುಮಲೇಶ್ವರ ಭಟ್, ಪ್ರಾಥಮಿಕ ವಿಭಾಗದ ಮುಖ್ಯ ಗುರು ನಳಿನಿ ವಾಗ್ಲೆ ಉಪಸ್ಥಿತರಿದ್ದು ಶುಭ ಹಾರೈಸಿದರು. ಶಾಲಾ ಪೋಷಕರಾದ ಉಷಾ, ಮುರಳೀಧರ ನಾಯಕ್, ಮಂಜುನಾಥ ಇವರು ಅನಿಸಿಕೆ ವ್ಯಕ್ತಪಡಿಸಿದರು. ಪ್ರೌಢ ವಿಭಾಗದ ಮುಖ್ಯ ಗುರು ಆಶಾ ಬೆಳ್ಳಾರೆ ಸ್ವಾಗತಿಸಿದರು.

ಆಳ್ವಾಸ್ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ 'ಸಂಪನ್ನಮ್-2026' ಬೀಳ್ಕೊಡುಗೆ ಸಮಾರಂಭ



ಮೂಡುಬಿದಿರೆ: ಆಯುರ್ವೇದ ಕ್ಷೇತ್ರದಲ್ಲಿ ಇಂದು ಅನೇಕ ಅವಕಾಶಗಳು ಲಭ್ಯವಿದ್ದು, ಅವುಗಳನ್ನು ಸಮರ್ಥವಾಗಿ ಬಳಸಿಕೊಂಡರೆ ಸಾಧನೆ ಸಾಧ್ಯ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಹೇಳಿದರು.

ಆಳ್ವಾಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ 2022-23ನೇ ಸಾಲಿನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ 'ಸಂಪನ್ನಮ್-2026' ಉದ್ದೇಶಿಸಿ ಅವರು ಮಾತನಾಡಿದರು.

ಆಯುರ್ವೇದವು ವಿಶ್ವಮಟ್ಟದಲ್ಲಿ ಹೊಸ ಅವಕಾಶಗಳನ್ನು ತೆರೆದಿಟ್ಟಿರುವ ಕ್ಷೇತ್ರವಾಗಿದ್ದು, ವಿದ್ಯಾರ್ಥಿಗಳು ಆಶಾವಾದಿಗಳಾಗಿ ಗುರಿಯೆಡೆಗೆ ಸಾಗಬೇಕು. ವಿದ್ಯಾಭ್ಯಾಸದ ಜೊತೆಗೆ ನಿರಂತರ ಅಭ್ಯಾಸ ಮತ್ತು ಪರಿಶ್ರಮ ಇದ್ದರೆ ಯಾವುದೇ ಕ್ಷೇತ್ರದಲ್ಲೂ ಯಶಸ್ಸು ಸಾಧಿಸಲು ಸಾಧ್ಯ.

ಆಯುರ್ವೇದ, ಯೋಗ, ಪ್ರಕೃತಿ ಚಿಕಿತ್ಸೆ ಸೇರಿದಂತೆ ಹಲವು ವಿಭಾಗಗಳಲ್ಲಿ ಉತ್ತಮ ಬೇಡಿಕೆ ಇದ್ದು, ವಿದ್ಯಾರ್ಥಿಗಳು ಸಂಶೋಧನೆಯ ನೆಲೆಯಲ್ಲಿ ಔಷಧಿ ತಯಾರಿಕೆಯ ಮೂಲಕವೂ ಮುಂದುವರಿಬಹುದು. ಸ್ವದೇಶಿ ಉತ್ಪನ್ನಗಳಿಗೆ ಕೇಂದ್ರ ಸರ್ಕಾರವೂ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು, ಆಯುರ್ವೇದ ಔಷಧಿ ಸಂಬಂಧಿತ ಗಿಡಗಳನ್ನು ಬೆಳೆಸಲು ದೊಡ್ಡ ಮಟ್ಟದ ಆನುದಾನ ನೀಡಲಾಗುತ್ತಿದೆ ಎಂದು ತಿಳಿಸಿದರು.

ಅವಕಾಶಗಳನ್ನು ಬಳಸಿಕೊಳ್ಳುವ ಮನೋಭಾವನೆ ಬೆಳೆಸಿಕೊಳ್ಳಬೇಕು. ಸಾಧನೆಗಾಗಿ ಕೆಲವೊಮ್ಮೆ ತ್ಯಾಗವೂ ಅಗತ್ಯವಾಗುತ್ತದೆ. ತಮ್ಮ ಜೀವನವೂ ಶೂನ್ಯದಿಂದ ಆರಂಭವಾಗಿ ಆಯುರ್ವೇದ ಕ್ಷೇತ್ರಕ್ಕೆ ಕೊಡುಗೆ ನೀಡುವ ಮಟ್ಟಕ್ಕೆ ಬೆಳೆಯಲು ಸಾಧ್ಯವಾಯಿತು ಎಂಬುದನ್ನು ವಿದ್ಯಾರ್ಥಿಗಳು ಅರಿತು ಬದುಕನ್ನು ರೂಪಿಸಿಕೊಳ್ಳಬೇಕು ಎಂದರು.

ಡಾ. ಕೃಷ್ಣಕುಮಾರ್ ಯಾದವ್, ಡಾ. ನೇಹಾನ್ ಮತ್ತು ಡಾ. ಅಶ್ವಿತಾ ತಮ್ಮ ಮೂರು ವರ್ಷದ ಅಧ್ಯಯನ ಅನುಭವಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ. ಸುಶೀಲ್ ಶೆಟ್ಟಿ, ಆಯುರ್ವೇದ ಕಾಲೇಜಿನ ವೈದ್ಯಕೀಯ ಅಧೀಕ್ಷಕಿ ಡಾ. ಸುರೇಖಾ ಪೈ, ಪದವಿ ವಿಭಾಗದ ಡೀನ್ ಡಾ. ಸ್ವಪ್ನ ಕುಮಾರಿ, ಆತ್ಮ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಸುಬ್ರಹ್ಮಣ್ಯ ಪದ್ಯಾಣ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಡಾ. ಗೀತಾ ಬಿ. ಮಾರ್ಕಂಡೆ ನಿರೂಪಿಸಿ, ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ. ಸುಶೀಲ್ ಶೆಟ್ಟಿ ಸ್ವಾಗತಿಸಿ, ಸ್ನಾತಕೋತ್ತರ ವಿಭಾಗದ ಡೀನ್ ಡಾ. ಮಂಜುನಾಥ ಭಟ್ ವಂದಿಸಿದರು.

ಭಾರತದಲ್ಲಿ ಮಹಿಳೆಯರ ಬಗ್ಗೆ ತಾತ್ಸಾರ ಭಾವನೆ ಇಲ್ಲ : ನಟಿ ಪೂರ್ಣಿಮಾ ಸುರೇಶ್

ಕುಂದಾಪುರ : ಹೆಣ್ಣು ಸಮಾಜದ ತಾರತಮ್ಯ ಧೋರಣೆಯಿಂದ ಅನುಭವಿಸುವ ಕಷ್ಟಗಳನ್ನು, ಕಲಾ ಕ್ಷೇತ್ರದಲ್ಲೂ ಸಾಹಿತ್ಯ ಕ್ಷೇತ್ರದಲ್ಲೂ ಹೆಣ್ಣು ಮಕ್ಕಳು ತಮಗೆ ಸಹಜವಾಗಿ ಅನ್ನಿಸಿದ್ದನ್ನು ಹೇಳಲು ಭಯಪಡುವಂಥ ಪರಿಸ್ಥಿತಿಯಿದೆ. ಆದರೆ ಕೊಲ್ಲಿ ರಾಷ್ಟ್ರಗಳಲ್ಲಿರುವಂತೆ ಹೆಣ್ಣನ್ನು ಒಂದು ವಸ್ತುವಿನಂತೆಯೋ ಪ್ರಾಣಿಯಂತೆಯೋ ಕಾಣುವ ತಾತ್ಸಾರ ಭಾವದಿಂದ ನಾವು ಭಾರತೀಯರು ಸಂಪೂರ್ಣ ಮುಕ್ತರಾಗಿದ್ದೇವೆ. ಆ ಮಟ್ಟಿಗೆ ನಾವು ಅದೃಷ್ಟವಂತರು ಎಂದು ರಂಗಭೂಮಿ ಕಲಾವಿದೆ, ಚಿತ್ರನಟಿ- ಲೇಖಕಿ ಪೂರ್ಣಿಮಾ ಸುರೇಶ್ ಹೇಳಿದರು.



ಕುಂದಾಪುರ ಜನಪ್ರತಿನಿಧಿ ಸಂಸ್ಥೆಯಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದ 'ಸುರಗಂಗಾ ಕಲಾ-ಸಾಹಿತ್ಯ ಮಹಿಳಾ ವೇದಿಕೆ'ಯನ್ನು ಗುರುವಾರ ಉದ್ಘಾಟಿಸಿ ವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ಲೇಖಕಿ ಪಾರ್ವತಿ ಜಿ. ಐತಾಳ್ ಮಾತನಾಡಿ, ಮಹಿಳೆಯರನ್ನು ಮಹಿಳಾ ದಿನಾಚರಣೆಯಂದು ಹಾಡಿ ಹೊಗಳುವುದಕ್ಕಿಂತಲೂ ಅವರು ಅಂತರಂಗದಲ್ಲಿ ಅನುಭವಿಸುವ ನೋವುಗಳೇನು ಮತ್ತು ಆ ನೋವಿಗೆ ಕಾರಣಗಳೇನು ಎಂಬುದನ್ನು ತಿಳಿದುಕೊಂಡು ಅವರ ಕಷ್ಟಗಳನ್ನು ಸಮಾನವಾಗಿ ಹಂಚಿಕೊಳ್ಳುವ ಕೆಲಸ ಆಗಬೇಕಾಗಿದೆ. ಇತಿಹಾಸ-ಪರಂಪರೆ-ಪದ್ಧತಿಗಳನ್ನು ಅನುಸರಿಸುವ ನೆಪದಲ್ಲಿ ಹೆಣ್ಣಿನ ಮೇಲೆ ಮನೆಯೊಳಗಿನ ಎಲ್ಲರ ಚಾಕರಿ ಮಾಡಿಸುವುದನ್ನು ಇಂದಿನ ಬದಲಾದ ಯುಗದಲ್ಲಿ ನಿಲ್ಲಿಸಬೇಕಾಗಿದೆ. ಮಾನವೀಯ ನೆಲೆಯಿಂದ ಅವಳ ವ್ಯಕ್ತಿತ್ವವನ್ನು ಗುರುತಿಸಿ ಅವಳ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಬೇಕಾಗಿದೆ. ಭಾರತೀಯ ಭವ್ಯ ಸಂಸ್ಕೃತಿಯು ಅರ್ಧನಾರೀಶ್ವರ ತತ್ವದ ಮೇಲೆ ನಿಂತಿದೆ. ಅಂದ ಮೇಲೆ ಹೆಣ್ಣು-ಗಂಡು ಎಲ್ಲಾ ಜವಾಬ್ದಾರಿಗಳನ್ನು ಸಮಾನವಾಗಿ ಹಂಚಿಕೊಳ್ಳುವುದೇ ನ್ಯಾಯ. ಈ ಬಗ್ಗೆ ಅರಿವು ಮೂಡಿಸುವುದೇ ನಮ್ಮ ಧ್ಯೇಯವಾಗಬೇಕು ಎಂದರು.

ಮುಖ್ಯ ಅತಿಥಿ ಲೇಖಕಿ- ಕಲಾವಿದೆ ಸುಪ್ರಸನ್ನ ನಕ್ಕತ್ತಾಯ, ಉಡುಪಿ ಜಿಲ್ಲಾ ಕ.ಸಾ.ಪ. ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ, ಪತ್ರಕರ್ತ ಸುಬ್ರಹ್ಮಣ್ಯ ಪಡುಕೋಣೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಚಿತ್ರಕಲಾವಿದೆ ನೇಹಾ ಗಂಗೊಳ್ಳಿ ಅವರನ್ನು ಸನ್ಮಾನಿಸಲಾಯಿತು.

ಸುರಗಂಗಾ ಕಲಾ-ಸಾಹಿತ್ಯ ಮಹಿಳಾ ವೇದಿಕೆಯ ಕಾರ್ಯದರ್ಶಿ ಲೇಖಕಿ ಪೂರ್ಣಿಮಾ ಕಮಲಶಿಲೆ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಸುಮತಿ ಶೆಣೈ ಅತಿಥಿಗಳನ್ನು ಪರಿಚಯಿಸಿದರು. ರಾಧಾ ಕಾರಂತ, ಜಯಲಕ್ಷ್ಮಿ ಕಾರಂತರು ಆರಂಭ ಗೀತೆಯನ್ನು ಹಾಡಿದರು. ರೇಡಿಯೋ ಕುಂದಾಪುರದ ಜ್ಯೋತಿ ಸಾಲಿಗ್ರಾಮ ಸನ್ಮಾನ ಪತ್ರ ವಾಚಿಸಿದರು. ಸುಪ್ರೀತಾ ಪುರಾಣಿಕ್ ಕಾರ್ಯಕ್ರಮ ನಿರೂಪಿಸಿದರು. ವೇದಿಕೆಯ ಜತೆ ಕಾರ್ಯದರ್ಶಿ ಜೆಸ್ಸಿ ಎಲಿಜಬೆತ್ ವಂದಿಸಿದರು.

ಹಿರಿಯಡಕ: ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಕೃತಕ ಬುದ್ಧಿಮತ್ತೆ ಪ್ರಯೋಗಾಲಯ ಉದ್ಘಾಟನೆ

ಭಾರತದ ಭವಿಷ್ಯದ ಜೀವನಕ್ಕಾಗಿ ಕೃತಕ ಬುದ್ಧಿಮತ್ತೆ ಆಧಾರಿತ ಕಲಿಕೆ ಆವಶ್ಯಕ: ಶಾಸಕ ಗುರ್ಮೆ

ಹಿರಿಯಡಕ: ಇಂದಿನ ವಿದ್ಯಾರ್ಥಿಗಳು ಭಾರತದ ಭವಿಷ್ಯದ ಜೀವನಕ್ಕಾಗಿ ಕೃತಕ ಬುದ್ಧಿಮತ್ತೆ ಆಧಾರಿತ ಕಲಿಕೆ ಅವಶ್ಯಕವಾಗಿದೆ. ಈ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಐ (ಕೃತಕ ಬುದ್ಧಿಮತ್ತೆ) ಕಲಿಕೆಯು ಅನಿವಾರ್ಯವಾಗಿದೆ. ಈ ತಂತ್ರಜ್ಞಾನವು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಹೊಸ ದಾರಿಯನ್ನು ತೋರಿಸಲಿದೆ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಹೇಳಿದರು.

ಅವರು ಹಿರಿಯಡ್ಕದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಕೃತಕ ಬುದ್ಧಿಮತ್ತೆ ಪ್ರಯೋಗಾಲಯವನ್ನು ಉದ್ಘಾಟಿಸಿ ಮಾತನಾಡಿದರು.

ದಿ. ರಘು ದೇಶಪಾಂಡೆ ಅವರ ಸ್ಮರಣಾರ್ಥವಾಗಿ ಅವರ ಕುಟುಂಬದವರು ಮತ್ತು ಮಿತ್ರರು ನೀಡಿದ ಈ ಕೊಡುಗೆಯು ಶ್ಲಾಘನೀಯ. ಇಂತಹ ಸಮಾಜಮುಖಿ ಕಾರ್ಯಗಳು ಗ್ರಾಮೀಣ ಭಾಗದ ಶಿಕ್ಷಣ ಕ್ಷೇತ್ರಕ್ಕೆ ದೊಡ್ಡ ಶಕ್ತಿಯನ್ನು ನೀಡುತ್ತವೆ. ವಿದ್ಯಾರ್ಥಿಗಳು ಈ ಆಧುನಿಕ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಬೇಕು ಎಂದರು.



ಸಂಸ್ಥೆಯ ಪ್ರಾಂಶುಪಾಲ ಮಂಜುನಾಥ್ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿ ದಿ. ರಘು ದೇಶಪಾಂಡೆ ಅವರ ಮಿತ್ರರಾದ ನಿವೃತ್ತ ಪ್ರಾಧ್ಯಾಪಕ ಪ್ರೊಫೆಸರ್ ಸುನಿಲ್ ಪರಮೇಶ್ವರನ್ ಇವರು ಸಂಸ್ಥೆಗೆ ನೂತನ ಎಐ ಕಂಪ್ಯೂಟರ್ ಪ್ರಯೋಗಾಲಯ ನೀಡಿರುವುದಲ್ಲದೆ 2 ಶುದ್ಧ ಕುಡಿಯುವ ನೀರಿನ ಘಟಕಗಳು, 3 ಲ್ಯಾಪ್‌ಟಾಪ್, ಪ್ರೊಜೆಕ್ಟರ್, ಟಿವಿ 65 ಡೆಸ್ಕ್ ಬೆಂಚ್ ಹೀಗೆ ರೂ.40 ಲಕ್ಷಕ್ಕೂ ಅಧಿಕ ಮೊತ್ತದ ಕೊಡುಗೆ ನೀಡಿದ್ದಾರೆ ಎಂದರು. ಮುಂದಿನ ದಿನಗಳಲ್ಲಿ ನೂತನ ಎಐ ಕಂಪ್ಯೂಟರ್ ಪ್ರಯೋಗಾಲಯದಲ್ಲಿ ಬಂಟಕಲ್ ಶ್ರೀ ಮದ್ವಾವಾದಿರಾಜ ತಾಂತ್ರಿಕ ಮಹಾವಿದ್ಯಾಲಯದಸಹಕಾರದೊಂದಿಗೆವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆಯ ಕುರಿತು ಕಾರ್ಯಾಗಾರಗಳನ್ನು ನಡೆಸಲಾಗುವುದು ಎಂದರು.

> ಇಂದಿನ ವಿದ್ಯಾರ್ಥಿಗಳು ಭಾರತದಲ್ಲಿಯ ಭವಿಷ್ಯದ ಜೀವನಕ್ಕಾಗಿ ಕೃತಕ ಬುದ್ಧಿಮತ್ತೆ ಆಧಾರಿತ ಕಲಿಕೆ ಅವಶ್ಯಕವಾಗಿದೆ. ಈ ತಂತ್ರಜ್ಞಾನ ಆಧಾರಿತ ಶಿಕ್ಷಣ ನೀಡುವುದರ ಮೂಲಕ ಉತ್ತಮ ಭವಿಷ್ಯವನ್ನು ರೂಪಿಸಬೇಕಿದೆ. ಹಿರಿಯಡ್ಕದ ಕೆಪಿಎಸ್ ನಂತಹ ಶಿಕ್ಷಣ ಸಂಸ್ಥೆಯು ಉತ್ತಮ ಶಿಸ್ತು ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿದ್ದು, ಇಲ್ಲಿನ ಶೈಕ್ಷಣಿಕ ವಾತಾವರಣವು ವಿದ್ಯಾರ್ಥಿಗಳ ಪ್ರಗತಿಗೆ ಪೂರಕವಾಗಿದೆ
> ■ ಗುರ್ಮೆ ಸುರೇಶ್ ಶೆಟ್ಟಿ, ಶಾಸಕ

ರಘು ದೇಶಪಾಂಡೆ ಪತ್ನಿ ಶ್ಯಾಮಲಾ ದೇಶಪಾಂಡೆ, ದಿ.ರಘು ದೇಶಪಾಂಡೆಯವರ ಐಐಎಂ ಬೆಂಗಳೂರಿನ ಸಹಪಾಠಿಯಾದ ಚೆನ್ನೈನ ಚಾರ್ಟೆಡ್ ಅಕೌಂಟೆಂಟ್ ವಿಜಯ ರಾಘವನ್, ದಿ.ರಘು ದೇಶಪಾಂಡೆಯವರ ಕುಟುಂಬದವರಾದ ನಿರ್ಮಲ ಕಾಮತ್, ಅನಿತಾ ಪ್ರಭು, ಸಂಚಾಲಕ ಡಾ. ಎನ್. ಎಸ್. ಶೆಟ್ಟಿ, ಎಸ್‌ಡಿಎಂಸಿ ಉಪಾಧ್ಯಕ್ಷ ಬಿ.ಎಲ್. ವಿಶ್ವಾಸ, ಉಪ ಪ್ರಾಂಶುಪಾಲ ಪ್ರಕಾಶ್ ಪ್ರಭು, ಹಳೆ ವಿದ್ಯಾರ್ಥಿ ಸಂಘದ ಖಜಾಂಚಿ ದಿವಾಕರ್ ಭಂಡಾರಿ, ನಿವೃತ್ತ ಉಪನ್ಯಾಸಕ ಮುರುಳಿಧರ ಹಾಲಂಬಿ, ಎಸ್‌ಡಿಎಂಸಿ ಸದಸ್ಯರಾದ ಅಶೋಕ್ ಜೋಗಿ, ವಿಜೇತ್ ಕುಮಾರ್ ವಿಜಯ್ ಶೆಟ್ಟಿ , ಜ್ಯೋತಿ ಪ್ರಭು, ಲಕ್ಷ್ಮೀ ಶೆಟ್ಟಿಗಾರ್, ಕೇಶವ ಮತ್ತು ಉಪನ್ಯಾಸಕರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸಂಸ್ಥೆಗೆ ನಿರಂತರ ಕೊಡುಗೆ ನೀಡುತ್ತಿರುವ ಪ್ರಾಧ್ಯಾಪಕ ಸುನಿಲ್ ಪರಮೇಶ್ವರನ್, ದಾನಿಗಳಾದ ಶ್ಯಾಮಲಾ ದೇಶಪಾಂಡೆ, ವಿಜಯ ರಾಘವನ್ ಹಾಗೂ ಇತ್ತೀಚೆಗೆ ನಿವೃತ್ತರಾದ ರಾಜ್ಯಶಾಸ್ತ್ರ ಉಪನ್ಯಾಸಕ ದೇವದಾಸ್ ಪ್ರಭು ಅವರನ್ನು ಶಾಸಕರು ಸನ್ಮಾನಿಸಿದರು. ಉಪನ್ಯಾಸಕಿ ಗೀತಾ ಕುಮಾರಿ ವಂದಿಸಿದರು, ಉಪನ್ಯಾಸಕ ನವನೀತ್ ಅರಸ್ ಕಾರ್ಯಕ್ರಮ ನಿರ್ವಹಿಸಿದರು.



ಮಂಗಳೂರು ನಗರದ ವಿಶ್ವವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾಭವನ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಹೆಚ್.ಆರ್.ತಿಮ್ಮಯ್ಯ, ಕಾಲೇಜಿನ ಪ್ರಾಂಶುಪಾಲ ಪ್ರೊ. ಗಣಪತಿ ಗೌಡ, ಜಿಲ್ಲಾ ಸಲಹಾ ಸಮಿತಿ ಅಧ್ಯಕ್ಷೆ ಡಾ.ಅಮೃತಾ ಭಂಡಾರಿ, ಇನ್ನರ್ ವಿಲ್ ಕ್ಲಬ್ ಆಫ್ ಮಂಗಳೂರು ನಾರ್ತ್‌ನ ಅಧ್ಯಕ್ಷ ಡಾ.ಅರುಣಾ ಜಾಲನ್, ಕೆ.ಎಂ.ಸಿ. ಮಕ್ಕಳ ವಿಭಾಗದ ಡಾ.ನೂತನ್ ಕಾಮತ್, ಡಾ.ಭಾರತಿ ಪ್ರಕಾಶ್ ಉಪಸ್ಥಿತರಿದ್ದರು.

ಬೊಕ್ಕಪಟ್ಟಣದ ಎಡ್ಜ್ ವಾಟರ್‌ನಲ್ಲಿ ಸಮಾರಂಭ
ನಾಳೆ ಲಯನ್ಸ್ ಪ್ರಾಂತ್ಯ ಸಮ್ಮೇಳನ

ಮಂಗಳೂರು: ಅಂತಾರಾಷ್ಟ್ರೀಯ ಲಯನ್ಸ್ ಜಿಲ್ಲೆ 317 ಡಿ ಇದರ ಪ್ರಾಂತ್ಯ 1ರ ಪ್ರಾಂತ್ಯ ಸಮ್ಮೇಳನ 'ಆರಾಧ್ಯ' ಮಾ.15 ರಂದು ಸಂಜೆ 4ರಿಂದ ಬೊಕ್ಕಪಟ್ಟಣದ ಎಡ್ಜ್ ವಾಟರ್‌ನಲ್ಲಿ ಪ್ರಾಂತ್ಯ 1ರ ಪ್ರಾಂತ್ಯಾಧ್ಯಕ್ಷ ರವಿಶಂಕರ್ ಬಿ. ಎಸ್. ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಪ್ರಾಂತ್ಯ 1ರ ಪ್ರಥಮ ಮಹಿಳೆ ದಿವ್ಯ ರವಿಶಂಕರ್ ಸಮ್ಮೇಳನ ಉದ್ಘಾಟಿಸುವರು. ಹಾಸ್ಯ ಕವಿ ಎಚ್. ಡುಂಡಿರಾಜ್ ಮುಖ್ಯ ಅತಿಥಿ ಹಾಗೂ ಪ್ರಧಾನ ಭಾಷಣಕಾರರಾಗಿದ್ದಾರೆ. ಭರತನಾಟ್ಯ ಕಲಾವಿದೆ ಹಾಗೂ ಚಲನಚಿತ್ರ ಅಭಿನೇತ್ರಿ ಮಾನಸಿ ಸುಧೀರ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಲಯನ್ಸ್ ಜಿಲ್ಲೆ 317 ಡಿ ಜಿಲ್ಲಾ ಗವರ್ನರ್ ಕುಡ್ಪಿ ಅರವಿಂದ್ ಶೆಣೈ ಭಾಗವಹಿಸಲಿದ್ದಾರೆ ಎಂದು ಪ್ರಾಂತ್ಯಾಧ್ಯಕ್ಷ ರವಿಶಂಕರ್ ಬಿ. ಎಸ್. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಲಯನ್ಸ್ ಜಿಲ್ಲೆ 317 ಡಿ ಪ್ರಾಂತ್ಯ 1ರಲ್ಲಿ 7 ಕ್ಲಬ್‌ಗಳಿದ್ದು ಮತ್ತು ಸುಮಾರು 300 ಕ್ಕೂ ಮಿಕ್ಕಿ ಸದಸ್ಯರುಗಳಿದ್ದಾರೆ. ಈ ಎಲ್ಲಾ ಕ್ಲಬ್‌ಗಳು ಅತ್ಯುನ್ನತ ಮಟ್ಟದ ವಿವಿಧ ಸ್ತರದ ಸೇವಾ ಕಾರ್ಯ ನಡೆಸುತ್ತಿವೆ.ಈ ಎಲ್ಲಾ ಕ್ಲಬ್‌ಗಳ ಬ್ಯಾನರ್ ಪ್ರಸ್ತುತಿ ಈ ಸಮ್ಮೇಳನದ ಪ್ರಮುಖ ಭಾಗವಾಗಲಿದೆ. ಸಮ್ಮೇಳನದಲ್ಲಿ ಸುಮಾರು 750 ಕ್ಕೂ ಮಿಕ್ಕಿ ಪ್ರತಿನಿಧಿಗಳು ಭಾಗವಹಿಸುವ ನೀರಿಕ್ಷೆ ಇದೆ ಎಂದು ತಿಳಿಸಿದರು.

ಸಮ್ಮೇಳನ ಕಾರ್ಯಕ್ರಮದ ಮುಖ್ಯ ಸಂಯೋಜಕ ವಿಜಯ ವಿಷ್ಣು ಮಯ್ಯ ಮಾತನಾಡಿ, ಪ್ರಾಂತ್ಯ ಸಮ್ಮೇಳನದಲ್ಲಿ ನೆನಪಿಗಾಗಿ ಪ್ರಾಂತ್ಯಾಧ್ಯಕ್ಷ ರವಿಶಂಕರ್ ನೇತೃತ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬೊಕ್ಕಪಟ್ಟಣದಲ್ಲಿ ಕಂಪ್ಯೂಟರ್ ಲ್ಯಾಬ್‌ನ್ನು 7 ಲಕ್ಷ ರೂ. ವೆಚ್ಚದಲ್ಲಿ ಸ್ಥಾಪಿಸಿ ಶಾಲೆಯ ಅಭಿವೃದ್ಧಿ ಸಮಿತಿಗೆ ಹಸ್ತಾಂತರಿಸಲಾಗಿದೆ. ಸುಮಾರು 3 ಲಕ್ಷ ರೂ. ವೆಚ್ಚದ ಅತ್ಯಾಧುನಿಕ ಎಕ್ಸೆಪೋಲ್ಡ್ ಒಂಕ್ಯುಲರ್ ಲೆನ್ಸ್ ಅನ್ನು ಜಸ್ಟಿಸ್ ಕೆ. ಎಸ್. ಹೆಗ್ಡೆ ವೈದ್ಯಕೀಯ ಕಾಲೇಜಿಗೆ ದೇಣಿಗೆಯಾಗಿ ನೀಡಲಾಗಿದೆ. ಈ ಯಂತ್ರದ ಮೂಲಕ ಉಚಿತ ಸರ್ಜರಿ ನಡೆಸಲಾಗುವುದು ಎಂದರು.

ಸಮ್ಮೇಳನದ ಅಧ್ಯಕ್ಷ ಫಿಲಿಪ್ ಪೆರೇರ, ಕಾರ್ಯದರ್ಶಿ ಲಿಡಿಯಾ ಡಿಕೋಸ್ಟ, ಮುಖ್ಯ ಸಲಹೆಗಾರ ಜೆ.ಕೆ. ರಾವ್ ಉಪಸ್ಥಿತರಿದ್ದರು.

ಕಿರುಸುದ್ದಿ

ಮಾ.14-17 ವರ್ಷಾವಧಿ ಜಾತ್ರೆಯ ಸಂಭ್ರಮ

ಮಂಗಳೂರು: ವಾಮಂಜೂರು ಮಾಗಣೆಗೆ ಸಂಬಂಧಪಟ್ಟ ಪಡು ಬದಿನಡಿ ಶ್ರೀ ಅರಸು ಮುಂಡಿತ್ತಾಯ, ಧೂಮಾವತಿ–ಬಂಟ ಹಾಗೂ ಪರಿವಾರ ದೈವಗಳ ದೈವಸ್ಥಾನದ ವರ್ಷಾವಧಿ ಜಾತ್ರೆ ಮಾ.14ರಂದು ಆರಂಭಗೊಂಡು 17ರವರೆಗೆ ವೈಭವದಿಂದ ನಡೆಯಲಿದೆ.

ಮಾ.14ರಂದು 11ಕ್ಕೆ ಅರಸು ದೈವಗಳಿಗೆ ಹೂವಿನ ಪೂಜೆ, 1ಕ್ಕೆ ಸಾರ್ವಜನಿಕ ಅನ್ನಸಂತರ್ಪಣೆ, 8ಕ್ಕೆ ಕಾವೆಟ್ಟು ಗುತ್ತುವಿನಿಂದ ಶ್ರೀ ದೈವಗಳ ಭಂಡಾರ ಆಗಮನ, 10ಕ್ಕೆ ಧ್ವಜಾರೋಹಣ, 11ಕ್ಕೆ ಅರಸು ದೈವಗಳ ನೇಮ, ಕಂಚಿಲು ಸೇವೆ ನಡೆಯಲಿದೆ.

ನಾಳೆ ಸಂಭ್ರಮದ ಬಂಡಿ ಉತ್ಸವ

ಮಾ.15ರಂದು 9ಕ್ಕೆ ಮಹಿಂಷತ್ತಾಯ ದೈವದ ನೇಮ, ಮುಂಡಿತ್ತಾಯ ದೈವದ ನೇಮ, ಬದಿನಡಿ ಬಂಡಿ ಉತ್ಸವ ನಡೆಯಲಿದೆ. ಮಾ.16ರಂದು ರಾತ್ರಿ 10ರಿಂದ ಧೂಮಾವತಿ ಬಂಟ ಪರಿವಾರ ದೈವಗಳ ನೇಮ, 11.30ಕ್ಕೆ ಪಿಲ್ಚಂಡಿ ದೈವಕ್ಕೆ ಎಣ್ಣೆ ಕೊಡುವುದು ಮತ್ತು ನೇಮೋತ್ಸವ ಹಾಗೂ ಪರಿವಾರ ದೈವಗಳ ನೇಮ, ಮಾ.17ರಂದು ಬೆಳಗ್ಗೆ 7ಕ್ಕೆ ಧ್ವಜ ಅವರೋಹಣ ನಡೆಯಲಿದೆ.

ಸಾಂಸ್ಕೃತಿಕ ಕಾರ್ಯಕ್ರಮ

ಜಾತ್ರೋತ್ಸವ ಹಿನ್ನಲೆಯಲ್ಲಿ ಮಾ.16ರಂದು ರಾತ್ರಿ 7ರಿಂದ ವಿಜಯ್ ಕುಮಾರ್ ಕೊಡಿಯಾಲ್‌ಬೈಲ್ ನಿರ್ದೇಶನದ ನಾಟಕ ಶಿವದೂತೆ ಗುಳಿಗೆ ಪ್ರದರ್ಶನವಾಗಲಿದೆ ಎಂದು ಕ್ಷೇತ್ರದ ಆಡಳಿತ ಮೊಕ್ತೇಸರ ಪದ್ಮನಾಭ ಕೋಟ್ಯಾನ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆಯೊಳಗೆ ದಂಪತಿ ಆತ್ಮಹತ್ಯೆಗೈದ ಸ್ಥಿತಿಯಲ್ಲಿ ಪತ್ತೆ

ಕಾಸರಗೋಡು: ಪೊಯಿನಾಚಿ ಪರಂಬ್ ನಿವಾಸಿ ವೇಣುಗೋಪಾಲನ್ ನಾಯರ್ (55)ಮತ್ತು ಪತ್ನಿ ಸ್ಮಿತಾ (45) ಎಂಬವರ ಮೃತದೇಹ ಮನೆಯ ಹಾಲ್‌ನಲ್ಲಿ ಆತ್ಮಹತ್ಯೆಗೈದ ಸ್ಥಿತಿಯಲ್ಲಿ ಶುಕ್ರವಾರ ಬೆಳಗ್ಗೆ ಪತ್ತೆಯಾಗಿದೆ. ಬೇಕಲ ಬೀಚ್ ಫೆಸ್ಟ್ ವೇಳೆ ರೈಲು ಡಿಕ್ಕಿ ಹೊಡೆದು ಮೃತಪಟ್ಟ ಇಂಜಿನಿಯರಿಂಗ್ ವಿದ್ಯಾರ್ಥಿ ಶಿವಾನಂದ ಅವರ ತಂದೆ ಮತ್ತು ತಾಯಿಯ ಮೃತದೇಹ ಈ ರೀತಿ ಪತ್ತೆಯಾಗಿದೆ.



ಮಾಹಿತಿ ತಿಳಿದು ಮೇಲ್ಪರಂಬ ಪೊಲೀಸರು ಸ್ಥಳಕ್ಕಾಗಮಿಸಿ ತನಿಖೆ ಕೈಗೊಂಡಿದ್ದಾರೆ. ಸಾವಿಗೆ ಕಾರಣ ತಿಳಿದುಬಂದಿಲ್ಲ.


ವೇಣುಗೋಪಾಲನ್ ನಾಯರ್ ಮತ್ತು ಸ್ಮಿತಾ ದಂಪತಿಯ ಏಕೈಕ ಪುತ್ರ, ಮಂಗಳೂರಿನಲ್ಲಿ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಯಾಗಿದ್ದ ಎಂ.ಶಿವಾನಂದನ್ (19) ಡಿಸೆಂಬರ್ 29ರಂದು ರಾತ್ರಿ ಬೇಕಲದಲ್ಲಿ ರೈಲು ಡಿಕ್ಕಿ ಹೊಡೆದು ಮೃತಪಟ್ಟಿದ್ದರು. ಇದರಿಂದ ಮನನೊಂದ ತಂದೆ ಮತ್ತು ತಾಯಿ ಆತ್ಮಹತ್ಯೆಗೈದಿರಬಹುದೇ ಎಂದು ಶಂಕಿಸಲಾಗಿದೆ.

ದೇವಾಲಯಗಳಲ್ಲಿ ಕಳವು ನಡೆಸಿದ ತಂಡದ ಇಬ್ಬರ ಸೆರೆ

ಕಾಸರಗೋಡು: ದೇವಾಲಯಗಳಲ್ಲಿ ಕಳವುಗೈದ ಪ್ರಕರಣದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ತೃಶೂರು ಆಂಬಲ್ಲೂರು ಕಳಲಿ ಹೌಸ್‌ನ ಶಿಬು ರಾಫೆಲ್ (54) ಮತ್ತು ಕಣ್ಣೂರು ಮಟ್ಟನ್ನೂರು ಕೋಳಾರಿ ಪಾಲೋಟ್‌ಪಳ್ಳಿ ಬದರ್ ಮಂಜಿಲ್‌ನ ಅಬ್ದುಲ್ ಜಲೀಲ್ (50) ಬಂಧಿತ ಆರೋಪಿಗಳು. ನೀಲೇಶ್ವರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಎ.ವಿ.ಶ್ರೀಕುಮಾರ್‌ರ ನೇತೃತ್ವದ ಪೊಲೀಸರ ತಂಡ ಈ ಇಬ್ಬರು ಆರೋಪಿಗಳನ್ನು ತಮಿಳುನಾಡಿನ ಎರ್ವಾಡಿನಿಂದ ಬಂಧಿಸಿದ್ದಾರೆ. ಕಳೆದ ಫೆಬ್ರವರಿ 21ರಂದು ರಾತ್ರಿ ನೀಲೇಶ್ವರಕ್ಕೆ ಸಮೀಪದ ಪೇರೋಲ್ ಕೊಳುಂತಿಲ್ ನಾರಾಂಕುಳಂಗರ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಬೀಗ ಮುರಿದು ಒಳಗೆ ನುಗ್ಗಿ ಅಲ್ಲಿಂದ ನಾಲ್ಕು ತಾಮ್ರದ ಶಿಬು ರಾಫೆಲ್ ಕಾಣಿಕೆಹುಂಡಿಗಳು, ಒಂದು ಸ್ಟೀಲ್ ಹುಂಡಿ ಹಾಗೂ ಪ್ರಸ್ತುತ ದೇವಸ್ಥಾನದ ಗರ್ಭಗುಡಿ ಬಾಗಿಲಲ್ಲಿದ್ದ ಇನ್ನೊಂದು ಸ್ಟೀಲ್ ಹುಂಡಿಯನ್ನು ಒಡೆದು ಅದರೊಳಗಿದ್ದ 25,500 ರೂ. ನಷ್ಟು ಹಣ ಕಳವು ಪ್ರಕರಣಕ್ಕೆ ಸಂಬಂಧಿಸಿ ಈ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಪಾಲಕ್ಕಾಡ್ ಚುಳಲಿ ಭಗವತಿ ಕ್ಷೇತ್ರದಲ್ಲಿ ನಡೆದ ಕಳವು ಪ್ರಕರಣದಲ್ಲೂ ಈ ಇಬ್ಬರು ಆರೋಪಿಗಳು ಶಾಮೀಲಾಗಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಡೆತ್ ನೋಟ್ ಬರೆದಿಟ್ಟು ಶಂಕರಪುರದ ಕ್ಯಾಟರಿಂಗ್ ಸಿಬ್ಬಂದಿ ಆತ್ಮಹತ್ಯೆ

ಶಿರ್ವ: ಡೆತ್ ನೋಟ್ ಬರೆದಿಟ್ಟು ಕ್ಯಾಟರಿಂಗ್ ಅಡುಗೆ ಕೆಲಸ ಮಾಡುತ್ತಿದ್ದ ಯುವಕನೋರ್ವ ನೇಣು ಬಿಗಿದು ಆತ್ಮಹತ್ಯೆಗೆ ಶರಣಾದ ಘಟನೆ ಶಂಕರಪುರ ಸಮೀಪದ ಸಾಲ್ಮರ ಕ್ಯಾಟರಿಂಗ್ ಸೆಡ್ ಬಳಿ ನಡೆದಿದೆ.



ಗೌತಮ್ ಪೂಜಾರಿ (39) ಆತ್ಮಹತ್ಯೆ ಮಾಡಿಕೊಂಡ ಯುವಕ. ಸಾಲ್ಮರದ ಕ್ಯಾಟರಿಂಗ್ ಸೆಡ್ ಬಳಿಯ ರೂಮ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿದ್ದು, ಸಾವಿಗೆ ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ. ಈತ ಅವಿವಾಹಿತನಾಗಿದ್ದು, ಕ್ಯಾಟರಿಂಗ್‌ನಲ್ಲಿ ಮುಖ್ಯ ಅಡುಗೆ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಎಲ್ಲರೊಂದಿಗೂ ಬೆರೆಯುತ್ತಿದ್ದ ಗೌತಮ್ ಸ್ಥಳೀಯ ಕೆಲವು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದರು ಎನ್ನಲಾಗಿದೆ. ಶಿರ್ವ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು, ಅಹಸಜ ಸಾವು ಪ್ರಕರಣ ದಾಖಲು ಮಾಡಿದ್ದಾರೆ. ತನಿಖೆ ಮುಂದುವರಿಯುತ್ತಿದೆ

ಅನಾರೋಗ್ಯ: ನದಿಗೆ ಹಾರಿ ವ್ಯಕ್ತಿ ಆತ್ಮಹತ್ಯೆ

ಕುಂದಾಪುರ : ಬಿಪಿ, ಶುಗರ್ ಹಾಗೂ ಹೃದಯ ಸಂಬಂಧಿ ಕಾಯಿಲೆಯಿಂದ ಗುಣಮುಖರಾಗದೇ ಜೀವನದಲ್ಲಿ ಜಿಗುಪ್ಸೆಗೊಂಡು ಹುಬ್ಬಳ್ಳಿ ಉದಯಮ್ ನಗರ ನಿವಾಸಿ ಭಾಸ್ಕರ ಪೂಜಾರಿ (65) ಅವರು ಬಗ್ವಾಡಿ ಬ್ರಿಡ್ಜ್ ಕೆಳಗೆ ಚಕ್ರಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾ.11ರಂದು ಶುಗರ್ ಟೆಸ್ಟ್ ಬಗ್ಗೆ ಆಸ್ಪತ್ರೆಗೆ ಹೋಗುವುದಾಗಿ ಹೇಳಿ ಹೋಗಿದ್ದ ಭಾಸ್ಕರ ಪೂಜಾರಿ ವಾಪಸು ಮನೆಗೆ ಬಂದಿರಲಿಲ್ಲ. ಮಾ.12ರ ಮಧ್ಯಾಹ್ನ ದೇವಲ್ಕುಂದ ಗ್ರಾಮದ ಬಗ್ವಾಡಿ ಬ್ರಿಡ್ಜ್ ಕೆಳಗೆ ಚಕ್ರಾ ನದಿಯಲ್ಲಿ ಇವರ ಮೃತದೇಹ ಪತ್ತೆಯಾಗಿದೆ. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರ್‌ಟಿಇ, ಪೋಕ್ಸೋ, ಬಾಲ್ಯ ವಿವಾಹ, ಬಾಲನ್ಯಾಯ ಕಾಯ್ದೆ ಕುರಿತ ಪ್ರಗತಿ ಪರಿಶೀಲನಾ ಸಭೆ
ಆಧಾರ್ ಲಭ್ಯತೆಗೆ 30 ದಿನಗಳ ಗಡುವು

ಉಡುಪಿ: ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಹಾಗೂ ರಕ್ಷಣೆಗೆ ಸರಕಾರ ಜಾರಿಗೆ ತಂದಿರುವ ಹಕ್ಕುಗಳು, ನಿಯಮಗಳು ಹಾಗೂ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವುದರೊಂದಿಗೆ ಮಕ್ಕಳ ಅಭಿವೃದ್ಧಿಗೆ ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ಕರೆ ನೀಡಿದರು.

ಅವರು ಶುಕ್ರವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಡಾ.ವಿ. ಎಸ್. ಆಚಾರ್ಯ ಸಭಾಂಗಣದಲ್ಲಿ ಜಿಲ್ಲಾ ಮತ್ತು ತಾಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಆರ್‌ಟಿಇ ಕಾಯ್ದೆ 2009, ಪೋಕ್ಸೋ ಕಾಯ್ದೆ 2012, ಬಾಲ್ಯ ವಿವಾಹ ಕಾಯ್ದೆ 2006 ಹಾಗೂ ಬಾಲನ್ಯಾಯ ಕಾಯ್ದೆ 2015 ರ ಕುರಿತ ಪ್ರಗತಿ ಪರಿಶೀಲನಾ ಸಭೆಯ ಅಧಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಜಿಲ್ಲೆಯಲ್ಲಿ 1ರಿಂದ10ನೇ ತರಗತಿವರೆಗೆ 1,59,731 ಮಕ್ಕಳು ಇದ್ದಾರೆ. ಪ್ರತಿಯೊಬ್ಬರೂ ಆಧಾರ್ ಸೀಡಿಂಗ್ ಆಗಿರಬೇಕು, ಅದರ ಜೊತೆಗೆ ಆಧಾರ್ ಮಾಪಿಂಗ್ ಸಹ ಆಗಿರಬೇಕು. ಇಲ್ಲದಿದ್ದರೆ ಭವಿಷ್ಯದಲ್ಲಿ ಅವರು ಸಮಸ್ಯೆ ಎದುರಿಸುತ್ತಾರೆ. ಪ್ರತಿಯೊಬ್ಬ ಮಗುವೂ ಆಧಾರ್ ಕಾರ್ಡ್ ಹೊಂದುವಂತೆ ನೋಡಿಕೊಳ್ಳುವ ಜವಾಬ್ದಾರಿ ಅಧಿಕಾರಿಗಳ ಕರ್ತವ್ಯ ಎಂದ ಅವರು, ಮೂವತ್ತು ದಿನಗಳ ಒಳಗೆ ಜಿಲ್ಲೆಯ ಎಲ್ಲಾ ಮಕ್ಕಳಿಗೂ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಇಲ್ಲವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕ್ಕೆ ಸರಕಾರಕ್ಕೆ ವರದಿ ನೀಡಲಾಗುವುದು ಎಂದರು.



ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ಅಧ್ಯಕ್ಷತೆಯಲ್ಲಿ ಸಭೆ

ಸರಕಾರಿ ಆಸ್ಪತ್ರೆಗಳಲ್ಲಿ ಒಳರೋಗಿಗಳಾಗಿ ನೋಂದಣಿಯಾಗಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಪಥ್ಯಾಹಾರವನ್ನು ಉಚಿತವಾಗಿ ನೀಡಬೇಕು. ಪಥ್ಯಾಹಾರದಲ್ಲಿ ಅನ್ನ, ಸಾಂಬಾರ್, ಚಪಾತಿ ಮೊಟ್ಟೆ, ಬಾಳೆಹಣ್ಣು ನೀಡಬೇಕು. ಆದರೆ ಕೆಲವೊಂದು ಪಥ್ಯಾಹಾರಗಳು ನೀಡುತ್ತಿರುವುದು ಕಂಡು ಬಂದಿದ್ದು ಈ ಬಗ್ಗೆ ಜಿಲ್ಲಾಧಿಕಾರಿ ಪರಿಶೀಲಿಸಬೇಕು. ಇದರೊಂದಿಗೆ ಅಲ್ಲಿನ ವೈದ್ಯರುಗಳು ನಿಯಮಾನುಸಾರ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆಯೂ ಪರಿಶೀಲಿಸಬೇಕು ಎಂದರು.

ಜಿಲ್ಲೆಯಲ್ಲಿ 76ಕ್ಕೂ ಹೆಚ್ಚು ಸ್ಕ್ಯಾನಿಂಗ್ ಸೆಂಟರ್‌ಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿಯೊಂದು ಸ್ಕ್ಯಾನಿಂಗ್ ಸೆಂಟರ್‌ಗಳು ಸರಕಾರದ ಪಿ.ಸಿ.ಪಿ.ಎನ್.ಡಿ.ಟಿ ನಿಯಮನುಸಾರ ಕಾರ್ಯನಿರ್ವಹಿಸಬೇಕು. ಎರಡು ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಿದಾಗ ಕೆಲವು ನಿಯಮಗಳನ್ನು ಪಾಲಿಸದೇ, ಕೆಲವು ದಾಖಲೆಗಳನ್ನು ಸಹ ನಿರ್ವಹಿಸದೆ ಇರುವುದು ಕಂಡುಬಂದಿದೆ. ಜಿಲ್ಲೆಯ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ನಿರಂತರವಾಗಿ ಆಗ್ಗಿಂದಾಗೆ ಭೇಟಿ ನೀಡಿ ದಾಖಲೆಗಳನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿರುವ ಬಗ್ಗೆ ಎರಡು ವಾರದಲ್ಲಿ ಅಭಿಯಾನದ ರೀತಿ ಪರಿಶೀಲಿಸಿ ಆಯೋಗಕ್ಕೆ ವರದಿ ನೀಡಬೇಕು ಎಂದರು.

ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಮತ್ತಿತರ ಸೌಲಭ್ಯಗಳನ್ನು ಕೊಡಲು ಅನುಕೂಲವಾಗುವಂತೆ ಪ್ರತಿಯೊಂದು ಗ್ರಾಮ ಪಂಚಾಯತ್ ಗಳಲ್ಲಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತ್ ಅಭಿಯಾನ ನಡೆಸುವುದರೊಂದಿಗೆ ಏಕಪೋಷಕರು, ಅನಾಥರು, ಶಾಲೆಯಿಂದ ಹೊರಗುಳಿದವರು, ಲಸಿಕಾ ವಂಚಿತ ಮಕ್ಕಳು ಸೇರಿದಂತೆ ಮತ್ತಿತರರ ಮಾಹಿತಿಗಳನ್ನು ನಿಖರವಾಗಿ ಇಟ್ಟುಕೊಳ್ಳುವುದರೊಂದಿಗೆ ಅವರುಗಳಿಗೆ ಅನುಕೂಲ ಮಾಡಿಕೊಡಬೇಕು. ಇದರ ಜೊತೆಯಲ್ಲಿ ಮಹಿಳಾ ಮತ್ತು ಮಕ್ಕಳ ರಕ್ಷಣಾ ಕಾವಲು ಪಡೆ, ಶಿಕ್ಷಣ ಕಾವಲು ಸಮಿತಿ ಪಡೆ, ಮಕ್ಕಳ ವಿಶೇಷ ಗ್ರಾಮಸಭೆ, ನಿಯಮನುಸಾರ ಸಕಾಲದಲ್ಲಿ ನಡೆಸಬೇಕು. ಈ ಬಗ್ಗೆ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಗಮನ ಹರಿಸಬೇಕು ಎಂದರು.

ಜಿಲ್ಲೆಯಲ್ಲಿರುವ ಎಲ್ಲಾ ವಸತಿ ನಿಲಯಗಳಲ್ಲಿ ಕಡ್ಡಾಯವಾಗಿ ಸಿ.ಸಿ.ಟಿ.ವಿ ಅಳವಡಿಸಬೇಕು. ವಸತಿ ನಿಲಯಗಳಲ್ಲಿ ಮಕ್ಕಳಿಗೆ ಅನುಕೂಲವಾಗುವಂತೆ ಬಿಸಿನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸುವಲ್ಲಿ ಅಡಚಣೆ ಆಗದಂತೆ ನೋಡಿಕೊಳ್ಳಬೇಕು. ಆರೋಗ್ಯ ಇಲಾಖೆ ವತಿಯಿಂದ ನಿರಂತರವಾಗಿ ವಿದ್ಯಾರ್ಥಿಗಳ ತಪಾಸಣೆ ಕೈಗೊಳ್ಳಬೇಕು. ನಿಲಯಾರ್ಥಿಗಳಿಗೆ ಮಾದಕ ವ್ಯಸನ, ಸೈಬರ್ ಕ್ರೈಂ ಸೇರಿದಂತೆ ಮತ್ತಿತರ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು ಎಂದರು.

ಮಕ್ಕಳ ಸ್ನೇಹಿ ಸಾರಿಗೆ ವ್ಯವಸ್ಥೆ ರೂಪಿಸುವಲ್ಲಿ ನಿಗಮದ ಅಧಿಕಾರಿಗಳು ಕ್ರಮವಹಿಸಬೇಕು. ಬಸ್ ನಿಲ್ದಾಣಗಳಲ್ಲಿ ಮಹಿಳಾ ಮತ್ತು ಶಿಶು ಪಾಲನ ಕೇಂದ್ರ ವ್ಯವಸ್ಥಿತ ರೀತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಸಾರಿಗೆ ನಿಗಮದ ನಿಲ್ದಾಣಗಳಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ ಅಳವಡಿಸಿರುವ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದರು.

ಜಿಲ್ಲೆಯಲ್ಲಿ 1481 ವಿಶೇಷ ಚೇತನ ಮಕ್ಕಳಿದ್ದು, ಇದರಲ್ಲಿ 575 ಮಕ್ಕಳಿಗೆ ಯು.ಡಿ.ಐ.ಡಿ ಕಾರ್ಡ್ ವಿತರಣೆಗೆ ಬಾಕಿ ಇದೆ. ಯು.ಡಿ.ಐ.ಡಿ ಕಾರ್ಡ್ ಹೊಂದಿಲ್ಲದೆ ಇದ್ದಲ್ಲಿ ಸರಕಾರದ ಸೌಲಭ್ಯಗಳಿಂದ ಮಕ್ಕಳು ವಂಚಿತರಾಗುವುದರಿಂದ ಬಾಕಿ ಉಳಿದ ಎಲ್ಲಾ ವಿಶೇಷ ಮಕ್ಕಳಿಗೂ ಒಂದು ತಿಂಗಳ ಒಳಗಾಗಿ ಯು.ಡಿ.ಐ.ಡಿ ಕಾರ್ಡ್ ವಿತರಣೆಗೆ ಅಗತ್ಯ ಕ್ರಮ ವಹಿಸಬೇಕು ಎಂದು ಅಂಗವಿಕಲ ಕಲ್ಯಾಣಾಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ, ಹೆಚುವರಿ ಪೊಲೀಸ್ ಅಧೀಕ್ಷಕ ಸುಧಾಕರ್ ನಾಯಕ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಎಸ್. ಎಸ್. ಕಾದ್ರೊಳ್ಳಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಾಗರತ್ನ ನಾಯಕ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

> **ಜಿಲ್ಲೆಯ ಇಲ್ಲಾ ಸರಕಾರಿ ಕಚೇರಿಗಳಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದು ಸುತ್ತೋಲೆ ಹೊರಡಿಸಿದ್ದರೂ, ಇಂದು ಭೇಟಿ ನೀಡಿದ ಸಂದರ್ಭದಲ್ಲಿ ಬ್ರಹ್ಮಾವರದ ತಾಲುಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಯಲ್ಲಿ ಸಹಾಯವಾಣಿ ಸಂಖ್ಯೆ ನಮೂದಿಸದೆ ಇರುವುದು ಕಂಡುಬಂದಿದೆ. ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪರಿಶೀಲಿಸಬೇಕು.**
>
> **■ ಡಾ. ತಿಪ್ಪೇಸ್ವಾಮಿ ಕೆ.ಟಿ., ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ**

ಪ್ರಯಾಣಿಕರ ಬೇಡಿಕೆ ಈಡೇರಿಸಿದ 'ಅಮೃತ್ ಭಾರತ್ ಎಕ್ಸ್‌ಪ್ರೆಸ್'
ಕಾಞಂಗಾಡು, ನೀಲೇಶ್ವರ ನಿಲುಗಡೆಗೆ ಅಸ್ತು

ಕಾಸರಗೋಡು: ಉತ್ತಮ ಮಲಬಾರ್‌ನ ರೈಲು ಪ್ರಯಾಣಿಕರ ಬಹುನಿರೀಕ್ಷಿತ ಬೇಡಿಕೆಯನ್ನು ಕೊನೆಗೂ ಪರಿಹರಿಸಲಾಗತ್ತಿದೆ. ನಾಗರಕೋಯಿಲ್ – ಮಂಗಳೂರು ಜಂಕ್ಷನ್ ಅಮೃತ್ ಭಾರತ್ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16329/16330) ಕಾಸರಗೋಡು ಜಿಲ್ಲೆಯ ಪ್ರಮುಖ ನಿಲ್ದಾಣಗಳಾದ ಕಾಞಂಗಾಡು ಮತ್ತು ನೀಲೇಶ್ವರದಲ್ಲಿ ಹೊಸ ನಿಲುಗಡೆಗಳನ್ನು ನೀಡಲಾಗಿದೆ. ಇದರ ಜೊತೆಗೆ ಕಣ್ಣೂರು ಜಿಲ್ಲೆಯ ಪಯ್ಯನ್ನೂರು ನಿಲ್ದಾಣದಲ್ಲಿಯೂ ನಿಲ್ಲುತ್ತದೆ ಎಂದು ರೈಲ್ವೇ ಮಂಡಳಿ ಹೊರಡಿಸಿದ ಅಧಿಕೃತ ಆದೇಶದಲ್ಲಿ ತಿಳಿಸಲಾಗಿದೆ.

ಪ್ರಾಯೋಗಿಕ ಆಧಾರದ ಮೇಲೆ ಹೊಸ ನಿಲುಗಡೆ

ಗುರುವಾರ ಭಾರತೀಯ ರೈಲ್ವೇ ಸಚಿವಾಲಯ ಹೊರಡಿಸಿದ ಸುತ್ತೋಲೆಯ ಪ್ರಕಾರ ಹೊಸ ನಿಲ್ದಾಣಗಳನ್ನು ಅನುಮೋದಿಸಲಾಗಿದೆ. ಪ್ರಸ್ತುತ ಈ ಮೂರು ನಿಲ್ದಾಣಗಳಲ್ಲಿ ಪ್ರಾಯೋಗಿಕ ಆಧಾರದ ಮೇಲೆ ನಿಲುಗಡೆಗಳನ್ನು ಅನುಮತಿಸಲಾಗುತ್ತಿದೆ. ಹೊಸ ಬದಲಾವಣೆಯು ಹತ್ತಿರದ ಸೂಕ್ತ ದಿನಾಂಕದಿಂದ ಜಾರಿಗೆ ಬರಲಿದೆ ಎಂದು ಆದೇಶದಲ್ಲಿದೆ. ದಕ್ಷಿಣ ರೈಲ್ವೇಯಡಿ ಬರುವ ಈ ಮಾರ್ಗದಲ್ಲಿ ದೂರದ ಪ್ರಯಾಣ ಮಾಡುವ ವಿದ್ಯಾರ್ಥಿಗಳು ಮತ್ತು ಸರಕಾರಿ ನೌಕರರಿಗೆ



ಮ್ಮು ಮಂಗಳೂರಿಗೆ ಹೋಗುವವರಿಗೆ ಹೊಸ ನಿಲ್ದಾಣಗಳ ಹೆಚ್ಚು ಪ್ರಯೋಜನವಾಗಲಿದೆ. ಅಮೃತ್ ಭಾರತ್ ರೈಲು ಕಾಸಗೋಡಿನ ನಿವಾಸಿಗಳು ತಿರುವನಂತಪುರ, ಎರ್ನಾಕುಳಂ ಮತ್ತು ಕೋಟ್ಟಾಯಂನಂತಹ ದಕ್ಷಿಣ ಜಿಲ್ಲೆಗಳಿಗೆ ತ್ವರಿತವಾಗಿ ಪ್ರಯಾಣಿಸಲು ಸಾಧ್ಯವಾಗಲಿದೆ. ಈ ಹಿಂದೆ ಕಾಞಂಗಾಡು ಮತ್ತು ನೀಲೇಶ್ವರದ ನಿಲ್ದಾಣಗಳ ಅನುಪಸ್ಥಿತಿ ದೊಡ್ಡ ತೊಂದರೆಗಳನ್ನು ಸೃಷ್ಟಿಸಿತ್ತು. ಹೊಸ ನಿರ್ಧಾರದೊಂದಿಗೆ ಇದು ಶಾಶ್ವತವಾಗಿ ಪರಿಹರಿಸಲಾಗುತ್ತದೆ.

ಪ್ರಾಯೋಗಿಕ ಆಧಾರದ ಮೇಲೆ ಅನುಮತಿಸಲಾದ ಈ ನಿಲ್ದಾಣಗಳನ್ನು ಶಾಶ್ವತಗೊಳಿಸಬೇಕಾದರೆ ಈ ನಿಲ್ದಾಣಗಳಿಂದ ಟಿಕೆಟ್ ಮಾರಾಟವು ಉತ್ತಮವಾಗಿರಬೇಕು. ರೈಲ್ವೇ ಮಂಡಳಿಯ ಜಂಟಿ ನಿರ್ದೇಶಕ ವಿವೇಕ್‌ಕುಮಾರ್ ಸಿನ್ಹಾ ಅವರು ಸಹಿ ಮಾಡಿದ ಆದೇಶದಲ್ಲಿ ಪಯ್ಯನ್ನೂರು ಕಾಞಂಗಾಡು, ನೀಲೇಶ್ವರ ನಿಲ್ದಾಣಗಳಲ್ಲಿ ಅಮೃತ್ ಭಾರತ್ ಎಕ್ಸ್‌ಪ್ರೆಸ್‌ನ ಟಿಕೆಟ್ ಮಾರಾಟವನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಲು ಮತ್ತು ಮೌಲ್ಯಮಾಪನ ಮಾಡಲು ನಿರ್ಧರಿಸಲಾಗಿದೆ. ಈ ನಿಲ್ದಾಣಗಳು ಉತ್ತಮ ಆದಾಯವನ್ನು ಗಳಿಸಿದರೆ ಮಾತ್ರ ಅವುಗಳನ್ನು ನಿರ್ವಹಿಸಲಾಗುತ್ತದೆ. ಆದ್ದರಿಂದ ಪ್ರಯಾಣಿಕರು ಈ ರೈಲ್ವೇ ಸೇವೆಯನ್ನು ಬಳಸಿಕೊಳ್ಳಬೇಕಾಗಿದೆ.

> **ಸುರೇಶ್‌ಗೋಪಿಗೆ ಅಭಿನಂದನೆ**
>
> ಈ ಮಧ್ಯೆ ಬಿಜೆಪಿ ಜಿಲ್ಲಾ ಘಟಕವು ಕೇಂದ್ರ ಸಚಿವ ಸುರೇಶ್‌ಗೋಪಿ ಮಧ್ಯಸ್ಥಿಕೆಯಿಂದ ಕಾಸರಗೋಡಿನಲ್ಲಿ ನಿಲುಗಡೆ ನೀಡಲು ಸಾಧ್ಯವಾಗಿದೆ ಎಂದು ತಿಳಿಸಿದೆ. ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷ ಎಂ.ಎಲ್.ಅಶ್ವಿನಿ ಅವರು ಸುರೇಶ್‌ಗೋಪಿಯವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಖಾಸಗಿ ಆಡಿಯೋ ಪ್ರಸಾರ
ಕಾನೂನು ಕ್ರಮ ಎಚ್ಚರಿಕೆ ನೀಡಿದ ರಶ್ಮಿಕಾ

ಮಡಿಕೇರಿ: ತಮ್ಮ ಕುಟುಂಬದವರ ಖಾಸಗಿ ಆಡಿಯೋ ಸಂಭಾಷಣೆಯನ್ನು ಪ್ರಸಾರ ಮಾಡುವವರ ವಿರುದ್ಧ ಕಾನೂನು ಕ್ರಮಕೈಗೊಳ್ಳುವುದಾಗಿ ನಟಿ ರಶ್ಮಿಕಾ ಮಂದಣ್ಣ ಎಚ್ಚರಿಸಿದ್ದಾರೆ.

ರಶ್ಮಿಕಾ ಅವರ ತಾಯಿ ಸುಮನ್ ಮಂದಣ್ಣ ಮತ್ತು ಇನ್ನೊಬ್ಬ ವ್ಯಕ್ತಿಯ ನಡುವೆ ನಡೆದಿದೆ ಎನ್ನಲಾದ ದೂರವಾಣಿ ಸಂಭಾಷಣೆಯೊಂದು ಮಾ.11ರಂದು ಸಾಮಾಜಿಕ ಮಾಧ್ಯಮದಲ್ಲಿ ಕಾಣಿಸಿಕೊಳ್ಳುವುದರೊಂದಿಗೆ ತ್ವರಿತವಾಗಿ ವೈರಲ್ ಆಗಿದೆ ಎನ್ನಲಾಗಿದೆ. ನಟ ರಕ್ಷಿತ್ ಶೆಟ್ಟಿ ಅವರೊಂದಿಗಿನ ರಶ್ಮಿಕಾ ಅವರ ಹಿಂದಿನ ಸಂಬಂಧದ ಬಗೆಗಿನ ಚರ್ಚೆಗೆ ಈ ಆಡಿಯೋ ಕ್ಲಿಪ್ ಗ್ರಾಸ ಒದಗಿಸಿರುವುದಾಗಿ ಹೇಳಲಾಗಿದೆ.



ಈ ರೀತಿಯ ಖಾಸಗಿ ಸಂಭಾಷಣೆಯನ್ನು ಪ್ರಸಾರ ಮಾಡುವುದು ಮಾನಹಾನಿಕರ ಅಥವಾ ಗೌಪ್ಯತೆಯನ್ನು ಉಲ್ಲಂಘಿಸುವ ವಿಷಯವಾಗಿದೆ ಎಂದಿರುವ ರಶ್ಮಿಕಾ ಅವರು ವಿವರಿಸಿದ್ದು, ಈ ವಿಷಯವನ್ನು ಹರಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಆಡಿಯೋ ಕ್ಲಿಪ್‌ನ ಪ್ರಸರಣದ ಬಗ್ಗೆ ಕಳವಳ ವ್ಯಕ್ತಪಡಿಸಿ ತನ್ನ ಇನ್ಸ್ಟಾಗ್ರಾಂ ಖಾತೆಯಲ್ಲಿ ಹೇಳಿಕೆಯನ್ನು ಹಂಚಿಕೊಂಡಿರುವ ರಶ್ಮಿಕಾ, ಸುಮಾರು ಎಂಟು ವರ್ಷಗಳ ಹಿಂದಿನದು ಎಂದು ನಂಬಲಾದ ಹಳೆಯ ಖಾಸಗಿ ಸಂಭಾಷಣೆಯನ್ನು, ಅದರಲ್ಲಿ ಭಾಗಿಯಾಗಿರುವವರ ಜ್ಞಾನ ಅಥವಾ ಒಪ್ಪಿಗೆಯಿಲ್ಲದೆ ರೆಕಾರ್ಡ್ ಮಾಡಿ ಪ್ರಸಾರ ಮಾಡಲಾಗಿದೆಯೆಂದು ತೋರುತ್ತದೆ. ಸಂಭಾಷಣೆಯ ಒಂದು ಭಾಗವನ್ನು ಮಾತ್ರ ಆನ್‌ಲೈನ್‌ನಲ್ಲಿ ಹಂಚಿಕೊಳ್ಳಲಾಗಿದೆ ಮತ್ತು ಸಂದರ್ಭವನ್ನು ಮರೆಮಾಚಲಾಗಿದೆ ಎಂದು ಹೇಳಿದ್ದಾರೆ.

ಆ ಸಂಭಾಷಣೆಯ ಒಂದು ಸಣ್ಣ ಭಾಗವನ್ನು ಈಗ ಉದ್ದೇಶಪೂರ್ವಕವಾಗಿ ಹೊರತೆಗೆದು ವ್ಯಾಪಕವಾಗಿ ಪ್ರಸಾರ ಮಾಡಲಾಗಿದೆ. ಕಳೆದ 24 ಗಂಟೆಗಳಲ್ಲಿ ಇದು ನಿರ್ಲಕ್ಷಿಸಲಾಗದ ಗಡಿಯನ್ನು ದಾಟಿದೆ. ಸಂಭಾಷಣೆಯ ಕ್ಲಿಪ್ ಹರಡುವುದನ್ನು ತೀವ್ರವಾಗಿ ಟೀಕಿಸಿರುವ ಅವರು, ಇದು ದ್ವೇಷ ಮತ್ತು ವಿವಾದವನ್ನು ಸೃಷ್ಟಿಸುವ ಪ್ರಯತ್ನವಾಗಿದೆ ಎಂದು ಆರೋಪಿಸಿದ್ದಾರೆ.

ಈ ವಿಷಯ ಅಥವಾ ಸಂಬಂಧಿತ ನಿರೂಪಣೆಗಳನ್ನು ಪ್ರಸಾರ ಮಾಡುವವರು ಅವುಗಳನ್ನು ಸಾಮಾಜಿಕ ಮಾಧ್ಯಮದಿಂದ ತಕ್ಷಣವೇ ತೆಗೆದುಹಾಕಬೇಕು. ಇಲ್ಲವಾದರೆ ಇಂದಿನಿಂದಲೇ (ಮಾ. 13) ಅಂತಹವರ ವಿರುದ್ಧ ಮಾನನಷ್ಟ ಅಥವಾ ಕಾನೂನಿಗೆ ಅನುಸಾರವಾಗಿ ನೋಟಿಸ್‌ಗಳನ್ನು ನೀಡುವುದು ಸೇರಿದಂತೆ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ರಶ್ಮಿಕಾ ತಮ್ಮ ಇನ್‌ಸ್ಟಾಗ್ರಾಮ್ ಸಂದೇಶದಲ್ಲಿ ಎಚ್ಚರಿಕೆ ನೀಡಿದ್ದಾರೆ.

ಇದಕ್ಕಿದೆ ದೇಶದ ನಗರಸಭಾ ವ್ಯಾಪ್ತಿಯಲ್ಲಿ ಪ್ರಥಮ ಎಂಬ ಹೆಗ್ಗಳಿಕೆ | ಪ್ರತಿ ದಿನ ಸರಾಸರಿ 250 ಕೆಜಿಯಷ್ಟು ಸಿಎನ್‌ಜಿ ಉತ್ಪಾದನೆ
ಬನ್ನೂರು ಕಂಪ್ರೆಸ್ಡ್ ಬಯೋ ಗ್ಯಾಸ್ ಘಟಕ ನಾಳೆ ಲೋಕಾರ್ಪಣೆ

ಪುತ್ತೂರು: ಸ್ವಚ್ಛ ಭಾರತ್ ಅಭಿಯಾನಕ್ಕೆ ಪೂರಕವಾಗಿ ದೇಶದ ನಗರಸಭಾ ವ್ಯಾಪ್ತಿಯಲ್ಲಿ ಪ್ರಥಮವೆನಿಸಿಕೊಂಡಿರುವ ಪುತ್ತೂರು ನಗರಸಭಾ ವ್ಯಾಪ್ತಿಯ ಬನ್ನೂರು ಡಂಪಿಂಗ್ ಯಾರ್ಡ್‌ನಲ್ಲಿ ನಿರ್ಮಾಣಗೊಂಡಿರುವ ಕಂಪ್ರೆಸ್ಡ್ ಬಯೋ ಗ್ಯಾಸ್ (ಸಿ.ಬಿ.ಜಿ.) ಘಟಕಕ್ಕೆ ಕಡೆಗೂ ಘೇಸೋದ ಅನುಮತಿ ಲಭಿಸಿದ್ದು, ಮಾ.15 ರಂದು ಲೋಕಾರ್ಪಣೆಗೊಳ್ಳುತ್ತಿದೆ.

ಕೃಷ್ಣ ಮುಳಿಯ ಗ್ರೀನ್ ಎನರ್ಜಿ ಎಲ್.ಎಲ್.ಪಿ, ರೋಟರಿ ಕ್ಲಬ್ ಪುತ್ತೂರು ಈಸ್ಟ್, ಸ್ವಚ್ಛ ಭಾರತ್ ಚಾರಿಟೇಬಲ್ ಟ್ರಸ್ಟ್ ಹಾಗೂ ರಿಟ್ಯಾಪ್ ಸೊಲ್ಯೂಷನ್ಸ್ ಸಾರಥ್ಯದಲ್ಲಿ ಪುತ್ತೂರು ನಗರಸಭೆಯ ಸಹಯೋಗದೊಂದಿಗೆ ಸುಮಾರು 3 ಕೋಟಿ ವೆಚ್ಚದಲ್ಲಿ ಹಸಿ ತ್ಯಾಜ್ಯದಿಂದ ಸಿ.ಎನ್.ಜಿ. (ಸಿ.ಬಿ.ಜಿ) ಉತ್ಪಾದನಾ ಘಟಕವನ್ನು ನಿರ್ಮಿಸಲಾಗಿದೆ.

ಪುತ್ತೂರು ನಗರ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಹಸಿ ತ್ಯಾಜ್ಯದಿಂದ ಉತ್ಪಾದನೆಗೊಳ್ಳಲಿರುವ ಈ



ಘಟಕವು ಕರ್ನಾಟಕ ರಾಜ್ಯದ ಪ್ರಥಮ ಸಿ.ಎನ್.ಜಿ. ಉತ್ಪಾದನಾ ಘಟಕವಾಗಿರುತ್ತದೆ. ಸುಮಾರು ಎಂಟು ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಿಸುವ ಸಾಮರ್ಥ್ಯ ಹೊಂದಿರುವ ಈ ಘಟಕದಲ್ಲಿ ಪ್ರತಿ ದಿನ ಸರಾಸರಿ 250 ಕೆ.ಜಿ. ಸಿ.ಎನ್.ಜಿ. ಉತ್ಪಾದನೆಗೊಳ್ಳಲಿದೆ. ಕಳೆದ 12 ವರ್ಷಗಳಿಂದ ಈ ಯೋಜನೆಯ ಅನುಷ್ಠಾನಕ್ಕಾಗಿ ಪ್ರಯತ್ನಗಳು ನಡೆದಿದ್ದು, ಈಗ ಅಧಿಕೃತವಾಗಿ ಲೋಕಾರ್ಪಣೆಗೊಳ್ಳುತ್ತಿದೆ ಎಂದು ಕೃಷ್ಣ ಮುಳಿಯ ಗ್ರೀನ್ ಎನರ್ಜಿ ಎಲ್.ಎಲ್.ಪಿ.ನ ಅಧ್ಯಕ್ಷ ಕೃಷ್ಣನಾರಾಯಣ ಮುಳಿಯ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಈ ಘಟಕವು 10 ಟನ್ ಹಸಿ ಕಸ ಒದಗಿಸಿದರೆ ದಿನದಲ್ಲಿ ಸುಮಾರು 400 ಕೆ.ಜಿ. ಬಯೋಗ್ಯಾಸ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದಿದೆ. ಸದ್ಯ 150–200 ಕೆ.ಜಿ. ಬಯೋಗ್ಯಾಸ್ ಉತ್ಪಾದನೆಯಾಗುತ್ತಿದೆ. 1 ದಿನಕ್ಕೆ 10 ಸಾವಿರ ಲೀ. ಸ್ಲರಿ ಸಾವಯವ ಗೊಬ್ಬರ ಲಭಿಸಲಿದೆ. ಹಸಿ ತ್ಯಾಜ್ಯವನ್ನು ಗ್ರಾಮಾಂತರದಿಂದಲೂ ಸಂಗ್ರಹಿಸುವ ನಿಟ್ಟಿನಲ್ಲಿ ಈಗಾಗಲೇ ಉಪ್ಪಿನಂಗಡಿ ಗ್ರಾ.ಪಂ. ಜತೆ ಮಾತುಕತೆ ನಡೆಸಿ 1.50 ಟನ್ ಖರೀದಿಗೆ ಯೋಜನೆ ಹಾಕಿಕೊಳ್ಳಲಾಗಿದೆ. ಪ್ರತೀ 1 ಕೆ.ಜಿ. ಅನಿಲಕ್ಕೆ 1 ರೂಪಾಯಿ ರಾಜಸ್ವವನ್ನು ಅವರು ನಗರಸಭೆಗೆ ಪಾವತಿ ಮಾಡಲಾಗುವುದು ಎಂದರು.

> **ಇವುಗಳನ್ನು ನೀಡಬೇಡಿ**
>
> ಆಧುನಿಕ ತಂತ್ರಜ್ಞಾನದ ಸಿ.ಬಿ.ಜಿ. ಘಟಕದ ಸಮರ್ಪಕ ಅನುಷ್ಠಾನಕ್ಕೆ ಸಾರ್ವಜನಿಕರು ಹಸಿ ತ್ಯಾಜ್ಯವನ್ನು ಸಂಸ್ಕರಿಸಿ ನೀಡಬೇಕು. ಮೈಕ್ರೋ ಪ್ಲಾಸ್ಟಿಕ್ ಇರದಂತೆ ನೀಡಬೇಕು. ಗ್ಲಾಸ್ ಚೂರು, ಮೆಟಲ್, ಕಬ್ಬಿಣದ ನೆಟ್‌ಗಳನ್ನು ತ್ಯಾಜ್ಯದ ಜತೆ ನೀಡಬೇಡಿ.

ಲೋಕಾರ್ಪಣೆ ಕಾರ್ಯಕ್ರಮ

ಮಾ.15ರಂದು ಬೆಳಗ್ಗೆ 10.30ಕ್ಕೆ ಪುತ್ತೂರಿನ ಶಾಸಕ ಅಶೋಕ್ ಕುಮಾರ್ ರೈ ಘಟಕವನ್ನು ಉದ್ಘಾಟಿಸಲಿದ್ದು, ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ದೀಪ ಪ್ರಜ್ವಲನೆ ನೆರವೇರಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು, ಸಹಾಯಕ ಕಮೀಷನರ್ ಸ್ಟೆಲ್ಲಾ ವರ್ಗೀಸ್, ಪುತ್ತೂರು ನಗರಸಭೆಯ ಪೌರಾಯುಕ್ತೆ ವಿದ್ಯಾ ಎಂ. ಕಾಳೆ, ಮಾಜಿ ಶಾಸಕ ಸಂಜೀವ ಮಠಂದೂರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ನಗರಸಭೆಯ ಮಾಜಿ ಅಧ್ಯಕ್ಷೆ ಲೀಲಾವತಿ ಅಣ್ಣುನಾಯ್ಕ, ರೋಟರಿ ಮಾಜಿ ಜಿಲ್ಲಾ ಗವರ್ನರ್ ಎಚ್.ಆರ್. ಕೇಶವ್, ರಿಟ್ಯಾಪ್ ಸೊಲ್ಯೂಷನ್ಸ್‌ನ ನಿರ್ದೇಶಕಿ ಡಾ. ದಿವ್ಯ ಪ್ರಶಾಂತ್, ರೋಟರಿ ಕ್ಲಬ್ ಪುತ್ತೂರು ಈಸ್ಟ್ ಅಧ್ಯಕ್ಷ ಶಶಿಧರ್ ಕಿನ್ನಿಮಜಲ್ ಗೌರವ ಉಪಸ್ಥಿತರಿರುವರು. ಕೃಷ್ಣ ಮುಳಿಯ ಗ್ರೀನ್ ಎನರ್ಜಿ ಎಲ್‌ಎಲ್‌ಪಿ ಆಡಳಿತ ನಿರ್ದೇಶಕ ಕೃಷ್ಣನಾರಾಯಣ ಮುಳಿಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಪ್ರಾಜೆಕ್ಟ್ ಡೈರೆಕ್ಟರ್ ರಾಜೇಶ್ ಬೆಜ್ಜಂಗಳ, ರೋಟರಿ ಸ್ವಚ್ಛ ಭಾರತ್ ಚಾರಿಟೇಬಲ್ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ರೈ ಕೆದಂಬಾಡಿ, ವಿಶ್ವಾಸ್ ಶೆಣೈ, ಶಶಿಧರ್ ಕಿನ್ನಿಮಜಲು, ಸುಮಂತ್ ಉಪಸ್ಥಿತರಿದ್ದರು.

ಕಿರುಸುದ್ದಿ

ಬ್ಯಾಟಿಂಗ್‌ನಲ್ಲಿ ಧೋನಿಗೆ ಬಡ್ತಿ ನೀಡಿ: ಪೂಜಾರ ಸಲಹೆ

• **ಚೆನ್ನೈ:** ಎಂಎಸ್ ಧೋನಿ ಅವರಂತಹ ಬ್ಯಾಟರ್ ತಂಡದ ಇನ್ನಿಂಗ್ಸ್‌ನ ಕೊನೆಯ ಕೆಲವು ಓವರ್‌ಗಳಲ್ಲಿ ಬ್ಯಾಟ್ ಮಾಡುವ ಬದಲು ಕ್ರೀಸ್‌ನಲ್ಲಿ ಹೆಚ್ಚು ಕಾಲ ಕಳೆದರೆ ಪಂದ್ಯದ ಮೇಲೆ ದೊಡ್ಡ ಪರಿಣಾಮ ಬೀರಬಲ್ಲರು ಎಂದು ಮಾಜಿ ಕ್ರಿಕೆಟಿಗ ಚೇತೇಶ್ವರ್ ಪೂಜಾರ ಸಲಹೆ ನೀಡಿದ್ದಾರೆ.



ಕಳೆದ ಐಪಿಎಲ್ ಆವೃತ್ತಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್(ಸಿಎಸ್‌ಕೆ) ಇನ್ನಿಂಗ್ಸ್ ಕೊನೆಯಲ್ಲಿ ಬ್ಯಾಟಿಂಗ್‌ಗೆ ಇಳಿಸಲ್ಪಟ್ಟಿದ್ದು, ತ್ವರಿತ ಗತಿಯಲ್ಲಿ ರನ್ ಗಳಿಸುವುದು ಅವರ ಪಾತ್ರವಾಗಿತ್ತು. ಆದರೆ ಇನ್ನಿಂಗ್ಸ್ ಕೊನೆಯಲ್ಲಿ ಬ್ಯಾಟ್ ಬೀಸುತ್ತಿದ್ದರಿಂದ ಹೆಚ್ಚು ಎಸೆತಗಳು ಸಿಗುತ್ತಿರಲಿಲ್ಲ. ಒಂದು ವೇಳೆ ಅವರನ್ನು ಮೇಲಿನ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಕಳುಹಿಸಬೇಕು, ಮಾಹಿ ಭಾಯ್‌ಗೆ 25ರಿಂದ 30 ಎಸೆತಗಳು ಸಿಕ್ಕರೆ ಪಂದ್ಯದ ಮೇಲೆ ದೊಡ್ಡ ಪರಿಣಾಮ ಬೀರಬಲ್ಲರು ಎಂದು ಪೂಜಾರ ಚೆನ್ನೈ ಫ್ರಾಂಚೈಸಿಗೆ ಸಲಹೆ ನೀಡಿದ್ದಾರೆ. ಕಳೆದ ಐಪಿಎಲ್‌ನಲ್ಲಿ ಆರ್‌ಸಿಬಿ ವಿರುದ್ಧ ಧೋನಿ 9ನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ್ದು, ಅವರಿಗೆ ಮಂಡಿ ನೋವು ಇರುವುದಾಗಿ ಕೋಚ್ ಫ್ಲೆಮಿಂಗ್ ಹೇಳಿದ್ದರು. ಆದರೆ ಉಳಿದ ಪಂದ್ಯಗಳಲ್ಲೂ ಧೋನಿ ಕೆಳ ಕ್ರಮಾಂಕದಲ್ಲಿ ಕ್ರೀಸ್‌ಗಿಳಿದಿದ್ದರು.

ಜುಲೈನಲ್ಲಿ ಟೇಬಲ್ ಟೆನಿಸ್ 7ನೇ ಆವೃತ್ತಿಗೆ ಮುಹೂರ್ತ

• **ಮುಂಬೈ:** ಅಲ್ಟಿಮೇಟ್ ಟೇಬಲ್ ಟೆನಿಸ್ (ಯುಟಿಟಿ) ಪಂದ್ಯಾವಳಿಯ 7ನೇ ಆವೃತ್ತಿ ಜುಲೈನಲ್ಲಿ ಗೋವಾದ ತಾಲೇಗಾಂವ್ ಶ್ಯಾಮ ಪ್ರಸಾದ ಮುಖರ್ಜಿ ಒಳಾಂಗಣ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ ಎಂದು ಆಯೋಜಕರು ಶುಕ್ರವಾರ ಘೋಷಿಸಿದ್ದಾರೆ. ಕಳೆದ 6 ಆವೃತ್ತಿಗಳನ್ನು ಮುಂಬೈ, ಪುಣೆ, ದಿಲ್ಲಿ, ಕೋಲ್ಕತ, ಚೆನ್ನೈ ಮತ್ತು ಅಹಮದಾಬಾದ್‌ನಲ್ಲಿ ಆಯೋಜಿಸಿದ ಬಳಿಕ ಇದೀಗ ಪಂದ್ಯಾವಳಿಯ 7ನೇ ಆವೃತ್ತಿ ಕರಾವಳಿ ರಾಜ್ಯ ಗೋವಾ ತಲುಪಿದೆ. ಇದೇ ಮೊದಲ ಬಾರಿಗೆ ಗೋವಾ ಆತಿಥ್ಯ ವಹಿಸಿಕೊಂಡಿದೆ. ಅಲ್ಟಿಮೇಟ್ ಟೇಬಲ್ ಟೆನಿಸ್ ಪಂದ್ಯಾವಳಿಯು ಭಾರತೀಯ ಟೇಬಲ್ ಟೆನಿಸ್‌ನ ಅವಿಭಾಜ್ಯ ಅಂಗವಾಗಿ ರೂಪಾಂತರ ಆಗುತ್ತಿದೆ. ಕಳೆದ ಕೆಲವು ವರ್ಷಗಳಲ್ಲಿ ಭಾರತೀಯ ಟೇಬಲ್ ಟೆನಿಸ್‌ನ ಕ್ರೀಡಾ ಗುಣಮಟ್ಟವನ್ನು ವಿಶ್ವದರ್ಜೆಗೆ ಕೊಂಡೊಯ್ಯುವಲ್ಲಿ ಯುಟಿಟಿ ಯಶಸ್ವಿಯಾಗಿದೆ ಎಂದು ಯುಟಿಟಿ ಸಹ-ಪ್ರಾಯೋಜಕಿ ವಿಟಾ ಡೇನಿ ಹೇಳಿದ್ದಾರೆ.

ಸ್ವಿಸ್ ಓಪನ್ ಕ್ವಾರ್ಟರ್‌ಗೆ ಸಾತ್ವಿಕ್-ಚಿರಾಗ್ ಜೋಡಿ

• **ಹೊಸದಿಲ್ಲಿ:** ಭಾರತದ ಬ್ಯಾಡ್ಮಿಂಟನ್ ಪುರುಷರ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಗುರುವಾರ ಜಪಾನ್ ಜೋಡಿಯನ್ನು ಮಣಿಸಿ ಸ್ವಿಸ್ ಓಪನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಕೆಳ ಶ್ರೇಯಾಂಕದ ಜಪಾನ್‌ನ ಹಿರೋಕಿ ಒಕಾಮುರಾ ಮತ್ತು ಕಿಯೋಹೇ ಯಮಾಶಿತಾ ವಿರುದ್ಧ ಭಾರತೀಯ ಜೋಡಿ 74 ನಿಮಿಷಗಳ ಕಠಿಣ ಹೋರಾಟದ ನಂತರ 21-15, 15-21, 28-26 ಅಂಕಗಳಿಂದ ಜಯ ಸಾಧಿಸಿತು. ಭಾರತದ ತಾರೆಯರಾದ ಕಿರಣ್ ಜಾರ್ಜ್, ತನಿಷಾ ಮತ್ತು ಧ್ರುವ್ ಸ್ಪರ್ಧೆಯಿಂದ ಹೊರಬಿದ್ದಿದ್ದಾರೆ.

ರಜನಿ ಹಾಡು ಬಳಕೆ: ಸಿಎಸ್‌ಕೆ ವಿರುದ್ಧ ಸನ್ ಟಿವಿ ಮೊಕದ್ದಮೆ

• **ಚೆನ್ನೈ:** ಐಪಿಎಲ್ 2026ರ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ಜೆರ್ಸಿ ಬಿಡುಗಡೆ ಕಾರ್ಯಕ್ರಮದಲ್ಲಿ ಸನ್ ಪಿಕ್ಚರ್ಸ್ ನಿರ್ಮಾಣದ ರಜನೀಕಾಂತ್ ಅಭಿನಯದ ಚಿತ್ರಗಳ ಹಾಡುಗಳು, ಹಿನ್ನೆಲೆ ಧ್ವನಿ ಮತ್ತು ಸಂಭಾಷಣೆಗಳನ್ನು ಬಳಸಿದ್ದರ ವಿರುದ್ಧ ಸನ್ ಟಿವಿ ನೆಟ್‌ವರ್ಕ್ ಮದ್ರಾಸ್ ಹೈಕೋರ್ಟ್‌ನಲ್ಲಿ ಹಕ್ಕು ಸ್ವಾಮ್ಯ ಮೊಕದ್ದಮೆಯನ್ನು ಹೂಡಿದೆ. ಸೂಪರ್‌ಸ್ಟಾರ್ ರಜನೀಕಾಂತ್ ನಟಿಸಿದ ಜೈಲರ್, ಜೈಲರ್-2 ಮತ್ತು ಕೂಲಿ ಚಿತ್ರಗಳ ಹಾಡುಗಳನ್ನು ಮಾ.1ರಂದು ಬಿಡುಗಡೆಗೊಳಿಸಿದ ವಿಡಿಯೋದಲ್ಲಿ ಬಳಸಲಾಗಿತ್ತು.

ಇಂಡಿಯನ್ ವೆಲ್ಸ್: ಸೆಮಿಗೆ ಅಲ್ಕರಾಜ್, ಎಲಿನಾ ಪ್ರವೇಶ

• **ಕ್ಯಾಲಿಫೋರ್ನಿಯಾ:** ಅಮೆರಿಕದಲ್ಲಿ ನಡೆಯುತ್ತಿರುವ ಇಂಡಿಯನ್ ವೆಲ್ಸ್ ಟೆನಿಸ್ ಪಂದ್ಯಾವಳಿಯಲ್ಲಿ ಸ್ಪೇನ್ ತಾರೆ ಕಾರ್ಲೋಸ್ ಅಲ್ಕರಾಜ್ ಸತತ 5ನೇ ವರ್ಷ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಗುರುವಾರ ತಡರಾತ್ರಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಕ್ಯಾಮರೂನ್ ನೋರಿ ಅವರನ್ನು 6-3, 6-4 ನೇರ ಸೆಟ್‌ಗಳಿಂದ ಮಣಿಸಿದ ಅಲ್ಕರಾಜ್ ಸೆಮಿ ಪ್ರವೇಶಿಸಿದ್ದಾರೆ. ಸೆಮಿಫೈನಲ್‌ನಲ್ಲಿ ರಷ್ಯಾದ ಡೇನಿಲ್ ಮೆಡ್ವೆಡೆವ್ ಅವರನ್ನು ಎದುರಿಸಲಿದ್ದಾರೆ.

ಸ್ವಿಯಾಟೆಕ್‌ಗೆ ಆಘಾತ: ವಿಶ್ವ ನಂ.2 ಪೋಲೆಂಡ್ ಆಟಗಾರ್ತಿ ಇಗಾ ಸ್ವಿಯಾಟೆಕ್ ಆಘಾತ ಅನುಭವಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಉಕ್ರೇನ್ ಆಟಗಾರ್ತಿ ಎಲಿನಾ ಸ್ವಿಟೋಲಿನಾ ವಿರುದ್ಧ 2-6, 6-4, 4-6 ಸೆಟ್‌ಗಳಿಂದ ಸೋಲುಂಡರು.

ದೇಶಕ್ಕಿಂತ ಮುಖ್ಯವೇ ಫ್ರಾಂಚೈಸಿ ವ್ಯವಹಾರ?

ಐಎಎಫ್, ವಿಂಗ್ ಕಮಾಂಡರ್ ಅಭಿನಂದನ್ ವರ್ಧಮಾನ್‌ರನ್ನು ಅವಮಾನಿಸಿದ್ದ ಪಾಕ್ ಕ್ರಿಕೆಟಿಗ

• **ಹೊಸದಿಲ್ಲಿ:** ಸನ್‌ರೈಸರ್ಸ್ ಹೈದರಾಬಾದ್ ಐಪಿಎಲ್ ಫ್ರಾಂಚೈಸಿಯ ಸಹ-ಮಾಲಕಿ ಹಾಗೂ ಸನ್ ಟಿವಿ ನೆಟ್ವರ್ಕ್ ಮಾಲೀಕ ಕಲಾನಿಧಿ ಮಾರನ್ ಪುತ್ರಿ ಕಾವ್ಯ ಮಾರನ್, ಹಂಡ್ರೆಡ್ ಹರಾಜಿನಲ್ಲಿ ಖುದ್ದಾಗಿ ಹಾಜರಿದ್ದರು. ಹೀಗಾಗಿ ನನಗೆ ಇದೇನು ಗೊತ್ತಿರಲಿಲ್ಲ ಎಂದು ಜಾರಿಕೊಳ್ಳುವಂತಿಲ್ಲ. ಎಲ್ಲವೂ ಕಾವ್ಯ ಅವರ ಉಪಸ್ಥಿತಿಯಲ್ಲೇ ನಡೆದಿದೆ. ಕಾವ್ಯ ಅವರಿಗೆ ಫ್ರಾಂಚೈಸಿ ವ್ಯವಹಾರ ದೇಶದ ಘನತೆಗಿಂತ ಮುಖ್ಯವೇ? ಇದು ಜಾಲತಾಣಗಳಲ್ಲಿ ದೇಶಭಕ್ತರು ಎತ್ತಿರುವ ಪ್ರಶ್ನೆ.

ಇಂಗ್ಲೆಂಡ್‌ನ ಪುರುಷರ ದಿ ಹಂಡ್ರೆಡ್ ಹರಾಜಿನಲ್ಲಿ ಪಾಕಿಸ್ತಾನಿ ಸ್ಪಿನ್ನರ್ ಅಬ್ರಾರ್ ಅಹ್ಮದ್‌ನನ್ನು ಖರೀದಿಸಿದ ಕೆಲವೇ ಗಂಟೆಗಳಲ್ಲಿ ಸನ್‌ರೈಸರ್ಸ್ ಲೀಡ್ಸ್ ಫ್ರಾಂಚೈಸಿಯ ಎಕ್ಸ್ ಖಾತೆ ಅಮಾನತುಗೊಂಡಿದ್ದು, ಸ್ವಲ್ಪ ಸಮಯದ ಬಳಿಕ ಲೀಡ್ಸ್ ಖಾತೆ ಮತ್ತೆ ಸಕ್ರಿಯಗೊಂಡಿದೆ.

2.35 ಕೋಟಿ ರೂ. ಮೂಲ ಬೆಲೆಗೆ ಪಾಕ್ ಸ್ಪಿನ್ನರ್ ಅನ್ನು ಎಸ್‌ಆರ್‌ಎಚ್ ಲೀಡ್ಸ್ ಗುರುವಾರ ಖರೀದಿಸಿದೆ. ಇದಲ್ಲದೆ ಪಾಕ್ ಸ್ಪಿನ್ನರ್ ಖರೀದಿಸುವ ಮೂಲಕ ಕಾವ್ಯಾ ಮಾರನ್ ಒಡೆತನದ ಸನ್‌ರೈಸರ್ಸ್ ಮ್ಯಾನೇಜ್‌ಮೆಂಟ್ ಉದ್ಧಟತನ ಮೆರೆದಿದ್ದಲ್ಲದೆ, ಆತನ ಖರೀದಿಗೆ ಹಲವು ಕಾರಣಗಳನ್ನು ನೀಡಿ ಸಮರ್ಥಿಸಿಕೊಂಡಿದೆ. ಖಾತೆ ಸ್ಥಗಿತಗೊಳಿಸಿರುವ ಕಾರಣ ತಿಳಿದುಬಂದಿಲ್ಲ. ಎಕ್ಸ್ ನಿಯಮಗಳನ್ನು ಉಲ್ಲಂಘಿಸಿರುವ ಕಾರಣದಿಂದ ಖಾತೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಎಕ್ಸ್ ಪುಟದಲ್ಲಿ ಕಾಣಿಸಿತ್ತು. ಕೆಲವು ಸಮಯದ ನಂತರ ಆ ಪುಟವನ್ನು ಮತ್ತೆ ಸಕ್ರಿಯಗೊಳಿಸಲಾಯಿತು ಮತ್ತು ಹಿಂದಿನಂತೆ ಪೋಸ್ಟ್‌ಗಳು ಕೂಡ ಕಾಣಿಸಿಕೊಳ್ಳಲಾರಂಭಿಸಿವೆ. ಭಾರತೀಯ ಮಾಧ್ಯಮ ಸಂಸ್ಥೆ ಸನ್ ಟಿವಿ ಸ್ವಾಮ್ಯದ ಸನ್‌ರೈಸರ್ಸ್ ಲೀಡ್ಸ್ ತಂಡವು ಐಪಿಎಲ್‌ನ ಸನ್‌ರೈಸರ್ಸ್ ಹೈದರಾಬಾದ್ ತಂಡದ ಸಹೋದರ ಫ್ರಾಂಚೈಸಿಯಾಗಿದೆ. ದಿ ಹಂಡ್ರೆಡ್ 2026ರಲ್ಲಿ ಪಾಕ್ ಆಟಗಾರನೊಬ್ಬನನ್ನು ಖರೀದಿಸಿದ ಮೊದಲ ತಂಡ ಎಂಬ ಕುಖ್ಯಾತಿಯನ್ನು ಸನ್‌ರೈಸರ್ಸ್ ಲೀಡ್ಸ್ ಪಡೆದುಕೊಂಡಿದೆ.

ಈ ನಿರ್ಧಾರ ಸಾಮಾಜಿಕ ಜಾಲತಾಣಗಳಲ್ಲಿ ಭಾರತೀಯ ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದ್ದು, ಡಿಎಂಕೆ ಕುಟುಂಬದ ಸನ್ ಟಿವಿ ಸಂಸ್ಥೆ ಮತ್ತು ಕಲಾನಿಧಿ ಮಾರನ್ ಪುತ್ರಿ ಕಾವ್ಯ ಮಾರನ್ ಭಾರತೀಯರ ಭಾವನೆಗಳಿಗೆ ಧಕ್ಕೆ ಉಂಟುಮಾಡಿದ್ದಾರೆ.

- ಪಾಕ್ ಸ್ಪಿನ್ನರ್ ಅಬ್ರಾರ್ ಖರೀದಿಸಿ ದೇಶದ ವಿರೋಧ ಕಟ್ಟಿಕೊಂಡ ಸನ್ ಗ್ರೂಪ್
- ಕೆಲವು ಸಮಯದ ಬಳಿಕ ಮತ್ತೆ ಸಕ್ರಿಯಗೊಂಡ ಲೀಡ್ಸ್ ಎಕ್ಸ್ ಖಾತೆ



ಇನ್‌ಸ್ಟಾಗ್ರಾಂನಲ್ಲಿ 1 ಲಕ್ಷ ಅನ್‌ಫಾಲೋ!

ಫ್ರಾಂಚೈಸಿ ನಿರ್ಧಾರವನ್ನು ದೇಶಭಕ್ತ ಅಭಿಮಾನಿಗಳು ವಿರೋಧಿಸಿದ್ದು, ಸನ್ ರೈಸರ್ಸ್ ಹೈದರಾಬಾದ್ ಐಪಿಎಲ್ ಫ್ರಾಂಚೈಸಿ ತನ್ನ ಇನ್‌ಸ್ಟಾಗ್ರಾಂನಲ್ಲಿ 24 ಗಂಟೆಗಳೊಳಗೆ 1 ಲಕ್ಷ ಹಿಂಬಾಲಕರನ್ನು ಕಳೆದುಕೊಂಡಿದೆ.

ಜಾರಿಕೊಂಡ ಬಿಸಿಸಿಐ

ಬೆಳವಣಿಗೆ ಕುರಿತು ಬಿಸಿಸಿಐ ತನ್ನ ಮೌನ ಮುರಿದಿದೆ. ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ, ಇದು ನಮ್ಮ ವ್ಯಾಪ್ತಿಯಲ್ಲಾಗಲೀ ನಿಯಂತ್ರಣದಲ್ಲಾಗಲಿ ಇಲ್ಲ. ವಿದೇಶಿ ಲೀಗ್‌ನಲ್ಲಿ ಪಾಕ್ ಆಟಗಾರನನ್ನು ಆಯ್ಕೆ ಮಾಡಿದ್ದಾರೆ. ಈ ನಿರ್ಧಾರ ಫ್ರಾಂಚೈಸಿಯದ್ದು, ನಾವು ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ಶುಕ್ಲಾ ಜಾರಿಕೊಂಡಿದ್ದಾರೆ.

ಸನ್‌ರೈಸರ್ಸ್ ಪರ ಕೋಚ್ ವೆಟೋರಿ ಸಮರ್ಥನೆ!

ಯಾವುದೇ ಜಾಗತಿಕ ಟಿ20 ಪಂದ್ಯಾವಳಿಗಳಲ್ಲಿ ಪಾಕ್ ಆಟಗಾರರನ್ನು ಖರೀದಿ ಮಾಡುವುದು ಬೇಡವೆಂದು ಭಾರತೀಯ ಫ್ರಾಂಚೈಸಿಗಳು ಒಮ್ಮತದ ನಿಲುವು ತಳೆದಿದ್ದವು. ಆದರೆ ಅಬ್ರಾರ್ ಖರೀದಿಸುವ ಮೂಲಕ ಲೀಡ್ಸ್, ಈ ನಿಲುವನ್ನು ಉಲ್ಲಂಘಿಸಿದೆ. ತನ್ನ ತಪ್ಪಿಗೆ ಕ್ಷಮೆಯಾಚಿಸಿ ಪಾಕ್ ಆಟಗಾರನನ್ನು ಕೈಬಿಡುವ ಬದಲು ಸನ್‌ರೈಸರ್ಸ್ ಸಮರ್ಥನೆ ನೀಡಿದೆ. ಲೀಡ್ಸ್ ಮುಖ್ಯ ಕೋಚ್ ಡೇನಿಯಲ್ ವೆಟೋರಿ ಮಾತನಾಡಿ, ಪಾಕ್ ಆಟಗಾರರನ್ನು ಖರೀದಿಸದಿರಲು ನಮಗೆ ಯಾವುದೇ ಸೂಚನೆ ಇರಲಿಲ್ಲ. ಇನ್ಯಾವುದೇ ಕ್ರಿಕೆಟೇತರ ಚರ್ಚೆಗಳು ಫ್ರಾಂಚೈಸಿಯೊಳಗೆ ನಡೆದಿಲ್ಲ. ಪ್ರದರ್ಶನ ಮತ್ತು ಆಟಗಾರರ ಲಭ್ಯತೆ ಆಧಾರದಲ್ಲಿ ಖರೀದಿಸಿದ್ದೇವೆ ಎಂದು ಸಮರ್ಥಿಸಿದ್ದಾರೆ.

ಐಎಎಫ್, ಅಭಿನಂದನ್ ಅವಮಾನಿಸಿದ್ದ ಅಬ್ರಾರ್

ಹಲವು ಸಂದರ್ಭಗಳಲ್ಲಿ ಭಾರತೀಯ ವಾಯುಪಡೆಯನ್ನೂ ಹಾಗೂ ಅಭಿಮಾನಿಗಳನ್ನೂ ಟೀಕಿಸುವ ರೀತಿಯಲ್ಲಿ ಪೋಸ್ಟ್‌ಗಳನ್ನು ಮಾಡಿದ್ದ. ಒಂದು ಬಾರಿ, ಟೀ ಈಸ್ ಫೆಂಟಾಸ್ಟಿಕ್ (ಚಹಾ ಅದ್ಭುತವಾಗಿದೆ) ಎಂಬ ಶೀರ್ಷಿಕೆ ಚಹಾ ಕಪ್ ಹಿಡಿದ ಫೋಟೋ ಪೋಸ್ಟ್ ಮಾಡಿದ್ದ. ಇದು ಪಾಕ್‌ನಲ್ಲಿ ತಾತ್ಕಾಲಿಕ ಬಂಧನದಲ್ಲಿದ್ದ ಐಎಎಫ್ ಪೈಲಟ್ ವಿಂಗ್ ಕಮಾಂಡರ್ ಅಭಿನಂದನ್ ವರ್ಧಮಾನ್ ಹೇಳಿದ ಮಾತನ್ನು ಉಲ್ಲೇಖಿಸಿ ಅವಮಾನಿಸಿದ್ದ. ಇನ್ನೊಂದು ಸಂದರ್ಭ ಪಾಕ್ ಸಹ ಆಟಗಾರರೊಂದಿಗೆ ಚಹಾ ಕುಡಿಯುತ್ತಿರುವ ವಿಡಿಯೋ ಹಂಚಿಕೊಂಡಿದ್ದ.



ಆರ್‌ಸಿಬಿ ವರ್ಸಸ್ ಪಾಕಿಸ್ತಾನ?



ಸನ್‌ರೈಸರ್ಸ್ ಫ್ರಾಂಚೈಸಿಗೆ ಭಾರತಕ್ಕಿಂತ ಪಾಕಿಸ್ತಾನವೇ ಮುಖ್ಯ, ಹೀಗಾಗಿ ಸನ್‌ರೈಸರ್ಸ್ ಫ್ರಾಂಚೈಸಿಯನ್ನು ಬಹಿಷ್ಕರಿಸಬೇಕೆಂದು ಭಾರತೀಯ ಕ್ರಿಕೆಟ್ ಅಭಿಮಾನಿಗಳು ಕರೆ ನೀಡಿದ್ದಾರೆ. ಇದೇ ಸಂದರ್ಭ ಹಲವು ಸಾಮಾಜಿಕ ಜಾಲತಾಣ ಬಳಕೆದಾರರು, ಐಪಿಎಲ್ 2026ರ ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ ಮತ್ತು ಸನ್‌ರೈಸರ್ಸ್ ಪಂದ್ಯವನ್ನು, ಆರ್‌ಸಿಬಿ ಮತ್ತು ಪಾಕಿಸ್ತಾನ ನಡುವಿನ ಪಂದ್ಯ, ಇದರಲ್ಲಿ ಆರ್‌ಸಿಬಿ ಗೆಲ್ಲಲೇಬೇಕು. ನಮ್ಮ ಬೆಂಬಲ ಆರ್‌ಸಿಬಿಗೆ ಇರುತ್ತದೆ ಎಂದು ಪೋಸ್ಟ್ ಹಂಚಿಕೊಂಡಿದ್ದಾರೆ.

ಲೀಡ್ಸ್ ಫ್ರಾಂಚೈಸಿಯಲ್ಲಿ ಶೇ.100 ಸನ್ ಹೂಡಿಕೆ

ಸನ್ ಟಿವಿ ಗುಂಪು ಸನ್‌ರೈಸರ್ಸ್ ಲೀಡ್ಸ್ ಫ್ರಾಂಚೈಸಿಯಲ್ಲಿ ಶೇ.100 ಹಂಚಿಕೆಯನ್ನು ಹೊಂದಿದೆ. ಈ ಹಿಂದೆ ಇದೇ ಫ್ರಾಂಚೈಸಿ ನಾರ್ಥರ್ನ್ ಸೂಪರ್‌ಚಾರ್ಜರ್ಸ್ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಬೋರ್ಡ್, ಯಾರ್ಕ್‌ಶೈರ್‌ನಿಂದ ಹಂಚಿಕೆಗಳನ್ನು ಖರೀದಿಸಿ ಸನ್ ಗ್ರೂಪ್ ಸಂಪೂರ್ಣ ಮಾಲೀಕತ್ವ ಮತ್ತು ನಿಯಂತ್ರಣವನ್ನು ಪಡೆದುಕೊಂಡಿದ್ದರು.

ರೋಕೋ ಫ್ಯಾನ್ಸ್‌ಗೆ ಬಿಸಿಸಿಐ ಶುಭ ಸುದ್ದಿ?

ಹೊಸದಿಲ್ಲಿ: ತಾರಾ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಅಭಿಮಾನಿಗಳಿಗೆ ಬಿಸಿಸಿಐ ಶೀಘ್ರ ಶುಭಸುದ್ದಿ ನೀಡುವ ಸಾಧ್ಯತೆಯಿದೆ.

2027ರ ಐಸಿಸಿ ಏಕದಿನ ವಿಶ್ವಕಪ್‌ಗಾಗಿ ತಯಾರಿ ನಡೆಸಲು ಬಯಸುತ್ತಿರುವ ಹಲವು ವಿದೇಶಿ ಕ್ರಿಕೆಟ್ ನಿಯಂತ್ರಣ ಸಂಸ್ಥೆಗಳು ದ್ವಿಪಕ್ಷೀಯ ಏಕದಿನ ಸರಣಿಗಳನ್ನು ಹೆಚ್ಚಿಸಬೇಕೆಂದು ಬಿಸಿಸಿಐಗೆ ಮನವಿ ಮಾಡಿದ್ದು, ಈ ಮನವಿಯನ್ನು ಬಿಸಿಸಿಐ ಪರಿಗಣಿಸುವ ಸಾಧ್ಯತೆಯಿದೆ.

ಕೊಹ್ಲಿ, ರೋಹಿತ್ ಇಬ್ಬರು 2027ರ ವಿಶ್ವಕಪ್ ಆಡುತ್ತಾರೆಯೇ ಎಂಬ ವಿವಾದಾತ್ಮಕ ಪ್ರಶ್ನೆಯನ್ನು ಕೆಲವು ಟೀಕಾಕಾರರು ಎತ್ತಿದ್ದರು. ಆದರೆ ವಿಜಯ್ ಹಜಾರೆ ಟ್ರೋಫಿಯಲ್ಲಿ ರೋಕೋ ಜೋಡಿ ತಮ್ಮ ಬ್ಯಾಟ್‌ನಿಂದಲೇ ಉತ್ತರಿಸಿ ಟೀಕಾಕಾರರ ಬಾಯಿ ಮುಚ್ಚಿಸಿದ್ದರು.

ಇದೀಗ ಏಕದಿನ ಸರಣಿಗಳು ಹೆಚ್ಚಿಸಲು ಬಿಸಿಸಿಐ ಒಪ್ಪಿಕೊಂಡರೆ, ಆರಂಭಿಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಹೆಚ್ಚು ಏಕದಿನ ಪಂದ್ಯಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಟೆಸ್ಟ್ ಮತ್ತು ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಪಡೆದಿರುವ ಕಾರಣ ಕೊಹ್ಲಿ ಮತ್ತು ರೋಹಿತ್ ತಮ್ಮ ಏಕದಿನ ಅಂತಾರಾಷ್ಟ್ರೀಯ ಪಂದ್ಯಗಳಿಗಿಂತ ಹೆಚ್ಚು ಐಪಿಎಲ್ ಫ್ರಾಂಚೈಸಿ ಕ್ರಿಕೆಟ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಏಕದಿನ ಪಂದ್ಯಗಳ ಹೆಚ್ಚಳದಿಂದ ಕೊಹ್ಲಿ ಮತ್ತು ರೋಹಿತ್ ಅವರಿಗೂ 2027ರ ಏಕದಿನ ವಿಶ್ವಕಪ್‌ಗೆ ಪೂರ್ವಸಿದ್ಧತೆ ನಡೆಸಿದಂತಾಗಲಿದೆ. ಸದ್ಯ ಕೊಹ್ಲಿ, ರೋಹಿತ್ ಇಬ್ಬರೂ ತಮ್ಮ ವೃತ್ತಿಜೀವನದ ಅತ್ಯುತ್ತಮ ಲಯದಲ್ಲಿದ್ದರೂ ಸಹ ವಿಶ್ವಕಪ್‌ಗಿನ್ನೂ ಸಾಕಷ್ಟು ಸಮಯವಿದೆ.

ವಿಶ್ವಕಪ್ ತಯಾರಿಗಾಗಿ ಏಕದಿನ ಸರಣಿ ಹೆಚ್ಚಿಸುವ ಸಾಧ್ಯತೆ



ಯಾವೆಲ್ಲಾ ಕ್ರಿಕೆಟ್ ಸಂಸ್ಥೆಗಳ ಮನವಿ?

ಇಂಗ್ಲೆಂಡ್, ನ್ಯೂಜಿಲೆಂಡ್, ಐರ್ಲೆಂಡ್ ಮತ್ತು ಶ್ರೀಲಂಕಾ ಕ್ರಿಕೆಟ್ ನಿಯಂತ್ರಣ ಸಂಸ್ಥೆಗಳು ದ್ವಿಪಕ್ಷೀಯ ಏಕದಿನ ಸರಣಿ ಆಯೋಜನೆಗಾಗಿ ಮನವಿ ಮಾಡಿವೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ವಿಶ್ವಕಪ್ ಅರ್ಹತೆ ಗೆದ್ದ ಭಾರತ | ಇಟಲಿ ವಿರುದ್ಧ 1-0 ಜಯ

ಮಹಿಳಾ ಹಾಕಿ ವಿಶ್ವಕಪ್‌ಗೆ ಭಾರತ ಲಗ್ಗೆ

• **ಹೈದರಾಬಾದ್:** 2026ರ ಮಹಿಳಾ ಹಾಕಿ ವಿಶ್ವಕಪ್ ಅರ್ಹತೆಯನ್ನು ಭಾರತ ತಂಡ ಸಂಪಾದಿಸಿದೆ. ವಿಶ್ವಕಪ್ ಅರ್ಹತಾ ಸುತ್ತಿನ ಸೆಮಿಫೈನಲ್‌ನಲ್ಲಿ ಇಟಲಿ ತಂಡವನ್ನು ಪರಾಭವಗೊಳಿಸಿದ ಭಾರತ ವನಿತೆಯರು ಫೈನಲ್ ಪ್ರವೇಶಿಸಿದ್ದಾರೆ. ಇದರೊಂದಿಗೆ ಅಧಿಕೃತವಾಗಿ ಭಾರತ ತಂಡ ವಿಶ್ವಕಪ್ ಅರ್ಹತೆಯನ್ನು ಸಂಪಾದಿಸಿದೆ.

ಫೈನಲ್‌ನಲ್ಲಿ ಭಾರತೀಯ ವನಿತೆಯರು ಇಂಗ್ಲೆಂಡ್ ತಂಡವನ್ನು ಎದುರಿಸಲಿದ್ದಾರೆ. ಭಾರತ ಎದುರು ಸೋಲುಂಡ ಇಟಲಿ ಮತ್ತು ಸ್ಕಾಟ್ಲೆಂಡ್ ತಂಡಗಳು ಮೂರನೇ ಸ್ಥಾನಕ್ಕಾಗಿ ಸೆಣಸಾಡಲಿವೆ. ಶುಕ್ರವಾರ ಹೈದರಾಬಾದ್‌ನಲ್ಲಿ ನಡೆದ ಎಫ್‌ಐಎಚ್ ಅರ್ಹತಾ ಸುತ್ತಿನ ಸೆಮಿಫೈನಲ್‌ನಲ್ಲಿ ಇಟಲಿ ವಿರುದ್ಧ ಭಾರತ ವನಿತೆಯರು 1-0 ಅಂತರದ ರೋಚಕ ಜಯ ಸಾಧಿಸಿದ್ದಾರೆ. ಪಂದ್ಯದಲ್ಲಿ ಹಲವು ರೋಚಕ ಮತ್ತು ಕಠಿಣ ಸನ್ನಿವೇಶಗಳೂ ಎದುರಾದರೂ ಭಾರತೀಯ ವನಿತೆಯರು ತಮ್ಮ ಶ್ರೇಷ್ಠ ಪ್ರದರ್ಶನ ನೀಡಿದರು.

39ನೇ ನಿಮಿಷದಲ್ಲಿ ಮನೀಶಾ ಚೌಹಾನ್ ಗೋಲ್



ಮನೀಶಾ ಡ್ರ್ಯಾಗ್ ಫ್ಲಿಕ್ ಗೋಲ್!: 39ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಕಾರ್ನರ್ ಬಳಸಿಕೊಂಡ ಮನೀಶಾ ಚೌಹಾನ್ ಭಾರತ ಪರ ಏಕೈಕ ಗೋಲ್ ದಾಖಲಿಸಿ ಫೈನಲ್ ಪ್ರವೇಶವನ್ನು ಮತ್ತು ವಿಶ್ವಕಪ್ ಅರ್ಹತೆ ಸಂಪಾದನೆಯನ್ನೂ ಖಚಿತಪಡಿಸಿದರು. ಅವರು ಡ್ರ್ಯಾಗ್ ಫ್ಲಿಕ್ ಮಾಡುವುದರೊಂದಿಗೆ ಗೋಲ್ ದಾಖಲಿಸಿದರು.

ಕಾರವಾರ ಬಂದರಿಗೆ ಬಂತು ಚೆಂಗ್ ಎಕ್ಸ್ ವಾಣಿಜ್ಯ ಹಡಗು

• **ಕಾರವಾರ:** ಮಧ್ಯಪ್ರಾಚ್ಯದ ಭೀಕರ ಯುದ್ಧಗ್ರಸ್ತ ಸ್ಥಿತಿಯ ಮಧ್ಯೆಯೇ ಯುಎಇಯಿಂದ ಬಿಟುಮಿನ್ (ಕಚ್ಚಾಡಾಂಬರ್) ಹೊತ್ತು 'ಚೆಂಗ್ ಎಕ್ಸ್' ಹೆಸರಿನ ವಾಣಿಜ್ಯ ಹಡಗೊಂದು ಕಾರವಾರ ಬಂದರಿಗೆ ಸುರಕ್ಷಿತವಾಗಿ ಬಂದಿದೆ.


ಈ ಚೆಂಗ್ ಎಕ್ಸ್ ಹಡಗು ಸುಮಾರು 5,500 ಟನ್ ಸಾಮರ್ಥ್ಯ ಹೊಂದಿದ್ದು ಇದರಲ್ಲಿ ಒಟ್ಟು 3,100 ಟನ್ ಬಿಟುಮಿನ್ ಲೋಡ್ ಮಾಡಲಾಗಿದೆ. ಯುಎಇಯ ಕೋರ್ಫಕಾನ್ ಬಂದರಿನಿಂದ ಮಾರ್ಚ್ 3ರಂದು ಹೊರಟಿದ್ದ ಈ ಹಡುಗು ಕಾರವಾರ ಬಂದರಿಗೆ ತಲುಪಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಕಾರಣ ಇರಾನ್



ತನ್ನ ಹಿಡಿತದಲ್ಲಿರುವ ಹಾರ್ಮೋಜ್ ಜಲಸಂಧಿಯಲ್ಲಿ ಹಡಗು ಗಳ ಸಂಚಾರಕ್ಕೆ ನಿರ್ಬಂಧ ಹೇರಿ ರುವುದು ಜಾಗತಿಕ ವ್ಯವಹಾರದ ಮೇಲೆ ಕರಿನೆರಳು ಚಾಚಿದೆ. ಈ ನಿರ್ಬಂಧದ ನಡುವೆಯೇ ಯುಎಇಯಿಂದ ಹೊರ ಟಿದ್ದ ಈ ಹಡಗು ಸುರಕ್ಷಿತವಾಗಿ ಕಾರವಾರ ಬಂದರಿಗೆ ಬಂದಿರುವುದು ಗಮನಾರ್ಹ.ಕಾರವಾರ ಬಂದರಿನಲ್ಲಿ ಬಿಟುಮಿನ್ ಇಳಿಸಿ ಈ ಹಡುಗು ಮರಳಿ ಎಲ್ಲಿ ಹೋಗಲಿದೆ ಎನ್ನುವ ಸ್ಪಷ್ಟ ಮಾಹಿತಿ ಇಲ್ಲ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5923

ಎಡದಿಂದ ಬಲಕ್ಕೆ

2.ಅಂತರಂಗ-ಚಿತ್ತವಿದು (3)
5.ಭಾರತದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿ (4)
6.ಸೊಕ್ಕಿನಿಂದಿರುವ ಆನೆ (4)
7.ಹೊಡೆತದಿಂದ ದೇಹದಲ್ಲುಂಟಾಗುವ ಕಚ್ಚು (2)
8.ಉದಯಕಾಲದಲ್ಲಿ ಮೂಡಿದ ಕರುಣೆ (2)
10.ತಿದ್ದಿ ತೊಳೆದು ಇಟ್ಟದ್ದು ಈ ಚರ್ಮದ ಚೀಲವನ್ನು (2)
12.ಹೂವಿನಿಂದ ಹೂವಿಗೆ ಹಾರುವ ಕೀಟ (2)
13.ಅಂಗೈ ಗುಳಿಯಲ್ಲಿನ ಶುದ್ಧೋದಕವನ್ನು ಕುಡಿಯುವುದು (4)
15.ಹಾರದ ನಡುವೆ ಕುಳಿತ ಗಾಯಕ (4)
16. ಸುರರು ದಿನವೂ ತೊಟ್ಟುಕೊಳ್ಳುವ ಬಟ್ಟೆ (3)

ಮೇಲಿನಿಂದ ಕೆಳಕ್ಕೆ

1.ಒಂದಕ್ಕೊಂದು ಹೊಂದದಿರುವುದು (4)
2.ಇದು ಸಂನ್ಯಾಸಿಗಳ ಕುಟೀರ (2)
3.ಮಸುಕು ಬೆಳಕಲ್ಲಿ ಕಾಣಿಸಿದ ಹೂವು (2)
4.ಮದದ ನಡುವೆ ಹೂವಿನ ರಸವಿದೆ (4)
7.ಈಕೆ ಹಾಡುವವಳು-ಗಾಯಕಿ (3)
9.ಶ್ವೇತವರ್ಣವಿಲ್ಲಿ ತಲೆಕೆಳಗಾಗಿದೆ (3)
11.ದಿನದ ಕೆಲಸ ಘಟನೆ ಬರೆದಿಡುವ ಪುಸ್ತಕ (4)
12.ಮಿತಿಯಿಲ್ಲದೆ ಖರ್ಚು ಮಾಡುವವನು (4)
14.ತೊರೆಗಿಂತ ಕೊಂಚ ದೊಡ್ಡದು (2)
15.ಬಿಚ್ಚಿ ಹರಡುವಿಕೆಯಿದು (2)

5922 ಉತ್ತರ

ಎಡದಿಂದ ಬಲಕ್ಕೆ:

1.ನಟ್ಟುವಿಗ 3.ಕಥಾನಕ
5.ಹರಿವು 6.ನವಣೆ
8.ವಾಹನ 10.ಸಾರಥಿ
11.ಕೆಳದಿ 15.ಶಬರಿ
16.ಮನೋಬಲ
17.ತರಂಗಿಣಿ

ಮೇಲಿನಿಂದ ಕೆಳಕ್ಕೆ :

1.ನವವನ 2.ಗವುಳಿ
3.ಕಹಳೆ 4.ಕಟಾಂಜನ
7.ವಜೀರ 9.ಹವಳ
10.ಸಾರ್ವಭೌಮ
12.ದಿವ್ಯವಾಣಿ 13.ಕುಶಲ
14.ಹರಿತ

ಎಂಟು ಒಡಿಶಾ ಶಾಸಕರನ್ನು ಭೇಟಿಯಾದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್

ಖಾಸಗಿ ರೆಸಾರ್ಟ್‌ನಲ್ಲಿ ಒಡಿಶಾ ಶಾಸಕರು

• **ಬೆಂಗಳೂರು:** ಅಡ್ಡಮತದಾನದ ಭೀತಿಯಿಂದ ಬಿಡದಿ ಬಳಿಯ ಖಾಸಗಿ ರೆಸಾರ್ಟ್‌ವೊಂದರಲ್ಲಿ ತಂಗಿರುವ ಒಡಿಶಾದ 8 ಶಾಸಕರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶುಕ್ರವಾರ ಭೇಟಿ ಮಾಡಿದರು.

ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಬೆಳಗ್ಗೆ ಅವರನ್ನು ಭೇಟಿ ಮಾಡಲು ಸಾಧ್ಯವಾಗದ ಹಿನ್ನೆಲೆ, ಕಲಾಪ ಮುಗಿದ ಬಳಿಕ ಶುಕ್ರವಾರ ಸಂಜೆ ಒಡಿಶಾ ಶಾಸಕರು ತಂಗಿರುವ ರೆಸಾರ್ಟ್‌ಗೆ ತೆರಳಿ ಭೇಟಿ ಮಾಡಿ ರಾಜ್ಯಸಭೆ ಚುನಾವಣೆ ಹಾಗೂ ಪ್ರಸ್ತುತ ರಾಜಕೀಯದ ಬಗ್ಗೆ ಒಡಿಶಾ ಪಿಸಿಸಿ ಅಧ್ಯಕ್ಷ ಭಕ್ತ ಚರಣ್ ದಾಸ್ ಹಾಗೂ ಎಐಸಿಸಿ ಕಾರ್ಯದರ್ಶಿ ಮಯೂರ್ ಜೈಕುಮಾರ್ ಜತೆಗೆ ಚರ್ಚೆ ನಡೆಸಿದರು. ಬಳಿಕ ಮಾತನಾಡಿದ ಅವರು, ಬಿಜೆಪಿಯವರು ಆಪರೇಷನ್ ಕಮಲದ ಪಿತಾಮಹರು, ಕುದುರೆ ವ್ಯಾಪಾರಕ್ಕೆ ಹೆಸರುವಾಸಿ. ನಾವು ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು. ರಾಜಕೀಯ ಪಕ್ಷಗಳಿಗೆ ಕುದುರೆ ವ್ಯಾಪಾರದ ಭೀತಿ ಇರುತ್ತದೆ. ರಾಜಕೀಯ



ರಂಗದಲ್ಲಿ ಎಲ್ಲಾ ಪಕ್ಷಗಳು ಎದುರಿಸುವ ವಿಚಾರ ಇದು. ಅವರು ಇಲ್ಲಿಗೆ ಬಂದಿರುವಾಗ ಅವರಿಗೆ ನೆರವು ನೀಡುವುದು ನಮ್ಮ ಕರ್ತವ್ಯ. ನಾನು ಹಾಗೂ ನಮ್ಮ ಶಾಸಕರು ಅವರನ್ನು ಭೇಟಿ ಮಾಡಿದ್ದೇವೆ ಎಂದು ತಿಳಿಸಿದರು.ಕಾಂಗ್ರೆಸ್ ಪಕ್ಷಕ್ಕೆ ಅವರದೇ ಶಾಸಕರ ಮೇಲೆ ನಂಬಿಕೆ ಇಲ್ಲ ಎಂಬ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ಹಾಗಿದ್ದರೆ ಕರ್ನಾಟಕದಲ್ಲಿ ಆಪರೇಷನ್ ಕಮಲ ಮಾಡಿದ್ದು ಯಾಕೆ? ಎಂದು ಪ್ರಶ್ನಿಸಿದರು.

ನಮ್ಮ ಶಾಸಕರಿಗೆ ದೊಡ್ಡ ಆಫರ್‌ಗಳು ಬಂದಿವೆ: ಇದು ಹೈಕಮಾಂಡ್ ಟಾಸ್ಕ್ ಅಲ್ಲ, ರಾಜ್ಯಸಭಾ ಚುನಾವಣೆ ಇರುವ ಕಾರಣಕ್ಕೆ ಆಪರೇಷನ್ ಕಮಲದ ಭೀತಿ ಎದುರಾಗಿದೆ. ನಮ್ಮವರ ಮೇಲೆ ಒತ್ತಡವಿದೆ. ದೊಡ್ಡ ಆಫರ್‌ಗಳನ್ನು ಕೊಡುತ್ತಿದ್ದಾರೆ. ಒಡಿಶಾ ಪಿಸಿಸಿ ಅಧ್ಯಕ್ಷರು ಕರೆ ಮಾಡಿ ಜಾತ್ಯಾತೀತ ಪಕ್ಷಗಳೆಲ್ಲಾ ಒಂದಾಗಿದ್ದೇವೆ. ಆಪರೇಷನ್ ಕಮಲ ನಡೆಯುವ ಸಂಭವವಿದೆ ಎಂದರು.

ಬಿಡದಿಯಲ್ಲಿ ಶಾಸಕರ ವಾಸ್ತವ್ಯ

ಬಿಡದಿಯಲ್ಲಿ ಮೊದಲ ಬಾರಿಗೆ ಗೆದ್ದಿರುವ 8 ಶಾಸಕರು ವಾಸ್ತವ್ಯ ಹೂಡಿದ್ದಾರೆ. ರಾಜನ್ ಎಕ್ಕ, ಅಶೋಕ್ ದಾಸ್, ಅಪ್ವಲ ಕುಮಾರ್ ಸ್ವಾಮಿ, ಮಂಗು ಕಿಲ್ಲೋ, ಪವಿತ್ರ ಸೌಂತಾ, ನೀಲಮಾಧವ್ ಹಿಕ್ಕ, ಪ್ರಫುಲ್ಲ ಪ್ರಧಾನ್, ಸತ್ಯಜಿತ್ ಗೋಮಂಗೋ ಇವರ ಜತೆಗೆ ಒಡಿಶಾ ಪಿಸಿಸಿ ಅಧ್ಯಕ್ಷ ಅಧ್ಯಕ್ಷ ಭಕ್ತ ಚರಣ್ ದಾಸ್ ಕೂಡಾ ಇದ್ದಾರೆ.

ಲೈಂಗಿಕ ದೌರ್ಜನ್ಯಕ್ಕೊಳಗಾದ ಮಕ್ಕಳಿಗೆ ನೆರವು ನೀಡಿ: ಸುಧಾ ಮೂರ್ತಿ

ಶಾಲೆಗಳಲ್ಲಿ ಆಪ್ತ ಸಲಹೆಗಾರರನ್ನು ನೇಮಿಸಿ

• **ಹೊಸದಿಲ್ಲಿ:** ಲೈಂಗಿಕ ದೌರ್ಜನ್ಯಗಳಿಗೆ ಬಲಿಪಶುಗಳಾಗುವ ಮಕ್ಕಳಿಗೆ ನೆರವಾಗಲು, ಶಾಲೆಗಳಲ್ಲಿ ಕಡ್ಡಾಯವಾಗಿ ಆಪ್ತ ಸಲಹೆಗಾರರನ್ನು ನಿಯೋಜಿಸುವಂತೆ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಶುಕ್ರವಾರ ಕರೆ ನೀಡಿದ್ದಾರೆ. ಇಂತಹ ಆಪ್ತ ಸಲಹೆಗಾರರನ್ನು ನೇಮಿಸದ ಶಾಲೆಗಳ ನೋಂದಣಿಯನ್ನೇ ರದ್ದುಪಡಿಸಬೇಕೆಂದು ಸುಧಾಮೂರ್ತಿ ಸಲಹೆ ಮಾಡಿದ್ದಾರೆ. 2025ರ ಫೆ.7ರಂದು ಎನ್‌ಸಿಪಿ-ಎಸ್‌ಸಿಪಿಯ ಫೌಝಿಯಾ ಖಾನ್ ಅವರು ಮಂಡಿಸಿದ್ದ, ಖಾಸಗಿ ಸದಸ್ಯ ಮಸೂದೆಯಾದ, ಲೈಂಗಿಕ ಅಪರಾಧಗಳಿಂದ ಮಕ್ಕಳ ಸುರಕ್ಷೆ (ತಿದ್ದುಪಡಿ) ಮಸೂದೆ 2024ರ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಸುಧಾಮೂರ್ತಿ ಈ ರೀತಿ ಸಲಹೆ ನೀಡಿದರು. ಮಗುವಿಗೆ ಧೈರ್ಯ ತುಂಬೋದು ಮುಖ್ಯ ತಪ್ಪು ನಿನ್ನದಲ್ಲ ಎಂಬ ಆಶ್ವಾಸನೆ ಲೈಂಗಿಕ ದೌರ್ಜನ್ಯ ಸಂತ್ರಸ್ತ ಮಕ್ಕಳಿಗೆ ಸಿಗಬೇಕು, ಇದನ್ನವರು ನಿರೀಕ್ಷಿಸುತ್ತಾರೆ ಮತ್ತು ಈ ಆಶ್ವಾಸನೆಗಳನ್ನು ಮನೆಯಲ್ಲಿ ಮಗುವಿನ ತಾಯಿ ಅಥವಾ ಶಾಲೆಯಲ್ಲಿ ಶಿಕ್ಷಕಿ ಅಥವಾ ಆಪ್ತ ಸಲಹೆ ಕೊಡಲು ಶಕ್ಯರು. ನೀನು ತಪ್ಪು ಮಾಡಿಲ್ಲ ಎಂದು ಹೇಳಿ ಧೈರ್ಯ ತುಂಬಬಲ್ಲ, ತನಗಾದ ಅನ್ಯಾಯವನ್ನು ಸಹನೆಯಿಂದ ಆಲಿಸಬಲ್ಲ ಸ್ನೇಹಿತರು ಅಥವಾ ಸಮಾನರನ್ನು ಸಂತ್ರಸ್ತ ಮಗು ನಿರೀಕ್ಷಿಸುತ್ತದೆ. ಆಪ್ತ ಸಲಹೆಗಾರರು ಈ ನಿಟ್ಟಿನಲ್ಲಿ ಸಂತ್ರಸ್ತ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಬಲ್ಲರು ಮತ್ತು ಮಗುವಿನ ಸಮಸ್ಯೆಗೆ ಸ್ಪಂದಿಸಬಲ್ಲರು ಎಂದು ಸುಧಾಮೂರ್ತಿ ಮಸೂದೆ ಪರವಾಗಿ ಚರ್ಚೆ ಮಂಡಿಸಿದರು.



ಸಾಕಷ್ಟು ಸಂಖ್ಯೆಯಲ್ಲಿ ಕೌನ್ಸಿಲರ್‌ಗಳ ನೇಮಕ

ಶಾಲಾ ಮಕ್ಕಳ ಸಂಖ್ಯಾಬಲದ ಆಧಾರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಆಪ್ತ ಸಲಹೆಗಾರರನ್ನು ನಿಯುಕ್ತಿಗೊಳಿಸಬೇಕು. ಹಾಗೆಂದು 2000ಮಕ್ಕಳಿಗೆ ಓರ್ವ ಆಪ್ತ ಸಲಹೆ ನೇಮಿಸದರೆ ಸಾಲದು. ಕೌನ್ಸಿಲರ್‌ಗಳನ್ನು ಹೊಂದಿಲ್ಲದ ಶಾಲಾ ನೋಂದಣಿಯನ್ನೇ ಸರಕಾರ ರದ್ದುಪಡಿಸಬೇಕು. ಯಾಕೆಂದರೆ ಬಾಲ್ಯಾವಸ್ಥೆಯಲ್ಲಿ ಹುಡುಗರು ಮತ್ತು ಹುಡುಗಿಯರು ತುಂಬು ಸುರಕ್ಷಿತರಾಗಿರಬೇಕು ಮತ್ತು ಯಾವುದೇ ಲೈಂಗಿಕ ದೌರ್ಜನ್ಯಗಳಿಂದ ಮುಕ್ತವಾಗಿ ತಮ್ಮ ಬಾಲ್ಯದ ಸವಿಯನ್ನು ಅನುಭವಿಸಬೇಕು. ಕೆಟ್ಟ ಘಟನಾವಳಿಗಳು ಮಕ್ಕಳ ಮನಸ್ಸಿನ ಮೇಲೆ ಆಳ ಗಾಯ ಮೂಡಿಸಿಬಿಡುತ್ತದೆ ಎಂದು ಸುಧಾಮೂರ್ತಿ ಆತಂಕ ವ್ಯಕ್ತಪಡಿಸಿದರು. ಮಕ್ಕಳ ಮೇಲೆ ದೌರ್ಜನ್ಯ ನಡೆದಾಗ ಹೆತ್ತವರು ತಮ್ಮ ಮಕ್ಕಳ ಜತೆ ಹೇಗೆ ವರ್ತಿಸಬೇಕೆಂಬ ಬಗ್ಗೆ ಸಂತ್ರಸ್ತ ಮಗುವಿನ ಹೆತ್ತವರಿಗೂ ಅರಿವು ನೀಡುವುದಗತ್ಯ. ಲೈಂಗಿಕ ದೌರ್ಜನ್ಯಕ್ಕೀಡಾದ ಮಕ್ಕಳ ನಡವಳಿಕೆ ಗಮನಿಸಲು ಸೂಕ್ತ ಕ್ರಮ ಕೈಗೊಳ್ಳಲು ಶಿಕ್ಷಕರಿಗೆ ಪೂರಕವಾಗುವಂತೆ ಪೋಸ್ಕೋ ಕಾಯಿದೆಯನ್ನು ಬ್ಯಾಚುಲರ್ ಆಫ್ ಎಜುಕೇಶನ್ ಕರಿಕ್ಯುಲಮ್‌ನ ಭಾಗವಾಗಿಸಬೇಕೆಂದು ಸುಧಾಮೂರ್ತಿ ಸಲಹೆ ನೀಡಿದ್ದಾರೆ. ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಪರಾಮರ್ಶಿಸುವಾಗ, ಈಗಿನ ದಿನಗಳಲ್ಲಿ ಬಹುತೇಕ ಕುಟುಂಬಗಳು ಪ್ರತ್ಯಪ್ರತ್ಯೇಕವಾಗುವುದು, ಹೆತ್ತವರಿಬ್ಬರೂ ಹೊರಗೆ ದುಡಿಯುವವರು, ಮುಂದಿನ ಭವ್ಯ ಭವಿಷ್ಯಕ್ಕಾಗಿ ಹೆತ್ತವರು ಮಕ್ಕಳಿಗೆ ಮಿತಿ ಮೀರಿ ಒತ್ತಡ ಹೇರುವುದೇ ಇತ್ಯಾದಿ ಅಂಶಗಳನ್ನೂ ಪರಿಗಣಿಸಬೇಕೆಂದು ಬಿಜೆಪಿಯ ಘನಶ್ಯಾಮ್ ತಿವಾರಿ ಸಲಹೆಯಿತ್ತರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 34° 24° | ಉಡುಪಿ 32° 25°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 14, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

'ಸಂಧ್ಯಾರಾಗಂ' ಆಡಿಟೋರಿಯಂಗೆ ಬೇಕಿದೆ ಶೀಘ್ರ ಕಾಯಕಲ್ಪ




ಪುಟ 6

ಕಾರ್ಕಳ ಆನೆಕೆರೆ ಬಸದಿಗೆ ಸಿಗಲಿದೆ ನೃತ್ಯ ಕಾರಂಜಿಯ ಮೆರುಗು

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಮಾಣಿ -ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಪಲ್ಟಿಯಾಗಿ ಆತಂಕ ಸೃಷ್ಟಿಸಿದ ಕಂಟೈನರ್ ಲಾರಿ







ಮಾಣಿ -ಮೈಸೂರು ರಾಷ್ಟ್ರೀಯ ಹೆದ್ದಾರಿ ಪರಿವಾರಕಾನ ಬಳಿ ರಾಸಾಯನಿಕ ಹೇರಿಕೊಂಡಿದ್ದ ಕಂಟೈನರ್ ಲಾರಿ ಪಲ್ಟಿಯಾಗಿದ್ದು, ಸುಳ್ಯ ಅಗ್ನಿಶಾಮಕ ದಳ ಸಿಬ್ಬಂದಿ ಆಗಮಿಸಿ ಕ್ರೇನ್ ಮೂಲಕ ಲಾರಿ ತೆರವುಗೊಳಿಸಿದರು. ಇದಕ್ಕೂ ಮುನ್ನ ಕಂಟೈನರ್ ಲಾರಿಯ ಡ್ರೈವರ್ ಕ್ಯಾಬಿನ್‌ನಿಂದ ಬೇರ್ಪಟ್ಟು ರಸ್ತೆಯಲ್ಲಿ ಉರುಳಿ ಬಿದ್ದ ಪರಿಣಾಮ ಮುಚ್ಚಳದ ಮೂಲಕ ಅಲ್ಪ ಪ್ರಮಾಣದಲ್ಲಿ ಸೋರಿಕೆ ಕೂಡಾ ಕಾಣಿಸಿಕೊಂಡಿತ್ತು.

ಕರಾವಳಿ ಜಿಲ್ಲೆಗೆ ತಟ್ಟಿದ ವಾಣಿಜ್ಯ ಎಲ್‌ಪಿಜಿ ಪೂರೈಕೆ ಸ್ಥಗಿತದ ಬಿಸಿ

ಕೊಲ್ಲಿ ಬಿಕ್ಕಟ್ಟು, ಇಲ್ಲೀಗ ಇಕ್ಕಟ್ಟು!

ದಕ್ಷಿಣ ಕನ್ನಡ, ಉಡುಪಿಯಲ್ಲಿ ಮತ್ತಷ್ಟು ಹೊಟೇಲ್‌ಗಳು ಬಂದ್

ಮಂಗಳೂರು/ಉಡುಪಿ: ಗ್ಯಾಸ್ ಪೂರೈಕೆ ಇಲ್ಲದ ಕಾರಣ ಹೊಟೇಲ್ ಬಂದ್ ಮಾಡಲಾಗಿದೆ... ನಾಳೆ ಹೊಟೇಲ್‌ಗೆ ರಜೆ... ಇದು ನಗರದ ಕೆಲ ಹೊಟೇಲ್ ಮುಂಭಾಗದಲ್ಲಿ ಕಂಡುಬಂದ ಬರಹ.

ಮಧ್ಯಪ್ರಾಚ್ಯದಲ್ಲಿ ಯುದ್ಧದ ಪರಿಣಾಮ ದೇಶದಲ್ಲಿ ಇಂಧನ ಕೊರತೆ ಕಾಣಿಸಿದ್ದು, ಕರಾವಳಿ ಜಿಲ್ಲೆಗಳ ಹೊಟೇಲ್ ಉದ್ಯಮದ ಮೇಲೆ ಕರಿನೆರಳು ಬೀರಿದೆ.

ಎಲ್ಲೆಡೆ ಶುರುವಾಗಿದೆ ಇಂಧನ ಅಭಾವ

ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್‌ಗಳ ಪೂರೈಕೆ ಬಹುತೇಕ ಸ್ಥಗಿತಗೊಂಡಿದ್ದು, ಕಳೆದ ಮೂರ್‍ನಾಲ್ಕು ದಿನಗಳಿಂದ ಹೊಟೇಲ್, ದೇವಸ್ಥಾನ, ಖಿಜಿ ಸಹಿತ ಆಹಾರಗಳನ್ನು ತಯಾರಿಸುವ ಸಂಸ್ಥೆಗಳಲ್ಲಿ ಇಂಧನ ಕೊರತೆ ಉಂಟಾಗಿದೆ. ಈ ಮಧ್ಯೆ ಕಟ್ಟಿಗೆಗೆ ಭಾರೀ ಬೇಡಿಕೆ ಕಂಡುಬಂದಿದೆ. ಈ ಎಲ್ಲ ವಿದ್ಯಮಾನಗಳು ಕರಾವಳಿಯ ಆರ್ಥಿಕತೆಯ ಮೇಲೂ ಪರಿಣಾಮ ಬೀರುತ್ತಿದೆ. ಒಂದೆಡೆ ಹೊಟೇಲ್ ಮಾಲಕರಿಗೆ ನಷ್ಟ ಉಂಟಾಗುತ್ತಿದ್ದರೆ, ಇನ್ನೊಂದೆಡೆ ಹೊಟೇಲ್ ನಂಬಿಕೊಂಡಿರುವ ಅದೆಷ್ಟೋ ಕಾರ್ಮಿಕರು ಈಗ ಕೆಲಸ ಇಲ್ಲದೆ ನಿತ್ಯವೂ ಆತಂಕ ಎದುರಿಸುತ್ತಿದ್ದಾರೆ.





ಮಂಗಳವಾರದಿಂದ 'ಸಮಸ್ಯೆ' ಶುರು

ನಗರದ ಕೆಲ ಹೊಟೇಲ್‌ಗಳಲ್ಲಿ ಮಂಗಳವಾರದಿಂದ ವಾಣಿಜ್ಯ ಬಳಕೆ ಗ್ಯಾಸ್ ಸಿಲಿಂಡರ್ ಪೂರೈಕೆ ಸ್ಥಗಿತಗೊಂಡು ಸಮಸ್ಯೆ ಆರಂಭಗೊಂಡಿತು. ದಾಸ್ತಾನು ಇಂಧನ ಖಾಲಿಯಾದಂತೆ ಬುಧವಾರ ಕೆಲ ಹೊಟೇಲ್ ಮಧ್ಯಾಹ್ನ ಬಳಿಕ ಶಟರ್ ಎಳೆದವು. ⋙ಪುಟ 6

ಕಟ್ಟಿಗೆ ಒಲೆಗೆ ಶಿಫ್ಟ್ ಆಗುವುದು ಸದ್ಯದ ಪರಿಸ್ಥಿತಿಯಲ್ಲಿ ಕಷ್ಟಕಷ್ಟ

ಬಹುತೇಕ ಹೊಟೇಲ್‌ಗಳು ಗ್ಯಾಸ್ ಅಡುಗೆಗೆ ಒಗ್ಗಿಕೊಂಡಿವೆ. ತಕ್ಷಣಕ್ಕೆ ಮತ್ತೆ ಸೌದೆ ಒಲೆಗೆ ಬದಲಾಗಲು ಕಷ್ಟಸಾಧ್ಯವಾಗುತ್ತಿದೆ. ಇದರಿಂದಾಗಿ ಅನಿವಾರ್ಯವಾಗಿ ಹೊಟೇಲ್ ಬಂದ್ ಮಾಡಬೇಕಾಗಿದೆ ಎಂದು ಹೊಟೇಲ್ ಸಿಬ್ಬಂದಿಯೊಬ್ಬರು ತಿಳಿಸಿದರು.

ಸರ್ಕಾರದ ಮಾನದಂಡ ಬರುವವರೆಗೆ ಸ್ಥಗಿತ: ಜಿಲ್ಲಾಧಿಕಾರಿ

ಸಿಲಿಂಡರ್ ಪೂರೈಕೆಗೆ ಸಂಬಂಧಿಸಿ ಕೇಂದ್ರ ಹಾಗೂ ರಾಜ್ಯ ಸರಕಾರದಿಂದ ಮಾನದಂಡ ಹೊರಡಿಸುವವರೆಗೂ ಪೂರೈಕೆ ಸ್ಥಗಿತಗೊಂಡಿದೆ. ಈ ಸಮಸ್ಯೆ ಬಹಳ ದಿನ ಮುಂದುವರಿಯದಂತೆ ಸರಕಾರದ ಮಟ್ಟದಲ್ಲಿ ಕ್ರಮ ಆಗುತ್ತಿದೆ. ಜಿಲ್ಲೆಯಲ್ಲಿ ಗೃಹ ಬಳಕೆ ಸಿಲಿಂಡರ್ ಸರಬರಾಜಿನಲ್ಲಿ ಸದ್ಯ ಯಾವುದೇ ಸಮಸ್ಯೆ ಇಲ್ಲ ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಹೇಳಿದ್ದಾರೆ.

ಗೃಹ ಬಳಕೆ ಅನಿಲ ಗ್ರಾಹಕರು ಆತಂಕಪಡುವ ಯಾವುದೇ ಅಗತ್ಯವಿಲ್ಲ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೃಹ ಬಳಕೆ ಅನಿಲ ಸಿಲಿಂಡರ್‌ಗಳ ದಾಸ್ತಾನು ಲಭ್ಯವಿದ್ದು, ಜಿಲ್ಲೆಯ ಎಲ್ಲಾ ಗೃಹ ಬಳಕೆ ಅನಿಲ ಗ್ರಾಹಕರು ಆತಂಕಪಡುವ ಅಗತ್ಯವಿಲ್ಲ ಎಂದು ಜಿಲ್ಲಾಡಳಿತ ಹೇಳಿದೆ. ಸಾಮಾಜಿಕ ಜಾಲತಾಣದಲ್ಲಿ ಭಿತ್ತರವಾಗುವ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು. ಗೃಹ ಬಳಕೆ ಅಡುಗೆ ಅನಿಲಕ್ಕೆ ಸಂಬಂಧಿಸಿದಂತೆ ಯಾವುದೇ ಕುಂದು ಕೊರತೆ ಇದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಗೃಹ ಬಳಕೆ ಅನಿಲ ಗ್ರಾಹಕರು ಸಹಾಯವಾಣಿ ಸಂಖ್ಯೆ 0824-2423622 ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಕಚೇರಿ ತಿಳಿಸಿದೆ.

ಸಚಿವರ ಸೂಚನೆಗೆ ತುಂಬುತ್ತಿದೆ ತಿಂಗಳು | ಯಥಾಸ್ಥಿತಿಯಲ್ಲಿದೆ ಕಾಮಗಾರಿ

ಬಾಯಿ ಮಾತಿಗೆ ಸೀಮಿತವೇ 'ಪಂಜೆ ಭವನ'?

ಬಂಟ್ವಾಳ: ಕನ್ನಡಸಾಹಿತ್ಯ ಲೋಕದ ದಿಗ್ಗಜ ಪಂಜೆ ಮಂಗೇಶರಾಯರು ಜನಿಸಿರುವ ಬಂಟ್ವಾಳ ರಥ ಬೀದಿ ತಾಲೂಕು ಸರಕಾರಿ ಆಸ್ಪತ್ರೆಯ ಸಮೀಪವಿರುವ ಅವರ ಮನೆ ಪಕ್ಕವೇ ನೆನೆಗುದಿಗೆ ಬಿದ್ದಿರುವ 'ಪಂಜೆ ಮಂಗೇಶರಾಯ ಭವನ'ದ ಕಾಮಗಾರಿಗೆ ಯಥಾಸ್ಥಿತಿಯಲ್ಲಿದೆ!

ಕಾಮಗಾರಿಗೆ ವೇಗ ನೀಡಿ ತ್ವರಿತವಾಗಿ ಪೂರ್ಣಗೊಳಿಸಲು ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರೇನೋ ಅಧಿಕಾರಿಗಳಿಗೆ ತಾಕೀತು ಮಾಡಿ ತಿಂಗಳು ಸಮೀಪಿಸುತ್ತಿದೆ. ಆದರೆ ಇದು ಕೇವಲ ಸಚಿವರ ಬಾಯಿಮಾತಿಗೆ ಸೀಮಿತವೇ? ಎಂಬ ಅನುಮಾನ ಸಾಹಿತ್ಯ, ಸಾಂಸ್ಕೃತಿಕ ರಂಗಕರ್ಮಿಗಳಲ್ಲಿ ಹುಟ್ಟುಹಾಕಿದೆ.



ಸಚಿವರೇ ಸೂಚನೆ ನೀಡಿದ್ದರು

ಕಳೆದ ತಿಂಗಳು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಿದ್ದ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರು, ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳ ಜೊತೆಯಲ್ಲಿ ನಡೆಸಿದ ಸಭೆಯಲ್ಲಿ ಈ ಬಗ್ಗೆ ಸ್ಪಷ್ಟವಾದ ಸೂಚನೆ ಕೂಡಾ ನೀಡಿದ್ದರು. ⋙ಪುಟ 6

ಎಚ್ಚರಿಸಿತ್ತು ಹೊಸದಿಗಂತ

ಪಂಜೆ ಭವನ ನಿರ್ಮಾಣ ಕಾಮಗಾರಿ ನೆನೆಗುದಿಗೆ ಬಿದ್ದಿರುವ ಕುರಿತು 2025 ರ ಸೆ.10ರಂದು ಹೊಸದಿಗಂತ ವಿಶೇಷ ವರದಿ ಪ್ರಕಟಿಸಿ ಎಚ್ಚರಿಸಿತ್ತು. ಬಳಿಕ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗೆ ಸಚಿವ ದಿನೇಶ್ ಗುಂಡೂರಾವ್ ಪತ್ರ ಬರೆದು ಪರಿಶೀಲಿಸಿ, ಸಂಬಂಧಪಟ್ಟವರ ಸಭೆ ನಡೆಸಿ, ಭವನ ಪೂರ್ಣಗೊಳಿಸಲು ಅನುದಾನ ಕೊರತೆ ಇದ್ದಲ್ಲಿ ಅಗತ್ಯ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು.

ಅನ್ನದಾಸೋಹಕ್ಕೆ ಕಟ್ಟಿಗೆಯಲ್ಲಿ ಅಡುಗೆ



ವಾಣಿಜ್ಯ ಅಡುಗೆ ಅನಿಲ ಪೂರೈಕೆ ಸ್ಥಗಿತವಾಗಿರುವ ಹಿನ್ನೆಲೆಯಲ್ಲಿ ಮಂಗಳೂರಿನ ಕದ್ರಿ ಶ್ರೀ ಮಂಜುನಾಥ ದೇವಸ್ಥಾನದಲ್ಲಿ ಭಕ್ತಾದಿಗಳ ಅನ್ನದಾಸೋಹಕ್ಕಾಗಿ ಕಟ್ಟಿಗೆಯ ಒಲೆಯನ್ನು ಆರಂಭಿಸಲಾಗಿದೆ.

ಮಂಗಳೂರಿನಿಂದ ಅರಬ್ ರಾಷ್ಟ್ರ ವಿಮಾನ ಸಂಪರ್ಕ ಸ್ಥಗಿತ | ಹಬ್ಬ, ಸಮಾರಂಭಗಳಿಗೆ ಊರಿಗೆ ಬರಲೂ ಸಂಕಷ್ಟ

ಕರಾವಳಿಯ ಪ್ರವಾಸೋದ್ಯಮಕ್ಕೂ ಕೊಳ್ಳಿಯಿಡುತ್ತಿದೆ ಕೊಲ್ಲಿ ಯುದ್ಧ

ಮಂಗಳೂರು: ಇಲ್ಲಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಗಲ್ಫ್ ರಾಷ್ಟ್ರಗಳ ನಡುವಿನ ವಿಮಾನ ಓಡಾಟ ಸೇವೆಗಳಲ್ಲಿ ಉಂಟಾದ ಅಡಚಣೆ, ವ್ಯತ್ಯಯ ಕರಾವಳಿ ಪ್ರವಾಸೋದ್ಯಮ, ವಿದೇಶಿ ಪ್ರಯಾಣಿಕರ ಸಂಚಾರದ ಮೇಲೆ ಪರಿಣಾಮ ಬೀರಿವೆ.

ಪ್ರವಾಸಿಗರ ಸಂಖ್ಯೆಯಲ್ಲಿ ಕುಸಿತ

ಕೆಲವು ಗಲ್ಫ್ ರಾಷ್ಟ್ರಗಳಿಗೆ ಇಲ್ಲಿಂದ ನೇರ ವಿಮಾನ ಹಾರಾಟ ಸೇವೆಯನ್ನು ತಾತ್ಕಾಲಿಕ ಸ್ಥಗಿತಗೊಳಿಸಲಾಗಿದೆ. ಇದರ ಪರಿಣಾಮ ಮಾರ್ಚ್ ತಿಂಗಳಿನಿಂದ ಕರಾವಳಿಗೆ ಆಗಮಿಸುವ ಪ್ರಯಾಣಿಕರು, ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲಿ ಗಮನಾರ್ಹ ಕುಸಿತವಾಗಿದೆ ಎಂದು ಪ್ರವಾಸೋದ್ಯಮ ಮೂಲಗಳು ತಿಳಿಸಿವೆ.

ಈ ಮಾರ್ಗಗಳ ಮೂಲಕ ಪ್ರತಿದಿನ ಸಾವಿರಾರು ಮಂದಿ ಉದ್ಯೋಗ, ವ್ಯಾಪಾರ, ಪ್ರವಾಸ ಉದ್ದೇಶದಿಂದ ಸಂಚರಿಸುತ್ತಾರೆ. ಕೆಲವು ವಿಮಾನಗಳ ಸೇವೆ ಕಡಿತಗೊಂಡಿರುವುದು ಸಂಕಷ್ಟವನ್ನು ಸೃಷ್ಟಿಸಿದೆ.



ಸಂಗಮ ವಿಶೇಷ

- ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಗಲ್ಫ್ ರಾಷ್ಟ್ರಗಳಿಗೆ ವಿಮಾನ ಸೇವೆ ವ್ಯತ್ಯಯ
- ಉದ್ಯೋಗ, ವ್ಯಾಪಾರ, ಪ್ರವಾಸ ಉದ್ದೇಶದಿಂದ ನಿತ್ಯ ಪ್ರಯಾಣ ನಡೆಸುತ್ತಿದ್ದ ಸಾವಿರಾರು ಮಂದಿ
- ಹಬ್ಬ, ಸಮಾರಂಭಗಳಿಗೆ ಕೂಡಾ ಊರಿಗೆ ಬರಲಾರದೆ ಪರಿತಪಿಸುತ್ತಿರುವ ಕರಾವಳಿ ಭಾಗದ ಜನರು

ರಂಜಾನ್ ಹಬ್ಬ ಸಂಭ್ರಮಿಸಲೂ ಅಡ್ಡಿ

ಇನ್ನೊಂದೆಡೆ ಗಲ್ಫ್ ರಾಷ್ಟ್ರಗಳಲ್ಲಿ ಉದ್ಯೋಗದಲ್ಲಿರುವ ಕರಾವಳಿಯ ಸಾವಿರಾರು ಮಂದಿ ಮುಸ್ಲಿಂ ಸಮುದಾಯದವರು ಪ್ರತಿವರ್ಷ ರಂಜಾನ್ ತಿಂಗಳಲ್ಲಿ ತಮ್ಮ ಊರಿಗೆ ಮರಳುತ್ತಾರೆ. ಇವರೂ ಕೂಡಾ ಊರಿಗೆ ಮರಳಲಾರದೆ ಈಗ ಸಂಕಷ್ಟದ ಸ್ಥಿತಿಯಲ್ಲಿದ್ದಾರೆ.

ಪ್ರಮುಖ ಸಂಪರ್ಕ ಕೇಂದ್ರ

ಮಂಗಳೂರು ವಿಮಾನ ನಿಲ್ದಾಣವು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ಅಂತಾರಾಷ್ಟ್ರೀಯ ಸಂಪರ್ಕ ಕೇಂದ್ರವಾಗಿದ್ದು, ವಿಶೇಷವಾಗಿ ಯುನೈಟೆಡ್ ಅರಬ್ ಎಮಿರೇಟ್ಸ್, ಕತಾರ್, ಒಮಾನ್ ಹಾಗೂ ಸೌದಿ ಅರೇಬಿಯಾ ಸೇರಿದಂತೆ ಹಲವು ಗಲ್ಫ್ ರಾಷ್ಟ್ರಗಳೊಂದಿಗೆ ನಿಯಮಿತ ವಿಮಾನ ಸಂಪರ್ಕ ಹೊಂದಿದೆ.

ಬುಕ್ ಮಾಡಿದ್ದ ವಿದೇಶೀ ಪ್ರವಾಸ ಟಿಕೆಟ್ ರದ್ದು ಮಾಡಿದ್ರು

ಪ್ರತಿ ವರ್ಷ ಮಾರ್ಚ್‌ನಿಂದ ಮೇ ತಿಂಗಳವರೆಗೆ ಶಾಲೆ, ಕಾಲೇಜುಗಳಿಗೆ ಬೇಸಿಗೆ ರಜೆ ಇರುವುದರಿಂದ ಇಲ್ಲಿನ ಕರಾವಳಿ ಭಾಗದಿಂದ ವಿದೇಶ ಪ್ರವಾಸಕ್ಕೆ ತೆರಳುವವರ ಸಂಖ್ಯೆ ಹೆಚ್ಚಾಗುತ್ತದೆ. ವಿಶೇಷವಾಗಿ ಗಲ್ಫ್, ಯುರೋಪಿನ ಪ್ರವಾಸಿ ತಾಣಗಳಿಗೆ ಕುಟುಂಬ ಸಮೇತ ಪ್ರಯಾಣಿಸುವವರ ಪ್ರಮಾಣ ಈ ಅವಧಿಯಲ್ಲಿ ಹೆಚ್ಚು ಇರುತ್ತದೆ. ಆದರೆ ಈ ವರ್ಷ ವಿಮಾನ ಸೇವೆಗಳಲ್ಲಿನ ಅಡಚಣೆ ಮತ್ತು ಅನಿಶ್ಚಿತತೆಯ ಕಾರಣ ಅನೇಕರು ಈಗಾಗಲೇ ಬುಕ್ ಮಾಡಿದ್ದ ಪ್ರವಾಸ ಟಿಕೆಟ್‌ಗಳನ್ನು ರದ್ದುಪಡಿಸಿರುವುದಾಗಿ ಪ್ರವಾಸ ಸಂಸ್ಥೆಗಳ ಪ್ರತಿನಿಧಿಗಳು ತಿಳಿಸಿದ್ದಾರೆ.

ಸುತ್ತಮುತ್ತ

ಕರಾವಳಿ ಜಿಲ್ಲೆಗಳಲ್ಲಿ ಮತ್ತೆ ಮುಂದುವರಿದ ತಾಪಕೋಪ: ಸದ್ಯಕ್ಕಿಲ್ಲ 'ಬೇಸಿಗೆ ಮಳೆ'?

ಮಂಗಳೂರು: ಕರಾವಳಿ ಭಾಗದಲ್ಲಿ ತಾಪಮಾನ ಏರಿಕೆ ಮುಂದುವರಿದಿದ್ದು, ಬಿಸಿ ಹಾಗೂ ಆರ್ದ್ರ ವಾತಾವರಣ ನಾಗರಿಕರನ್ನು ಕಂಗೆಡಿಸುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶುಕ್ರವಾರ 37 ಡಿಗ್ರಿ ಸೆಲ್ಸಿಯೆಸ್ ಗರಿಷ್ಠ ತಾಪಮಾನ ದಾಖಲಾಗಿದ್ದು, ಕಳೆದ ಕೆಲವು ದಿನಗಳಿಗೆ ಹೋಲಿಸಿದರೆ ಇದು ಅತ್ಯಧಿಕ. ಇದೇ ಮಾದರಿಯ ಹವಾಮಾನ ಇನ್ನಷ್ಟು ದಿನ ಇರಲಿದ್ದು, ಬೇಸಗೆ ಮಳೆಯ ಸಾಧ್ಯತೆ ಕಂಡುಬರುತ್ತಿಲ್ಲ ಎಂದು ಹವಾಮಾನ ಇಲಾಖೆ ಹೇಳಿದೆ.

ಇಚ್ಲಂಪಾಡಿ, ಛತ್ರಂಪಳ್ಳ ಭಾಗಗಳಲ್ಲಿ ಕಾಡುಕೋಣ: ನಾಗರಿಕರಿಗೆ ಕಾಡುತ್ತಿದೆ ಭೀತಿ

ಕುಂಬಳೆ: ಇಚ್ಲಂಪಾಡಿ, ಛತ್ರಂಪಳ್ಳ ಭಾಗಗಳಲ್ಲಿ ಗುರುವಾರ ಸಂಜೆ ಕಾಡುಕೋಣ ಕಾಣಿಸಿಕೊಂಡಿದೆ. ವಿಷಯ ತಿಳಿದು ಅರಣ್ಯಾಧಿಕಾರಿಗಳು ಆಗಮಿಸಿ ಹುಡುಕಾಡಿದರೂ ಕಾಡುಕೋಣವನ್ನು ಪತ್ತೆಹಚ್ಚಲಾಗಿಲ್ಲ. ಕಳೆದ ಸೋಮವಾರ ರಾತ್ರಿ ನೀರ್ಚಾಲು ಬಳಿಯ ಕನ್ಯಪ್ಪಾಡಿಯಲ್ಲೂ ಕಾಡುಕೋಣ ಕಂಡುಬಂದಿತ್ತು. ಅಲ್ಲಿ ಬೀದಿನಾಯಿಗಳು ದಾಳಿಗೆ ಮುಂದಾಗುತ್ತಿದ್ದಂತೆ ಕೋಣ ಓಡಿ ಪರಾರಿಯಾಗಿತ್ತು.

ಬಸವಣ್ಣ-ಅಕ್ಕ ಮಹಾದೇವಿಗೆ ಅವಹೇಳನ: ಕಿಡಿಗೇಡಿಯ ಬಂಧನಕ್ಕೆ ಮಹೇಶ್ ಒತ್ತಾಯ

ಸೋಮವಾರಪೇಟೆ: ಬಸವಣ್ಣ ಹಾಗೂ ಅಕ್ಕಮಹಾದೇವಿಯವರ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿರುವ ಕಿಡಿಗೇಡಿಯನ್ನು ಸರ್ಕಾರ ಕೂಡಲೇ ಬಂಧಿಸಿ ಕ್ರಮ ಕೈಗೊಳ್ಳಬೇಕೆಂದು ವೀರಶೈವ ಲಿಂಗಾಯತ ಸಂಘಟನಾವೇದಿಕೆಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಎಸ್. ಮಹೇಶ್ ಆಗ್ರಹಿಸಿದ್ದಾರೆ.



ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರು ಹಾಗೂ ನಾಡಿನ ಮೊದಲ ಮಹಿಳಾ ಕವಯತ್ರಿ ಅಕ್ಕಮಹಾದೇವಿಯವರು ಕನ್ನಡ ನಾಡಿನ ಹೆಮ್ಮೆ. ಇವರುಗಳು 12ನೇ ಶತಮಾನದಲ್ಲಿಯೇ ಸಮಾಜದಲ್ಲಿ ಸುಧಾರಣೆ ತರಲು ಪ್ರಯತ್ನಿಸುವುದರೊಂದಿಗೆ ಈ ರಾಷ್ಟ್ರಕ್ಕೆ ಪ್ರಜಾಪ್ರಭುತ್ವದ ಅಡಿಪಾಯ ಹಾಕಿಕೊಟ್ಟ ಮಹನೀಯರು. ಅಂತಹವರ ಬಗ್ಗೆ ರಮಾಕಾಂತ್ ಎಂಬ ಕಿಡಿಗೇಡಿಯೊಬ್ಬ ಅಸಹ್ಯ ಹಾಗೂ ಆಕ್ಷೇಪಾರ್ಹ ಪದಗಳನ್ನು ಬಳಸಿ ಪೋಸ್ಟ್ ಹಾಕಿರುವುದು ನಾಗರಿಕ ಸಮಾಜ ಸಹಿಸಲು ಸಾಧ್ಯವಿಲ್ಲ ಎಂದು ಮಹೇಶ್ ಕಿಡಿಕಾರಿದ್ದಾರೆ. ಆದ್ದರಿಂದ ಸರ್ಕಾರ ಈ ಕಿಡಿಗೇಡಿಯನ್ನು ತಕ್ಷಣ ಬಂಧಿಸಿ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಎಸೆಸೆಲ್ಸಿ ಪರೀಕ್ಷೆ: ದ.ಕ. 51 ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲು ನಿಷೇಧಾಜ್ಞೆ

ಮಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆ-1 ನಡೆಯುವ ಪರೀಕ್ಷಾ ಕೇಂದ್ರಗಳಲ್ಲಿ ಕಾನೂನು ಬಾಹಿರ ಚಟುವಟಿಕೆ, ಅಹಿತಕರ ಘಟನೆಗಳು ನಡೆಯದಂತೆ ಜಿಲ್ಲಾಡಳಿತ ಮುನ್ನೆಚ್ಚರಿಕೆ ವಹಿಸಿದೆ. ಪರೀಕ್ಷೆಗಳನ್ನು ಶಾಂತಿಯುತವಾಗಿ, ಸುಸೂತ್ರವಾಗಿ ಹಾಗೂ ದೋಷರಹಿತವಾಗಿ ನಡೆಸುವ ನಿಟ್ಟಿನಲ್ಲಿ ಮಾ.18ರಿಂದ ಏ.2 ರವರೆಗೆ ಪರೀಕ್ಷೆ ನಡೆಯುವ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವ್ಯಾಪ್ತಿಯ 51 ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ನಿಷೇಧಾಜ್ಞೆ ಜಾರಿಗೊಳಿಸಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಅವರು ಆದೇಶಿಸಿದ್ದಾರೆ.

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಶನಿವಾರ 14, ಮಾರ್ಚ್ 2026

ಸುತ್ತಮುತ್ತ

ಗ್ಯಾಸ್ ಸಿಲಿಂಡರ್ ಕೊರತೆ: ಅಧಿವೇಶನದಲ್ಲಿ ಐವನ್ ಪ್ರಸ್ತಾಪ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಕೊರತೆ ಉಂಟಾಗಿರುವ ಬಗ್ಗೆ ವಿಧಾನ ಪರಿಷತ್ ಶಾಸಕ ಐವನ್ ಡಿಸೋಜ ಅವರು ಶುಕ್ರವಾರ ವಿಧಾನ ಪರಿಷತ್‌ನಲ್ಲಿ ಸರಕಾರದ ಗಮನ ಸೆಳೆದರು. ಪರಿಷತ್ತಿನ ಶೂನ್ಯ ವೇಳೆಯಲ್ಲಿ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳನ್ನು ಒಳಗೊಂಡಂತೆ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಅಭಾವದಿಂದ ಉಂಟಾಗಿರುವ ಬಗ್ಗೆ ಸಭಾಪತಿಯವರ ಮೂಲಕ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರ ಗಮನ ಸೆಳೆದರು. ಸಿಲಿಂಡರ್‌ನ ತೀರಾ ಅವಶ್ಯಕತೆ ಇರುವ ಹಾಸ್ಟೆಲ್‌ಗಳು ಆಸ್ಪತ್ರೆಗಳಿಗೆ ಆಹಾರ ತಯಾರಿಸಲು ಕಮರ್ಷಿಯಲ್ ಸಿಲಿಂಡರ್‌ಗಳನ್ನು ವ್ಯವಸ್ಥಿತವಾಗಿ ನಾವು ನೀಡುತ್ತೇವೆ ಎಂದು ಸಚಿವರು ಭರವಸೆ ನೀಡಿದರು ಹಾಗೂ ಹೋಟೆಲ್‌ಗಳು ಸ್ವಲ್ಪದಿನ ತಾಳ್ಮೆಯಿಂದ ಇರಬೇಕು ಮತ್ತು ಸಿಲಿಂಡರ್ ಬದಲು ಇಲೆಕ್ಟ್ರಿಕ್ ಸ್ಟವ್‌ಗಳನ್ನು ಬಳಸಬೇಕೆಂದು ಸಚಿವರು ಹೇಳಿದರು. ಸಮಸ್ಯೆ ಒಂದು ವಾರದಲ್ಲಿ ಪರಿಹಾರವಾಗುವ ಸಾಧ್ಯತೆ ಇದ್ದು ಇಂಧನ ಹೊತ್ತ 10-12 ಹಡಗುಗಳು ದೇಶಕ್ಕೆ ಆಗಮಿಸುವ ಸೂಚನೆ ಇದೆ ಎಂದು ಎಂದು ಸಚಿವರು ಉತ್ತರಿಸಿದರು.

ಇಂದು ರಾಮಪರ್ವ

ಕೋಟ: ಶ್ರೀರಾಮ ಗೆಳೆಯರ ಬಳಗ ಕೋಡಿ ಕನ್ಯಾಣ ಇವರ ಆಶ್ರಯದಲ್ಲಿ ಮಾ.14ರಂದು ಕೋಡಿ ಕನ್ಯಾಣದ ಶ್ರೀ ಮಾರಿಕಾಂಬಾ ದೇಗುಲದ ವಠಾರದಲ್ಲಿ ರಾಮಪರ್ವ -2026 ಕಾರ್ಯಕ್ರಮ ಜರಗಲಿದೆ. ಸಂಜೆ 6 ಗಂಟೆಗೆ ಸ್ಥಳೀಯ ಪುಟಾಣಿಗಳಿಂದ ಹಾಗೂ ಸ್ಥಳೀಯರಿಂದ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ 8 ಗಂಟೆಗೆ ಸಭಾ ಕಾರ್ಯಕ್ರಮದಲ್ಲಿ ನಿವೃತ್ತ ಯೋಧರಿಗೆ ಗೌರವ ಸನ್ಮಾನ, ರಾತ್ರಿ 9.30 ಗಂಟೆಗೆ ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ಕಲಾವಿದರು ಅಭಿನಯಿಸುವ ಮಾದೇವಿ ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನ ನೃತ್ಯ ಚರಿತೆ ಮತ್ತು ನೃತ್ಯ ವೈವಿಧ್ಯ ಜರಗಲಿಕ್ಕಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.14, 17, 20: ಬ್ಯುಸಿನೆಸ್ ಡೇ

ಕುಂದಾಪುರ:ಇಲ್ಲಿನ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ವತಿಯಿಂದ ವಿ-ಗ್ರೋ ಬ್ಯುಸಿನೆಸ್ ಡೇ ಕಾರ್ಯಕ್ರಮ ಮಾ.14, 17 ಮತ್ತು 20ರಂದು ಮೂರು ಹಂತದಲ್ಲಿ ನಡೆಯಲಿದೆ. ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದ ಜೊತೆಗೆ, ಉದ್ಯಮಶೀಲತಾ ಕೌಶಲ್ಯಗಳನ್ನು ಬೆಳೆಸಿಕೊಂಡು ಜಾಗತಿಕ ಮಾರುಕಟ್ಟೆಯ ಪ್ರಾಯೋಗಿಕ ಜ್ಞಾನವನ್ನು ಪಡೆದರೆ ಭವಿಷ್ಯದಲ್ಲಿ ದೊಡ್ಡ ಉದ್ಯಮಿಗಳಾಗಬಹುದು ಎಂಬ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಮೊದಲನೇ ಹಂತ ವ್ಯವಹಾರ ಯೋಜನೆ ಪ್ರಸ್ತುತಿ, ಎರಡನೇ ಹಂತ ವ್ಯವಹಾರ ಕೌಶಲ್ಯ ಪ್ರದರ್ಶನ, ಮೂರನೇ ಹಂತದಲ್ಲಿ ವ್ಯವಹಾರ ಪಟ್ಟಿ ವಿಶ್ಲೇಷಣೆ ನಡೆಯಲಿದೆ ಎಂದು ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ.ಉಮೇಶ ಶೆಟ್ಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಕಟ್ಟಿಂಗೇರಿ ಶ್ರೀಬ್ರಹ್ಮಲಿಂಗೇಶ್ವರ ಉತ್ಸವ

ಶಿರ್ವ:ಇತಿಹಾಸ ಪ್ರಸಿದ್ಧ ಶ್ರೀಕ್ಷೇತ್ರ ಕಟ್ಟಿಂಗೇರಿ ಶ್ರೀ ಬ್ರಹ್ಮಲಿಂಗೇಶ್ವರ ದೇವಳದ ವಾರ್ಷಿಕ ಮಹೋತ್ಸವ ಮಾ.14 ಶನಿವಾರ ದಿಂದ ಮಾ.18 ಬುಧವಾರ ಪರ್ಯಂತ ಜರುಗಲಿದೆ. ಮಾ.14 ಶನಿವಾರ ಬೆಳಿಗ್ಗೆ ವಿವಿಧ ಧಾರ್ಮಿಕ ಅನುಷ್ಠಾನಗಳು,ನವಕ ಪ್ರಧಾನಹೋಮ,ಕಲಶಾಭಿಷೇಕ, ಧ್ವಜಾರೋಹಣ, ಮಹಾಪೂಜೆ, ರಾತ್ರಿ ಬಲಿ, ಮಹಾರಂಗಪೂಜೆ, ಭೂತ ಬಲಿ. ರಾತ್ರಿ 8.00 ರಿಂದ ಹಿರಿಯಡ್ಕ ಮೇಳದವರಿಂದ ತುಳು ಯಕ್ಷಗಾನ ಬಯಲಾಟ 'ಅಪ್ಪೆ ಮಾಯಂದಾಲ್', ಮಾ.15 ರವಿವಾರ ಬೆಳಿಗ್ಗೆ ವಿವಿಧ ಧಾರ್ಮಿಕ ಅನುಷ್ಠಾನಗಳು, ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ, ಸಂಜೆ ಬಲಿ, ಮಹೋತ್ಸವಾದಿಗಳು, ರಾತ್ರಿ 8ರಿಂದ ಶಾರದಾ ಆರ್ಟ್ಸ್ ಕಲಾವಿದೆರ್ ಮಂಜೇಶ್ವರ ಇವರಿಂದ ತುಳು ನಾಟಕ -ಒಂತೆ ಲಡ್ಪಟಾಂಡ್ ...ಆಂಡಲ...! ಮಾ.16ರಂದಯ ಬೆಳಿಗ್ಗೆ ಕಲಶಾಭಿಷೇಕ, ಆಶ್ಲೇಷಾಬಲಿ, ಮಹಾಪೂಜೆ, ಮಹಾ ಅನ್ನಸಂತರ್ಪಣೆ, ಸಂಜೆ 6ರಿಂದ ವರಸೆ ಉತ್ಸವ, ಡಕ್ಕೆ ಬಲಿ- ನಾಗಪಾತ್ರಿ ರಾಮಚಂದ್ರ ಕುಂಜಿತ್ತಾಯ ಶ್ರೀಕ್ಷೇತ್ರ ಕಲ್ಲಂಗಳ, ಬೈರಂಪಳ್ಳಿ ,ಹಾಗೂ ವೈದ್ಯರ ಸಹಕಾರದೊಂದಿಗೆ ನಡೆಯಲಿದೆ. ನಂತರ ಬಲಿಮಹೋತ್ಸವಾದಿಗಳು, ತಂಬಿಲಾದಿಗಳು,ಕವಾಟ ಬಂಧನ, ಮಾ.17ರಂದು ಬೆಳಿಗ್ಗೆ ಕವಾಟೋದ್ಘಾಟನೆ, ಪಂಚಾಮೃತಾಭಿಷೇಕ ಪೂಜೆ, ಮಹಾಪೂಜೆ, ರಾತ್ರಿ ಬಲಿ,ಓಕುಳಿ,ಕಟ್ಟೆ ಪೂಜೆ, ಅವಭೃತ ಸ್ನಾನ,ಧ್ವಜಾವರೋಹಣ, ರಾತ್ರಿ ಪೂಜೆ, ಮಾ.18ರಂದು ಬೆಳಿಗ್ಗೆ ಸಂಪ್ರೋಕ್ಷಣೆ ನಡೆಯಲಿದೆ.

2025ರ ಮೊದಲು ನೋಂದಣಿ ಆಗಿರುವ ಇ-ಆಟೋಗೆ ಅವಕಾಶ | ದ.ಕ. ಜಿಲ್ಲಾಧಿಕಾರಿ ದರ್ಶನ್ ಮಾಹಿತಿ

ಮಾ.31ರೊಳಗೆ ಎಲೆಕ್ಟ್ರಿಕ್ ಆಟೋ ಪರವಾನಗಿಗೆ ಅರ್ಜಿ ಸಲ್ಲಿಸಿ



ಮಂಗಳೂರು: 2025ರ ಮೊದಲು ನೋಂದಣಿ ಆಗಿರುವ ಎಲ್ಲಾ ಇಲೆಕ್ಟ್ರಿಕ್ ಆಟೋ ರಿಕ್ಷಾಗಳು ಪರವಾನಿಗೆಗೆ ಅರ್ಜಿ ಸಲ್ಲಿಸಬೇಕು. ಪರವಾನಿಗೆ ಪಡೆಯಲು ಇಚ್ಚಿಸುವ ಎಲ್ಲಾ ಇ- ಆಟೋ ರಿಕ್ಷಾ ಚಾಲಕ, ಮಾಲಕರು ಮಾ. 31ರೊಳಗೆ ಪ್ರಾದೇಶಿಕ ಸಾರಿಗೆ ಕಚೇರಿಗೆ ಅರ್ಜಿ ಸಲ್ಲಿಸಬೇಕು ಎಂದು ದ.ಕ. ಜಿಲ್ಲಾಧಿಕಾರಿ ಹಾಗೂ ಸಾರಿಗೆ ಪ್ರಾಧಿಕಾರದ ಅಧ್ಯಕ್ಷ ದರ್ಶನ್ ಎಚ್.ವಿ. ತಿಳಿಸಿದರು.

ಪಡೀಲ್‌ನ ಪ್ರಜಾಸೌಧದಲ್ಲಿ ಶುಕ್ರವಾರ ಆಟೋ ರಿಕ್ಷಾ ಸಂಘದ ಬೇಡಿಕೆಗಳು, ಇಆಟೋ ರಿಕ್ಷಾಗಳಿಗೆ ಪರವಾನಿಗೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆರ್‌ಟಿಒ ಅಂಕಿ ಅಂಶಗಳ ಪ್ರಕಾರ ಇ ಆಟೋ ರಿಕ್ಷಾಗಳಿಂದ ಈವರೆಗೆ ಕೇವಲ 250 ಅರ್ಜಿಗಳು ಮಾತ್ರವೇ ಬಂದಿವೆ. ಸುಮಾರು 3000ದಷ್ಟು ಇ ಆಟೋಗಳು ಸಂಚರಿಸುತ್ತಿದ್ದು, ರಾಜ್ಯ ಸರಕಾರ ಈಗಾಗಲೇ ವಾಣಿಜ್ಯ ಬಳಕೆಯ ಇ ಆಟೋ ರಿಕ್ಷಾಗಳಿಗೆ ಪರವಾನಿಗೆಯನ್ನು ಕಡ್ಡಾಯಗೊಳಿಸಿದೆ ಎಂದರು.

ವಿವಿಧ ಆಟೋ ರಿಕ್ಷಾ ಚಾಲಕ ಮಾಲಕರ ಸಂಘದ ಪ್ರತಿನಿಧಿಗಳು ಮಾತನಾಡಿ, ಪರವಾನಿಗೆಗೆ ಅರ್ಜಿ ಸಲ್ಲಿಕೆ ವೇಳೆ ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕನಿಷ್ಠ 5 ವರ್ಷಗಳ ವಾಸ್ತವ್ಯ ತೋರಿಸುವ ನಿವಾಸ ಪ್ರಮಾಣಪತ್ರ ಸಲ್ಲಿಸಬೇಕೆಂಬ ನಿಯಮ ಜಿಲ್ಲಾಡಳಿತ ಕಡ್ಡಾಯಗೊಳಿಸಿದೆ. ಆದರೆ ಬಹುತೇಕ ಆಟೋ ಚಾಲಕರು ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಮನೆ ಮಾಲೀಕರು 5 ವರ್ಷಗಳ ಕಾಲ ನಿವಾಸ ಪ್ರಮಾಣಪತ್ರಗಳನ್ನು ನೀಡುವುದಿಲ್ಲ, ಇದರಿಂದ ತೊಂದರೆಯಾಗುತ್ತಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ಮನೆ ಮಾಲೀಕರಿಂದ ನಿವಾಸ ಪ್ರಮಾಣಪತ್ರವನ್ನು ಪಡೆಯಬೇಕಾಗಿಲ್ಲ, ಅರ್ಜಿದಾರರು ಮಂಗಳೂರು ನಗರ ವ್ಯಾಪ್ತಿಯಲ್ಲಿ ಕನಿಷ್ಠ ಐದು ವರ್ಷಗಳಿಂದ ವಾಸ್ತವ್ಯವನ್ನು ಸಾಬೀತುಪಡಿಸಲು ಎಲ್‌ಪಿಜಿ ಸಿಲಿಂಡರ್ ಖರೀದಿ ಅಥವಾ ವಿದ್ಯುತ್ ಬಿಲ್‌ಗಳಂತಹ ದಾಖಲೆಗಳನ್ನು ಸಹ ಸಲ್ಲಿಸಬಹುದು ಎಂದರು.

2018ರಿಂದ 2022ರ ಅವಧಿಯಲ್ಲಿ ನೋಂದಣಿ ಮಾಡಲಾದ 688 ಇ-ಆಟೋಗಳಿಗೆ ಈಗಾಗಲೇ ನೀಡಿರುವಂತೆ ವಲಯ 1ರಡಿಯೇ ಪರವಾನಿಗೆ ನೀಡಬೇಕು ಎಂದು ಚಾಲಕರು ಆಗ್ರಹಿಸಿದಾಗ, ಈ ಬಗ್ಗೆ ಬೇಡಿಕೆ ಸಲ್ಲಿಸಿದರೆ, ಪರಿಶೀಲನೆ ಮಾಡಿ ಕ್ರಮ ವಹಿಸುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕುಮಾರ್ ತಿಳಿಸಿದರು.

ಜಿಲ್ಲೆಯಲ್ಲಿ ಪರ್ಮಿಟ್ ದಂಧೆ ನಡೆಯುತ್ತಿದ್ದು, ಒಂದಕ್ಕಿಂತ ಹೆಚ್ಚಿನ ಪರ್ಮಿಟ್‌ಗಳನ್ನು ಹೊಂದಿರುವವರ ವಿರುದ್ಧ ಕ್ರಮ ವಹಿಸಬೇಕು ಎಂದು ಆಗ್ರಹಿಸಿದ ಆಟೋ ರಿಕ್ಷಾ ಚಾಲಕ-ಮಾಲಕರ ಸಂಘದ ಪ್ರತಿನಿಧಿಗಳು, ಮೋಟಾರು ವಾಹನ ಕಾಯ್ದೆ ಪ್ರಕಾರ ಯಾರ ಹೆಸರಿನಲ್ಲಿ ಆಟೋ ಇದೆಯೋ ಅವರೇ ಓಡಿಸಬೇಕು. ಆದರೆ, ನಗರದಲ್ಲಿ ಮಹಿಳೆಯರ ಹೆಸರಿನಲ್ಲಿ ಸಾಕಷ್ಟು ಇ ಆಟೋರಿಕ್ಷಾಗಳು ನೋಂದಣಿಯಾಗಿದ್ದರೂ ಅವುಗಳನ್ನು ಬೇರೆಯವರು ಓಡಿಸುತ್ತಿದ್ದಾರೆ ಎಂದು ದೂರಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಕೆಲ ಆಟೋ ಚಾಲಕರು, ಬ್ಯಾಂಕ್‌ನಿಂದ ಆಟೋ ರಿಕ್ಷಾಗಳಿಗೆ ಸಾಲ ಪಡೆಯುವ ಸಂದರ್ಭ ಸಿಬಿಲ್ ಸ್ಕೋರ್‌ನ ಕಾರಣದಿಂದ ಸಾಲ ದೊರಕದಾಗ ಮನೆಯ ಮಹಿಳೆಯರ ಹೆಸರಿನಲ್ಲಿ ಅಥವಾ ಕುಟುಂಬದ ಇತರ ಸದಸ್ಯರ ಹೆಸರಿನಲ್ಲಿ ಆಟೋ ಖರೀದಿಸಿ ದುಡಿಯಲಾಗುತ್ತಿದೆ ಎಂದರು.

ಪರವಾನಿಗೆಯ ಅರ್ಜಿ ಪರಿಶೀಲನೆಯ ಸಂದರ್ಭ ಇಂತಹ ಅರ್ಜಿದಾರರು ಸೂಕ್ತ ಕಾರಣ ಹಾಗೂ ದಾಖಲೆಗಳೊಂದಿಗೆ ಮಾಹಿತಿ ಒದಗಿಸಿದಲ್ಲಿ ಪರಿಗಣಿಸಲಾಗುವುದು ಎಂದು ಎಸ್ಪಿ ಡಾ. ಅರುಣ್ ಕುಮಾರ್ ತಿಳಿಸಿದರು.

ವಲಯ 1ರಂತೆಯೇ ಗ್ರಾಮಾಂತರ ಪ್ರದೇಶದ ಆಟೋ ರಿಕ್ಷಾಗಳಲ್ಲಿಯೂ ವಲಯ 2 ಎಂಬುದನ್ನು ಸಮರ್ಪಕವಾಗಿ ನಮೂದಿಸಬೇಕು ಹಾಗೂ ಮೀಟರ್ ಕಡ್ಡಾಯಗೊಳಿಸಬೇಕು ಎಂದು ಕೆಲ ಆಟೋ ಚಾಲಕ ಮಾಲಕರು ಒತ್ತಾಯಿಸಿದರು.

ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ಮಂಗಳೂರು ಆರ್‌ಟಿಒ ಅಧಿಕಾರಿ (ಪ್ರಭಾರ) ಮುರಗೇಂದ್ರ ಬಸವರಾಜ ಶಿರೋಳಕರ, ಎಸಿಪಿ ನಜ್ಮಾ ಫಾರೂಕಿ ಉಪಸ್ಥಿತರಿದ್ದರು.

ಬದಲಾವಣೆ ಅರ್ಜಿ ಪರಿಗಣನೆ

ಎಲ್‌ಪಿಜಿ ಹಾಗೂ ಸಿಎನ್‌ಜಿ ಚಾಲಿತ ಆಟೋಗಳನ್ನು ಓಡಿಸುತ್ತಿವವರು ಇ ಆಟೋಗಳಿಗೆ ಬದಲಾಯಿಸಲು ಮುಂದಾದರೆ ಅವರ ಹಾಲಿ ಪರವಾನಿಗೆಯನ್ನು ಬದಲಾಯಿಸಿಕೊಳ್ಳಲು ಅವಕಾಶ ನೀಡಬೇಕು ಎಂದು ಆಟೋ ಚಾಲಕ-ಮಾಲಕರು ಆಗ್ರಹಿಸಿದಾಗ, ಈ ಬಗ್ಗೆ ಅವಕಾಶಕ್ಕೆ ಅರ್ಜಿ ಹಾಕಿದರೆ ಪರಿಗಣಿಸಲಾಗುವುದು ಎಂದು ಜಿಲ್ಲಾಧಿಕಾರಿ ದರ್ಶನ್ ತಿಳಿಸಿದರು.

ಮುಕ್ತ ಸಂಚಾರ ಬೇಡಿಕೆ ಪರಿಗಣನೆ

ಗ್ರಾಮಾಂತರ ಪ್ರದೇಶದಿಂದ ನಗರ ಭಾಗಕ್ಕೆ ಹಾಗೂ ನಗರ ಪ್ರದೇಶದಿಂದ ಗ್ರಾಮಾಂತರ ಪ್ರದೇಶಗಳಿಗೆ ಕೇವಲ ಸಂಚಾರಕ್ಕೆ (ಎಲ್ಲಿಯೂ ನಿಲ್ಲಿಸಿ ಬಾಡಿಗೆ ಮಾಡಲು ಅವಕಾಶವಿಲ್ಲ) ಅವಕಾಶ ಕಲ್ಪಿಸಬೇಕೆಂಬ ಚಾಲಕರ ಆಗ್ರಹವನ್ನು ಪರಿಗಣಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ವಿವೇಕಾನಂದ ಕಾಲೇಜಿನಲ್ಲಿ ಪತ್ರಕರ್ತ ಮೇಷ್ಟ್ರು ಕಾರ್ಯಾಗಾರ



ಪುತ್ತೂರು: ವಿದ್ಯಾರ್ಥಿ ಬದುಕಿನಲ್ಲಿ ಕಷ್ಟ ಪಟ್ಟು ಕಲಿತರೆ ಮುಂದಿನ ಉದ್ಯೋಗ ಭವಿಷ್ಯದಲ್ಲಿ ಯಶಸ್ಸನ್ನು ಕಾಣಲು ಸಾಧ್ಯ. ಇದರೊಂದಿಗೆ ನಮ್ಮ ಕೆಲಸದಲ್ಲೂ ಹೆಚ್ಚಿನ ಕ್ರಿಯಾಶೀಲತೆಯನ್ನು ಹೊಂದಬೇಕು. ಶ್ರಮದ ಕಲಿಕೆಯ ಜೊತೆಗೆ ಕ್ರಿಯಾಶೀಲತೆಯನ್ನು ಹೊಂದಿದರೆ ಉತ್ತಮ ಉದ್ಯೋಗ ಪಡೆಯಲು ಸಾಧ್ಯ ಎಂದು ವಿವೇಕಾನಂದ ಸ್ನಾತಕೋತ್ತರ ಪತ್ರಿಕೋದ್ಯಮ ವಿಭಾಗದ ಹಿರಿಯ ವಿದ್ಯಾರ್ಥಿ ಹಾಗೂ ಗುರುವಾಯನಕೆರೆಯ ಎಕ್ಸೆಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನ ಡಿಜಿಟಲ್ ಮೀಡಿಯಾ ಎಕ್ಸಿಕ್ಯೂಟಿವ್ ಶರತ್ ಕೆ.ಎನ್. ಹೇಳಿದರು.

ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜ್(ಸ್ವಾಯತ್ತ), ವಿವೇಕಾನಂದ ಸ್ನಾತಕೋತ್ತರ ಅಧ್ಯಯನ ಕೇಂದ್ರ ಮತ್ತು ಐಕ್ಯೂಎಸಿ, ಸ್ನಾತಕೋತ್ತರ ಪತ್ರಿಕೋದ್ಯಮ ವಿಭಾಗದ ಸಹಯೋಗದಲ್ಲಿ ನಡೆದ 'ಪತ್ರಕರ್ತ ಮೇಷ್ಟ್ರು' ಕಾರ್ಯಾಗಾರ ಕಾರ್ಯಕ್ರಮದಲ್ಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಕಾಲೇಜಿನ ಸ್ನಾತಕೋತ್ತರ ವಿಭಾಗದ ನಿರ್ದೇಶಕಿ ಡಾ. ವಿಜಯ ಸರಸ್ವತಿ ಬಿ. ಮಾತನಾಡಿ, ಬದುಕಿನ ಅನುಭವವನ್ನು ಮುಂದಿನ ಪೀಳಿಗೆಗೆ ತಿಳಿಸುವುದರ ಜೊತೆಗೆ ಹೊರಗಿರುವ ಜಗತ್ತು ಎಷ್ಟು ಸವಾಲನ್ನು ಹೊಂದಿದೆ ಎನ್ನುವುದನ್ನು ತಿಳಿಯಲು ಈ ಕಾರ್ಯಕ್ರಮ ಸಹಾಯಕ. ಹೊಸ ವಿಚಾರದಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಂಡಲ್ಲಿ ಇನ್ನಷ್ಟು ಬೆಳೆಯಲು ಸಾಧ್ಯ. ವಿದ್ಯಾರ್ಥಿ ಜೀವನದಲ್ಲಿ ನಾವು ಎಷ್ಟು ಹೊಸ ವಿಷಯವನ್ನು ಕಲಿಯುತ್ತೇವೋ ಅವು ನಮ್ಮ ಭವಿಷ್ಯ ಏಳಿಗೆಗೆ ಮುಖ್ಯ ಪಾತ್ರ ವಹಿಸುತ್ತದೆ ಎಂದರು.

ಕಾಲೇಜಿನ ಪರಿಕ್ಷಾಂಗ ಕುಲಸಚಿವ ಡಾ. ಶ್ರೀಧರ್ ಎಚ್.ಜಿ. ಮಾತನಾಡಿ, ನಮ್ಮ ಬದುಕಿಗೆ ಅನುಭವವೇ ದಾರಿದೀಪ. ಯಾವಾಗ ವಿದ್ಯಾರ್ಥಿಗಳು ತಪ್ಪು ಮಾಡುತ್ತಾರೋ ಆಗ ಇನ್ನಷ್ಟು ಬೆಳೆಯಲು ಸಾಧ್ಯವಾಗುವುದು. ಅವಕಾಶವನ್ನು ಸೃಷ್ಟಿ ಮಾಡುವುದರೊಂದಿಗೆ ಸಿಕ್ಕ ಅವಕಾಶವನ್ನು ಬಳಸಿಕೊಳ್ಳುವುದನ್ನು ವಿದ್ಯಾರ್ಥಿಗಳು ಕಲಿಯಬೇಕು. ವಿದ್ಯಾರ್ಥಿ ಜೀವನದಲ್ಲಿ ಕಷ್ಟಪಟ್ಟಷ್ಟು ಭವಿಷ್ಯದಲ್ಲಿ ಉತ್ತಮ ಜೀವನ ನಡೆಸಲು ಸಾಧ್ಯ ಎಂದರು.

ವೇದಿಕೆಯಲ್ಲಿ ಸ್ನಾತಕೋತ್ತರ ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕಿ ಶ್ವೇತಾ, ಹವ್ಯಶ್ರೀ ಹಾಗೂ ದಿವ್ಯಶ್ರೀ ಉಪಸ್ಥಿತರಿದ್ದರು. ವಿದ್ಯಾಶ್ರೀ ಸ್ವಾಗತಿಸಿ, ಪ್ರಥಮ ಸ್ನಾತಕೋತ್ತರ ಪತ್ರಿಕೋದ್ಯಮ ವಿದ್ಯಾರ್ಥಿನಿ ಧನ್ಯಶ್ರೀ ವಂದಿಸಿದರು. ಕಾರ್ಯಕ್ರಮದ ಬಳಿಕ ಫೋಟೋಶಾಪ್ ಕುರಿತು ಪ್ರಾಯೋಗಿಕ ಕಾರ್ಯಾಗಾರ ನಡೆಯಿತು.

ಸುಳ್ಯ ರೈತ ಉತ್ಪಾದಕ ಕಂಪೆನಿ ಪ್ರತಿನಿಧಿಗಳು ಜೇನು ಸೊಸೈಟಿ ಭೇಟಿ



ಸುಳ್ಯ: ಕರ್ನಾಟಕ ಮತ್ತು ಕೇರಳ ರಾಜ್ಯಗಳ ವಿವಿಧ ರೈತ ಉತ್ಪಾದಕ ಸಂಘಟನೆಗಳ ಪ್ರತಿನಿಗಳಿಗೆ ನೀಡುವ ತರಬೇತಿಯ ಅಂಗವಾಗಿ ತಂಡವು ಗುರುವಾರ ಸುಳ್ಯ ದ.ಕ. ಜೇನು ವ್ಯವಸಾಯಗಾರರ ಸಹಕಾರಿ ಸಂಘದ ಜೇನು ಸಂಸ್ಕರಣಾ ಘಟಕಕ್ಕೆ ಬೇಟಿ ನೀಡಿ ತರಬೇತಿ ಪಡೆದುಕೊಂಡರು.

ನಬಾರ್ಡ್‌ನ ತರಬೇತಿ ಸಂಸ್ಥೆಯಾದ ಬಿಐಆರ್‌ಡಿ ವತಿಯಿಂದ ಮಂಗಳೂರಿನಲ್ಲಿ ನಡೆಯುತ್ತಿರುವ 'ಹವಾಮಾನ ಸ್ಥಿತಿ ಸ್ಥಾಪಕತ್ವ ಮತ್ತು ಹಸಿರು ಹಣಕಾಸು' ಕುರಿತ ಮೂರು ದಿನಗಳ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಕಾರ್ಯಕ್ರಮದಲ್ಲಿ ವಿವಿಧ ರೈತ ಉತ್ಪಾದಕ ಸಂಘಟನೆಗಳ ಪ್ರತಿನಿಗಳು ಭಾಗವಹಿಸಿದ್ದರು. ಈ ತರಬೇತಿ ಕಾರ್ಯಕ್ರಮವು ಕೃಷಿಕ್ಷೇತ್ರದಲ್ಲಿ ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವ ವಿಧಾನಗಳು ಹಾಗೂ ಹಸಿರು ಹಣಕಾಸು ಅವಕಾಶಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಏರ್ಪಡಿಸಲಾಗಿದೆ.

ಬಿಐಆರ್‌ಡಿ ಡಿಜಿಎಂ ಆಗಿರುವ ಶೀಲಾ ಎಂ. ಭಂಡಾರ್ಕರ್ ನೇತೃತ್ವದಲ್ಲಿ ಭಾಗವಹಿಸುವ ಎಫ್‌ಪಿಒ ಪ್ರತಿನಿಗಳಿಗೆ ಹವಾಮಾನ ಸ್ನೇಹಿ ಕೃಷಿ ಪದ್ಧತಿಗಳು, ಶಾಶ್ವತ ಕೃಷಿ ಮಾದರಿಗಳು ಹಾಗೂ ಹಸಿರು ಹಣಕಾಸು ಯೋಜನೆಗಳ ಕುರಿತು ಪರಿಣಿತರಿಂದ ಮಾರ್ಗದರ್ಶನ ನೀಡಲಾಗುತ್ತಿದ್ದು ಇದರ ಭಾಗವಾಗಿ ತಂಡವು ಜೇನು ಸಹಕಾರಿ ಸಂಘಕದ ಘಟಕಕ್ಕೆ ಭೇಟಿ ನೀಡಿತು.

ಈ ಸಂದರ್ಭ ಮಾತನಾಡಿದ ಶೀಲಾ ಎಂ. ಭಂಡಾರ್ಕರ್, ರೈತರಿಂದ ಖರೀದಿಸಲಾದ ಜೇನು ಉತ್ಪನ್ನಗಳನ್ನು ರೈತರು ಈ ಸಂಸ್ಥೆಯ ಮೂಲಕವೇ ನೇರವಾಗಿ ಮಾರಾಟ ಮಾಡುವ ವ್ಯವಸ್ಥೆ ಇಲ್ಲಿದೆ. ಅದನ್ನು ಸಂಸ್ಕರಿಸಿ ಮಾರುಕಟ್ಟೆಗೆ ತಲುಪಿಸುವಂತಹ ಉತ್ತಮ ಘಟಕಗಳು ಬೇರೆಡೆಗಳಲ್ಲಿ ಅಪರೂಪವಾಗಿವೆ. ಈ ಸಂಸ್ಥೆಯ ಕಾರ್ಯವಿಧಾನ ಅತ್ಯುತ್ತಮವಾಗಿದ್ದು ಇಲ್ಲಿ ನಾವು ಸಾಕಷ್ಟು ಉಪಯುಕ್ತ ಮಾಹಿತಿಯನ್ನು ಪಡೆದಿದ್ದೇವೆ. ಸುಮಾರು 30 ಮಂದಿ ತರಬೇತಿ ಭಾಗವಹಿಸುವವರನ್ನು ಇಂದು ಈ ಘಟಕಕ್ಕೆ ತರಲಾಗಿದೆ. ಮುಂದೆಯೂ ಇಂತಹ ಸಂಸ್ಥೆಗಳ ಮಾಹಿತಿ ಇತರ ಕಡೆಗಳಿಗೂ ಹಂಚಲಾಗುವುದು ಎಂದರು.

ಜೇನು ಸಾಕಾಣಿಕೆ ವಿಧಾನಗಳು, ಜೇನು ಸಂಗ್ರಹಣೆ ಹಾಗೂ ಸಂಸ್ಕರಣಾ ಘಟಕದಲ್ಲಿ ಉತ್ಪಾದನೆಯಾಗುವ ವಿವಿಧ ಜೇನು ಉತ್ಪನ್ನಗಳ ಬಗ್ಗೆ ಜೇನು ಸೊಸೈಟಿ ಅಧ್ಯಕ್ಷ ಚಂದ್ರ ಕೋಲ್ಚಾರ್ ಮಾಹಿತಿ ನೀಡಿದರು. ಈ ಸಂದರ್ಭ ಸುಪ್ರೀತ್ ಮೋಂಟಡ್ಕ ಹಾಗೂ ಜೇನು ಸೊಸೈಟಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮಂಗಳೂರು ಪದವು ಸೆಂಟ್ರಲ್ ವಾರ್ಡ್ ರಸ್ತೆ ಅಭಿವೃದ್ಧಿಗೆ ಚಾಲನೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 35ನೇ ಪದವು ಸೆಂಟ್ರಲ್ ವಾರ್ಡಿನ ಪದವು ಕಾನಡ್ಕ ಡಾಲ್ಫಿ ಡಿಸೋಜ ಮನೆ ಬಳಿಯ ರಸ್ತೆ ಅಭಿವೃದ್ಧಿ ಕಾಮಗಾರಿಯು ಸುಮಾರು 25 ಲಕ್ಷ ರೂ. ಅನುದಾನದಲ್ಲಿ ನಡೆಯಲಿದ್ದು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಗುದ್ದಲಿ ಪೂಜೆಯು ನಡೆಯಿತು.

ನಂತರ ಮಾತನಾಡಿದ ಶಾಸಕರು, ಇದು ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರುಗೊಂಡ ಅನುದಾನವಾಗಿದ್ದು ಪ್ರಸ್ತುತ ಈಗಿನ ಸರ್ಕಾರದ ಬಳಿ ಸತತವಾಗಿ ಮನವಿ ಮಾಡಿದ ನಂತರ ತಡೆ ಹಿಡಿಯಲಾಗಿದ್ದ ಅನುದಾನ ಮತ್ತೆ ಬಿಡುಗಡೆಗೊಂಡಿದೆ. ಆ ಮೂಲಕ ಶೀಘ್ರದಲ್ಲಿ ಕಾಮಗಾರಿಯು ಮುಗಿದು ಸ್ಥಳೀಯರಿಗೆ ಉಪಯೋಗವಾಗಲಿದೆ ಎಂದರು

ಮ.ನ.ಪಾ. ನಿಕಟ ಪೂರ್ವ ಸದಸ್ಯ ಕಿಶೋರ್ ಕೊಟ್ಟಾರಿ, ಪ್ರಮುಖರಾದ ನಿತಿನ್ ಕುಮಾರ್, ರವಿಶಂಕರ್ ಮಿಜಾರು, ಜಯಕುಮಾರ್, ನವೀನ್ ಶೆಣೈ, ಮಾಧವ ಭಟ್, ಸುನಿಲ್ ಕಾರ್ಮಿಕ ಕಾಲೋನಿ, ಡೋಲ್ಫಿ ಡಿಸೋಜ, ರಮೇಶ್, ಕರ್ಣ, ನಟರಾಜ್ ಆಳ್ವ ನೀರಜ್ ಕಕ್ಕೆಬೆಟ್ಟು ಪ್ರವೀಣ್ ಆಚಾರಿ, ಗುರು, ಲೆಸ್ಲಿ ಮೆಲ್ವಿ ವಾಲ್ಟಿ ಫ್ರ್ಯಾಂಕ್ಲಿ ಫಿಲಿಪ್, ಪ್ರೀತಮ್, ಮಣಿ ನೀತಿನಗರ, ವಾಜಿ, ಜೋಸಿ ಸಿಕ್ವೆರ ಇದ್ದರು.

ಕನಕದಾಸರು ಶ್ರೇಣೀಕರಣ ವ್ಯವಸ್ಥೆ ಮುರಿದವರು: ಎಚ್.ಎನ್. ಮರಳೀಧರ



ಕೊಣಾಜೆ: ಸಮಾಜದಲ್ಲಿ ಅಸಮಾನತೆಗೆ ಕಾರಣವಾದ ಜಾತಿ, ಲಿಂಗ, ಅರ್ಥ, ಸ್ವಾರ್ಥ, ಅಹಂಕಾರಗಳನ್ನು ಮೀರಬೇಕು ಎಂಬುದು ಕನಕದಾಸರ ಅಭಿಮತವಾಗಿತ್ತು. ಮೇಲು ಕೀಳಿನ ಭಾವವನ್ನು ಉಂಟುಮಾಡುವ ಶ್ರೇಣಿಕರಣ ವ್ಯವಸ್ಥೆಯನ್ನು ಕನಕದಾಸರು ಮುರಿದವರು ಎಂದು ವಿದ್ವಾಂಸ ಬೆಂಗಳೂರಿನ ಎಚ್ ಎನ್ ಮುರಳೀಧರ ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಕನಕದಾಸ ಸಂಶೋಧನ ಕೇಂದ್ರದ ವತಿಯಿಂದ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ.ವಿವೇಕ ರೈ ವಿಚಾರ ವೇದಿಕೆಯಲ್ಲಿ ಕನಕತತ್ವ ಚಿಂತನ ಪ್ರಚಾರೋಪನ್ಯಾಸ ಮಾಲಿಕೆಯಡಿ ಕೀರ್ತನ ಸಾಹಿತ್ಯ ಅಭಿವ್ಯಕ್ತಿ ವಿನ್ಯಾಸ ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ.ನಾಗಪ್ಪ ಗೌಡ, ಕನಕದಾಸ ಸಂಶೋಧನ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ ಮಾತನಾಡಿದರು. ಪ್ರಾಧ್ಯಾಪಕ ಪ್ರೊ.ಸೋಮಣ್ಣ ಹೊಂಗಳ್ಳಿ, ಡಾ.ಯಶುಕುಮಾರ್ ಇದ್ದರು. ಪ್ರಥಮ ಎಂಎ ವಿದ್ಯಾರ್ಥಿ ಪರಶುರಾಮ ನಿರೂಪಿಸಿದರು. ರವಿ ಕುಮಾರ್ ವಂದಿಸಿದರು. ಚೇತನ್ ಕನಕ ಕೀರ್ತನೆ ಹಾಡಿದರು.

ಏಮಾಜೆ ಕಿರಿಯ ಪ್ರಾಥಮಿಕ ಶಾಲೆ ಕೊಠಡಿಯ ನಿರ್ಮಾಣಕ್ಕೆ ಶಿಲಾನ್ಯಾಸ



ಬಂಟ್ವಾಳ: ತಾಲೂಕಿನ ನೆಟ್ಲಮುಡ್ನೂರು ಗ್ರಾಮದ ಏಮಾಜೆ ದ. ಕ. ಜಿ. ಪಂ.ಕಿ.ಪ್ರಾ. ಶಾಲೆಗೆ ಎಂಆರ್‌ಪಿಎಲ್ ಸಂಸ್ಥೆಯ ಸಿಎಸ್ ಆರ್ ನಿಧಿಯಿಂದ 27.50 ಲಕ್ಷ ರೂ. ವೆಚ್ಚದಲ್ಲಿ ನೂತನ 2 ತರಗತಿ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಲಾಯಿತು.

ನೇರಳಕಟ್ಟೆ ವ್ಯವಸಾಯಿಕ ಸೇವಾ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಪುಷ್ಪರಾಜ್ ಚೌಟ ಶಿಲಾನ್ಯಾಸ ನೆರವೇರಿಸಿದರು. ಈ ಸಂದರ್ಭದಲ್ಲಿ ಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷೆ ಮಲ್ಲಿಕಾ ಗಣೇಶ್, ಉಪಾಧ್ಯಕ್ಷ ಹರೀಶ್ ಕುಲಾಲ್, ಗುತ್ತಿಗೆದಾರರ ಅಖಿಲ್ ಶೆಟ್ಟಿ ನೆಟ್ಲ ಮುಡ್ನೂರು ಗ್ರಾಮ ಪಂಚಾಯತ್ ನ ಮಾಜಿ ಅಧ್ಯಕ್ಷರು,ಸದಸ್ಯರು, ಎಸ್. ಡಿ. ಎಂ. ಸಿ ಸದಸ್ಯರು,ಮಕ್ಕಳ ಪೋಷಕರು,ಗ್ರಾಮಸ್ಥರು ಉಪಸ್ಥಿತರಿದ್ದರು. ಶಾಲಾ ಮುಖ್ಯ ಶಿಕ್ಷಕಿ ತ್ರಿವೇಣಿ ರಮೇಶ್ ಸ್ವಾಗತಿಸಿದರು.


ಬುಡೋಳಿ: ಪಂಜಿಕಲ್ಲು ನಾಗಬನದಲ್ಲಿ ಶ್ರೀ ಸತ್ಯನಾರಾಯಣ ಪೂಜೆ, ಆಶ್ಲೇಷ ಬಲಿ



ಬಂಟ್ವಾಳ: ತಾಲೂಕಿನ ಪಂಜಿಕಲ್ಲು -ಬುಡೋಳಿ ಸಮೀಪದ ಪುಂಚೋಡಿ ನಾಗಬನದಲ್ಲಿ 49ನೇ ವರ್ಷದ ಸಾಮೂಹಿಕ ಸತ್ಯನಾರಾಯಣ ಪೂಜೆ ಮತ್ತು ಆಶ್ಲೇಷ ಬಲಿ ಪೂಜೆ ಶುಕ್ರವಾರ ನಡೆಯಿತು. ಸಮಿತಿ ಅಧ್ಯಕ್ಷ ಶ್ರೀಪತಿ ಭಟ್, ಗೌರವಾಧ್ಯಕ್ಷ ಸುದರ್ಶನ್ ಜೈನ್, ಪ್ರಮುಖರಾದ ಸದಾನಂದ ಶೆಟ್ಟಿ , ದಿನೇಶ ಶೆಟ್ಟಿ ಬುಡೋಳಿ, ಎಂ.ಸೋಮಶೇಖರ ಮುಂಡಬೈಲು, ದೇವಪ್ಪ ಕುಲಾಲ್, ಅಣ್ಣಿ ಸಾಲ್ಯಾನ್, ರವಿ ಪೂಜಾರಿ, ಕೇಶವ ಪೂಜಾರಿ ಮತ್ತಿತರರು ಇದ್ದರು.

ಸಾರ್ವಜನಿಕ ಸ್ಥಳದಲ್ಲಿ ಕಸ ಸಮಸ್ಯೆ | ವಿಧಾನಪರಿಷತ್ ಅಧಿವೇಶನದಲ್ಲಿ ಹೊಸ ದಿಗಂತ 'ಸಂಗಮ' ವರದಿ ಪ್ರಸ್ತಾಪಿಸಿದ ಶಾಸಕ ಕಿಶೋರ್‌ಕುಮಾರ್ ಪುತ್ತೂರು

ಕೇಸು ದಾಖಲಿಸಿ, ದಂಡ ಪ್ರಯೋಗಿಸಲು ಪೊಲೀಸ್, ಅರಣ್ಯ ಇಲಾಖೆಗಳಿಗೂ ಅಧಿಕಾರ ನೀಡಿ





ಉಳ್ಳಾಲ: ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರ ವಿರುದ್ಧ ಕಾನೂನಿನಡಿ ಕಠಿಣ ದಂಡ ಪ್ರಯೋಗಿಸುವ ಅಧಿಕಾರವಿದ್ದರೂಸಹ ಅದನ್ನ ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿಲ್ಲವೆಂದು ಜಿಲ್ಲಾ ಸ್ವಚ್ಚತಾ ರಾಯಭಾರಿ ಶೀನ ಶೆಟ್ಟಿ ಅವರು ಮಾಧ್ಯಮ ಸಂವಾದವೊಂದರಲ್ಲಿ ಕಳವಳ ವ್ಯಕ್ತಪಡಿಸಿರುವ ಬಗ್ಗೆ ಹೊಸದಿಗಂತ 'ಸಂಗಮ'ದಲ್ಲಿ ಪ್ರಕಟವಾಗಿದ್ದ ವರದಿಯನ್ನು ವಿದಾನ ಪರಿಷತ್ ಸದಸ್ಯರಾದ ಕಿಶೋರ್ ಕುಮಾರ್ ಪುತ್ತೂರು ಅವರು ವಿಧಾನ ಪರಿಷತ್ ಅಧಿವೇಶನದಲ್ಲಿ ಪಸ್ತಾಪಿಸಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಉಳ್ಳಾಲ ತಾಲೂಕು ಘಟಕ, ಮಾದರಿ ಗ್ರಾಮ ಅಭಿಯಾನ ಹಾಗೂ ಜನಶಿಕ್ಷಣ ಟ್ರಸ್ಟ್ ಜಂಟಿ ಆಶ್ರಯದಲ್ಲಿ ತೊಕ್ಕೊಟ್ಟಿನ ಉಳ್ಳಾಲ ಪ್ರೆಸ್ ಕಬ್ಲ್‌ನಲ್ಲಿ ನಡೆದಿದ್ದ 'ಸಮುದಾಯ ಆರೋಗ್ಯ ಅರಿವು ಅಭಿಯಾನ' ಎಂಬ ಸಂವಾದ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸ್ವಚ್ಚತಾ ರಾಯಭಾರಿ ಶೀನ ಶೆಟ್ಟಿ ಅವರು ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರ ವಿರುದ್ಧ ಕಾನೂನಿನಡಿ ಒಂದು ಲಕ್ಷ ರೂಪಾಯಿಗಳವರೆಗೆ ಕಠಿನ ದಂಡಾಸ್ತ್ರಗಳನ್ನು ಪ್ರಯೋಗಿಸುವ ಅಧಿಕಾರವಿದ್ದರೂ ಸಹ ಅದನ್ನ ಸಮರ್ಪಕವಾಗಿ ಅನುಷ್ಠಾನಗೊಳಿಸದ ವ್ಯವಸ್ಥೆಯ ವಿರುದ್ಧ ತೀವ್ರ ಅಸಮಧಾನ ವ್ಯಕ್ತಪಡಿಸಿದ್ದರು.

ಈ ಸಂವಾದ ಕಾರ್ಯಕ್ರಮದ ಕುರಿತಂತೆ 'ತ್ಯಾಜ್ಯ ಎಸೆಯುತ್ತಿರುವವರ ವಿರುದ್ಧ ಸೂಕ್ತ ದಂಡ ವಿಧಿಸುತ್ತಿಲ್ಲ,ಶೀನ ಶೆಟ್ಟಿ ಕಳವಳ' ಎಂಬ ಶೀರ್ಷಿಕೆಯಡಿ ಶುಕ್ರವಾರ ಹೊಸದಿಗಂತ ಪತ್ರಿಕೆಯಲ್ಲಿ ಪ್ರಕಟವಾದ ವಿಸ್ತೃತ ವರದಿಯ ವಿಚಾರವನ್ನು ಕಿಶೋರ್ ಕುಮಾರ್ ಅವರು ವಿದಾನಪರಿಷತ್‌ನಲ್ಲಿ ನಡೆದ ಅಧಿವೇಶನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದರು.

ಗ್ರಾಮೀಣ ಭಾಗದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರ ವಿರುದ್ಧ ದಂಡ ಪ್ರಯೋಗಿಸಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಲು ಪೊಲೀಸರಿಗೆ ಅಧಿಕಾರ ನೀಡಬೇಕು.ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಸ ಎಸೆಯುವುದನ್ನ ನಿಯಂತ್ರಿಸಲು ಸಂಬಂಧಪಟ್ಟ ಆಯಾ ಇಲಾಖೆಗಳೇ ಕ್ರಮ ಕೈಗೊಳ್ಳಬೇಕು. ವಿವಿಧ ಹೆದ್ದಾರಿಗಳು ಹಾದು ಹೋಗುವ ಅರಣ್ಯ ಪ್ರದೇಶಗಳಲ್ಲಿ ಬೇಕಾ ಬಿಟ್ಟಿ ಕಸ ಎಸೆಯುವವರ ವಿರುದ್ಧ ದಂಡ ಪ್ರಯೋಗಿಸಿ ಸ್ವಯಂ ಪ್ರೇರಿತ ದೂರು ದಾಖಲಿಸುವ ಅಧಿಕಾರವನ್ನ ಅರಣ್ಯ ಇಲಾಖೆಗೂ ನೀಡಬೇಕು.ಈ ಎಲ್ಲಾ ವಿಷಯವನ್ನು ಸರಕಾರ ಗಂಭೀರವಾಗಿ ಪರಿಗಣಿಸಿ,ಸ್ವಚ್ಚತೆಯ ಬಗ್ಗೆ ಪ್ರಸ್ತುತ ಇರುವ ನಿಯಮಗಳನ್ನ ಮತ್ತಷ್ಟು ಬಲಪಡಿಸಿ ರಾಜ್ಯದಾದ್ಯಂತ ಆ ನಿಯಮಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡು ಸ್ವಚ್ಚ ಪರಿಸರ ನಿರ್ಮಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕಿಶೋರ್ ಕುಮಾರ್ ಅವರು ಸರಕಾರವನ್ನು ಆಗ್ರಹಿಸಿದ್ದಾರೆ.



ಉಳ್ಳಾಲ ಪ್ರೆಸ್‌ಕ್ಲಬ್‌ನಲ್ಲಿ ಸಂವಾದ ಕಾರ್ಯಕ್ರಮ | ದ.ಕ. ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ಕಳವಳ

ತ್ಯಾಜ್ಯ ಎಸೆಯುವವರ ವಿರುದ್ಧ ಸೂಕ್ತ ದಂಡ ವಿಧಿಸುತ್ತಿಲ್ಲ

ಹೊಸದಿಗಂತ 'ಸಂಗಮ'ದಲ್ಲಿ ಪ್ರಕಟವಾದ ವರದಿ

ಆಶಾ ಭಾವನೆ ಮೂಡಿಸಿದೆ

ಸುಮಾರು ಒಂದೂವರೆ ದಶಕಗಳ ನಂತರ ಸ್ವಚ್ಛತಾ ಅಭಿಯಾನದ ವಿಚಾರವು ಅಧಿವೇಶನದಲ್ಲಿ ಪ್ರತಿಧ್ವನಿಸಿ ರುವುದು ಐತಿಹಾಸಿಕ ಘಟನೆಯಾಗಿದ್ದು 'ಕಸ ಮುಕ್ತ ಗ್ರಾಮ-ಕಸ ಮುಕ್ತ ಕರ್ನಾಟಕ' ನಿರ್ಮಾಣಕ್ಕೆ ಆಶಾ ಭಾವನೆ ಮೂಡಿಸಿದೆ.ಒಂದೂವರೆ ದಶಕದ ಹಿಂದೆ ಸ್ವಚ್ಛತೆಯ ಬಗ್ಗೆ ರಾಜ್ಯದಾದ್ಯಂತ ನಡೆದಿದ್ದ ಜಾಗೃತಿ ಅಭಿಯಾನಗಳ ಕೂಗು ಅಧಿವೇಶನದಲ್ಲೂ ಪ್ರತಿಧ್ವನಿಸಿತ್ತು.ಇದೀಗ ಮತ್ತೆ ಪರಿಷತ್ ಅಧಿವೇಶನದಲ್ಲಿ ಈ ಬಗ್ಗೆ ಧ್ವನಿಯೆತ್ತಿದ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.ಕಸಮುಕ್ತ ಕರ್ನಾಟಕ ನಿರ್ಮಾಣ ಅಭಿಯಾನಕ್ಕೆ ಮಾಧ್ಯಮಗಳ ಸಹಕಾರ ಪ್ರಾಮುಖ್ಯವಾಗಿದೆ.

● ಶೀನ ಶೆಟ್ಟಿ, ಜಿಲ್ಲಾ ಸ್ವಚ್ಛತಾ ರಾಯಭಾರಿ

ಸುತ್ತಮುತ್ತ

ಕಡಂಬಾರು ಶಾಲಾ ನೂತನ ಕಟ್ಟಡಕ್ಕೆ ಶಿಲಾನ್ಯಾಸ

ಮಂಜೇಶ್ವರ: ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ಲಾನ್ ಫಂಡ್ ಉಪಯೋಗಿಸಿ ಕಡಂಬಾರು ಸರಕಾರಿ ಹೈಸ್ಕೂಲ್‌ಗೆ 1.09 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸುವ ಆರು ತರಗತಿ ಕೊಠಡಿಗಳ ನಿರ್ಮಾಣ ಕಾಮಗಾರಿ ಉದ್ಘಾಟನೆಯನ್ನು ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ನೆರವೇರಿಸಿದರು. ಮೀಂಜ ಗ್ರಾ.ಪಂ.ಅಧ್ಯಕ್ಷ ಸಿ.ಎ.ತಾಜುದ್ದೀನ್ ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಜಿ.ಪಂ. ಸ್ಥಾಯೀ ಸಮಿತಿ ಅಧ್ಯಕ್ಷೆ ಇರ್ಫಾನಾ ಇಕ್ಬಾಲ್, ಪಿಟಿಎ ಅಧ್ಯಕ್ಷ ಮೊಯ್ದೀನ್ ಕುಂಞ, ಮುಖ್ಯೋಪಾಧ್ಯಾಯ ಎಂ.ಅಶೋಕ, ಅಧ್ಯಾಪಕ ಅಬೂಬಕ್ಕರ್ ಮಾತನಾಡಿದರು.

ತೆರಿಗೆ ಪಾವತಿಸಲು ಅವಕಾಶ

ಕಾಸರಗೋಡು: ಆಸ್ತಿ ತೆರಿಗೆ ಸಂಗ್ರಹಕ್ಕೆ ಸಂಬಂಧಿಸಿ ರಜಾದಿನಗಳಾಗಿರುವ ಮಾ.14 ಮತ್ತು 15 ರಂದು ಅಜಾನೂರು ಗ್ರಾ.ಪಂ. ಕಚೇರಿ ತೆರೆದಿರುತ್ತದೆ. ತೆರಿಗೆ ಪಾವತಿಸಲು ಮತ್ತು ಪರವಾನಗಿ ನವೀಕರಿಸಲು ಈ ಅವಕಾಶವನ್ನು ಬಳಸಿಕೊಳ್ಳಬೇಕೆಂದು ಪಂಚಾಯತ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ಗ್ರಾಹಕರ ದಿನಾಚರಣೆ

ಉಡುಪಿ: ಜಿಲ್ಲಾಡಳಿತ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಬಳಕೆದಾರರ ವೇದಿಕೆ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಮಾ. 14 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಕುಂಜಿಬೆಟ್ಟು ವೈಕುಂಠ ಬಾಳಿಗ ಕಾನೂನು ಕಾಲೇಜಿನಲ್ಲಿ ನಡೆಯಲಿದೆ.
ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕುಂಜಿಬೆಟ್ಟು ವೈಕುಂಠ ಬಾಳಿಗ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲೆ ಸುರೇಖಾ ಕೆ.ಅಧ್ಯಕ್ಷತೆ ವಹಿಸಲಿದ್ದಾರೆ. ಅಂಬಲಪಾಡಿ ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನದ ಧರ್ಮದರ್ಶಿ ಡಾ.ನಿ.ಬಿ ವಿಜಯ ಬಲ್ಲಾಳ್, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮನು ಪಟೇಲ್ ಬಿ.ವೈ., ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಅಧ್ಯಕ್ಷ ಸುನೀಲ ತಿ ಮಾಸರೆಡ್ಡಿ, ಸದಸ್ಯೆ ಸುಜಾತ ಬಸವರಾಜ ಕೋರಳ್ಳಿ ಮತ್ತಿತರರು ಭಾಗವಹಿಸಲಿದ್ದಾರೆ.

ಮಾ.20ರಿಂದ ಏ.30: ಉಚ್ಚಿಲ ಬೋವಿ ಶಾಲೆ ರಸ್ತೆ ಸಂಚಾರ ಸ್ಥಗಿತ

ಉಳ್ಳಾಲ: ಸೋಮೇಶ್ವರ ಪುರಸಭಾ ವ್ಯಾಪ್ತಿಯ ಸಂಕೋಳಿಗೆ ರಾಷ್ಟ್ರೀಯ ಹೆದ್ದಾರಿಯಿಂದ ರೈಲ್ವೆ ಗೇಟ್ ವರೆಗೆ(ಉಚ್ಚಿಲ ಫಿಶರೀಶ್ ಮುಖ್ಯ ರಸ್ತೆ ಅಥವಾ ಬೋವಿ ಶಾಲೆ ರಸ್ತೆ) ಮೀನುಗಾರಿಕಾ ಇಲಾಖೆಯಿಂದ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಾರಂಭವಾಗುವ ಹಿನ್ನಲೆಯಲ್ಲಿ ಮಾ.20 ರಿಂದ ಏ.30 ರ ತನಕ ರಸ್ತೆಯಲ್ಲಿ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗುವುದೆಂದು ಸೋಮೇಶ್ವರ ಪುರಸಭೆ ಆಡಳಿತ ಪ್ರಕಟನೆಯಲ್ಲಿ ತಿಳಿಸಿದೆ.

ಮಾ.17: ಸಭೆ

ಕಾಸರಗೋಡು: ಜಿಲ್ಲಾ ಮಟ್ಟದ ಆಧಾರ್ ಮೇಲ್ವಿಚಾರಣಾ ಸಮಿತಿ ಸಭೆಯು ಮಾ.17ರಂದು ಬೆಳಗ್ಗೆ 11 ಗಂಟೆಗೆ ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ.

ಎಸ್ಸೆಸೆಲ್ಸಿ ವಿದ್ಯಾರ್ಥಿಗಳಿಗೆ ಮಾತೃವಂದನಾ, ಪರೀಕ್ಷಾ ಕಾರ್ಯಾಗಾರ

ಕುಂದಾಪುರ : ವಂಡ್ಸೆ ಆತ್ರಾಡಿಯ ವಿಜಯ ಮಕ್ಕಳ ಕೂಟ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಎಸ್ಸೆಸೆಲ್ಸಿ ವಿದ್ಯಾರ್ಥಿಗಳಿಗೆ ಮಾತೃವಂದನಾ ಕಾರ್ಯಕ್ರಮ ಹಾಗೂ ಶಿಸ್ತುಬದ್ಧ ಪರೀಕ್ಷಾ ಕಾರ್ಯಾಗಾರ ಇತ್ತೀಚೆಗೆ ನಡೆಯಿತು. ಬಗ್ವಾಡಿ ಶ್ರೀ ಮಹಿಷಾಸುಮರ್ದಿನಿ ದೇವಸ್ಥಾನದ ಆಡಳಿತ ಮಂಡಳಿ ಮುಖ್ಯಸ್ಥ ಉದಯಕುಮಾರ ಹಟ್ಟಿಯಂಗಡಿ ಕಾರ್ಯಕ್ರಮ ಉದ್ಘಾಟಿಸಿ ಶುಭ ಹಾರೈಸಿದರು. ಅಧ್ಯಕ್ಷತೆಯನ್ನು ಸಂಸ್ಥೆಯ ಸಂಚಾಲಕ ಸುಭಾಶ್ಚಂದ್ರ ಶೆಟ್ಟಿ ವಹಿಸಿದ್ದರು. ನಿವೃತ್ತ ಮುಖ್ಯೋಪಾಧ್ಯಾಯ ದಿನಕರ ಆರ್.ಶೆಟ್ಟಿ ಬಸ್ರೂರು ಅವರು ಶಿಸ್ತುಬದ್ಧ ಪರೀಕ್ಷಾ ತರಬೇತಿಯಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರ ಪಾತ್ರದ ಕುರಿತು ಮಾತನಾಡಿದರು. ಮಾತೃವಂದನಾ ಕಾರ್ಯಕ್ರಮದ ವಿಧಿವಿಧಾನಗಳನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಉಡುಪಿ ಜಿಲ್ಲಾ ಸಹ ಕಾರ್ಯವಾಹ ಪ್ರಶಾಂತ್ ಆರೆಶಿರೂರು ನಿರ್ವಹಿಸಿದರು. ಸಂಸ್ಥೆಯ ಮುಖ್ಯೋಪಾಧ್ಯಾಯಿನಿ ದೀಪಿಕಾ ಸುಭಾಸ್ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಮಾನ್ವಿ, ಸ್ವಸ್ತಿ, ಅನುಜ್ಞಾ, ತ್ರಿಶಾ, ಸಂಭ್ರಮ ಪ್ರಾರ್ಥನೆ ನೆರವೇರಿಸಿದರು. ತನ್ವಿ ವಂದಿಸಿದರು. ಅಂಕಿತಾ ಮತ್ತು ಗಮನ್ಯಾ ಕಾರ್ಯಕ್ರಮ ನಿರ್ವಹಿಸಿದರು.

ಕಡಿರುದ್ಯಾವರ ಗ್ರಾಮದಲ್ಲಿ ಕೊಲ್ಲಾಡು-ಹೊಸಬೆಟ್ಟು ಪ್ರದೇಶಕ್ಕಿಲ್ಲ ರಸ್ತೆ ಭಾಗ್ಯ !

ಸಮಸ್ಯೆ ಬಗೆಹರಿಸದಿದ್ದರೆ ಬೃಹತ್ ಪ್ರತಿಭಟನೆಯ ಎಚ್ಚರಿಕೆ



ಪುತ್ತೂರು: ಬೆಳ್ತಂಗಡಿ ತಾಲೂಕಿನ ಕಡಿರುದ್ಯಾವರ ಗ್ರಾಮದಲ್ಲಿ ಕೊಲ್ಲಾಡು–ಹೊಸಬೆಟ್ಟು ಪ್ರದೇಶಕ್ಕೆ ರಸ್ತೆ ಇಲ್ಲದೆ ಅಲ್ಲಿನ ಜನ ತೀವ್ರ ಸಂಕಟ ಎದುರಿಸುತ್ತಿದ್ದಾರೆ. ನಮ್ಮ ಸಂಘಟನೆ ಅಲ್ಲಿನ ನಿವಾಸಿಗಳ ಪರ ಹೋರಾಟಕ್ಕೆ ಇಳಿದಿದ್ದು, ರಸ್ತೆ ನಿರ್ಮಿಸಿ ಕೊಡದೇ ಇದ್ದಲ್ಲಿ ಬೆಳ್ತಂಗಡಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಅಂಬೇಡ್ಕರ್ ತತ್ವ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಗಿರಿಧರ ನಾಯ್ಕ ಎಚ್ಚರಿಸಿದ್ದಾರೆ.

20ಕ್ಕಿಂತಲೂ ಹೆಚ್ಚು ಮನೆಗಳಿವೆ

ಗುರುವಾರ ಪುತ್ತೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೋಮಂತಡ್ಕ–ದಿಡುಪೆ ರಸ್ತೆಯಲ್ಲಿ ಪೊಟ್ಟುಕೆರೆ ಎಂಬಲ್ಲಿಂದ ಕವಲೊಡೆದ ಕೊಲ್ಲಾಡು–ಹೊಸಬೆಟ್ಟು ರಸ್ತೆಯು 150 ವರ್ಷಗಳ ಹಿಂದಿನಿಂದಲೇ ಎತ್ತಿನಗಾಡಿ ಹೋಗುವ ದಾರಿಯಾಗಿತ್ತು. ಸ್ವಾತಂತ್ರ್ಯ ಬಂದು 78 ವರ್ಷವಾದರೂ ಈ ಭಾಗಕ್ಕೆ ರಸ್ತೆ ನಿರ್ಮಿಸಿಲ್ಲ. ಇಲ್ಲಿ ಸಿಗುವ ಹೊಳೆ ದಾಟಲು ಜನ ಮಳೆಗಾಲದಲ್ಲಿ ಸಾಧ್ಯವಾಗದೆ ಪರದಾಡುತ್ತಾರೆ. ಪರಿಶಿಷ್ಟ ಪಂಗಡ ಮತ್ತು ಇತರ ಸಮುದಾಯಗಳ 20ಕ್ಕಿಂತಲೂ ಹೆಚ್ಚು ಮನೆಗಳಿವೆ.

ಮನವಿ ಸಲ್ಲಿಸಿದರೂ ಪ್ರಯೋಜನವಿಲ್ಲ

ಇಲ್ಲಿ ಶಾಶ್ವತ ರಸ್ತೆ ನಿರ್ಮಾಣ ಮಾಡುವಂತೆ 2012ರಲ್ಲಿ ಗ್ರಾಮಸ್ಥರು ಸ್ಥಳೀಯ ಶಾಸಕರು ಮತ್ತು ಕಡಿರುದ್ಯಾವರ ಗ್ರಾ.ಪಂ.ಗೆ ಮನವಿ ಸಲ್ಲಿಸಿದ್ದರು. ಆದರೆ, ಯಾವುದೇ ಪ್ರಯೋಜನವಾಗಿಲ್ಲ. ಇದಾದ ಬಳಿಕ ಗ್ರಾಮಸಭೆಯಲ್ಲೂ ರಸ್ತೆಯ ಬೇಡಿಕೆಯನ್ನು ಮಂಡಿಸಲಾಗಿದೆ. ಫಲ ಸಿಕ್ಕಿಲ್ಲ. ಈ ವಿಷಯ ನನ್ನ ಗಮನಕ್ಕೆ ಬಂದ ಮೇಲೆ ಪುತ್ತೂರು ಸಹಾಯಕ ಆಯುಕ್ತರಿಗೆ ಕಳೆದ ಡಿ.16ರಂದು ಸಂಘಟನೆ ವತಿಯಿಂದ ಮನವಿ ಸಲ್ಲಿಸಿದ್ದೇನೆ. ಪರಿಶೀಲನೆ ಮಾಡುವುದಾಗಿ ಅವರು ಭರವಸೆ ನೀಡಿದ್ದಾರೆ. ಆದರೆ, ಇನ್ನೂ ಯಾವುದೇ ಸ್ಪಂದನೆ ಸಿಕ್ಕಿಲ್ಲ ಎಂದರು.

ನಡೆದುಕೊಂಡೇ ಸಾಗಬೇಕು

ಈ ಭಾಗದ ಜನರು ಮುಖ್ಯ ರಸ್ತೆಗೆ ಬರಲು ಸುಮಾರು ಒಂದು ಕಿ.ಮೀ.ನಷ್ಟು ದೂರ ನಡೆದುಕೊಂಡು ಬರ ಬೇಕು. ಮನೆಗೆ ಬೇಕಾದ ಸಾಮಾನುಗಳು, ಕೃಷಿ ಸೊತ್ತುಗಳ ಹೊತ್ತುಕೊಂಡೇ ಸಾಗಬೇಕಾಗಿದೆ. ಅನಾರೋಗ್ಯಪೀಡಿತರನ್ನು ಆಸ್ಪತ್ರೆಗೆ ಕರೆದೊಯ್ಯಲು ಹೊತ್ತುಕೊಂಡೇ ಹೋಗಬೇಕಾದ ಪರಿಸ್ಥಿತಿ ಇದೆ. ಮಳೆಗಾಲದಲ್ಲಿ ಹೊಳೆ ತುಂಬಿ ಹರಿಯುವ ಕಾರಣ ದಾಟಿ ಹೋಗುವಂತಿಲ್ಲ.
ಗೋಷ್ಠಿಯಲ್ಲಿ ರಸ್ತೆ ಸಂತ್ರಸ್ತರಾದ ಶ್ರೀದೇವಿ ಹೊಸಬೆಟ್ಟು, ವಸಂತ ಗೌಡ ಹೊಸಬೆಟ್ಟು, ಸುನಂದ ಕಲ್ಲಬೆಟ್ಟು, ಸ್ವರೂಪ್ ಹೊಸಬೆಟ್ಟು ಉಪಸ್ಥಿತರಿದ್ದರು.

ಮೂಲಭೂತ ಸೌಕರ್ಯ ನೀಡದೆ ವಂಚನೆ

ಬೇಡಿಕೆ ಇರುವ ರಸ್ತೆಯ ಭಾಗದಲ್ಲಿ ಒಂದಷ್ಟು ಜಾಗಕ್ಕೆ ಖಾಸಗಿ ವ್ಯಕ್ತಿಯ ಆಕ್ಷೇಪವಿದೆ ಎಂದು ಗೊತ್ತಾಗಿದೆ. ಆ ಭಾಗ ಹೊರತುಪಡಿಸಿ ಉಳಿದ ಭಾಗಕ್ಕೆ ರಸ್ತೆ ಮಾಡಬಹುದು. ಸೇತುವೆ ನಿರ್ಮಿಸಬಹುದು. ಇದನ್ನು ಮಾಡದೆ ಜನರಿಗೆ ಮೂಲ ಸೌಕರ್ಯ ನೀಡದೆ ವಂಚನೆ ಮಾಡಲಾಗಿದೆ ಎಂದು ಗಿರಿಧರ ನಾಯ್ಕ ಹೇಳಿದರು.

ಅಹೋರಾತ್ರಿ ಧರಣಿ

ಪರಿಶಿಷ್ಟ ಪಂಗಡ ಮತ್ತು ಇತರ ಸಮುದಾ ಯಗಳ 20ಕ್ಕಿಂತಲೂ ಹೆಚ್ಚು ಮನೆಗಳಿದ್ದು, ಮೂಲಭೂತ ಸೌಕರ್ಯವೇ ಇಲ್ಲ. ಮನೆಗೆ ಬೇಕಾದ ಸಾಮಾನುಗಳು, ಕೃಷಿ ಸೊತ್ತು ಗಳನ್ನು ಹೊತ್ತುಕೊಂಡೇ ಸಾಗಬೇಕಾಗಿದೆ. ಇದರಿಂದ ಇಲ್ಲಿನ ಜನತೆ ಸಂಕಷ್ಟ ಎದುರಿಸುತ್ತಿದ್ದಾರೆ. ಆದ್ದರಿಂದ ಇಲ್ಲಿಗೆ ಶೀಘ್ರ ರಸ್ತೆ ನಿರ್ಮಿಸಿಕೊಡದಿದ್ದಲ್ಲಿ ಸ್ಥಳೀಯರನ್ನು ಸೇರಿಸಿಕೊಂಡು ಬೆಳ್ತಂಗಡಿಯಲ್ಲಿ ಪ್ರತಿಭಟನೆ ಮಾಡಲಾಗುವುದು. ಅದಕ್ಕೂ ಮಣಿಯದಿದ್ದಲ್ಲಿ ಅಹೋರಾತ್ರಿ ಪ್ರತಿಭಟನೆ ಮಾಡಲಾಗುವುದು. ಸಂಬಂಧಪಟ್ಟ ಇಲಾಖೆಯ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು.
● ಗಿರಿಧರ ನಾಯ್ಕ

ಅತ್ತಾವರ 55ನೇ ವಾರ್ಡಿನ ರಸ್ತೆ ಅಗಲೀಕರಣ ಸಹಿತ ತಡೆಗೋಡೆ ನಿರ್ಮಾಣಕ್ಕೆ ಭೂಮಿಪೂಜೆ



ಮಂಗಳೂರು: ಮನಪಾ ವ್ಯಾಪ್ತಿಯ ಅತ್ತಾವರ 55ನೇ ವಾರ್ಡಿನ ರಸ್ತೆ ಅಗಲೀಕರಣ ಸಹಿತ ತಡೆಗೋಡೆ ನಿರ್ಮಾಣ ಕಾಮಗಾರಿ 40 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿದ್ದು, ಅದರ ಭೂಮಿ ಪೂಜೆಯು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ನಡೆಯಿತು.

ಶೀಘ್ರ ಕಾಮಗಾರಿ ಆರಂಭ

ನಂತರ ಮಾತನಾಡಿದ ಶಾಸಕರು, ಇಲ್ಲಿನ ರಸ್ತೆಯ ಅಗಲೀಕರಣ ಸಹಿತ ತಡೆಗೋಡೆಗೆ ಅಗತ್ಯವಿದ್ದು ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲೇ ಅನುದಾನವನ್ನು ಮಂಜೂರುಗೊಳಿಸಲಾಗಿತ್ತು. ಆದರೆ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ಎಲ್ಲಾ ಅನುದಾನಗಳಿಗೆ ತಡೆ ನೀಡಿದ ಪರಿಣಾಮ ಅಭಿವೃದ್ಧಿಕಾರ್ಯ ಅರ್ಧಕ್ಕೆನಿಂತಿತ್ತು. ಇದೀಗ ಹಲವು ಬಾರಿ ಮನವಿ ಮಾಡಿದ ನಂತರ, ತಡೆ ಹಿಡಿಯಲಾಗಿದ್ದ ಅನುದಾನಗಳು ಮತ್ತೆ ಬಿಡುಗಡೆಗೊಂಡಿದ್ದು ಶೀಘ್ರ ಕಾಮಗಾರಿ ಆರಂಭವಾಗಲಿದೆ ಎಂದರು.
ಪಾಲಿಕೆ ನಿಕಟಪೂರ್ವ ಸದಸ್ಯ ಶೈಲೇಶ್ ಬಿ. ಶೆಟ್ಟಿ, ಹಿರಿಯ ಕಾರ್ಯಕರ್ತರಾದ ಪುಂಡಲೀಕ ಸುವರ್ಣ, ದೇವದಾಸ್ ಶೆಟ್ಟಿ, ಚಂದ್ರಹಾಸ್ ಕೊಟ್ಟಾರಿ, ವಾರ್ಡ್ ಅಧ್ಯಕ್ಷ ಪುಷ್ಪರಾಜ್ ಶೆಟ್ಟಿ, ಬೂತ್ ಅಧ್ಯಕ್ಷರಾದ ಗಣೇಶ್ ಕೊಟ್ಟಾರಿ, ಪ್ರಮೋದ್ ಕೊಟ್ಟಾರಿ, ದಿನೇಶ್ ಕುಲಾಲ್, ಸೋಮಶೇಖರ್, ಗಣೇಶ್, ಕಾರ್ಯದರ್ಶಿ ಲೋಕೇಶ್, ನಾರಾಯಣ ಕುಂದರ್, ಪ್ರಮುಖರಾದ ಪ್ರವೀಣ್ ನಿಡ್ಡೆಲ್, ಲಲಿತಾ, ಪ್ರೀತಾ ಕಾಮತ್, ತರುಣ್, ಪೂಜಾ, ಪ್ರೇಮಲತಾ ನಾಯ್ಕ, ಲೋಲಾಕ್ಷಿ, ನಟೇಶ್, ಸೀತಾರಾಮ್ ಶೆಟ್ಟಿ, ಯೋಗೀಶ್, ಮುರಳೀಧರ, ಪುರುಷೋತ್ತಮ್, ಪ್ರಿಯತ್, ನಳಿನಿ, ಪೂರ್ವಿ, ಶರತ್, ಶಶಿಕಲಾ, ಕುಶಾಲ, ಚೈತ್ರ, ನಮ್ರತ, ಮೀರಾ, ಜೀವಿತ್, ಸಂಭ್ರಮ್ ಮೊದಲಾದವರು ಉಪಸ್ಥಿತರಿದ್ದರು.

ಗುರುಪುರ-ಕೈಕಂಬ ನಾಗರಿಕರ ಹೋರಾಟಕ್ಕೆ ಜಯ: ಅಂಡರ್‌ಪಾಸ್ ನಿರ್ಮಾಣಕ್ಕೆ ಸಿಕ್ಕಿತು ಗ್ರೀನ್ ಸಿಗ್ನಲ್!

ಕೈಕಂಬ: ಮಂಗಳೂರು–ಮೂಡಬಿದ್ರಿ ರಾಷ್ಟ್ರೀಯ ಹೆದ್ದಾರಿ 169ರ ಗುರುಪುರ ಕೈಕಂಬದಲ್ಲಿ ಮಾರುಕಟ್ಟೆ ಬಳಿ ಅಂಡರ್ ಪಾಸ್ ನಿರ್ಮಿಸಬೇಕೆಂದು ಆಗ್ರಹಿಸಿ ಗುರುಪುರ–ಕೈಕಂಬದ ಸಾರ್ವಜನಿಕರು ನಡೆಸಿದ್ದ ಸತತ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಿದೆ
ಗುರುಪುರ–ಕೈಕಂಬ ಪೇಟೆಯನ್ನು ವಿಭಾಗ ಮಾಡುವ ರೀತಿಯಲ್ಲಿ ಪೇಟೆ ನಡುವೆ ಗೋಡೆ ನಿರ್ಮಿಸಿ ಮಣ್ಣು ತುಂಬಿಸಿ ಹೆದ್ದಾರಿ ನಿರ್ಮಾಣವಾಗುತ್ತಿದೆ. ಇದರಿಂದ ಪೇಟೆಯ ವ್ಯಾಪಾರ–ವ್ಯವಹಾರಗಳಿಗೆ ಧಕ್ಕೆಯಾಗಲಿದೆ. ಅಲ್ಲದೆ ಮಾರುಕಟ್ಟೆ ಬಳಿ ಅಂಡರ್ ಪಾಸ್ ನಿರ್ಮಾಣ ಮಾಡದೇ ಕಂದಾವರ, ಅದ್ಯಪಾಡಿಗೆ ಸಾಗುವವರು ಕಿ.ಮೀ. ದೂರ ಸುತ್ತಿಬಳಸಿ ಸಂಚರಿಸುವ ಅನಿವಾರ್ಯತೆ ಬರಲಿತ್ತು. ಅಲ್ಲದೇ ಪ್ರಮುಖ ಪೇಟೆಯಲ್ಲಿ ಈ ರೀತಿ ಅವೈಜ್ಞಾನಿಕವಾಗಿ ಕಾಮಗಾರಿ ನಡೆಸಲಾಗುತ್ತಿದೆ. ವಾಮಂಜೂರಿನಲ್ಲಿ ಮಾಡಿದಂತೆ ಇಲ್ಲಿ ತೆರೆದ ಹೆದ್ದಾರಿ ಮಾಡಬೇಕು ಅಥವಾ ಮಾರುಕಟ್ಟೆ ಬಳಿ ಅಂಡರ್ ಪಾಸ್ ನಿರ್ಮಿಸಬೇಕು ಎಂದು ಒತ್ತಾಯಿಸಿ ಗುರುಪುರ–ಕೈಕಂಬದಲ್ಲಿ ಪಕ್ಷ, ಧರ್ಮ, ಜಾತಿ ರಹಿತ ವ್ಯಾಪಾರಿಗಳು, ರಿಕ್ಷಾ ಚಾಲಕರು ಸೇರಿದಂತೆ ಎಲ್ಲಾ ವರ್ಗದ ಸಾರ್ವಜನಿಕರು ಫೆಬ್ರವರಿ 7ರಂದು ಹಕ್ಕೊತ್ತಾಯ ಹೋರಾಟ ನಡೆಸಿದ್ದರು.
ಫೆಬ್ರವರಿ 20ರಂದು ಅಂಡರ್ ಪಾಸ್ ನಿರ್ಮಾಣಕ್ಕೆ ಆಗ್ರಹಿಸಿ ಸುರೇಶ್ ಎಂಬವರು ಗುರುಪುರ–ಕೈಕಂಬ ಜಂಕ್ಷನ್‌ನಲ್ಲಿ ಏಕಾಂಗಿ ಪ್ರತಿಭಟನೆ ನಡೆಸಿದ್ದರು.



ಅವಿರತ ಶ್ರಮ

ಅಲ್ಲದೇ ಸ್ಥಳೀಯ ಶಾಸಕರು ಮತ್ತು ಲೋಕಸಭಾ ಸದಸ್ಯರು ಸೇರಿದಂತೆ ಹೆದ್ದಾರಿ ಇಲಾಖೆಗೆ ಪದೇ ಪದೇ ಮನವಿ ಸಲ್ಲಿಸಿ ಅಂಡರ್ ಪಾಸ್ ನಿರ್ಮಾಣಕ್ಕಾಗಿ ಅವಿರತವಾಗಿ ಪ್ರಯತ್ನಿಸಿದ್ದರು.
ದ.ಕ. ಲೋಕಸಭಾ ಸದಸ್ಯ ಕ್ಯಾ. ಬ್ರಿಜೇಶ್ ಚೌಟ, ಮಂಗಳೂರು ಉತ್ತರ ಶಾಸಕ ಡಾ.ವೈ. ಭರತ್ ಶೆಟ್ಟಿ ಹೆದ್ದಾರಿ ಇಲಾಖೆ ಗುರುಪುರ–ಕೈಕಂಬದಲ್ಲಿ ಅಂಡರ್ ಪಾಸ್ ನಿರ್ಮಾಣ ಮಾಡಲು ಒಪ್ಪಿಗೆ ನೀಡುವಲ್ಲಿ ಮಾಡಿದ ಸತತ ಪ್ರಯತ್ನ ಈಗ ಫಲ ನೀಡಿದೆ. ಜೊತೆಗೆ ಸಾಮಾಜಿಕ ಮುಖಂಡ ಚಂದ್ರಹಾಸ್ ಶೆಟ್ಟಿ ನಾರಾಳ ತೆರೆಮರೆಯ ಸತತ ಪ್ರಯತ್ನ ಅಂಡರ್ ಪಾಸ್ ಮಂಜೂರಾತಿಯಲ್ಲಿ ಕೆಲಸ ಮಾಡಿದೆ.
ಇಲ್ಲಿನ ಮಾರುಕಟ್ಟೆ ಬಳಿ ಜನರು, ಲಘು ವಾಹನಗಳು ಸಂಚರಿಸಲು ಅನುಕೂಲವಾ ಗುವ ಅಂಡರ್ ಪಾಸ್ ನಿರ್ಮಾಣವಾಗಲಿದೆ.

ಮಹಿಳಾ ದಿನಾಚರಣೆ: ಎಕೆಪಿಎಯಿಂದ ಹಸಿರು ಕ್ರಿಯಾಸೇನಾ ಕಾರ್ಯಕರ್ತೆಗೆ ಸನ್ಮಾನ



ಕಾಸರಗೋಡು: ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಅಖಿಲ ಕೇರಳ ಛಾಯಾಗ್ರಾಹಕರ ಸಂಘ (ಎಕೆಪಿಎ) ಕಾಸರಗೋಡು ಪೂರ್ವ ಘಟಕವು ಕಳೆದ ಕೆಲವು ವರ್ಷಗಳಿಂದ ತ್ಯಾಜ್ಯ ನಿರ್ವಹಣಾ ಮತ್ತು ಪರಿಸರ ಚಟುವಟಿಕೆಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಗಾಯತ್ರಿ ಕಿಣಿ ಅವರನ್ನು ಅಭಿನಂದಿಸಲಾಯಿತು. ಪೂರ್ವ ಘಟಕದ ಅಧ್ಯಕ್ಷ ರಾಜಶೇಖರ ಅವರು ಗಾಯತ್ರಿ ಕಿಣಿ ಅವರಿಗೆ ಚಿನ್ನದ ಪದಕ ನಿಡಿ ಸನ್ಮಾನಿಸಿದರು. ಕಾರ್ಯದರ್ಶಿ ಅಖಿಲ್ ಎ.ಎಸ್.ಕೆ., ಶ್ರೀಕಾಂತ್, ರಾಜ್ಯ ಸಮಿತಿ ಸದಸ್ಯ ರಾಜೇಂದ್ರನ್, ಜಿಲ್ಲಾ ಸಮಿತಿ ಸದಸ್ಯ ಸಂಜೀವ ರೈ ಪ್ರಾದೇಶಿಕ ಕೋಶಾಧಿಕಾರಿ ಅಜಿತ್‌ಕುಮಾರ್, ಫು ಫೈಸಲ್ ಮತ್ತು ಸುರೇಶ್ ಬಿ.ಜಿ. ಉಪಸ್ಥಿತರಿದ್ದರು.

ನಾಳೆ ಕುಂಟಾರು ಎಯುಪಿ ಶಾಲೆ: 'ಸಾಹಿತ್ಯೋತ್ಸವ' ಸಂಭ್ರಮ, ಗೋಷ್ಠಿ

ಮುಳ್ಳೇರಿಯ: ಕುಂಟಾರು ಎಯುಪಿ ಶಾಲೆ –ಕನ್ನಡ ಸಂಶೋಧನಾ ಕೇಂದ್ರ ಕಾಸರಗೋಡು ಇವರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಾಸರಗೋಡು ಜಿಲ್ಲಾ ಘಟಕ, ಹಳೆ ವಿದ್ಯಾರ್ಥಿಗಳ ಸಂಘ ಎಯುಪಿ ಶಾಲೆ ಕುಂಟಾರು ಇವುಗಳ ಸಹಕಾರದೊಂದಿಗೆ ಕುಂಟಾರು ಸಾಹಿತ್ಯೋತ್ಸವ ಮಾ.15ರಂದು ಕುಂಟಾರು ಶಾಲೆಯಲ್ಲಿ ಜರಗಲಿದೆ.
ಬೆಳಿಗ್ಗೆ 9.30ಕ್ಕೆ ಮುಂಬೈ ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ. ತಾಳ್ತಜೆ ವಸಂತಕುಮಾರ್ ಸಾಹಿತ್ಯೋತ್ಸವವನ್ನು ಉದ್ಘಾಟಿಸಿ ಪುಸ್ತಕ ಬಿಡುಗಡೆಗೊಳಿಸುವರು. ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ. ಕಮಲಾಕ್ಷ ಕಾಸರಗೋಡು ಅಧ್ಯಕ್ಷತೆ ವಹಿಸುವರು. ಪುಸ್ತಕ ಪ್ರದರ್ಶನವನ್ನು ಖ್ಯಾತ ಚಲನಚಿತ್ರ ನಟ ಕಾಸರಗೋಡು ಚಿನ್ನಾ, ವಸ್ತು ಪ್ರದರ್ಶನವನ್ನು ಕಾರಡ್ಕ ಗ್ರಾ.ಪಂ.ಅಧ್ಯಕ್ಷೆ ಜನನಿ ಎಂ., ಚಿತ್ರ ಮತ್ತು ವ್ಯಂಗ್ಯ ಚಿತ್ರ ಪ್ರದರ್ಶನವನ್ನು ಹಿರಿಯ ವ್ಯಂಗ್ಯ ಚಿತ್ರಗಾರ ಎಚ್.ಎಸ್. ವಿಶ್ವನಾಥ್ ಬೆಂಗಳೂರು ಉದ್ಘಾಟಿಸುವರು. ಡಾ.ಮೋಹನ ಕುಂಟಾರು ಪ್ರಸ್ತಾವನೆಗೈವರು. ಪಂ. ಸದಸ್ಯೆ ಬೇಬಿ ಕಟ್ಟತ್ತಬಯಲು, ಕುಂಟಾರು ಸಾಹಿತ್ಯೋತ್ಸವ ಸಮಿತಿ ಉಪಾಧ್ಯಕ್ಷ ಜಗದೀಶ ಮಾಸ್ಟರ್, ಮುಖ್ಯ ಶಿಕ್ಷಕಿ ದಾಕ್ಷಾಯಿಣಿ, ಪಿಟಿಎ ಅಧ್ಯಕ್ಷ ಬಶೀರ್ ನಯೀಮಿ ಭಾಗವಹಿಸುವರು. 11 ಗಂಟೆಗೆ ನಡೆಯುವ 1ನೇ ಗೋಷ್ಠಿಯಲ್ಲಿ ಪಂಪನ ವಿಕ್ರಮಾರ್ಜುನ ವಿಜಯ ವಿಷಯವಾಗಿ ಪ್ರಾಧ್ಯಾಪಕ ಡಾ.ರತ್ನಾಕರ ಮಲ್ಲಮೂಲೆ, ರಾಘವಾಂಕನ ಹರಿಶ್ಚಂದ್ರ ಕಾವ್ಯ ವಿಷಯವಾಗಿ ಡಾ.ಮೀನಾಕ್ಷಿ ರಾಮಚಂದ್ರ, ಮಂಗಳೂರು, ವಚನ ಸಾಹಿತ್ಯ ವಿಷಯವಾಗಿ ಡಾ.ಸಾಹಿತ್ಯ ವಿಷಯವಾಗಿ ಡಾ.ಟಿ.ಎ.ಎನ್ ಖಂಡಿಗೆ ಮೂಡುಬಿದಿರೆ ಮಾತನಾಡುವರು.
ಮಧ್ಯಾಹ್ನ 12ಗಂಟೆಗೆ ನಡೆಯುವ 2ನೇ ಗೋಷ್ಠಿಯಲ್ಲಿ ವ್ಯಕ್ತಿತ್ವ ವಿಕಸನ ಮತ್ತು ಸಾಹಿತ್ಯ ವಿಷಯವಾಗಿ ಡಾ.ವರದರಾಜ ಚಂದ್ರಗಿರಿ, ಕೃಷಿಕ ಮಹಿಳೆ –ಸಾಹಿತ್ಯ ವಿಷಯವಾಗಿ ಸಹನಾ ಕಾಂತಬೈಲು ಸಂಪಾಜೆ, ಜಾನಪದ ಸುಂದರ ಕೇನಾಜೆ ಸುಳ್ಯ ಮಾತನಾಡುವರು.
ಅಪರಾಹ್ನ 2 ಗಂಟೆಗೆ 3ನೇ ಗೋಷ್ಠಿಯಲ್ಲಿ ಕುವೆಂಪು ಕವಿತೆಗಳು ವಿಷಯವಾಗಿ ಡಾ. ಸುಧಾರಾಣಿ ವಿಷಯವಾಗಿ ಡಾ.ಬೇಸೀ ಗೋಪಾಲಕೃಷ್ಣ ಭಟ್ ಬದಿಯಡ್ಕ, ಸಣ್ಣಕತೆ, ಕಾದಂಬರಿ ವಿಷಯವಾಗಿ ಡಾ.ರಾಧಾಕೃಷ್ಣ ಬೆಳ್ಳೂರು ಮೂಡುಬಿದಿರೆ, ಕೀರ್ತನ ಸಾಹಿತ್ಯ ಮಾತನಾಡುವರು. 3 ಗಂಟೆಗೆ ನಡೆಯುವ ಬಹುಭಾಷಾ ಕವಿಗೋಷ್ಠಿಯಲ್ಲಿ ಕವಿ ರಾಧಾಕೃಷ್ಣ ಉಳಿಯತ್ತಡ್ಕ ಅಧ್ಯಕ್ಷತೆ ವಹಿಸುವರು.

ಸಮಾರೋಪ ಸಮಾರಂಭ

ಸಂಜೆ 4ಗಂಟೆಗೆ ನಡೆಯುವ ಸಮಾರೋಪದಲ್ಲಿ ಡಾ.ಮೋಹನ ಕುಂಟಾರ್ ಅಧ್ಯಕ್ಷತೆ ವಹಿಸುವರು. ಹಂಪಿ ವಿವಿ ಪ್ರಾಧ್ಯಾಪಕ ಡಾ.ವೆಂಕಟಗಿರಿ ದಳವಾಯಿ ಸಮಾರೋಪ ಭಾಷಣ ಮಾಡುವರು. ಆಯಿಷಾ ಪೆರ್ಲ ಅತಿಥಿಯಾಗಿರುವರು. ಕಸಾಪ ಕಾಸರಗೋಡು ಜಿಲ್ಲಾ ಘಟಕ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕಾರಡ್ಕ ಪಂ. ಉಪಾಧ್ಯಕ್ಷ ದಾಮೋದರ ಎಂ., ರವೀಶ ತಂತ್ರಿ ಕುಂಟಾರು, ಕುಂಟಾರು ಎಯುಪಿ ಶಾಲಾ ವ್ಯವಸ್ಥಾಪಕ ವಿಷ್ಣು ಪ್ರಸಾದ್ ಭಾಗವಹಿಸುವರು.
ಸಂಜೆ 5ರಿಂದ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಕಾಸರಗೋಡು ಇವರಿಂದ ಭಾವಗಾನಾಮೃತ, ಕುಂಟಾರು ಎಯುಪಿ ಶಾಲೆಯ ವಿದ್ಯಾರ್ಥಿಗಳಿಂದ ಯಕ್ಷಗಾನ ತಾಳಮದ್ದಳೆ ನಡೆಯಲಿದೆ.

ಗೋಳ್ತಮಜಲು ಗ್ರಾಪಂ: ಋತುಚಕ್ರ ನಿರ್ವಹಣಾ ಮಾಹಿತಿ ಕಾರ್ಯಕ್ರಮ



ಬಂಟ್ವಾಳ: ಗೋಳ್ತಮಜಲು ಗ್ರಾ.ಪಂ., ಹಸಿರು ದಳ ಮಂಗಳೂರು, ಆಶೀರ್ವಾದ ಸಂಜೀವಿನಿ ಒಕ್ಕೂಟ ಗೋಳ್ತಮಜಲು ಹಾಗೂ ಶ್ರೀ ಸಿದ್ಧಿವಿನಾಯಕ ಸ್ವಸಹಾಯ ಸಂಘ ಇವುಗಳ ಸಂಯುಕ್ತಾಶ್ರಯದಲ್ಲಿ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರ ಋತುಚಕ್ರ ನಿರ್ವಹಣಾ ಹಾಗೂ ಮಹಿಳೆ ಮತ್ತು ಶುಚಿತ್ವ ಮಾಹಿತಿ ಕಾರ್ಯಕ್ರಮ ಗೋಳ್ತಮಜಲು ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆಸಲಾಯಿತು.
ಅಧ್ಯಕ್ಷತೆಯನ್ನು ಸಂಜೀವಿನಿ ಒಕ್ಕೂಟದ ಅಧ್ಯಕ್ಷರಾದ ವಿದ್ಯಾ ಕೊಟ್ಟಾರಿ ವಹಿಸಿದ್ದರು. ಗೋಳ್ತಮಜಲು ಗ್ರಾ.ಪಂ.ನ ಆಡಳಿತಾಧಿಕಾರಿ, ಬಂಟ್ವಾಳ ಕೃಷಿ ಅಧಿಕಾರಿ ನಂದನ್ ಶೆಣೈ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಿಳೆಯರ ಸಬಲೀಕರಣ ಹಾಗೂ ಉತ್ತಮ ಸ್ಥಾನಮಾನ ಗಳಿಸುವ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ಬ್ಯಾಂಕ್ ಆಫ್ ಬರೋಡಾ ಕಲ್ಲಡ್ಕ ಶಾಖೆ ವ್ಯವಸ್ಥಾಪಕ ಭುವನೇಶ್ ಬ್ಯಾಂಕ್ ಸಾಲ ಸೌಲಭ್ಯ , ವಿಮೆ ಬಗ್ಗೆ ಮಾಹಿತಿ ನೀಡಿದರು.
ಹಸಿರು ದಳ ಪಾವೂರು ವಲಯ ಮೇಲ್ವಿಚಾರಕಿ ಪ್ರಿಯಾ, ಹರೇಕಲ ವಲಯ ಮೇಲ್ವಿಚಾರಕಿ ರೇಖಾ ಋತುಚಕ್ರದ ಸಮಯದಲ್ಲಿ ಮಹಿಳೆಯರು ವಹಿಸ ಬೇಕಾದ ಕಾಳಜಿಗಳ ಮಾಹಿತಿ ನೀಡಿದರು. ಕಲ್ಲಡ್ಕ ಮಾದರಿ ಶಾಲಾ 8ನೇ ತರಗತಿ ವಿದ್ಯಾರ್ಥಿಗಳಿಗೆ ಋತುಚಕ್ರ , ಶುಚಿತ್ವದ ಅರಿವುಮೂಡಿಸಿ ಉಚಿತ ಕಾಟನ್ ಪ್ಯಾಡ್‌ಗಳ ವಿತರಿಸಲಾಯಿತು. ಪ್ರಾ.ಆ. ಕೇಂ. ಅಧಿಕಾರಿ ಚಂದ್ರಾವತಿ ಮಾಹಿತಿ ನೀಡಿದರು.
ಹಸಿರು ದಳ ಗೋಳ್ತಮಜಲು ವಲಯ ಮೇಲ್ವಿಚಾರಕ ಸಾಂತಪ್ಪ, ಪಂ.ಕಾರ್ಯದರ್ಶಿ ಚಿತ್ರ, ಬಂಟ್ವಾಳ ಸಂಜೀವಿನಿ ಅಭಿಯಾನ ಘಟಕ ಕೃಷಿವ್ಯವಸ್ಥಾಪಕಕಿ ಕುಮಾರಿ ಸಾಂಘವಿ, ಆರ್ಥಿಕ ಸಾಕ್ಷರತಾ ಕೇಂದ್ರ ಬಿ.ಸಿ.ರೋಡು ಇದರ ಸಂಪನ್ಮೂಲ ವ್ಯಕ್ತಿ ಅನುಷಾ ಮತ್ತಿತರರಿದ್ದರು. ವಿಜಯ ಪ್ರಕಾಶ್ ಪ್ರಾರ್ಥಿಸಿ, ಮುಖ್ಯ ಪುಸ್ತಕ ಬರಹಗಾರ್ತಿ ಭವಾನಿ ಸ್ವಾಗತಿಸಿ, ಕೃಷಿ ಸಖಿ ಪುಷ್ಪಾವತಿ ಪಿ. ನಿರೂಪಿಸಿದರು.

ರಸ್ತೆ ಕಾಮಗಾರಿ ಮಾಡದಿದ್ದಲ್ಲಿ ರಸ್ತೆ ತಡೆದು ಉಗ್ರ ಹೋರಾಟ: ಎಚ್ಚರಿಕೆ



ನಾಪೋಕ್ಲು: ಹತ್ತು ದಿವಸದ ಒಳಗೆ ರಸ್ತೆಯ ಕಾಮಗಾರಿಯನ್ನು ಪೂರ್ಣಗೊಳಿಸದೇ ಇದ್ದಲ್ಲಿ ರಸ್ತೆ ತಡೆ ಉಗ್ರ ಹೋರಾಟ ಮಾಡಲಾಗುವುದು. ಎಂದು ಬಲ್ಲಮಾವಟಿ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಕರವಂಡ ಲವ ನಾಣಯ್ಯ ಎಚ್ಚರಿಸಿದ್ದಾರೆ.
ಇಲ್ಲಿಯ ಪಟ್ಟಣದಲ್ಲಿ ಆಯೋಜಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಪೋಕ್ಲುವಿನಿಂದ ಬಲ್ಲಮಾವಟಿ ವರೆ ಗಿನ ಮುಖ್ಯ ರಸ್ತೆಯನ್ನು ಯಾವುದೇ ರಿಪೇರಿ ಕೆಲಸ ಮಾಡದೆ ಅಥವಾ ಮರು ಡಾಂಬರೀಕರಣ ಮಾಡದೆ ಹಾಗೆ ಬಿಡಲಾಗಿದೆ. ಎಲ್ಲಾ ಕಡೆ ಕಳಪೆಯಾಗಿಯಾದರೂ ಗುಂಡಿ ಮುಚ್ಚುವ ಕೆಲಸ ಮಾಡಲಾಗಿದೆ. ಆದರೆ ಇಲ್ಲಿ ಏಕೆ ರಸ್ತೆ ಕಾಮಗಾರಿ ಮಾಡು ತ್ತಿಲ್ಲ?. ಈ ಭಾಗದ ಜನರ ಗೋಳು ಹೇಳತೀರದಾಗಿದೆ. ವಾಹನಗಳಿಗೆ ತೆರಳಲಿಕ್ಕೂ ಸಾಧ್ಯವಾಗದ ಸ್ಥಿತಿಗೆ ತಲುಪಿದೆ. 2 ತಿಂಗಳ ಹಿಂದೆ ಬಿಜೆಪಿಯಿಂದ, ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ರಸ್ತೆ ತಡೆ ಮಾಡಿ ಲೋಕೋಪಯೋಗಿ ಇಲಾಖೆಗೆ ಜಿಲ್ಲಾಡಳಿತ, ಸರ್ಕಾರಕ್ಕೆ ಮನವರಿಕೆ ಮಾಡಲಾಗಿತ್ತು.
ಉದ್ದೇಶಪೂರ್ವಕ, ರಸ್ತೆಗೆ ಪ್ರಶ್ನೆ ಮಾಡಿದ್ದಕ್ಕಾಗಿ ಇಲ್ಲಿಯ ರಸ್ತೆ ಕಾಮಗಾರಿ ತಡೆಹಿಡಿಯಲಾಗಿದೆ ಎಂಬ ಮಾಹಿತಿ ದೊರೆಯುತ್ತಿದೆ. ಯಾವ ಕಾರಣಕ್ಕೆ ತಡೆಹಿಡಿಯಲಾಗಿದೆ? ಇನ್ನು 10 ದಿವಸದ ಒಳಗೆ ಈ ರಸ್ತೆಯ ಕಾಮಗಾರಿ ಪೂರ್ಣಗೊಳಿಸದೇ ಇದ್ದಲ್ಲಿ, ಮತ್ತೊಮ್ಮೆ ಬಿಜೆಪಿಯಿಂದ, ಎಲ್ಲಾ ಸಂಘ, ಸಂಸ್ಥೆಗಳ ಮತ್ತು ರೈತರ, ಸಾರ್ವಜನಿಕರ ಸಹಯೋಗದೊಂದಿಗೆ ರಸ್ತೆ ತಡೆ ನಡೆಸಿ ಉಗ್ರಹೋರಾಟ ಮಾಡಲಾಗುವುದೆಂದು ಲವ ನಾಣಯ್ಯ ಎಚ್ಚರಿಸಿದ್ದಾರೆ.
ಬಲ್ಲಮಾವಟಿ ಶಕ್ತಿಕೇಂದ್ರದ ಉಪಾಧ್ಯಕ್ಷ ಮನವಟ್ಟಿರ ದೀಪಕ್ ಪೊನ್ನಪ್ಪ, ಬಲ್ಲಮಾವಟಿ ಬಿಜೆಪಿ ಬೂತ್ ಅಧ್ಯಕ್ಷ, ಚೀಯಂಡಿ ದಿನೇಶ್ ಗಣಪತಿ, ಪೇರೂರು ಬಿಜೆಪಿ ಬೂತ್ ಅಧ್ಯಕ್ಷ ಮಚ್ಚುರ ಶರೀನ್ ಬೋಪಣ್ಣ, ಬಲ್ಲಮಾವಟಿ ಗ್ರಾ.ಪಂ.ಮಾಜಿ ಅಧ್ಯಕ್ಷ ಮುಕ್ಕಾಟಿರ ಸುತನ್ ಸುಬ್ಬಯ್ಯ ಗೋಷ್ಠಿಯಲ್ಲಿದ್ದರು.

ಚೇಳ್ಯಾರು ಗ್ರಾಮ ಪಂಚಾಯತ್‌ನಲ್ಲಿ ರೂ.40 ಲಕ್ಷಕ್ಕೂ ಮಿಕ್ಕಿ ವಿದ್ಯುತ್, ನೀರಿನ ಬಿಲ್ ಬಾಕಿ

ಬಾಕಿ ಬಿಲ್ ವಸೂಲಾತಿಗೆ ಶುರುವಾಗಿದೆ ಸಂಪರ್ಕ ಕಡಿತದ ಅಭಿಯಾನ

ಸುರತ್ಕಲ್: ಚೇಳ್ಯಾರು ಗ್ರಾಮ ಪಂಚಾಯಿತಿಗೆ ವಿದ್ಯುತ್ ಹಾಗೂ ನೀರಿನ ಬಿಲ್ ಸುಮಾರು ರೂ.40 ಲಕ್ಷಕ್ಕೂ ಮಿಕ್ಕಿ ಬಾಕಿ ಉಳಿದಿದ್ದು ವಿದ್ಯುತ್ ಕಡಿತಗೊಳ್ಳುವ ಭೀತಿ ವ್ಯಕ್ತವಾಗಿದೆ. ಇದಕ್ಕಾಗಿ ಗ್ರಾಮ ಪಂಚಾಯತ್ ಲಕ್ಷಾಂತರ ರೂಪಾಯಿ ನೀರಿನ ಬಿಲ್ ಬಾಕಿ ವಸೂಲಾತಿಗೆ ಸಂಪರ್ಕ ಕಡಿತದ ಅಭಿಯಾನ ಆರಂಭಿಸಿದೆ. ಇದರಿಂದ ಎಚ್ಚೆತ್ತ ಜನರು ಬಿಲ್ ಪಾವತಿಗೆ ಮನಸ್ಸು ಮಾಡಿದ್ದು ಅಭಿಯಾನ ಬಳಿಕ ಸುಮಾರು 1.30 ಲ.ರೂ ಸಂಗ್ರಹವಾಗಿದೆ.
ಕಳೆದ ಗ್ರಾ.ಪಂ. ಗ್ರಾಮ ಸಭೆಯಲ್ಲಿ ಬಿಲ್ ಪಾವತಿ ಬಾಕಿ ಇರುವ ಬಗ್ಗೆ ಸ್ವತಹ ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡಿದ್ದರು. ಪ್ರಾಮಾಣಿಕತೆಯಿಂದ ಬಿಲ್ ಪಾವತಿಸುವವರು ಪಾವತಿ ಮಾಡುತ್ತಲೇ ಇದ್ದಾರೆ, ಉಳಿದವರು ಹಲವಾರು ವರ್ಷಗಳಿಂದ ಕನಿಷ್ಠ ನೂರು ರೂ. ಬಿಲ್ ಪಾವತಿ ಮಾಡದೆ ಲಕ್ಷಾಂತರ ಬಾಕಿ ಉಳಿಯುವಂತೆ ಆಗಿದೆ. ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದರು. ಹಲವಾರು ಬಾರಿ ಬಿಲ್ ಪಾವತಿಸುವಂತೆ ಮನವಿ ಹಾಗೂ ಗ್ರಾಮದಾದ್ಯಂತ ಬ್ಯಾನರ್ ಹಾಕಲಾಗಿದ್ದರೂ ಸೂಕ್ತ ಸ್ಪಂದನೆ ದೊರಕಿರಲಿಲ್ಲ. ಇದರಿಂದ ಪಂ. ನಿರ್ಣಯ ಅಂಗೀಕರಿಸಿ ಬಿಲ್ ವಸೂಲಾತಿಗೆ ಕಠಿಣ ನಿರ್ಧಾರ ತಡೆದಿದೆ. ಬೀದಿ ದೀಪದ ವಿದ್ಯುತ್, ಮೋಟಾರ್ ಪಂಪುಗಳ ಬಿಲ್ ಬಾಕಿ ಉಳಿದಿದ್ದು ಮೆಸ್ಕಾಂ ನೋಟಿಸ್ ಜಾರಿ ಮಾಡಿ ಬಿಲ್ ಕಟ್ಟುವಂತೆ ಸೂಚಿಸಿದೆ. ಇಲ್ಲದೆ ಹೋದಲ್ಲಿ ವಿದ್ಯುತ್ ಕಡಿತಗೊಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಮುನ್ಸೂಚನೆ ನೀಡಿದೆ. ಇದರಿಂದ ಗ್ರಾ.ಪಂ. ಕಳೆದ ಹಲವು ದಿನಗಳಿಂದ ನೀರಿನ ಬಿಲ್ ಬಾಕಿ ಇರುವವರ ಸಂಪರ್ಕ ಕಡಿತ ಮಾಡುತ್ತಿದೆ.



ಇನ್ನು ಮುಂದೆ ಮೀಟರ್ ಕಡ್ಡಾಯ

ಗ್ರಾ.ಪಂ. ವ್ಯಾಪ್ತಿಯಲ್ಲಿ ವಿಶೇಷ ಹಿಂದು ಳಿದ ವರ್ಗಕ್ಕೆ ಇದುವರೆಗೆ ಕನಿಷ್ಠ 100 ರೂ. ಮಾತ್ರ ಇತ್ತು. ಇದೀಗ ಸರಕಾರ ಮೀ. ಕಡ್ಡಾಯಗೊಳಿಸಿದ್ದು ನೀರಿನ ಬಳಕೆ ಆಧಾರ ಮೇಲೆ ಇನ್ನು ಮುಂದೆ ಬಿಲ್ ಪಾವತಿ ಮಾಡಬೇಕಾಗುತ್ತದೆ.

ಶುಲ್ಕ ಪಾವತಿಸಿ

ಶುಲ್ಕ ಪಾವತಿಸಲು ವಿಫಲವಾದರೆ ಗ್ರಾಮದಲ್ಲಿ ಬೀದಿ ದೀಪ ಸಮಸ್ಯೆ, ನೀರಿನ ಬಳಕೆ ಮೋಟಾರ್ ಪಂಪುಗಳ ಬಳಕೆ ಸಮಸ್ಯೆ ಎದುರಿಸಬೇಕಾಗಬಹುದು. ಹೀಗಾಗಿ ಜನರು ಸ್ವಯಂ ಪ್ರೇರಿತಗಾಗಿ ಬಾಕಿ ಉಳಿದ ನೀರಿನ ಶುಲ್ಕ ಪಾವತಿಸಬೇಕೆಂದು ಪಿಡಿಒ ಮನವಿ ಮಾಡಿದ್ದಾರೆ.

ದುಬಾರಿ ಬಿಲ್ ಬಾಕಿ!

ಗ್ರಾ.ಪಂ. ವ್ಯಾಪ್ತಿಯಲ್ಲಿ ಸಂಪರ್ಕ ಪಡೆದ ಹಲವಾರು ಕುಟುಂಬಗಳು ವರ್ಷಗಟ್ಟಲೆ ನೀರಿನ ಬಿಲ್ ಪಾವತಿಸದ ಕಾರಣ ಕನಿಷ್ಠ 5000 ದಿಂದ 10,000 ರೂ. ಗಳವರೆಗೆ ಬಿಲ್ ಬಾಕಿ ಉಳಿದಿದೆ. ಕೊರಗ ಕುಟುಂಬ ಸೇರಿದಂತೆ ಗ್ರಾಮದ ಜನರಿಗೆ ಕಂತಿನ ಮೂಲಕ ಬಿಲ್ ಪಾವತಿಸಲು ಅವಕಾಶ ಕಲ್ಪಿಸಲಾಗಿದ್ದು, ಈಗಾಗಲೇ ಹಲವಾರು ಕುಟುಂಬಗಳು ಅರ್ಧ ಮೊತ್ತವನ್ನು ಪಾವತಿಸಿವೆ. ಪಂ.ಅಭಿವೃದ್ಧಿ ಬಗ್ಗೆ ಸಾರ್ವಜನಿಕರು ಕೈಜೋಡಿಸಬೇಕು.
● ವೆಂಕಟರಮಣ, ಪಿಡಿಒ

ಹೊಲಿಗೆ ತರಬೇತಿ ಶಿಬಿರ ಸಮಾರೋಪ

ಮೂಡುಬಿದಿರೆ : ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಮೂಡುಬಿದಿರೆ ತಾಲೂಕಿನ ಜ್ಞಾನ ವಿಕಾಸ ಕಾರ್ಯಕ್ರಮದಡಿ 3 ತಿಂಗಳ ಕಾಲ ನಡೆದ ಉಚಿತ ಹೊಲಿಗೆ ತರಬೇತಿಯ ಸಮಾರೋಪ ಸಮಾರಂಭವು ಶಿರ್ತಾಡಿ ಗ್ರಂಥಾಲಯ ಕಟ್ಟಡದಲ್ಲಿ ನಡೆಯಿತು.
ಯೋಜನಾಧಿಕಾರಿ ಧನಂಜಯ ಮಾತನಾಡಿ, ಸ್ವ ಉದ್ಯೋಗಕ್ಕೆ ಪ್ರೇರಣೆ ನೀಡುವ ಉದ್ದೇಶದಿಂದ ಜ್ಞಾನ ವಿಕಾಸ ಕಾರ್ಯಕ್ರಮದ ಮೂಲಕ ಹೊಲಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಿದ್ದು ಇದರ ಸಂಪೂರ್ಣ ಪ್ರಯೋಜನ ಪಡೆದುಕೊಳ್ಳಿ ಯೋಜನೆ ಮೂಡುಕೊಣಾಜೆ ಒಕ್ಕೂಟದ ನಿ.ಪೂ.ಅಧ್ಯಕ್ಷ ಸುಧಾಕರ್ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಶಿರ್ತಾಡಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆಶಾಲತಾ ಭಾಗವಹಿಸಿದರು.



ತಾಲೂಕು ಜನಜಾಗೃತಿ ವೇದಿಕೆ ಅಲಂಗಾರ್ ವಲಯದ ಸದಸ್ಯರಾದ ಲತಾ ಹೆಗ್ಡೆ ಜಿಲ್ಲಾ ವಿಮಾ ಸಮನ್ವಯಾಧಿಕಾರಿ ಹೇಮಲತಾ ಹೆಗ್ಡೆ ವಲಯದ ಮೇಲ್ವಿಚಾರಕ ಚಂದ್ರಹಾಸ, ಹೊಲಿಗೆ ತರಬೇತಿ ಶಿಕ್ಷಕಿ ಸುಕನ್ಯಾ ಉಪಸ್ಥಿತರಿದ್ದರು.
ಸುಮಾರು 28 ಶಿಬಿರಾರ್ಥಿಗಳು ತರಬೇತಿ ಪಡೆಕೊಂಡರು. ಸೇವಾಪ್ರತಿನಿಧಿ ಶಶಿರೇಖಾ ಸ್ವಾಗತಿಸಿದರು. ವೇದಾವತಿ ತಂಡದವರು ಪ್ರಾರ್ಥಿಸಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ವಿದ್ಯಾ ನಿರೂಪಿಸಿ, ವಿನಯ ವಂದಿಸಿದರು.

ಸುತ್ತಮುತ್ತ

ಮಡಿಕೇರಿ: 84.50 ಕೋಟಿ ರೂ.ನಲ್ಲಿ ಭೂಗತ ವಿದ್ಯುತ್ ಜಾಲ

ಮಡಿಕೇರಿ: ಮಡಿಕೇರಿ ನಗರದ ವಿದ್ಯುತ್ ಸಮಸ್ಯೆಗೆ ಮುಕ್ತಿ ದೊರಕಿಸುವ ದಿಸೆಯಲ್ಲಿ ಸುಮಾರು 84.50ಕೋಟಿ ವೆಚ್ಚದಲ್ಲಿ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸುವ ಯೋಜನೆಗೆ ಇಂಧನ ಇಲಾಖೆ ಒಪ್ಪಿಗೆ ನೀಡಿದೆ. ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅವರು,ವಿಧಾನಸಭಾ ಕಲಾಪದಲ್ಲಿ ಕೇಳಿದ ಪ್ರಶ್ನೆಗೆ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಉತ್ತರಿಸಿದ್ದು ಮಡಿಕೇರಿ ನಗರದಲ್ಲಿ 84.50ಕೋಟಿ ವೆಚ್ಚದಲ್ಲಿ 143 ಕಿ.ಮೀ. ನಷ್ಟು ನೆಲದೊಳಗೆ ವಿದ್ಯುತ್ ಸಂಪರ್ಕ ಜಾಲ ಅಳವಡಿಸುವ ಪ್ರಸ್ತಾವನೆಗೆ ಒಪ್ಪಿಗೆ ನೀಡಿದ್ದಾರೆ. ಮಡಿಕೇರಿ ನಗರ ಹೆಚ್ಚು ಮಳೆ ಮತ್ತು ಗಾಳಿ ಬೀಸುವ ಪ್ರದೇಶವಾಗಿರುವುದರಿಂದ ಮಡಿಕೇರಿ ನಗರದಲ್ಲಿ ವಿದ್ಯುತ್ ವಯರ್‌ಗಳು ತುಂಡಾಗಿ ವಿದ್ಯುತ್ ಸಮಸ್ಯೆ ಎದುರಾಗಿರುವುದು ಸಾಮಾನ್ಯವಾಗಿತ್ತು. ಈಗ ಡಾ.ಮಂಥರ್ ಅವರ ಪ್ರಯತ್ನದಿಂದ ವಿದ್ಯುತ್ ಜಾಲವನ್ನು ಅಭಿವೃದ್ಧಿಪಡಿಸುವ ಯೋಜನೆ ರೂಪಿಸಲಾಗಿದೆ.

ಮಾ.22: ತೊಕ್ಕೊಟ್ಟಿನಲ್ಲಿ ತಾರಸಿ ತೋಟ ತರಬೇತಿ

ಉಳ್ಳಾಲ: ಮಂಗಳೂರು ಸಿಟಿ ತೋಟಗಾರಿಕೆ ಸಂಘ,ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಉಳ್ಳಾಲ ತಾಲೂಕು ಘಟಕ, ಶಿವಾಜಿ ಫ್ರೆಂಡ್ಸ್ ಸರ್ಕಲ್ ತೊಕ್ಕೊಟ್ಟು ಹಾಗೂ ರಿಚಲ್ ಚಾರಿಟೇಬಲ್ ಟ್ರಸ್ಟ್ ತೊಕ್ಕೊಟ್ಟು ಆಶ್ರಯದಲ್ಲಿ ಉಚಿತ ತಾರಸಿ ತೋಟ ತರಬೇತಿ, ತರಕಾರಿ ಬೀಜ ಮತ್ತು ತರಕಾರಿ ಸಸಿ ವಿತರಣೆ ಕಾರ್ಯಕ್ರಮವನ್ನು ತೊಕ್ಕೊಟ್ಟು ಭಟ್ನಗರದ ಸ್ವಾಮಿ ಕೊರಗಜ್ಜ ಸೇವಾ ಸಮಿತಿ ಸಭಾಂಗಣದಲ್ಲಿ ಮಾ.22ರಂದು ಬೆಳಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ತಾರಸಿ ತೋಟ ತರಬೇತಿಯಲ್ಲಿ ಭಾಗವಹಿಸುವ ಆಸಕ್ತರು ಮಾ.20ರ ಒಳಗೆ ತಮ್ಮ ಹೆಸರನ್ನು ನೋಂದಾಯಿಸಲು ಸಿರಿಲ್ ರಾಬರ್ಟ್ ಡಿಸೋಜ (ದೂ.ಸಂ. 9481517127), ರುಕ್ಮಯ್ಯ (ದೂ.ಸಂ. 9845523944) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಉಪ್ಪುಂದ: ಎಸ್ಸಿ-ಎಸ್ಟಿ ಫಲಾನುಭವಿಗಳಿಗೆ ವಿವಿಧ ಸೌಲಭ್ಯ : ಅರ್ಜಿ ಆಹ್ವಾನ

ಉಪ್ಪುಂದ: ಇಲ್ಲಿನ ಪಟ್ಟಣ ಪಂಚಾಯತಿಯ 2022–23 ಹಾಗೂ 2023–24ನೇ ಸಾಲಿನ ಎಸ್‌ಎಫ್‌ಸಿ ಅನುದಾನದಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ (ಎಸ್.ಸಿ.ಎಸ್.ಪಿ/ಟಿ.ಎಸ್.ಪಿ.) ಶ್ರೇಯೋಭಿವೃದ್ಧಿಗಾಗಿ ಕಾಯ್ದಿರಿಸಿದ ನಿಧಿಯಡಿಯ ಉಳಿಕೆ ಅನುದಾನದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ನಿವಾಸ, ಇತರೆ ವಸತಿ ಯೋಜನೆಯಡಿ ಆಯ್ಕೆಯಾದವರ ಸ್ವಂತ ನಿವೇಶನ ಹೊಂದಿರುವ ಫಲಾನುಭವಿಗಳಿಗೆ ಸಹಾಯಧನ ನೀಡುವುದು, ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ನಳ್ಳಿ ನೀರಿನ ಸಂಪರ್ಕ ಒದಗಿಸುವುದು, ಅರ್ಹ ಪರಿಶಿಷ್ಟ ಜಾತಿಯ ಎಲ್.ಎಲ್.ಬಿ. ಪದವಿ ಹೊಂದಿರುವ ವೃತ್ತಿನಿರತ ವಕೀಲರುಗಳಿಗೆ ಪುಸ್ತಕ ಖರೀದಿಸಲು ಸಹಾಯಧನ ನೀಡುವ ಅನುದಾನ ಕಾಯ್ದಿರಿಸಿದ್ದು ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿನ ಅರ್ಹ ಫಲಾನುಭವಿಗಳು ಸೂಕ್ತ ದಾಖಲೆಗಳೊಂದಿಗೆ ನಿಗದಿತ ಅರ್ಜಿ ನಮೂನೆಯೊಂದಿಗೆ ಅರ್ಜಿಯನ್ನು ಮಾ.16ರ ಒಳಗಾಗಿ ಪಟ್ಟಣ ಪಂಚಾಯತ್ ಕಚೇರಿಗೆ ಸಲ್ಲಿಸಲು ಮುಖ್ಯಾಧಿಕಾರಿ ಅಜಯ್ ಭಂಡಾರ್ಕರ್ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಮಾ.18: ಮರವಂತೆ ಶ್ರೀ ರಾಮ ದೇವರ ವರ್ಧಂತ್ಯೋತ್ಸವ

ಕುಂದಾಪುರ: ಶ್ರೀ ರಾಮ ಮಂದಿರ ಮರವಂತೆ, ಮೀನುಗಾರರ ಸೇವಾ ಸಮಿತಿ ಇದರ ವತಿಯಿಂದ ಶ್ರೀ ರಾಮ ದೇವರ ವರ್ಧಂತ್ಯೋತ್ಸವ ಸಮಾರಂಭ ಮಾ.18ರಂದು ನಡೆಯಲಿದೆ. ಮಾ.20ರಂದು ಮಧ್ಯಾಹ್ನ 2.30ಕ್ಕೆ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರು ದೇವಸ್ಥಾನಕ್ಕೆ ಚಿತ್ತೈಸಲಿದ್ದು ಶ್ರೀಗಳ ಉಪಸ್ಥಿತಿಯಲ್ಲಿ ವಿಷ್ಣು ಸಹಸ್ರನಾಮ ಪಠಣ ನಡೆಯಲಿದೆ. ದೇವಸ್ಥಾನದ ಲಕ್ಷ್ಮಣ ದೇವರಿಗೆ ಶ್ರೀಗಳು ಸುವರ್ಣ ಕಿರೀಟ ಸಮರ್ಪಣೆ ಮಾಡಿ ಆಶೀರ್ವದಿಸಲಿದ್ದಾರೆ. ಮಾ.21ರಂದು ಬೆಳಗ್ಗೆ 6.15ಕ್ಕೆ ಶ್ರೀ ರಾಮ ಭಜನಾ ದೀಪ ಸ್ಥಾಪನೆ ನಡೆಯಲಿದ್ದು ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಲಿದೆ. ಮಾ.27ರಂದು ಬೆಳಗ್ಗೆಯಿಂದ ಅಖಂಡ ಏಕಾಹ ಭಜನೆ, ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ 5 ಗಂಟೆಗೆ ಮರಮೆರವಣಿಗೆ ನಡೆಯಲಿದೆ. 28ರಂದು ಬೆಳಗ್ಗೆ ಭಜನಾ ಮಂಗಳೋತ್ಸವ ಸಂಪನ್ನಗೊಳ್ಳಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಾಗರಮಠದಲ್ಲಿ ಮರಳು ದಂಧೆ ವಿರುದ್ಧ ಜನಾಕ್ರೋಶ | ಜಿಲ್ಲಾಧಿಕಾರಿ ಭೇಟಿಗೆ ಪಟ್ಟು ಹಿಡಿದು ರಸ್ತೆ ತಡೆ

ಅವೈಜ್ಞಾನಿಕ ಮರಳುಗಾರಿಕೆಯ ವಿರುದ್ಧ ಗ್ರಾಮಸ್ಥರ ಪ್ರತಿಭಟನೆ

ಕೋಟ: ತಾಲೂಕಿನ ಹೊಸಹಾಳ ಗ್ರಾಮದ ನಾಗರಮಠ ಅಣೆಕಟ್ಟು ಪರಿಸರದಲ್ಲಿ ಜಿಲ್ಲಾಡಳಿತ ಹಾಗೂ ಗಣಿ ಇಲಾಖೆ ವತಿಯಿಂದ ನಡೆಯುತ್ತಿರುವ ಅವೈಜ್ಞಾನಿಕ ಮರಳುಗಾರಿಕೆಯನ್ನು ವಿರೋಧಿಸಿ ಕಳೆದ ಮೂರು ನಾಲ್ಕು ದಿನಗಳಿಂದಲ್ಲಿನ ಗ್ರಾಮಸ್ಥರು ಬೃಹತ್ ಪ್ರತಿಭಟನೆ ನಡೆಸುತ್ತಿದ್ದಾರೆ.

ಈ ಹಿನ್ನಲ್ಲೆಯಲ್ಲಿ ರಸ್ತೆ ತಡೆ ನಡೆಸಿದ ನೂರಾರು ಗ್ರಾಮಸ್ಥರು, ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಬರುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪಟ್ಟು ಹಿಡಿದ ಘಟನೆ ನಡೆಯಿತು.



ಆದೇಶದ ವಿರುದ್ಧ ಗ್ರಾಮಸ್ಥರ ಹೋರಾಟ

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸ್ಥಳೀಯ ಮುಖಂಡರಾದ ಚಂದ್ರ ಕಾಂಚನ್, 2021 ರಿಂದಲೂ ನಾವು ಈ ಭಾಗದಲ್ಲಿ ಮರಳುಗಾರಿಕೆಯಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ಜಿಲ್ಲಾಡಳಿತಕ್ಕೆ ಪತ್ರದ ಮೂಲಕ ಮಾಹಿತಿ ನೀಡುತ್ತಲೇ ಬಂದಿದ್ದೇವೆ. ಆದರೂ 2025ರ ಡಿಸೆಂಬರ್‌ನಲ್ಲಿ ನಿಯಮಬಾಹಿರವಾಗಿ ಮರಳುಗಾರಿಕೆಗೆ ಮರು ಪರವಾನಗಿ ನೀಡಲಾಗಿದೆ. ಸುಮಾರು 1,13,000 ಮೆಟ್ರಿಕ್ ಟನ್ ಮರಳು ತೆಗೆಯಲು ಅನುಮತಿ ನೀಡಿರುವುದು ಈ ಭಾಗದ ಪರಿಸರಕ್ಕೆ ಮಾರಕವಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೃಷಿ ಭೂಮಿ ನಾಶ ಮತ್ತು ಅಂತರ್ಜಲದ ಭೀತಿ: ಮರಳುಗಾರಿಕೆಯಿಂದಾಗಿ ನದಿ ತೀರದ ಕೃಷಿ ಭೂಮಿಗಳು ಕೊಚ್ಚಿಹೋಗುತ್ತಿದ್ದು, ಹೊಳೆಸೇರುತ್ತಿವೆ. ಜಲಜೀವನ್ ಮಿಷನ್ ಅಡಿಯ ಕುಡಿಯುವ ನೀರಿನ ಬಾವಿಗಳು ಬತ್ತಿ ಹೋಗುವ ಆತಂಕ ಎದುರಾಗಿದೆ. ಒಂದು ಮೀಟರ್‌ಗಿಂತ ಹೆಚ್ಚು ಆಳಕ್ಕೆ ಮರಳು ತೆಗೆಯಬಾರದು ಎಂಬ ನಿಯಮವಿದ್ದರೂ, ಇಲ್ಲಿ 2–3 ಮೀಟರ್ ಆಳಕ್ಕೆ ಮರಳು ತೆಗೆಯಲಾಗುತ್ತಿದೆ. ಸೀನಿಯರ್ ಜಿಯಾಲಜಿಸ್ಟ್‌ಗಳು ಈ ಬಗ್ಗೆ ಮೌನ ವಹಿಸಿರುವುದು ದಂದೆಕೋರರಿಗೆ ಜಿಲ್ಲಾಡಳಿತದ ಬೆಂಬಲವಿದೆ ಎಂಬ ಅನುಮಾನ ಮೂಡಿಸುತ್ತಿದೆ ಎಂದು ಪ್ರತಿಭಟನಾಕಾರರು ದೂರಿದ್ದಾರೆ.

ಟ್ರಿಪ್ ಶೀಟ್ ಉಲ್ಲಂಘನೆ: 46 ಮರಳು ತುಂಬಿದ ಲಾರಿಗಳಿದ್ದರೂ ಕೇವಲ 4 ಟ್ರಿಪ್ ಶೀಟ್ ಬಳಸಿ ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

> **ಸುಳ್ಳು ಪ್ರಕರಣ ದಾಖಲು**
> ಕಿರಿದಾದ ರಸ್ತೆಗಳಲ್ಲಿ ಮರಳು ಸಾಗಾಟದ ಲಾರಿಗಳ ಹಾವಳಿಯಿಂದ ಶಾಲಾ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ಜೀವಭಯ ಉಂಟಾಗಿದೆ. ಈ ಹಿಂದೆ ಇಲ್ಲಿ ನಡೆದ ಅಪಘಾತಗಳಲ್ಲಿ ಹಲವರು ಪ್ರಾಣ ಕಳೆದುಕೊಂಡರೂ ಆಡಳಿತ ವ್ಯವಸ್ಥೆ ಎಚ್ಚೆತ್ತುಕೊಂಡಿಲ್ಲ, ನ್ಯಾಯ ಕೇಳಲು ಹೋದ ಗ್ರಾಮಸ್ಥರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಎಫ್‌ಐಆರ್ ಮೂಲಕ ಹೆದರಿಸುವ ತಂತ್ರವನ್ನು ಪೊಲೀಸರು ಅನುಸರಿಸುತ್ತಿದ್ದಾರೆ.
> ● ಪ್ರತಿಭಟನಾಕಾರರು

ಸ್ಥಳೀಯ ಮಹಿಳೆ ಆಶಾ ಮಾತನಾಡಿ, ತೋಟದ ಪಕ್ಕದಲ್ಲೇ ಮರಳುಗಾರಿಕೆ ನಡೆಯುತ್ತಿರುವುದರಿಂದ ಅಪರಿಚಿತರು ತೋಟಕ್ಕೆ ನುಗ್ಗಿ ಕೃಷಿ ಉತ್ಪನ್ನಗಳನ್ನು ಕಳವು ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಬಂದು ತಡೆಗೋಡೆ ನಿರ್ಮಿಸುವ ಭರವಸೆ ನೀಡಬೇಕು. ಕೃಷಿ ಭೂಮಿ ನಾಶವಾದರೆ ನಾವು ಮರಳು ತಿಂದು ಬದುಕಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಪ್ರತಿಭಟನಾಕಾರ ಗಣೇಶ್, ಗ್ರಾಮದ ಮೂಲಭೂತ ಸೌಕರ್ಯಗಳ ಬಗ್ಗೆ ಗಮನಹರಿಸದ ಸರ್ಕಾರ, ಕೇವಲ ದಂದೆಕೋರರ ರಕ್ಷಣೆಗೆ ನಿಂತಿದೆ. ಊರಿನ ಸಮಸ್ಯೆ ಬಗೆಹರಿಯುವವರೆಗೂ ನಮ್ಮ ಹೋರಾಟ ನಿಲ್ಲದು ಎಂದರು.

1999ರಲ್ಲೇ ಅಂದಿನ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಈ ಭಾಗದಲ್ಲಿ ಮರಳುಗಾರಿಕೆಗೆ ನಿಷೇಧ ಹೇರಿದ್ದರು. ಆದರೆ ಈಗಿನ ಅಧಿಕಾರಿಗಳು ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಗ್ರಾಮಸ್ಥರು ಕಿಡಿಕಾರಿದ್ದಾರೆ. ಜಿಲ್ಲಾಧಿಕಾರಿಗಳು ಮತ್ತು ಎಸ್.ಪಿ ಅವರು ಸ್ಥಳಕ್ಕೆ ಬಂದು ನಮಗೆ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ರಸ್ತೆಯಲ್ಲೇ ಉಪವಾಸ ಸತ್ಯಾಗ್ರಹ ನಡೆಸಲು ಸಿದ್ಧ ಎಂದು ಪ್ರತಿಭಟನಾಕಾರರು ಎಚ್ಚರಿಸಿದ್ದಾರೆ.

ಮೂಡುಬಿದಿರೆ ಪುರಸಭೆಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಮೂಡುಬಿದಿರೆ: ಸ್ವಚ್ಛ ಭಾರತ ಮಿಷನ್ ಹಾಗೂ ನಗರಾಭಿವೃದ್ಧಿ ಇಲಾಖೆಯಡಿಯಲ್ಲಿ ಮೂಡುಬಿದರೆ ಪುರಸಭೆ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಾರಿಯಿಂದ ಸ್ವಚ್ಛತೆಗೆ ಮುನ್ನುಡಿ ಅಭಿಯಾನ ಕಾರ್ಯಕ್ರಮ ಶುಕ್ರವಾರ ಸಮಾಜ ಮಂದಿರ ಸಭಾಭವನದಲ್ಲಿ ಆಯೋಜಿಸಲಾಯಿತು.

ಮಹಿಳಾ ಪೌರಕಾರ್ಮಿಕರು (ಸಫಾಯಿ ಮಿತ್ರರು), ಪುರಸಭೆ ಅಧಿಕಾರಿಗಳು, ಕಮ್ಯುನಿಟಿ ಮೊಬಿಲೈಸರ್‌ಗಳು ಹಾಗೂ ಅಮೃತ ಮಿತ್ರ ಯೋಜನೆಯ ಸ್ವಸಹಾಯ ಗುಂಪಿನ ಮಹಿಳೆಯರಿಗಾಗಿ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು.

ಪುರಸಭೆಯ ಮುಖ್ಯಾಧಿಕಾರಿ ಇಂದು ಎಂ. ಅಧ್ಯಕ್ಷತೆವಹಿಸಿದರು. ಆಳ್ವಾಸ್ ವೈದ್ಯಕೀಯ ಕಾಲೇಜಿನ ಕಮ್ಯೂನಿಟಿ ಮೆಡಿಸಿನ್ ವಿಭಾಗದ ಮುಖ್ಯಸ್ಥೆ ಡಾ. ಚೇತನಾ ಕೋಡ್ಲಿ, ಪ್ರಜನನ ಆರೋಗ್ಯ ಮತ್ತು ಸ್ವಚ್ಛತೆ ಕುರಿತು ಮಾತನಾಡಿ, ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಗಮನಹರಿಸಿ ಸ್ವಚ್ಛತೆಯ ಅಭ್ಯಾಸಗಳನ್ನು ಪಾಲಿಸುವುದು ಅಗತ್ಯ. ವಿಶೇಷವಾಗಿ ಋತುಚಕ್ರದ ಸಮಯದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು, ಆರೋಗ್ಯಕರ ಆಹಾರ ಮತ್ತು ಜೀವನಶೈಲಿಯನ್ನು ಅನುಸರಿಸುವುದು ಬಹಳ ಮುಖ್ಯ ಎಂದರು.

ಸ್ವಚ್ಛ ಸರ್ವೇಕ್ಷಣೆ 2025–26ರಲ್ಲಿ ನಾಗರಿಕ ಅಭಿಪ್ರಾಯದ ಮಹತ್ವದ ಕುರಿತು ಪರಿಸರ ಅಭಿಯಂತರ ಶಿಲ್ಪಾ ಎಸ್. ಜಾಗೃತಿ ಮೂಡಿಸಿದರು. ಕಚೇರಿ ವ್ಯವಸ್ಥಾಪಕಿ ಯಶಸ್ವಿನಿ, ಡಿಜಿಟಲ್ ಸಾಕ್ಷರತೆ ಕುರಿತು ಅರಿವು ಮೂಡಿಸಿದರು. ಹಿರಿಯ ಆರೋಗ್ಯ ನಿರೀಕ್ಷಕಿ ಶಶಿರೇಖಾ ಅವರು ಪೌರಕಾರ್ಮಿಕರ ಕೆಲಸದ ಸ್ಥಳದಲ್ಲಿ ಸುರಕ್ಷತೆ ಕುರಿತು ತರಬೇತಿ ನೀಡಿದರು. ಸಮುದಾಯ ಸಂಘಟಕ ಪ್ರಸನ್ನ ಕುಮಾರ್ ಅವರು ಹಣಕಾಸು ಸಾಕ್ಷರತೆ ಮತ್ತು ಕೇಂದ್ರ–ರಾಜ್ಯ ಸರ್ಕಾರಗಳ ವಿವಿಧ ಕಲ್ಯಾಣ ಯೋಜನೆಗಳ ಕುರಿತು ಮಾಹಿತಿ ನೀಡಿದರು.

12 ಮಂದಿ ಮಹಿಳಾ ಸಫಾಯಿ ಮಿತ್ರರು ಹಾಗೂ 12 ಮಂದಿ ಅಮೃತ ಮಿತ್ರ 2.0 ಪಾರ್ಕ್ ನಿರ್ವಾಹಕರನ್ನು ಶಾಲು ಹೊದಿಸಿ ಗೌರವ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಕಂದಾಯ ಅಧಿಕಾರಿ ಜ್ಯೋತಿ ಎಚ್. ಉಪಸ್ಥಿತರಿದ್ದರು.

ಕಮ್ಯುನಿಟಿ ಮೊಬಿಲೈಸರ್‌ಗಳಾದ ಆಶಾ, ಅಮಿತಾ, ಚಂದ್ರಿಕಾ, ಸಮುದಾಯ ಸಂಪನ್ಮೂಲ ವ್ಯಕ್ತಿಗಳಾದ ಪೂರ್ಣಿಮಾ ಮತ್ತು ಫೌಝಿಯ ಅತಿಥಿಗಳನ್ನು ಗೌರವಿಸಿದರು. ಕಮ್ಯೂನಿಟಿ ಮೊಬಿಲೈಸರ್ ಆಶಾ ನಿರೂಪಿಸಿದರು. ಪ್ರಥಮ ದರ್ಜೆ ಸಹಾಯಕಿ ಮೀನಾಕ್ಷಿ ವಂದಿಸಿದರು. ವಿವಿಧ ಕ್ರೀಡಾ ಚಟುವಟಿಕೆಗಳನ್ನು ಕಂದಾಯ ಅಧಿಕಾರಿ ಜ್ಯೋತಿ ಎಚ್. ಅವರ ನೇತೃತ್ವದಲ್ಲಿ ಆಯೋಜಿಸಲಾಯಿತು. ಶೂನ್ಯ ತ್ಯಾಜ್ಯ ಕಾರ್ಯಕ್ರಮವಾಗಿ ನಡೆಸಲಾಯಿತು.

ಉಜಿರೆ ರತ್ನಮಾನಸ ವಿದ್ಯಾರ್ಥಿ ನಿಲಯದಲ್ಲಿ ಮಾತಾ -ಪಿತೃ ಪೂಜನ



ಬೆಳ್ತಂಗಡಿ: ಉಜಿರೆಯ ರತ್ನಮಾನಸ ವಿದ್ಯಾರ್ಥಿ ನಿಲಯದಲ್ಲಿ ಹತ್ತನೇ ತರಗತಿ ವಿದ್ಯಾರ್ಥಿಗಳ ಮಾತಾ -ಪಿತೃ ಪೂಜನ ಹಾಗೂ ಆಶೀರ್ವಾದ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು .

ಸಂಪನ್ಮೂಲ ವ್ಯಕ್ತಿ ಉಜಿರೆ ಎಸ್‌ಡಿಎಂ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಮಹಾವೀರ ಜೈನ್ ಉದ್ಘಾಟಿಸಿ, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಶಿಕ್ಷಣ ಹೊಟ್ಟೆಗೆ ಅನ್ನವನ್ನು ನೀಡಿದರೆ, ಸಂಸ್ಕಾರ ಬದುಕಿಗೆ ಅರ್ಥವನ್ನು ನೀಡುತ್ತದೆ. ಒಬ್ಬ ವಿದ್ಯಾರ್ಥಿ ಎತ್ತರಕ್ಕೆ ಬೆಳೆಯ ಬೇಕಾದರೆ ಬಣ್ಣ ,ಜಾತಿ ,ಸೌಂದರ್ಯ , ಹಣ ದಿಂದ ಸಾಧ್ಯವಿಲ್ಲ, ಸಂಸ್ಕಾರದಿಂದ ಮಾತ್ರ ಸಾಧ್ಯ. ಶಿಕ್ಷಣ ಮತ್ತು ಸಂಸ್ಕಾರ ಎರಡು ರೆಕ್ಕೆ ಇದ್ದಂತೆ. ಇವೆರಡು ಇದ್ದರೆ ಜಗತ್ತಿನ ಯಾವ ದೇಶಕ್ಕೆ ಹೋಗಿ ಬದುಕಲೂ ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ ರತ್ನಮಾನಸ ವಿದ್ಯಾರ್ಥಿ ನಿಲಯದ ಪಾಲಕ ಯತಿಶ್ ಕೆ. ಬಳಂಜ ಮಾತನಾಡಿದರು. ಈ ಸಂದರ್ಭದಲ್ಲಿ ಇತ್ತೀಚೆಗೆ ಡಾಕ್ಟರೇಟ್ ಪದವಿ ಪಡೆದ ಮಹಾವೀರ ಜೈನ್ ಅವರನ್ನು ರತ್ನಮಾನಸ ವಿದ್ಯಾರ್ಥಿ ನಿಲಯದ ವತಿಯಿಂದ ಸನ್ಮಾನಿಸಲಾಯಿತು. ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಗಳಿಗೆ ಪಾದ ಪೂಜೆಯನ್ನು ಮಾಡಿ ಆಶೀರ್ವಾದ ಪಡೆದರು.

ವಿದ್ಯಾರ್ಥಿಗಳಾದ ನಿಶಿತ್ ಮತ್ತು ರಾಕೇಶ್ ಆರ್. ಹಾಗೂ ಪೋಷಕರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ನಿಲಯದ ಅಧ್ಯಾಪಕರಾದ ರವಿಚಂದ್ರ ಸ್ವಾಗತಿಸಿ ವಿದ್ಯಾರ್ಥಿ ಕೌಶಿಕ್ ಮತ್ತು ರಾಕೇಶ್ ಡಿ.ಆರ್. ಪ್ರಾರ್ಥನೆ ಮಾಡಿ, ಅಧ್ಯಾಪಕ ದೀಪಕ್ ವಂದಿಸಿದರು. ಅಧ್ಯಾಪಕ ಉದಯ ರಾಜ್ ನಿರೂಪಿಸಿದರು. ವಿದ್ಯಾರ್ಥಿಗಳು ಪೋಷಕರೊಂದಿಗೆ ಉಜಿರೆ ಶ್ರೀ ಜನಾರ್ದನ ಸ್ವಾಮೀ ದೇವಸ್ಥಾನಕ್ಕೆ ಭೇಟಿ ನೀಡಿದರು.

ಇಂಧನ, ಎಲ್‌ಪಿಜಿ ಬೆಲೆ ಏರಿಕೆ ನಿಯಂತ್ರಿಸುವಲ್ಲಿ ಕೇಂದ್ರ ವಿಫಲ

ಮಂಗಳೂರು: ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಯುದ್ಧದ ಪರಿಸ್ಥಿತಿ ಸಂದರ್ಭ ಭಾರತದಲ್ಲಿ ಇಂಧನ ಹಾಗೂ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ನಿಯಂತ್ರಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ವೈಫಲ್ಯತೆ, ದುರ್ಬಲ ವಿದೇಶಾಂಗ ನೀತಿಯೇ ಕಾರಣ ಎಂದು ದ.ಕ. ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹರೀಶ್ ಕುಮಾರ್ ಆರೋಪಿಸಿದ್ದಾರೆ.



ಅಮೆರಿಕ ಮತ್ತು ಇಸ್ರೇಲ್ ಸೇರಿ ನಡೆಸುವ ಯುದ್ಧ ಇಡೀ ಪ್ರಪಂಚಕ್ಕೆ ಆಪತ್ತು ತಂದೊಡ್ಡಿದೆ. ಬಲವಾದ ಯಾವುದೇ ಕಾರಣ ಇಲ್ಲದೆಯೇ ಯುದ್ಧ ನಡೆಯುತ್ತಿದೆ. ಸಣ್ಣಪುಟ್ಟ ರಾಷ್ಟ್ರಗಳನ್ನು ಹಿಡಿತದಲ್ಲಿ ಇರಿಸಿಕೊಳ್ಳಬೇಕು ಎಂಬ ಅಮೆರಿಕದ ಉದ್ಧಟತನವೇ ಎಲ್ಲ ತೊಂದರೆಗಳಿಗೆ ಕಾರಣವಾಗಿದೆ. ಭಾರತ ಸರ್ಕಾರ ಕೂಡ ವಿದೇಶಿ ರಾಷ್ಟ್ರಗಳ ಜೊತೆ ನೇರ ಬೆಂಬಲ ಹೊಂದಿಲ್ಲ, ವಿದೇಶಿ ರಾಷ್ಟ್ರಗಳು ಕೂಡ ಭಾರತಕ್ಕೆ ಖಚಿತ ಬೆಂಬಲ ವ್ಯಕ್ತಪಡಿಸುತ್ತಿಲ್ಲ, ಹೀಗಿರುವಾಗ ಇಂಧನ ಕೊರತೆ ವಿಚಾರದಲ್ಲಿ ಎಸ್ಮಾ ಜಾರಿಗೊಳಿಸಿದ್ದಾಗಿ ಕೇಂದ್ರ ಸರ್ಕಾರ ಹೇಳಿದೆ. ಇನ್ನೊಂದೆಡೆ ತೈಲ ಬಿಕ್ಕಟ್ಟು ಇಲ್ಲ ಎನ್ನುತ್ತಿದೆ. ಹಾಗಾದರೆ ಎಸ್ಮಾ ಜಾರಿಗೊಳಿಸಿದ್ದು ಯಾಕೆ? ಎಲ್ಲದಕ್ಕೂ ಮೂಲ ಕಾರಣ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್. ಟ್ರಂಪ್ ಸೂಚನೆ ಮೇರೆಗೆ ಕೇಂದ್ರ ಆಡಳಿತ ನಡೆಸುತ್ತಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಪ್ರಸ್ತುತ ಭಾರತದ ವಿದೇಶಾಂಗ ನೀತಿ ದುರ್ಬಲವಾಗಿರುವುದಕ್ಕೆ ಇಂಧನ ಕ್ಷೇತ್ರದಲ್ಲಿನ ವಿದ್ಯಮಾನಗಳೇ ಸಾಕ್ಷಿ. ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶಕ್ಕೆ ಹೋದಲ್ಲೆಲ್ಲ ಅದಾನಿ, ಅಂಬಾನಿಗಳಿಗೆ, ಬಿಜೆಪಿಗೆ ಲಾಭವಾಗಿದ್ದುಬಿಟ್ಟರೆ ಜನಸಾಮಾನ್ಯರಿಗೆ ಏನೂ ಪ್ರಯೋಜನ ಆಗಿಲ್ಲ, ಇದರ ಹಿಂದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರಿ ಸಂಚಲನ ಮೂಡಿಸಿರುವ ಜೆಫ್ರಿ ಎಫ್‌ಸ್ಟೀನ್ ಪ್ರಕರಣದ ಕಡತಗಳಿಗೂ ಪ್ರಧಾನಿ ಮೋದಿ ಮೌನಕ್ಕೂ ನಂಟು ಇದೆಯೇ ಎಂದು ಅನುಮಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡರಾದ ಶಶಿಧರ್ ಹೆಗ್ಡೆ, ಸದಾಶಿವ ಉಳ್ಳಾಲ್, ಅಪ್ಪಿಲತಾ, ಸುಬೋದಯ ಆಳ್ವ, ಸಲೀಂ, ಯಶ್ ಪಾಲ್, ಸುಧೀರ್ ಟಿ.ಕೆ, ಚಿತ್ತರಂಜನ್ ಶೆಟ್ಟಿ, ಸುಹಾನ್ ಆಳ್ವ ಉಪಸ್ಥಿತರಿದ್ದರು.

ಗೊನ್ಝಾಗ: ಕಿಂಡರ್ ಗಾರ್ಡನ್ ಪದವಿ ಪ್ರದಾನ



ಮಂಗಳೂರು: ನಗರದ ಸಂತ ಅಲೋಶಿಯಸ್ ಗೊನ್ಝಾಗ ಶಾಲೆಯಲ್ಲಿ ಕೆಜಿಐಐ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಪ್ರಯುಕ್ತ ಗುರುವಾರ ಕಿಂಡರ್‌ಗಾರ್ಡನ್ ಪದವಿ ಪ್ರದಾನ ಸಮಾರಂಭ ನಡೆಯಿತು. ಮುಖ್ಯ ಅತಿಥಿಯಾಗಿ ಸೈಂಟ್ ಆನ್ಸ್ ಕಾಲೇಜ್ ಆಫ್ ಎಜುಕೇಶನ್ ಮಂಗಳೂರು ಸಹಾಯಕ ಪ್ರಾಧ್ಯಾಪಕರಾದ ವಿಲ್ಮಾ ಡಿಸೋಜ ಮಾತನಾಡಿದರು.

ಸಂಸ್ಥೆಯ ಪ್ರಾಂಶುಪಾಲ ಫಾ. ರೋಹನ್ ಡಿ ಅಲ್ಮೇಡ ಎಸ್.ಜೆ. ಅಧ್ಯಕ್ಷತೆ ವಹಿಸಿ ಮಾತನಾಡಿ, ದೊಡ್ಡ ಕನಸು ಕಾಣಲು, ತಮ್ಮ ಆರಾಮ ಹಾಗೂ ಸುರಕ್ಷಿತ ವಲಯವನ್ನು ಮೀರಿ ಮುಂದೆ ಸಾಗಲು ಹಾಗೂ ಪೋಷಕರು, ಶಿಕ್ಷಕರು ಮತ್ತು ಸ್ನೇಹಿತರ ಬೆಂಬಲದೊಂದಿಗೆ ಸವಾಲುಗಳನ್ನು ಧೈರ್ಯವಾಗಿ ಎದುರಿಸಲು ಪ್ರೇರೇಪಿಸಿದರು. ಒಟ್ಟು 96 ಕೆಜಿಐಐ ವಿದ್ಯಾರ್ಥಿಗಳನ್ನು ಪದವೀಧರರಾಗಿ ಗೌರವಿಸಿ, ಸ್ಮರಣಿಕೆಗಳನ್ನು ನೀಡಲಾಯಿತು. ಉಪ ಪ್ರಾಂಶುಪಾಲರಾದ ಅಪರ್ಣಾ ಸುರೇಶ್ ಸಂಯೋಜಿಸಿದರು. ವೆರೋನಿಕಾ ಡಿಸೋಜ ಸ್ವಾಗತಿಸಿದರು. ಮಿಶಾಲ್ ಕ್ಯಾರೆಲ್ ಕ್ರಾಸ್ಟಾ ನಿರೂಪಿಸಿದರು. ಅವೆರಿಲ್ ರೆಬೆಲ್ಲೊ ವಂದಿಸಿದರು.

ಕಾರ್ಕಳ: ಮಹಿಳಾ ಸಬಲೀಕರಣ ಮತ್ತು ದೌರ್ಜನ್ಯ ಘಟಕದಿಂದ ಕಾರ್ಯಕ್ರಮ



ಕಾರ್ಕಳ: ಶ್ರೀ ಭುವನೇಂದ್ರ ಕಾಲೇಜಿನ ಐಕ್ಯೂಎಸಿ ಆಶ್ರಯದಲ್ಲಿ ಕಾಲೇಜಿನ ಮಹಿಳಾ ಸಬಲೀಕರಣ ಮತ್ತು ದೌರ್ಜನ್ಯ ತಡೆ ಘಟಕದಿಂದ ವಿದ್ಯಾರ್ಥಿನಿಯರಿಗೆ ಬಂಜೆತನ ಮತ್ತು ಸಂತಾನೋತ್ಪತ್ತಿ ಕುರಿತ ಅರಿವಿನ ಕಾರ್ಯಕ್ರಮ ನಡೆಯಿತು.

ಸಂಪನ್ಮೂಲ ವ್ಯಕ್ತಿಯಾಗಿ,ಕಸ್ತೂರ್ಬಾ ಮೆಡಿಕಲ್ ಕಾಲೇಜು, ಮಣಿಪಾಲ ಇಲ್ಲಿನ ಸಂತಾನೋತ್ಪತ್ತಿ ವೈದ್ಯಕೀಯ ವಿಭಾಗದ ಹೆಚ್ಚುವರಿ ಪ್ರಾಧ್ಯಾಪಕರಾದ ಡಾ. ಅಂಜಲಿ ಮುಂಡ್ಕೂರು ಇವರು ವಿದ್ಯಾರ್ಥಿನಿಯರಿಗೆ ಬಂಜೆತನ ಹಾಗೂ ಸಂತಾನೋತ್ಪತ್ತಿ ಕುರಿತಂತೆ ತಿಳುವಳಿಕೆಯ ಮಾಹಿತಿ ನೀಡಿದರು.

ಸ್ತ್ರೀಯರ ಮುಟ್ಟು ಹಾಗೂ ಆ ದಿನಗಳಲ್ಲಿನ ನೋವು, ಅದರ ಪರಿಣಾಮ ಅದರಿಂದ ಭವಿಷ್ಯದಲ್ಲಿ ಉಂಟಾಗುವ ತೊಂದರೆಗಳನ್ನು ವಿವರಿಸುತ್ತಾ, ಈ ತಿಳುವಳಿಕೆಯಿಂದ ನಿಮ್ಮನ್ನು ನೀವು ಗೊಂದಲಗಳಿಗೆ ಒಳ ಮಾಡದೆ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸುವಂತಾಗಬೇಕು ಎಂದು ಪ್ರಾಯೋಗಿಕ ತರಬೇತಿಯ ಮೂಲಕ ಅರಿವು ಮೂಡಿಸಿದರು.

ಅಧ್ಯಕ್ಷತೆಯನ್ನು ವಹಿಸಿದ ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ, ಡಾ. ಈಶ್ವರ ಭಟ್ ಮಾತನಾಡುತ್ತಾ, ಭವಿಷ್ಯದಲ್ಲಿ ಒದಗುವ ಸಂಕಷ್ಟಗಳಿಗೆ ಮಾನಸಿಕರಾಗಿ ಸಿದ್ಧರಾಗಬಹುದು ಮತ್ತು ಆತ್ಮಸ್ಥೈರ್ಯವನ್ನು ಇಂತಹ ಮಾಹಿತಿಗಳಿಂದ ಹೆಚ್ಚಿಸಿಕೊಳ್ಳಬಹುದು ಎಂದರು.

ವೇದಿಕೆಯಲ್ಲಿ ಐಕ್ಯೂಎಸಿ ಸಂಯೋಜಕರಾದ ಪ್ರೊ. ಲಕ್ಷ್ಮೀನಾರಾಯಣ ಕೆ., ಮಹಿಳಾ ಸಬಲೀಕರಣ ಘಟಕದ ಸಂಯೋಜಕರಾದ ಸ್ವಾತಿ. ಕೆ., ಸಂಯೋಜಕಿ ಪದ್ಮಶ್ರೀ, ವಿದ್ಯಾರ್ಥಿ ಪ್ರತಿನಿಧಿಯರಾದ ಪೂರ್ವಿ, ಸಂಹಿತಾ, ಪೂಜಾಶ್ರೀ, ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಜಾಯ್ಸಿಲ್ ಕಾರ್ಯಕ್ರಮ ನಿರೂಪಿಸಿದರು. ಮೆರೀನಾ ಸ್ವಾಗತಿಸಿ, ಕೆ.ಪ್ರಜಕ್ತ ಫಡ್ಕೆ ವಂದಿಸಿದರು.

ಡಾ. ಬಿ. ಬಿ. ಹೆಗ್ಡೆ ಕಾಲೇಜಿನಲ್ಲಿ ಸಾಧಕ ಮಹಿಳೆಯರಿಗೆ ಸನ್ಮಾನ



ಕುಂದಾಪುರ: ಡಾ. ಬಿ. ಬಿ. ಹೆಗ್ಡೆ ಕಾಲೇಜಿನ ಮಹಿಳಾ ಸಬಲೀಕರಣ ಘಟಕ ಹಾಗೂ ಕನ್ನಡ ವಿಭಾಗದ ಆಶ್ರಯದಲ್ಲಿ ಜೇಸಿಐ ಕುಂದಾಪುರ ಸಿಟಿ ಸಹಯೋಗದೊಂದಿಗೆ ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಸಾಧಕ ಮಹಿಳೆಯರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಮಂಗಳೂರಿನ ಸಹ್ಯಾದ್ರಿ ಆಫ್ ಇಂಜಿನಿಯರಿಂಗ್ ಮ್ಯಾನೇಜ್‌ಮೆಂಟ್‌ಸಹಾಯಕ ಪ್ರಾಧ್ಯಾಪಕಿ ಪೂಜಾ ಯಶವಂತ ರೈ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಾಂಶುಪಾಲ ಪ್ರೊ. ಡಾ. ಕೆ.ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಹೆಮ್ಮಾಡಿಯ ಜಯಶ್ರೀ ವಿನಯ ಪೂಜಾರಿ, ಕಾಲೇಜಿನ ಬಹುಮುಖಿ ಪ್ರತಿಭೆಗಳಾದ ಶ್ರೇಯಾ ಖಾರ್ವಿ, ಬ್ರಾಹ್ಮೀ, ಶೈಕ್ಷಣಿಕ ಪ್ರತಿಭೆಗಳಾದ ಐಶ್ವರ್ಯ ಶೆಟ್ಟಿ, ಗೌತಮಿ, ಕ್ರೀಡಾ ಪ್ರತಿಭೆ ಲಕ್ಷ್ಮೀ ಶೆಟ್ಟಿ ವಕ್ವಾಡಿ ಗುರುಕುಲ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿನಿ ರುಧಾ ಎಂ. ಇಮ್ರಾನ್ ಅವರನ್ನು ಸನ್ಮಾನಿಸಲಾಯಿತು. ಜೇಸಿಐ ಅಧ್ಯಕ್ಷ ಕಿರಣ್ ದೇವಾಡಿಗ, ಮಾಜಿ ಅಧ್ಯಕ್ಷ ಯೂಸುಫ್ ಸಲೀಮ್, ಕಾರ್ಯದರ್ಶಿ ಸಂಧ್ಯಾ ನವೀನ್, ಲೇಡಿ ಜೇಸಿ ಸಂಯೋಜಕಿ ದೀಪಾ, ಸದಸ್ಯೆ ಲಕ್ಷ್ಮೀ ಯುವ ಜೇಸಿ ಚೇರ್ ಪರ್ಸನ್ ರಾಹುಲ್ ಗೋಡೆ, ಕಾಲೇಜಿನ ಮಹಿಳಾ ಸಬಲೀಕರಣ ಘಟಕದ ಸಂಯೋಜಕಿ ರಶ್ಮಿ ಗಾವಡಿ, ರವೀನಾ ಸಿ. ಪೂಜಾರಿ, ವಿಜಯಶ್ರೀ ಎ. ಉಪಸ್ಥಿತರಿದ್ದರು. ಡಾ. ಚೇತನ ಶೆಟ್ಟಿ ಕೋವಾಡಿ ಸ್ವಾಗತಿಸಿದರು. ಹುಸೇನ್ ಹೈಕಾಡಿ ಪ್ರಸ್ತಾವಿಸಿದರು. ವೀಣಾ ವಿ.ಭಟ್ ಪರಿಚಯಿಸಿದರು. ಡಾ. ಸೋನಿ ಡಿಕೋಸ್ಟಾ, ಡಾ. ಸರೋಜಾ, ರೇಷ್ಮಾ ಶೆಟ್ಟಿ, ಪ್ರವೀಣಾ ಎಂ.ಪೂಜಾರಿ, ರಶ್ಮಿತಾ ಶೆಟ್ಟಿ ಸನ್ಮಾನ ಪತ್ರ ವಾಚಿಸಿದರು. ನಂದಾ ರೈ ಬಹುಮಾನ ವಿಜೇತರ ಪಟ್ಟಿ ವಾಚಿಸಿದರು. ವಿದ್ಯಾರ್ಥಿ ಸುಕೇಶ್ ನಿರೂಪಿಸಿದರು.

ಶ್ರೀ ಬಬ್ಬುಸ್ವಾಮಿ - ಪರಿವಾರ ದೈವಗಳ ಸಿರಿ ಸಿಂಗಾರದ ನೇಮ ಸಂಪನ್ನ

ಮಂಗಳೂರು: ಸೂಟರ್ ಪೇಟೆ ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ಶ್ರೀ ಬಬ್ಬುಸ್ವಾಮಿ ಹಾಗೂ ಪರಿವಾರ ದೈವಗಳ ಸಿರಿ ಸಿಂಗಾರದ ನೇಮ ಇತ್ತೀಚೆಗೆ ವೈಭವದಿಂದ ಸಂಪನ್ನಗೊಂಡಿತು. ನೇಮಕ್ಕೆ ಊರು–ಪರಊರುಗಳಿಂದ ಸಾವಿರಾರು ಭಕ್ತರು ಆಗಮಿಸಿ ಶ್ರೀ ಬಬ್ಬುಸ್ವಾಮಿ , ಪರಿವಾರ ದೈವಗಳ ಪ್ರಸಾದ ಸ್ವೀಕರಿಸಿದರು.



ನೇಮದ ಪೂರ್ವಭಾವಿಯಾಗಿ ಧರ್ಮದರ್ಶಿ ಭಾಸ್ಕರ್ ಐತಾಳ್ ಕೊಲ್ಯ ಪೌರೋಹಿತ್ಯದಲ್ಲಿ ನಾಗ ದೇವರಿಗೆ ಆಶ್ಲೇಷ ಪೂಜೆ , ತಂಬಿಲ , ಪಂಚಾಮೃತ ಅಭಿಷೇಕ ನಡೆದು ಮಧ್ಯಾಹ್ನ ಸಾರ್ವಜನಿಕ ಸತ್ಯನಾರಾಯಣ ಪೂಜೆ, ಸಾರ್ವಜನಿಕ ಅನ್ನಸಂತರ್ಪಣೆ ನಡೆಯಿತು.

ನಾಲ್ಕು ದಿನಗಳ ನೇಮೋತ್ಸವ

ಕ್ಷೇತ್ರದಲ್ಲಿ ಮಾ.7 ರಿಂದ 10ರವರೆಗೆ ನಾಲ್ಕು ದಿನಗಳ ಕಾಲ ನಡೆದ ನೇಮದಲ್ಲಿ ಸ್ಥಳದ ಗುಳಿಗ, ಶ್ರೀ ಬಬ್ಬುಸ್ವಾಮಿ–ತನ್ನಿಮಾನಿಗ, ರಾಹು ಗುಳಿಗ, ಪಂಜುರ್ಲಿ– ಗುಳಿಗ, ಧರ್ಮದೈವ, ಸುಬ್ಬಮ್ಮ–ಸುಬ್ಬಿ ಗುಳಿಗ, ಸಂಕಲೆ ಗುಳಿಗ ಹಾಗೂ ಕೊರಗಜ್ಜ ದೈವಗಳ ನೇಮ ಸಂಪ್ರದಾಯಬದ್ಧ ನಡೆಯಿತು. ಈ ಅವಧಿಯಲ್ಲಿ ಶ್ರೀ ಕ್ಷೇತ್ರದಲ್ಲಿ ಪ್ರತಿದಿನ ಮಧ್ಯಾಹ್ನ ಮತ್ತು ರಾತ್ರಿ ಸಾರ್ವಜನಿಕ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.

ಪಾರಂಪರಿಕ ಭೂತಾರಾಧನೆ

ಸೂಟರ್‌ಪೇಟೆ ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ಪಾರಂಪರಿಕ ಭೂತಾರಾಧನೆ ವಿಶಿಷ್ಟ ಪರಂ ಪರೆ ಉಳಿಸಿಕೊಂಡು ಬಂದಿದ್ದು, ಸರ್ವಧರ್ಮಿಯರ ಆರಾಧನಾ ಕೇಂದ್ರವಾಗಿ ಬೆಳಗುತ್ತಿದೆ. ಇಲ್ಲಿ ಶ್ರೀ ಬಬ್ಬುಸ್ವಾಮಿಯ ಕಾರ್ಣಿಕ ಶಕ್ತಿ ಮೇಲೆ ಭಕ್ತರಲ್ಲಿ ಅಪಾರ ನಂಬಿಕೆ ಇದೆ. ಪಾರಂಪರಿಕ ಆಚರಣೆಗಳೊಂದಿಗೆ ನಡೆಯುವ ಆರಾಧನೆಯಿಂದ ಈ ಕ್ಷೇತ್ರ ಶ್ರದ್ಧಾ–ಭಕ್ತಿಯ ಪ್ರಮುಖ ತಾಣವಾಗಿ ರೂಪುಗೊಂಡಿದೆ ಎಂದು ದೈವಸ್ಥಾನ ಗುರಿಕಾರ ಎಸ್. ರಾಘವೇಂದ್ರ ತಿಳಿಸಿದರು.

ಈ ಸಂದರ್ಭ ಶಾಸಕ ಡಿ. ವೇದವ್ಯಾಸ ಕಾಮತ್, ಕದ್ರಿ ಶ್ರೀ ಮಂಜುನಾಥ ದೇವಸ್ಥಾನದ ಅರ್ಚಕ ಕೃಷ್ಣ ಅಡಿಗ, ಸಿನಿಮಾ ನಟ ಸ್ವರಾಜ್ ಶೆಟ್ಟಿ ಸೇರಿದಂತೆ ಗಣ್ಯರು ಕ್ಷೇತ್ರಕ್ಕೆ ಭೇಟಿ ನೀಡಿ ದೈವದ ಸಿರಿಮುಡಿ ಗಂಧಪ್ರಸಾದ ಸ್ವೀಕರಿಸಿದರು.

ದೈವಸ್ಥಾನದ ಗೌರವ ಸಲಹೆಗಾರ ಕೆ. ಪಾಂಡುರಂಗ, ಎಸ್.ಬಾಬು , ಪ್ರಧಾನ ಕಾರ್ಯದರ್ಶಿ ಎಸ್. ಜಗದೀಶ್ಚಂದ್ರ ಅಂಚನ್, ಕೋಶಾಧಿಕಾರಿ ಎಸ್. ನವೀನ್, ಪ್ರಧಾನ ಅರ್ಚಕ ಎಸ್. ಗಣೇಶ್, ಪದಾಧಿಕಾರಿಗಳಾದ ಎಸ್.ಪವಿತ್ರ, ಎಸ್. ಮೋಹನ್, ಬಿ. ವಿಶ್ವನಾಥ್, ಎಸ್. ಜನಾರ್ದನ, ಬಿ. ಗಣೇಶ್, ಎಸ್. ವಸಂತ, ಎಸ್. ಸುರೇಶ್, ಎಸ್. ಉಪೇಂದ್ರ, ಎಸ್. ಪ್ರವೀಣ್, ರಂಜಿತ್, ಭೋಜ, ಅನ್ನಪೂರ್ಣ ರಘುರಾಮ್, ಉಮಾಪ್ರಸಾದ್ ಎಂ., ಪುರುಷೋತ್ತಮ ಪದಕಣ್ಣಾಯ, ಸುನಿಲ್‌ರಾಜ್ ಪದಕಣ್ಣಾಯ, ಕಿರಣ್ ರಾಜ್ ಪದಕಣ್ಣಾಯ, ಎಸ್. ಅಪ್ಪಿ, ಸುದೇಶ್ ಕುಮಾರ್, ತಿಲಕ್ ರಾಜ್, ರಾಹುಲ್ ಎಸ್., ಸಂತೋಷ ಕುಮಾರಿ, ಸಂದೀಪ್, ಕಿಶೋರ್, ರಕ್ಷಿತ್, ಇಂದಿರಾ ಮೋಹನ್‌ದಾಸ್, ಪ್ರಶಾಂತ್ ಪಿ.ಎಸ್., ಪ್ರವೀಣ್ ಪಿ.ಎಸ್., ಪೃಥ್ವೀಶ್ ಪಿ.ಎಸ್., ಸೂರಜ್ ಸಾಗರ್, ಎಸ್. ಪ್ರದೀಪ್, ರಕ್ಷಿತ್ ಬಿ.ಎಸ್., ದೀಕ್ಷಿತ್ ಬಿ.ಎಸ್., ರೋಹಿತ್ , ಯಮುನಾ ಜಯ, ಕಿಶೋರ್ ಸಾಲ್ಯಾನ್ ಮತ್ತಿತರರಿದ್ದರು.

ಮೂಡ್ಲಕಟ್ಟೆ: ಪ್ರೇಮ್ ಎಕ್ಸ್ ಮೀಡಿಯಾ ಕ್ಲಬ್ ಆರಂಭ



ಕುಂದಾಪುರ: ಮೂಡ್ಲಕಟ್ಟೆ ಐಎಂಜೆ ಇನ್ಸ್ಟಿಟ್ಯೂಶನ್‌ನಲ್ಲಿ ಪ್ರೇಮ್ ಎಕ್ಸ್ ಮೀಡಿಯಾ ಕ್ಲಬ್‌ನ್ನು ಉದ್ಘಾಟಿಸಲಾಯಿತು. ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ನಾಗರಾಜ್ ರಾಯಪ್ಪನಮಠ ಬ್ಯಾನರ್ ಅನಾವರಣ ಹಾಗೂ ದೀಪ ಪ್ರಜ್ವಲನಗೊಳಿಸುವ ಮೂಲಕ 'ಪ್ರೇಮ್ ಎಕ್ಸ್ ಮೀಡಿಯಾ ಕ್ಲಬ್' ಉದ್ಘಾಟಿಸಿದರು. ಐಎಂಜೆ ಇನ್ಸ್ಟಿಟ್ಯೂಶನ್‌ನ ಅಕಾಡೆಮಿಕ್ ನಿರ್ದೇಶಕ ಡಾ. ಎಸ್. ಎನ್. ಭಟ್ ಅಧ್ಯಕ್ಷತೆ ವಹಿಸಿದ್ದರು. ಕ್ಲಬ್ ಅಧ್ಯಕ್ಷ ನಂದನ್ ಶೆಟ್ಟಿ ಬಹುಮಾನಗಳನ್ನು ವಿತರಿಸಿದರು. ಪ್ರೊ. ಸೂಕ್ಷ್ಮ ಎಸ್. ಅಡಿಗ ಸ್ವಾಗತಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ರಾಮಕೃಷ್ಣ ಹೆಗಡೆ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಿದ್ಯಾರ್ಥಿನಿಯರಾದ ಕರುಣಾ ಆರ್ ಗೌಡ, ಇಶ್ರತ್ ನಿರ್ವಹಿಸಿದರು. ಲಾವಣ್ಯ ವಂದಿಸಿದರು.

ಸುತ್ತಮುತ್ತ

ಇಂದಿನಿಂದ ಶ್ರೀ ಧರ್ಮದೈವಗಳ ನೇಮ

ಮಂಜೇಶ್ವರ: ಬಡಾಜೆ ಮುದುಕುಂಜಗುತ್ತು ಕುಟುಂಬಿಕರ ಧರ್ಮದೈವಗಳ ಸನ್ನಿಧಾನದಲ್ಲಿ ಶ್ರೀ ಧರ್ಮದೈವಗಳ ನೇಮ ಮತ್ತು ವಾರ್ಷಿಕ ತಂಬಿಲ ಸೇವೆಯು ಮಾ.14 ಮತ್ತು 15ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಶ್ರದ್ಧಾಭಕ್ತಿಯಿಂದ ಜರಗಲಿದೆ. ಮಾ.14ರಂದು ಬೆಳಗ್ಗೆ 7.30ಕ್ಕೆ ಗಣಪತಿ ಹೋಮ, ಮುಡಿಪು ಪೂಜೆ, 9ಕ್ಕೆ ನಾಗತಂಬಿಲ, 10.30ಕ್ಕೆ ಮೈಸಂದಾಯ ದೈವದ ನೇಮ, ಮಧ್ಯಾಹ್ನ 1ಗಂಟೆಗೆ ಅನ್ನ ಸಂತರ್ಪಣೆ, ಅಪರಾಹ್ನ 2ರಿಂದ ಧೂಮಾವತಿ ಬಂಟ ದೈವಗಳ ನೇಮೋತ್ಸವ, ರಾತ್ರಿ 8ಕ್ಕೆ ಅನ್ನ ಸಂತರ್ಪಣೆ, 9ರಿಂದ ಕಲ್ಲುರ್ಟಿ, ಪಂಜುರ್ಲಿ, ಕೊರತಿ, ಗುಳಿಗ ದೈವಗಳ ನೇಮ ನಡೆಯಲಿದೆ. ಮಾ.15ರಂದು ತಂಬಿಲ ಸೇವೆ ನೆರವೇರಲಿದೆ.

ನಾಳೆ ಮುಳಿಂಜದಲ್ಲಿ ಯಕ್ಷಗಾನ ಬಯಲಾಟ

ಮಂಜೇಶ್ವರ: ಶ್ರೀ ಅಯ್ಯಪ್ಪ ಕೃಪಾ ಯಕ್ಷಗಾನ ಅಧ್ಯಯನ ಕೇಂದ್ರ ಬಾಳಿಯೂರು ತಂಡದಿಂದ ಯಕ್ಷಗಾನ ಗುರು ಶೇಖರ ಶೆಟ್ಟಿ ಬಾಯಾರು ಅವರ ನಿರ್ದೇಶನದಲ್ಲಿ ಮುಳಿಂಜ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಸಂದರ್ಭ ಮಾ.15ರಂದು ರಾತ್ರಿ ಗಂಟೆ 8.30ರಿಂದ 'ವೀರಮಣಿ ಕಾಳಗ' ಯಕ್ಷಗಾನ ಬಯಲಾಟ ಪ್ರಸ್ತುತಿಗೊಳ್ಳಲಿದೆ.

ಅತಿಥಿ ಉಪನ್ಯಾಸಕರ ನೇಮಕಾತಿ

ಕಾಸರಗೋಡು: ಕಾಸರಗೋಡು ಸರಕಾರಿ ಐಟಿಐ ಕೇಂದ್ರದಲ್ಲಿ ಮಲ್ಟಿಮೀಡಿಯಾ ಅನಿಮೇಷನ್ ಮತ್ತು ಸ್ಪೆಷಲ್ ಎಫೆಕ್ಟ್ಸ್ ಟ್ರೇಡ್ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಮಾ.16 ರಂದು ಬೆಳಿಗ್ಗೆ 10 ಗಂಟೆಗೆ ಸಂದರ್ಶನ ನಡೆಯಲಿದೆ. ಮಲ್ಟಿಮೀಡಿಯಾ ಅನಿಮೇಷನ್‌ನಲ್ಲಿ ಪದವಿ, ಡಿಪ್ಲೊಮಾ ಅಥವಾ ಎನ್‌ಟಿಸಿ ಜೊತೆಗೆ ಮಲ್ಟಿಮೀಡಿಯಾ ಅನಿಮೇಷನ್ ಮತ್ತು ಸ್ಪೆಷಲ್ ಎಫೆಕ್ಟ್ಸ್ ಟ್ರೇಡ್‌ನಲ್ಲಿ ಮೂರು ವರ್ಷಗಳ ಕೆಲಸದ ಅನುಭವ, ಎನ್‌ಎಸಿ ಜೊತೆಗೆ ಒಂದು ವರ್ಷದ ಕೆಲಸದ ಅನುಭವ ಶಿಕ್ಷಣಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 04994 256440 ಕರೆ ಮಾಡಬಹುದು.

ಚಾಲಕರ ನೇಮಕಾತಿ

ಕಾಸರಗೋಡು: ಜಿ.ಪಂ.ನಲ್ಲಿ ಚಾಲಕರ ನೇಮಕಾತಿಗೆ ಅರ್ಜಿ ಸಲ್ಲಿಸಿದವರಿಗೆ ಸಂದರ್ಶನ ಮಾ.16ರಂದು ಬೆಳಿಗ್ಗೆ 10 ಗಂಟೆಗೆ ಕಾಸರಗೋಡು ಜಿ.ಪಂ. ಕಚೇರಿಯಲ್ಲಿ ನಡೆಯಲಿದೆ. ಮಾಹಿತಿಗೆ ದೂ.ಸಂ.04994 256724 ಕರೆ ಮಾಡಬಹುದು.

ವಿದ್ಯುತ್ ವ್ಯತ್ಯಯ

ಕಾಸರಗೋಡು: 33 ಕೆವಿ ಕಾಂಞಿರೋಡ್ – ಪಜಸ್ಸಿ ಮಾರ್ಗದ ಕಾರ್ಯಾಚರಣೆ ಮತ್ತು ಕಾಂಞಿರೋಡ್ –220 ಕೆವಿ ಉಪಕೇಂದ್ರದ ನಿರ್ವಹಣೆಗಾಗಿ 220 ಕೆವಿ ಅಜಿಕೋಡ್ – ಕಾಂಞಿರೋಡ್ ಮತ್ತು ಆರ್ಕಟೇರಿ – ಕಾಂಞಿರೋಡ್ ಮೂಲಕ ವಿದ್ಯುತ್ ಸರಬರಾಜು ಸ್ಥಗಿತಗೊಳಿಸುವುದರಿಂದ ಮಾ.15 ರಂದು ಬೆಳಗ್ಗೆ 10 ರಿಂದ ಅಪರಾಹ್ನ 3 ರ ವರೆಗೆ ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ಭಾಗಶಃ ವ್ಯತ್ಯಯವಾಗಲಿದೆ ಎಂದು ಕಣ್ಣೂರಿನ ಪ್ರಸರಣ ವೃತ್ತದ ಉಪ ಮುಖ್ಯ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಟೆಂಡೆಂಟ್ ಕಮ್ ಡ್ರೈವರ್ ನೇಮಕಾತಿ

ಕಾಸರಗೋಡು: ಜಿಲ್ಲೆಯ ಪ್ರಾಣಿ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡೋರ್‌ಸ್ಟೆಪ್ ನೈಟ್ ಪಶುವೈದ್ಯಕೀಯ ಸೇವಾ ಯೋಜನೆಗೆ ಅಟೆಂಡೆಂಟ್ ಕಮ್ ಡ್ರೈವರ್ ನೇಮಕಾತಿಗೆ ಸಂದರ್ಶನ ಮಾ.23 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪ್ರಾಣಿ ಕಲ್ಯಾಣ ಇಲಾಖೆ ಕಚೇರಿಯಲ್ಲಿ ನಡೆಯಲಿದೆ. ಹಿಂದಿನ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಮಂಜೇಶ್ವರ ಮತ್ತು ನೀಲೇಶ್ವರ ಬ್ಲಾಕ್‌ಗಳಲ್ಲಿ ನೇಮಕಾತಿ ನಡೆಯಲಿದೆ. 10ನೇ ತರಗತಿ ಮತ್ತು ಲಘು ಚಾಲನಾ ಪರವಾನಗಿ ಅರ್ಹತೆಯಾಗಿದೆ. ಮಾಹಿತಿಗೆ 04994 255483 ಕರೆ ಮಾಡಬಹುದು.

ಮಾ.17: ಸಂದರ್ಶನ

ಕಾಸರಗೋಡು: ಪಶುಪಾಲನಾ ಇಲಾಖೆಯಿಂದ ಜಿಲ್ಲೆಯಲ್ಲಿ ಜಾರಿಗೆ ತರಲಾದ ಸಂಚಾರಿ ಪಶುವೈದ್ಯಕೀಯ ಘಟಕಕ್ಕೆ ಪಶುವೈದ್ಯರ ನೇಮಕಾತಿಗಾಗಿ ಮಾ.17 ರಂದು ಬೆಳಗ್ಗೆ 11.30ಕ್ಕೆ ಜಿಲ್ಲಾ ಪಶುಪಾಲನಾ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ. ಕಾಸರಗೋಡು ಮತ್ತು ಕಾರಡ್ಕ ಬ್ಲಾಕ್‌ಗಳಲ್ಲಿ ನೇಮಕಾತಿ ನಡೆಯಲಿದೆ. ಪಶುವೈದ್ಯಕೀಯ ವಿಜ್ಞಾನದಲ್ಲಿ ಪದವಿ ಮತ್ತು ಕೇರಳ ಪಶುವೈದ್ಯಕೀಯ ಮಂಡಳಿಯ ನೋಂದಣಿ ಅರ್ಹತೆಯಾಗಿದೆ. ಹೆಚ್ಚಿನ ವಿವರಗಳಿಗೆ 04994 255483 ಸಂಪರ್ಕಿಸಬಹುದು.

ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದೆ ಸಾಂಸ್ಕೃತಿಕವಾಗಿ ವೈಭವದಿಂದ ಮೆರೆದ ಸಭಾಂಗಣ

'ಸಂಧ್ಯಾರಾಗಂ' ಆಡಿಟೋರಿಯಂಗೆ ಬೇಕಿದೆ ಶೀಘ್ರ ಕಾಯಕಲ್ಪ



ಕಾಸರಗೋಡು: ಕಾಸರಗೋಡು ನಗರಸಭಾ ಅಧೀನದಲ್ಲಿರುವ ಪಿಲಿಕುಂಜೆಯ ತೆರೆದ ಸಭಾಂಗಣವಾದ ಸಂಧ್ಯಾರಾಗಂ ಆಡಿಟೋರಿಯಂ ಮೂಲೆಗುಂಪಾಗಿದೆ. ಕಲೆ ಮತ್ತು ಸಾಂಸ್ಕೃತಿಕವಾಗಿ ಹಲವಾರು ಕಾರ್ಯಕ್ರಮಗಳೊಂದಿಗೆ ವೈಭವದಿಂದ ಮೆರೆದ ಈ ತೆರೆದ ಸಭಾಂಗಣವು ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಈ ಸಭಾಂಗಣಕ್ಕೆ ಕಾಯಕಲ್ಪ ಬೇಕೆಂಬ ಆಗ್ರಹ ವ್ಯಾಪಕಗೊಂಡಿದೆ.

ಕಾಸರಗೋಡು ನಗರದ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿದ್ದ ಸಂಧ್ಯಾರಾಗಂ ಆಡಿಟೋರಿಯಂ ಇದೀಗ ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳ ಅವಗಣನೆಗೆ ತುತ್ತಾಗಿದೆ. ನಗರಸಭಾ ಕಚೇರಿ ಸಮೀಪದಲ್ಲಿರುವ ಸಭಾಂಗಣವು ಸಾಂಸ್ಕೃತಿಕ ಕಾರ್ಯಕ್ರಮಗಳ ಶಾಶ್ವತ ಕೇಂದ್ರವಾಗಿತ್ತು. ಆದರೆ ಪ್ರಸ್ತುತ ಮೂಲಭೂತ ಸೌಲಭ್ಯಗಳ ಕೊರತೆಯಿಂದ ವಿವಿಧ ಸಂಘ ಸಂಸ್ಥೆಗಳು ಈ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲು ಹಿಂದೇಟು ಹಾಕುತ್ತಿವೆ.

ಮೇಲ್ಛಾವಣಿ ಸರಳುಗಳು ತುಕ್ಕು ಹಿಡಿದಿವೆ

ಸಭಾಂಗಣಕ್ಕೆ ತೆರಳುವವರನ್ನು ಸ್ವಾಗತಿಸುವ ಕಮಾನು ಹಾನಿಗೀಡಾಗಿದೆ. ಅದರ ಮೇಲೆ ಹಾಸಿದ್ದ ಹೆಂಚುಗಳು ಧರಾಶಾಹಿಯಾಗಿವೆ. ಹೆಂಚು ಇಲ್ಲದ ಮೇಲ್ಛಾವಣಿ ಸರಳುಗಳು ತುಕ್ಕು ಹಿಡಿದಿವೆ.

ಕಲಾರೂಪ ನಿತ್ಯ ಪ್ರದರ್ಶನಗೊಳ್ಳುತ್ತಿದ್ದವು

ಕಾಸರಗೋಡಿನ ಸಂಸ್ಕೃತಿಯನ್ನು ಬಿಂಬಿಸುವ ಅನೇಕ ಕಲಾರೂಪಗಳು ನಿತ್ಯ ಪ್ರದರ್ಶನಗೊಳ್ಳುತ್ತಿದ್ದವು. ಇದೀಗ ಕೆಲವೊಮ್ಮೆ ಮಾತ್ರ ಕಲಾ ಪ್ರದರ್ಶನ ನಡೆಯುತ್ತಿದೆ. 2022ರಲ್ಲಿ ವಿಶ್ವಕಪ್ ಫುಟ್ಬಾಲ್‌ನ ನೇರ ಪ್ರಸಾರವು ಯಶಸ್ವಿಯಾಗಿ ಈ ಸಭಾಂಗಣದಲ್ಲಿ ನೆರವೇರಿತ್ತು. ಬೃಹತ್ ತೆರೆಯಲ್ಲಿ ಕಾರ್ಯಕ್ರಮ ವೀಕ್ಷಿಸಲು ಸಂಧ್ಯಾರಾಗಂ ಉತ್ತಮ ಸ್ಥಳವಾಗಿದೆ. 2018ರಲ್ಲಿ ಕಾಸರಗೋಡು ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಜಿಲ್ಲಾ ಕಲೋತ್ಸವ ನಡೆದಾಗ ಪ್ರಧಾನ ವೇದಿಕೆಗಳಲ್ಲಿ ಒಂದಾಗಿ ಸಂಧ್ಯಾರಾಗಂ ಸಭಾಂಗಣವನ್ನು ಬಳಸಿಕೊಳ್ಳಲಾಗಿತ್ತು.

2002ರ ಅಕ್ಟೋಬರ್ 31ರಂದು ಪಿಲಿಕುಂಜೆ ಸಂಧ್ಯಾರಾಗಂ ತೆರೆದ ಸಭಾಂಗಣವನ್ನು ಅಂದಿನ ಕೇರಳ ಸಂಸ್ಕೃತಿ ಇಲಾಖೆ ಸಚಿವ ಜಿ.ಕಾರ್ತಿಕೇಯನ್ ಉದ್ಘಾಟಿಸಿದ್ದರು. ತಿರುವನಂತಪುರದಲ್ಲಿ ಪ್ರಧಾನ ಕಲಾ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುವ ನಿಶಾಗಂಧಿ ಸಭಾಂಗಣದಂತೆ ಕಾಸರಗೋಡಿನಲ್ಲೂ ಅಗತ್ಯವಾಗಿ ಸಭಾಂಗಣ ಬೇಕು ಎಂಬುದು ಅಂದಿನ ನಗರಸಭಾ ಅಧ್ಯಕ್ಷರಾಗಿದ್ದ ದಿ.ಟಿ.ಇ.ಅಬ್ದುಲ್ಲ ಕನಸಾಗಿತ್ತು. ಕಾಸರಗೋಡಿನ ಸಂಜೆಗಳನ್ನು ಕಲೆಗಳಿಂದ ತುಂಬಬೇಕು. ಹಾಡು– ನೃತ್ಯ ತುಂಬಿದ ಕಲಾಜಗತ್ತಿನಲ್ಲಿ ಮಗ್ನರಾಗಿ ಎಲ್ಲರೂ ಒಂದಾಗಿ ಕುಳಿತುಕೊಳ್ಳಬಹುದೆಂಬ ಆಶಯ ದೊಂದಿಗೆ ಸಭಾಂಗಣ ನಿರ್ಮಿಸಲಾಗಿತ್ತು. ಹೀಗೆ ಲೋಕೋಪ ಯೋಗಿ ಇಲಾಖೆ ಡಾಂಬರು ಡಬ್ಬಿಗಳ ದಾಸ್ತಾನಿಡುತ್ತಿದ್ದ ಪ್ರದೇಶ ಸಂಧ್ಯಾರಾಗಂ ತೆರೆದ ಸಭಾಂಗಣವಾಯಿತು. ಮೊದ ಮೊದಲು ಎಲ್ಲವೂ ಸರಿಯಾಗಿಯೇ ಇತ್ತು. ಸಂಜೆ ಆವರಿಸಿದಾಗ ಜನರು ಒಟ್ಟು ಸೇರುತ್ತಿದ್ದರು. ಅವರಿಗಾಗಿ ಚಲನಚಿತ್ರ ಹಾಡುಗಳ ಕೇಳಿಸಲಾಗುತ್ತಿತ್ತು. ನಗರಸಭೆಯ ಅಧೀನದಲ್ಲಿರುವ ಈ ಸಭಾಂಗಣಕ್ಕೆ ಕನಿಷ್ಠ ಬಾಡಿಗೆ ವಿಧಿಸಲಾಗುತ್ತಿತ್ತು. ಕಾರ್ಯಕ್ರಮ ನಡೆಸುವವರಿಂದ ಅರ್ಜಿಯೊಂದಿಗೆ 500 ರೂ. ಪಡೆಯಲಾಗುತ್ತಿತ್ತು. ಸಭಾಂಗಣಕ್ಕೆ ಯಾವುದೇ ಹಾನಿಯುಂಟು ಮಾಡದಿದ್ದರೆ ಆ ಹಣ ಮರಳಿಸಲಾಗುತ್ತಿತ್ತು.

ಮಿತಿಮೀರಿದ ಕಿಡಿಕೇಡಿಗಳ ಅಟ್ಟಹಾಸ

ತರಗೆಲೆಗಳ ನಡುವೆ ಮದ್ಯದ ಬಾಟಲಿಗಳು, ನಿಷೇಧಿತ ಮಾದಕ ವಸ್ತುಗಳ ಕವರ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಪ್ರೇಕ್ಷಕರಿಗೆ ಕುಳಿತುಕೊಳ್ಳುವ ಸ್ಥಳದಲ್ಲಿ ಹುಲ್ಲು ಇತ್ಯಾದಿ ಬೆಳೆದಿವೆ. ಈ ಮೊದಲು ಸುರಕ್ಷಾ ಸಿಬ್ಬಂದಿ ಸೇವೆ ಇತ್ತಾದರೂ ಕ್ರಮೇಣ ಇಲ್ಲದಾಯಿತು. ಈ ನಿಟ್ಟಿನಲ್ಲಿ ಕತ್ತಲೆಯ ಮರೆಯಲ್ಲಿ ಕಿಡಿಗೇಡಿಗಳ ಅಟ್ಟಹಾಸ ಮಿತಿ ಮೀರಿದೆ.

2023ರಲ್ಲಿ ನವೀಕರಣ

2023ರ ನಗರಸಭಾ ಬಜೆಟ್‌ನಲ್ಲಿ ಮಂಜೂರಾದ 10 ಲಕ್ಷ ರೂ. ಮೊತ್ತವನ್ನು ಉಪಯೋಗಿಸಿ ತೆರೆದ ಸಭಾಂಗಣದಲ್ಲಿ ನವೀಕರಣ ನಡೆಸಲಾಗಿತ್ತು. ನವೀಕರಣದ ಅಂಗವಾಗಿ ಸಭಾಂಗಣಕ್ಕೆ ಮೇಲ್ಛಾವಣಿ ನಿರ್ಮಿಸಲಾಗಿತ್ತು. ಇನ್ನೊಂದೆಡೆ ಈ ಸಭಾಂಗಣವನ್ನು ನವೀಕರಿಸಲಿರುವ ಪ್ರಕ್ರಿಯೆ ಬಗ್ಗೆ ಸಮಾಲೋಚನೆ ನಡೆಯುತ್ತಿದೆ. ಇದಕ್ಕಾಗಿ 25 ಲ.ರೂ.ಗಳ ಮೀಸಲಿರಿಸಲಾಗಿದೆ. ನವೀಕರಣ ಬಳಿಕ ಸಂಧ್ಯಾರಾಗಂ ಆಕರ್ಷಕ ವಾಗಿ ಕಾಣಿಸಬಹುದೆಂಬ ಸದಾಶಯ ನಗರಸಭಾ ಆಡಳಿತದ್ದಾಗಿದೆ.

ಮಣ್ಣಂಗುಳಿ ಮೈದಾನ ರಸ್ತೆ, ಅಂಗನವಾಡಿ ಪರಿಸರದಲ್ಲಿ ತ್ಯಾಜ್ಯ ರಾಶಿ: ಸಂಚಾರಕ್ಕೆ ಅಡ್ಡಿ



ಉಪ್ಪಳ: ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿಯ ಮಣ್ಣಂಗುಳಿ ಮೈದಾನ ರಸ್ತೆ ಹಾಗೂ ಪರಿಸರದ ಅಂಗನವಾಡಿ ಬಳಿಯಲ್ಲಿ ಭಾರೀ ಪ್ರಮಾಣದ ತ್ಯಾಜ್ಯ ರಾಶಿಯಿಂದ ಪರಿಸರ ದುರ್ವಾಸನೆ ಬೀರುತ್ತಿದ್ದು ಸಾರ್ವಜನಿಕರಿಗೆ ಆತಂಕ ಎದುರಾಗಿದೆ.

ಕಳೆದ ಕೆಲವು ತಿಂಗಳುಗಳಿಂದ ಮಣ್ಣಂಗುಳಿ ಮೈದಾನ ಪರಿಸರದ ವಿವಿಧ ರಸ್ತೆಗಳಲ್ಲಿ ಹಾಗೂ ಅಂಗನವಾಡಿ ಸಮೀಪದಲ್ಲೇ ಭಾರೀ ಪ್ರಮಾಣದ ತ್ಯಾಜ್ಯ ತುಂಬಿಕೊಂಡಿದ್ದು ದುರ್ವಾಸನೆ ಬೀರುತ್ತಿದ್ದರೂ ತೆರವುಗೊಳಿಸಲು ಸಂಬಂಧಪಟ್ಟವರು ಯಾವುದೇ ಕ್ರಮಕೈಗೊಳ್ಳುತ್ತಿಲ್ಲ ಎಂದು ಪರಿಸರ ನಿವಾಸಿಗಳು ದೂರಿದ್ದಾರೆ.

ಮಕ್ಕಳಿಗೆ ಅನಾರೋಗ್ಯದ ಭೀತಿ

ಈ ತ್ಯಾಜ್ಯದಿಂದಾಗಿ ಅಂಗನವಾಡಿಯ ಮಕ್ಕಳಿಗೆ ಆರೋಗ್ಯ ಸಮಸ್ಯೆಯ ಭೀತಿ ಎದುರಾಗಲಿದೆ. ರಾತ್ರಿ ಹೊತ್ತಿನಲ್ಲಿ ವಿವಿಧ ಪ್ರದೇಶಗಳಿಂದ ತ್ಯಾಜ್ಯವನ್ನು ತಂದು ಸುರಿಯುತ್ತಿರುವುದಾಗಿ ಹೇಳಲಾಗುತ್ತಿದೆ. ಹೀಗೆ ಯಂದು ಹಾಕಿದ ತ್ಯಾಜ್ಯ ತೆರವುಗೊಳಿಸಲು ಪಂಚಾಯತ್ ಅಧಿಕಾರಿಗಳು ಯಾವುದೇ ಕ್ರಮಕೈಗೊಳ್ಳದಿರುವುದು ಸಾರ್ವಜನಿಕರಲ್ಲಿ ಆಕ್ರೋಶಕ್ಕೆ ಕಾರಣವಾಗುತ್ತಿದೆ. ಈ ಬಾರಿ ಪಂ.ನ ಬಜೆಟ್‌ನಲ್ಲಿ ತ್ಯಾಜ್ಯ ನಿರ್ಮೂಲನೆಗೆ ಯೋಜನೆ ಹಾಕಲಾಗಿದ್ದು ಈ ಯೋಜನೆಯನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕು ಎಂದು ನಾಗರಿಕರು ಒತ್ತಾಯಿಸಿದ್ದಾರೆ.

ಕ್ರಮ ಕೈಗೊಳ್ಳಿ

ಪಂಚಾಯತ್ ವ್ಯಾಪ್ತಿಯ ಒಳ ರಸ್ತೆಯಲ್ಲೂ ತ್ಯಾಜ್ಯಗಳು ಕಂಡುಬರುತ್ತಿದ್ದು ಸಂಬಂಧಪಟ್ಟ ಅಧಿಕಾರಿಗಳು ತ್ಯಾಜ್ಯ ತಂದು ಹಾಕುವ ವ್ಯಕ್ತಿಗಳನ್ನು ಪತ್ತೆಹಚ್ಚಿ ಕ್ರಮಕ್ಕೆ ಮುಂದಾಗಬೇಕು, ತ್ಯಾಜ್ಯ ತೆರವುಗೊಳಿಸಿ ಶುಚೀಕರಣ ನಡೆಸಬೇಕೆಂದು ಊರವರು ಒತ್ತಾಯಿಸಿದ್ದಾರೆ.

ಕ್ರೀಡಾ ಕ್ಷೇತ್ರದಲ್ಲಿ 5000 ಕೋಟಿ ರೂ. ಅಭಿವೃದ್ಧಿ ಕಾರ್ಯ: ಅಬ್ದುರಹಮಾನ್



ಕಾಸರಗೋಡು: ಕೇರಳ ರಾಜ್ಯದ ಕ್ರೀಡಾ ಕ್ಷೇತ್ರದಲ್ಲಿ ಬದಲಾವಣೆ ಜಾರಿಗೆ ತರಲು ಸಾಧ್ಯವಾಗಿದೆ ಎಂದು ಕ್ರೀಡಾ ಖಾತೆ ಸಚಿವ ವಿ.ಅಬ್ದುರಹಿಮಾನ್ ಹೇಳಿದ್ದಾರೆ. ಕಾಸರಗೋಡು ಜಿಲ್ಲೆ ಕಯ್ಯೂರು ಜಿವಿಎಚ್‌ಎಸ್ ಶಾಲಾ ಮೈದಾನವನ್ನು ಸಿಂಥೆಟಿಕ್ ಕ್ರೀಡಾಂಗಣವನ್ನಾಗಿ ಪರಿವರ್ತಿಸುವ ಯೋಜನೆಗೆ ಆನ್‌ಲೈನ್ ಮೂಲಕ ಶುಕ್ರವಾರ ಶಿಲಾನ್ಯಾಸಗೈದು ಅವರು ಮಾತನಾಡಿದರು.

ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿಗೆ ಸುಮಾರು 5000 ಕೋ.ರೂ. ಖರ್ಚು ಮಾಡಲಾಗಿದೆ. ಇದರ ಭಾಗವಾಗಿ ಪ್ರಮುಖ ಬದಲಾವಣೆಗಳು ಕಂಡುಬರುತ್ತಿವೆ. ರಾಜ್ಯಾದ್ಯಂತ ನಿರ್ಮಿಸಲಾಗುತ್ತಿರುವ 20 ಒಳಾಂಗಣ ಕ್ರೀಡಾಂಗಣಗಳಲ್ಲಿ 6 ಈಗಾಗಲೇ ಪೂರ್ಣಗೊಂಡು ಉದ್ಘಾಟನೆಗೊಂಡಿವೆ ಎಂದರು.

ಪ್ರತಿ ಗ್ರಾ.ಪಂ.ನಲ್ಲಿ ಆಟದ ಮೈದಾನ ಖಚಿತಪಡಿಸಿಕೊಳ್ಳುವ ಯೋಜನೆ ರಾಜ್ಯ ಮಟ್ಟದಲ್ಲಿಯೂ ಜಾರಿಗೆ ತರಲಾಗುತ್ತಿದೆ. ಇದರ ಜೊತೆಗೆ 24 ಸಿಂಥೆಟಿಕ್ ಟ್ರ್ಯಾಕ್‌ಗಳ ನಿರ್ಮಾಣ ಕ್ರೀಡಾ ವಲಯದಲ್ಲಿ ಒಂದು ದೊಡ್ಡ ಸಾಧನೆ. ಪಿಎಸ್‌ಸಿ ಮೂಲಕ 961 ಕ್ರೀಡಾಪಟುಗಳಿಗೆ ಉದ್ಯೋಗ ನೀಡಲು ಸಾಧ್ಯವಾಗಿರುವುದು ಹೆಮ್ಮೆಯ ಸಾಧನೆ ಎಂದರು.

ತೃಕ್ಕರೀಪ್ಪುರ ಶಾಸಕ ಎಂ.ರಾಜಗೋಪಾಲನ್ ಅಧ್ಯಕ್ಷತೆ ವಹಿಸಿದ್ದರು. ನೀಲೇಶ್ವರ ಬ್ಲಾಕ್ ಪಂ. ಉಪಾಧ್ಯಕ್ಷ ಕೆ.ರಾಜು, ಬ್ಲಾಕ್ ಪಂ. ಸದಸ್ಯೆ ಪಿ.ಬಿ.ಶೀಬಾ, ಕಯ್ಯೂರು ಚೀಮೇನಿ ಗ್ರಾ.ಪಂ. ಸದಸ್ಯರಾದ ಸಿ.ವಿ.ಗೀತಾ, ಪಿ. ರವೀಂದ್ರನ್, ಪಿಟಿಎ ಅಧ್ಯಕ್ಷ ಎಂ.ಪ್ರಶಾಂತ್, ಕಯ್ಯೂರು ಜಿವಿಎಚ್‌ಎಸ್‌ಎಸ್ ಮುಖ್ಯೋಪಾಧ್ಯಾಯ ಪ್ರಮೋದ್ ಕುಮಾರ್ ಆಲಪ್ಪದಂಬನ್, ಪ್ರಾಂಶುಪಾಲೆ ಮಿನಿಮೋಳ್ ಮತ್ತಿತರರಿದ್ದರು.

ಕಯ್ಯೂರು ಚೀಮೇನಿ ಗ್ರಾ.ಪಂ.ಅಧ್ಯಕ್ಷೆ ಎಂ.ಪಿ.ವಿ.ಜಾನಕಿ ಸ್ವಾಗತಿಸಿ, ಕಯ್ಯೂರು ಜಿವಿಎಚ್‌ಎಸ್ ಶಾಲಾ ಪ್ರಭಾರ ಪ್ರಾಚಾರ್ಯ ಎ.ವಿ.ರೂಪೇಶ್ ವಂದಿಸಿದರು.

ಐಎಎಸ್ ಪರೀಕ್ಷೆಯಲ್ಲಿ ಕಾಜಲ್‌ಗೆ 167ನೇ ರ್‍ಯಾಂಕ್: ಡೀಸಿ ಅಭಿನಂದನೆ



ಕಾಸರಗೋಡು: ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆಯಲ್ಲಿ 167ನೇ ರ್‍ಯಾಂಕ್ ಗಳಿಸುವ ಮೂಲಕ ಹೆಮ್ಮೆಯ ಸಾಧನೆ ಮಾಡಿದ ನೀಲೇಶ್ವರ ಮೂಲದ ಕಾಜಲ್ ರಾಜು ಅವರನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಶುಕ್ರವಾರ ಅಭಿನಂದಿಸಿದರು.

ಈ ಸಾಧನೆಗೆ ಜಿಲ್ಲಾಡಳಿತದ ಅಭಿನಂದನೆ ಮತ್ತು ಶುಭಾಶಯ ತಿಳಿಸಿದರು. ಎಡಿಎಂ ಕೆ.ವಿ.ಶ್ರುತಿ ಮತ್ತು ಹುಸೂರ್ ಶಿರಸ್ತೇದಾರ್ ಸತೀಶ್ ಕುಮಾರ್, ಹೆತ್ತವರಾದ ಪಿ.ರಾಜು ಮತ್ತು ಎಂ.ಶೀಬಾ ಉಪಸ್ಥಿತರಿದ್ದರು.

ಐಎಎಸ್ ಕನಸು ಸಾಧನೆ

ಈ ಮೊದಲು 910ನೇ ರ್‍ಯಾಂಕ್ ಪಡೆದು 2022ರಲ್ಲಿ ಭಾರತೀಯ ರೈಲ್ವೆ ನಿರ್ವಹಣಾ ಸೇವೆಗೆ ಆಯ್ಕೆಯಾಗಿದ್ದ ಕಾಜಲ್ ರಾಜು ಅವರು ಐಎಎಸ್ ಆಗುವ ಕನಸು ಸಾಧಿಸಿದರು.

ಫೋಕೊಮೆಲಿಯಾ ಸಿಂಡ್ರೋಮ್ ಎಂಬ ಅಪರೂಪದ ಜನ್ಮಜಾತ ಸ್ಥಿತಿಯಿಂದ ಬಲ ಮಣಿಕಟ್ಟು ಇಲ್ಲದೆ ಜನಿಸಿದ ಕಾಜಲ್ ಅವರು ದೃಢ ವಿಶ್ವಾಸದಿಂದ ಅಡೆತಡೆಗಳ ನಿವಾರಿಸುವ ಮೂಲಕ ಈ ಮಹತ್ತರ ಸಾಧನೆ ಮಾಡಿದರು.

ನೀಲೇಶ್ವರ ತಾಲೂಕು ಆಸ್ಪತ್ರೆಯಲ್ಲಿ ಹೊಸ ಬ್ಲಾಕ್ ಕಟ್ಟಡಕ್ಕೆ ಸಚಿವರಿಂದ ಶಿಲಾನ್ಯಾಸ



ಕಾಸರಗೋಡು: ನೀಲೇಶ್ವರ ತಾಲೂಕು ಆಸ್ಪತ್ರೆಯಲ್ಲಿ ಹೊಸ ಬ್ಲಾಕ್ ಕಟ್ಟಡ ನಿರ್ಮಾಣದ ಅಂಗವಾಗಿ ಕೇರಳ ಆರೋಗ್ಯ ಇಲಾಖೆ ಸಚಿವೆ ವೀಣಾ ಜಾರ್ಜ್ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಶುಕ್ರವಾರ ಶಿಲಾನ್ಯಾಸ ನೆರವೇರಿಸಿದರು.


ಅತ್ಯಾಧುನಿಕ ಸೌಲಭ್ಯಗಳ ಹೊಂದಲಿರುವ ಈ ಕಟ್ಟಡವನ್ನು ಕೆಐಐಎಫ್‌ಬಿಯಿಂದ ಮಂಜೂರು ಮಾಡಿದ 13 ಕೋ.ರೂ.ಗಳ ಬಳಸಿಕೊಂಡು ನಿರ್ಮಿಸಲಾಗುತ್ತಿದೆ ಎಂದು ಸಚಿವರು ಇದೇ ವೇಳೆ ತಿಳಿಸಿದರು. ನೀಲೇಶ್ವರ ತಾ.ಆಸ್ಪತ್ರೆ ಅನೇಕ ಸಾಮಾನ್ಯ ಜನರಿಗೆ ಉತ್ತಮ ಸಹಾಯ ನೀಡುತ್ತಿದೆ ಎಂದರು.

ದಿನ ಕಳೆದಂತೆ ಹೆಚ್ಚುತ್ತಿರುವ ವಿವಿಧ ಅಗತ್ಯಗಳನ್ನು ಪರಿಗಣಿಸಿ ಆಸ್ಪತ್ರೆಯಲ್ಲಿ ಇನ್ನಷ್ಟು ಸೌಲಭ್ಯ ಒದಗಿಸಬೇಕಾಗಿದೆ. ಇದಕ್ಕಾಗಿ ಆಸ್ಪತ್ರೆಯಲ್ಲಿ ಅನೇಕ ಪ್ರಮುಖ ನವೀಕರಣ ಮತ್ತು ಅಭಿವೃದ್ಧಿ ಯೋಜನೆ ಜಾರಿಗೆ ತರಲಾಗುವುದು. ರಾಜ್ಯದ ಆರೋಗ್ಯ ಕ್ಷೇತ್ರದಲ್ಲಿ ಪ್ರತಿಯೊಬ್ಬರಿಗೂ ಉತ್ತಮ ಚಿಕಿತ್ಸಾ ಸೌಲಭ್ಯ ಖಚಿತಪಡಿಸಿಕೊಳ್ಳಲು ಸರಕಾರ ವ್ಯಾಪಕ ಕ್ರಮ ಕೈಗೊಳ್ಳುತ್ತಿದೆ ಎಂದರು.

ತೃಕ್ಕರೀಪ್ಪುರ ಶಾಸಕ ಎಂ.ರಾಜಗೋಪಾಲನ್ ಅಧ್ಯಕ್ಷತೆವಹಿಸಿದ್ದರು. ನಗರಸಭಾ ಉಪಾಧ್ಯಕ್ಷೆ ಪಿ.ಎಂ.ಸಂಧ್ಯಾ, ಆರೋಗ್ಯ, ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಎ.ವಿ.ಸುರೇಂದ್ರನ್ ಮಾತನಾಡಿದರು. ಕೌನ್ಸಿಲರ್‌ಗಳಾದ ಬಿ. ಅನೀಶ್, ಪಿ.ವಿ. ಸತೀಶನ್, ಇ.ಶಾಜೀರ್, ಜಿಲ್ಲಾ ವೈದ್ಯಾಧಿಕಾರಿ ಡಾ.ಎ.ವಿ.ರಾಮದಾಸ್, ಎನ್‌ಎಚ್‌ಎಂ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಡಾ.ಪಿ.ವಿ.ಅರುಣ್, ನಗರಸಭಾ ಕಾರ್ಯದರ್ಶಿ ಆಯುಷ್ ಜಯರಾಜನ್, ಪತ್ರಿಕಾ ವೇದಿಕೆ ಅಧ್ಯಕ್ಷ ಸೇತು ಬಂಗಳಂ ಮತ್ತಿತರರಿದ್ದರು.

ನೀಲೇಶ್ವರ ನಗರಸಭಾ ಅಧ್ಯಕ್ಷ ಪಿ.ಪಿ. ಮುಹಮ್ಮದ್ ರಫಿ ಸ್ವಾಗತಿಸಿ, ತಾ.ಆಸ್ಪತ್ರೆ ಅಧಿಕಾರಿ ಡಾ.ಸೋನು ಬಿ.ನಾಯರ್ ವಂದಿಸಿದರು.

ನಾಳೆ ಶ್ರೀಎಡನೀರು ಮಠದಲ್ಲಿ ಭರತಮುನಿ ಜಯಂತಿ ಕಾರ್ಯಕ್ರಮ, ನಾಟ್ಯಾರ್ಚನೆ



ಕಾಸರಗೋಡು: ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲಾ ಶಾಸ್ತ್ರೀಯ ನೃತ್ಯ ಕಲಾವಿದರ ಸಂಘಟನೆಯಾದ ಕರ್ನಾಟಕ ಕರಾವಳಿ ನೃತ್ಯಕಲಾ ಪರಿಷತ್ ಮಂಗಳೂರು ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು ಇವುಗಳ ಸಹಯೋಗದಲ್ಲಿ ಶ್ರೀ ಎಡನೀರು ಮಠದ ಭಾರತೀ ಕಲಾಸದನದಲ್ಲಿ ಮಾ.15ರಂದು ಬೆಳಿಗ್ಗೆ10ರಿಂದ ಭರತಮುನಿ ಜಯಂತಿ ಕಾರ್ಯಕ್ರಮ ಜರಗಲಿದೆ.

ಜಗದ್ಗುರು ಶಂಕರಾಚಾರ್ಯ ಸಂಸ್ಥಾನ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ದೀಪ ಪ್ರಜ್ವಲನೆಗೈದು ಆಶೀರ್ವಚನ ನೀಡಲಿದ್ದಾರೆ. ಕರ್ನಾಟಕ ಕರಾವಳಿ ನೃತ್ಯಕಲಾ ಪರಿಷತ್‌ನ ಅಧ್ಯಕ್ಷೆ , ವಿದುಷಿ ರಾಜಶ್ರೀ ಉಳ್ಳಾಲ ಅಧ್ಯಕ್ಷತೆ ವಹಿಸುವರು. ಹಿರಿಯ ಯಕ್ಷಗಾನ ಕಲಾವಿದ, ಸಂಘಟಕ ಕೆರೆಮನೆ ಶಿವಾನಂದ ಹೆಗಡೆ ಅಭ್ಯಾಗತರಾಗಿ ಪಾಲ್ಗೊಳ್ಳಲಿದ್ದಾರೆ.

ಬೆಳಿಗ್ಗೆ 11 ಗಂಟೆಯಿಂದ ವಿದುಷಿ ಯೋಗೀಶ್ವರಿ ಜಯಪ್ರಕಾಶ್ ಪುತ್ತೂರು, ವಿದುಷಿ ಮಂಜುಳಾ ಸುಬ್ರಹ್ಮಣ್ಯ ಪುತ್ತೂರು, ವಿದುಷಿ ಕಾವ್ಯ ಭಟ್ ಪೆರ್ಲ, ವಿದುಷಿ ಸವಿತಾ ಜೀವನ್ ಕೊಂಡೆವೂರು ಉಪ್ಪಳ, ವಿದುಷಿ ಪ್ರಣತಿ ಚೈತನ್ಯ ಪದ್ಯಾಣ ಅವರ ನಿರ್ದೇಶನದಲ್ಲಿ ನಾಟ್ಯಾರ್ಚನೆ – ಸಮೂಹ ನೃತ್ಯ ಪ್ರದರ್ಶನಗೊಳ್ಳಲಿದೆ.

ಅಪರಾಹ್ನ 2ರಿಂದ ಡಾ.ಸತ್ಯನಾರಾಯಣ ರಾಜು ಅವರ ಶಿಷ್ಯೆ ವಿದುಷಿ ಗೌರಿ ಸಾಗರ್ ಬೆಂಗಳೂರು ಅವರಿಂದ ಭರತನಾಟ್ಯ ಪ್ರಸ್ತುತಿ ಶ್ರೀ ವಿನೋದ, 3.15ರಿಂದ ಕುಚೇಲ ವ್ರತಂ ಕಥಕ್ಕಳಿ ಪ್ರದರ್ಶನ ನಾಟ್ಯರತ್ನಂ ಕಣ್ಣನ್ ಪಾಟಾಳಿ ಸ್ಮಾರಕ ಕಥಕ್ಕಳಿ ಟ್ರಸ್ಟ್ ಬೇಕಲ ಕಾಸರಗೋಡು ಸಂಸ್ಥೆಯ ಸಂಯೋಜನೆಯಲ್ಲಿ ವಿದುಷಿ ಮೃದುಲಾ ಹರೀಶ್ ಸಹಪ್ರಾಯೋಜಕತ್ವದಲ್ಲಿ ಜರಗಲಿದೆ.

ಗೌರವ ಸನ್ಮಾನ

ನಾಟ್ಯರಂಗ ಪುತ್ತೂರು ಸಂಸ್ಥೆ ಕಲಾ ನಿರ್ದೇಶಕಿ, ವಿದುಷಿ ಮಂಜುಳಾ ಸುಬ್ರಹ್ಮಣ್ಯ ನುಡಿನಮನ ಸಲ್ಲಿಸಲಿದ್ದಾರೆ. ಹಿರಿಯ ಕಲಾವಿದೆ, ಕಾಸರಗೋಡು ನೃತ್ಯ ನಿಕೇತನದ ನಿರ್ದೇಶಕಿಯಾದ ನೃತ್ಯಗುರು ವಿದುಷಿ ಶಶಿಕಲಾ ಟೀಚರ್ ಅವರಿಗೆ ಗೌರವ ಸನ್ಮಾನ ನಡೆಯಲಿದೆ.

ವಿಶ್ವ ಗ್ರಾಹಕ ಹಕ್ಕುಗಳ ದಿನಾಚರಣೆ: ಮಾ.16ರಂದು ಜಾಗೃತಿ ಕಾರ್ಯಕ್ರಮ

ಕಾಸರಗೋಡು: ಸಾರ್ವಜನಿಕ ವಿತರಣಾ ಗ್ರಾಹಕ ವ್ಯವಹಾರಗಳ ಇಲಾಖೆ ವಿಶ್ವ ಗ್ರಾಹಕ ಹಕ್ಕುಗಳ ದಿನ ಆಯೋಜಿಸುತ್ತಿದೆ. ಈ ನಿಟ್ಟಿನಲ್ಲಿ ಮಾ.16 ರಂದು ಬೆಳಿಗ್ಗೆ 11 ಗಂಟೆಗೆ ಕಾಸರಗೋಡಿನ ಎಕೆಆರ್‌ಆರ್‌ಡಿಎ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ಉದ್ಘಾಟಿಸಲಿದ್ದಾರೆ. ಜಿಲ್ಲಾ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗದ ಅಧ್ಯಕ್ಷ ಕೆ.ಕೃಷ್ಣನ್, ನಗರಸಭಾ ಕೌನ್ಸಿಲರ್ ರವೀಂದ್ರ ಪೂಜಾರಿ, ಜಿಲ್ಲಾ ಸರಬರಾಜು ಕಚೇರಿ ಹಿರಿಯ ಅಧಿಕಾರಿ ಶಿಜು ಕೆ.ತಂಗಚ್ಚನ್, ಸಿಡಿಆರ್‌ಸಿ ಸಹಾಯಕ ರಿಜಿಸ್ಟ್ರಾರ್ ಎಂ. ಜಯಪ್ರಕಾಶ್ ಮಾತನಾಡಲಿದ್ದಾರೆ.

ಜಿಲ್ಲಾ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗದ ಸದಸ್ಯೆ ಕೆ.ಜಿ.ಬೀನಾ ಅವರು 'ವಿಶ್ವಾಸಾರ್ಹ ಗ್ರಾಹಕರಿಗೆ ಸುರಕ್ಷಿತ ಉತ್ಪನ್ನಗಳು' ವಿಷಯದ ಬಗ್ಗೆ ವಿಚಾರ ಸಂಕಿರಣ ನಡೆಸಿಕೊಡುವರು. ತಾ. ಸರಬರಾಜು ಅಧಿಕಾರಿ ಬಿ.ಕೃಷ್ಣ ನಾಯಕ್, ಸಹಾಯಕ ತಾಲೂಕು ಸರಬರಾಜು ಅಧಿಕಾರಿ ಅಬೂಬಕ್ಕರ್ ಸಿದ್ದಿಕ್ ಪಾಲ್ಗೊಳ್ಳುವರು.

ಕ್ಯಾಂಪ್ಕೋ ಸಾಂತ್ವನ ಯೋಜನೆ: ಚೆಕ್ ವಿತರಣೆ



ಕಾಸರಗೋಡು: ಕ್ಯಾಂಪ್ಕೋ ಮಂಗಳೂರು ವತಿಯಿಂದ ಸಕ್ರಿಯ ಕೃಷಿಕರಿಗಾಗಿ ಹಮ್ಮಿಕೊಂಡಿರುವ ಸಾಂತ್ವನ ಯೋಜನೆಯನ್ವಯ ಬಾಯಾರು ಕ್ಯಾಂಪ್ಕೋ ಶಾಖೆಯಲ್ಲಿ ಸಕ್ರಿಯ ಸದಸ್ಯರಾದ ಕೃಷಿಕರಿಗೆ ಹಮ್ಮಿಕೊಂಡ ಚೆಕ್ ವಿತರಣಾ ಕಾರ್ಯಕ್ರಮ ಶುಕ್ರವಾರ ಜರಗಿತು.

ಎಂಜಿಯೋಪ್ಲಾಸ್ಟ್ ಚಿಕಿತ್ಸೆಗೊಳಗಾದ ವಿಶ್ವನಾಥ ಪಕಳ ಮದನ ಮನೆ ಕಯ್ಯಾರು ಅವರಿಗೆ 50,000 ರೂ.ನ ಚೆಕ್‌ನ್ನು ಕ್ಯಾಂಪ್ಕೋ ಸಂಸ್ಥೆಯ ಗೌರವಾನ್ವಿತ ನಿರ್ದೇಶಕ ಕೋಳಾರು ಸತೀಶ್ಚಂದ್ರ ಭಂಡಾರಿ ಅವರು ವಿತರಿಸಿದರು. ಈ ಸಂದರ್ಭ ಕ್ಯಾಂಪ್ಕೋ ಸಂಸ್ಥೆಯ ನಿರ್ದೇಶಕರಾದ ಸದಾನಂದ ಶೆಟ್ಟಿ ಕೊಮ್ಮಂಡ, ಕ್ಯಾಂಪ್ಕೋ ಬದಿಯಡ್ಕ ವಲಯದ ಪ್ರಬಂಧಕ ಚಂದ್ರ ಎಂ., ಕ್ಯಾಂಪ್ಕೋ ಬಾಯಾರು ಶಾಖೆಯ ಪ್ರಬಂಧಕ ರಮೇಶ್ ವೈ., ಸಂಸ್ಥೆಯ ಉದ್ಯೋಗಿ ಪ್ರವೀಣ್‌ರಾಜ್ ಬಲ್ಲಾಳ್ ಮತ್ತಿತರರು ಉಪಸ್ಥಿತರಿದ್ದರು.

ಲಾಲ್‌ಬಾಗ್ – ಕುರುಡಪದವು ರಸ್ತೆಯಲ್ಲಿ ಇನ್ನೂ ಮುಗಿಯದ ಕಾಮಗಾರಿ

ಗುತ್ತಿಗೆದಾರನ ನಿರ್ಲಕ್ಷ್ಯದಿಂದ ವಾಹನ ಸಂಚಾರಕ್ಕೆ ಸಮಸ್ಯೆ





ಮಂಜೇಶ್ವರ: ಹಲವು ತಿಂಗಳಿಂದ ಆರಂಭಿಸಿದ ಕಾಮಗಾರಿ ಇನ್ನೂ ಪೂರ್ತಿಗೊಳ್ಳದ ಹಿನ್ನೆಲೆ ವಾಹನ ಸಂಚಾರಕ್ಕೆ ಸಂಕಷ್ಟ ಉಂಟಾಗಿದೆ. ಪೈವಳಿಕೆ ಪಂ.ನ ಲಾಲ್‌ಬಾಗ್ – ಕುರುಡಪದವು ಲೋಕೋಪಯೋಗಿ ಇಲಾಖೆ ರಸ್ತೆಯಲ್ಲಿ ಸಮಸ್ಯೆ ಉಂಟಾಗಿದೆ.

ಲಾಲ್‌ಬಾಗ್‌ನಿಂದ ಆಮ್ಮೇರಿ ತನಕ 4.30 ಕೋ.ರೂ. ವೆಚ್ಚದಲ್ಲಿ ಮೂರೂವರೆ ಕಿ.ಮೀ. ರಸ್ತೆ ಅಭಿವೃದ್ಧಿಗೊಳ್ಳುತ್ತಿದೆ. ಇದರ ಕಾಮಗಾರಿ ಕಳೆದ 4 ತಿಂಗಳಿಂದ ನಡೆಯುತ್ತಿದ್ದರೂ ಇದುವರೆಗೂ ಕೆಲಸ ಪೂರ್ತಿಗೊಳಿಸದಿರುವುದು ಊರವರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಕಾಮಗಾರಿ ಹಿನ್ನೆಲೆ ಕಳೆದ ಎರಡು ತಿಂಗಳಿಂದ ಬಸ್ ಸಹಿತ ವಾಹನ ಸಂಚಾರ ಅಸ್ತವ್ಯಸ್ತ ಗೊಂಡಿದ್ದು ಬಾಯಾರುಪದವು ಮೂಲಕ ಸಾಗಿ ಒಳರಸ್ತೆಯಿಂದ ಸುತ್ತಾಗಿ ಕುರುಡಪದವು ಸಹಿತ ವಿವಿಧ ಪ್ರದೇಶಕ್ಕೆ ತಲುಪಬೇಕಾಗಿದೆ. ಬೆರಳೆಣಿಕೆಯಷ್ಟು ಮಾತ್ರವೇ ನೌಕರರು ಕೆಲಸ ನಿರ್ವಹಿಸುತ್ತಿರುವುದೇ ವಿಳಂಬಗೊಳ್ಳಲು ಕಾರಣವೆಂದು ಊರವರು ಆರೋಪಿಸಿದ್ದಾರೆ. ಇದೀಗ ಈ ರಸ್ತೆಯಲ್ಲಿ ಮೋರಿ ನಿರ್ಮಾಣದ ಕೆಲಸಗಳು, ಅಲ್ಲಲ್ಲಿ ಅಗಲೀಕರಣಗೊಂಡಿದೆ. ಆದರೆ ರಸ್ತೆ ಡಾಮರೀಕರಣ, ಚರಂಡಿ ನಿರ್ಮಾಣ, ವಿದ್ಯುತ್ ಕಂಬಗಳು ಅಳವಡಿಕೆ ಮೊದಲಾದ ಕೆಲಸಗಳು ನಿಧಾನಗತಿಯಲ್ಲಿ ಸಾಗುತ್ತಿರುವುದು ಗುತ್ತಿಗೆದಾರನ ನಿರ್ಲಕ್ಷ್ಯವೆಂದು ಊರವರು ದೂರಿದ್ದಾರೆ. ಇದೀಗ ರಸ್ತೆಯಲ್ಲಿ ಜಲ್ಲಿಕಲ್ಲಿನ ಮೇಲೆ ಲಘು ವಾಹನಗಳು ಸಾಗುತ್ತಿದ್ದರೂ ಬಿಡಿಭಾಗಗಳು ಪದೇ ಪದೇ ಹಾನಿಗೀಡಾಗುತ್ತಿದೆ. ಅಲ್ಲದೆ ವಿದ್ಯುತ್ ಕಂಬ ಬದಲಾಯಿಸುವ ಹಿನ್ನೆಲೆ ಮನ ಬಂದಂತೆ ವಿದ್ಯುತ್ ಸ್ಥಗಿತಗೊಳಿಸುವುದರಿಂದ ಕೃಷಿಕರು, ವ್ಯಾಪಾರಸ್ಥರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಊರವರು ದೂರಿದ್ದಾರೆ.

ಬಿಜೆಪಿ ಜಿಲ್ಲಾಧ್ಯಕ್ಷೆ ಭೇಟಿ

ರಸ್ತೆ ಕಾಮಗಾರಿ ನಡೆಯುತ್ತಿರುವ ಪ್ರದೇಶಕ್ಕೆ ಗುರುವಾರ ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ನೇತೃತ್ವದ ಬಿಜೆಪಿ ನೇತಾರರು ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ಈ ವೇಳೆ ಮಾತನಾಡಿದ ಅಶ್ವಿನಿ, ಕೂಡಲೇ ರಸ್ತೆಯ ಕಾಮಗಾರಿ ಮುಗಿಸಿ ರಸ್ತೆ ವಾಹನ ಸಂಚಾರಕ್ಕೆ ತೆರೆದುಕೊಡಬೇಕೆಂದೂ ಇಲ್ಲದಿದ್ದಲ್ಲಿ ಬಿಜೆಪಿ ಜಿಲ್ಲಾ ಸಮಿತಿ, ಪಂ. ಘಟಕದಿಂದ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ಹೊಂಡ ಗುಂಡಿ ರಸ್ತೆಯಲ್ಲಿ ಸಂಚಾರ ದುಸ್ತರ: ದುರಸ್ತಿಗೆ ಸಾರ್ವಜನಿಕರ ಒಕ್ಕೊರಲ ಆಗ್ರಹ



ಉಪ್ಪಳ: ಮಂಗಲ್ಪಾಡಿ ಗ್ರಾ.ಪಂ. ವ್ಯಾಪ್ತಿಯ ಕೋಡಿಬೈಲು ಪ್ರದೇಶದಲ್ಲಿ ಸಂಗಮಿಸುವ ಎರಡು ರಸ್ತೆ ಹದಗೆಟ್ಟು ಶೋಚನೀಯಾವಸ್ಥೆಯಿಂದ ವಾಹನ ಸಂಚಾರಕ್ಕೆ ಸಮಸ್ಯೆಯಾಗಿ ಪರಿಣಮಿಸಿರುವುದಾಗಿ ಸಾರ್ವಜನಿಕರು ದೂರಿದ್ದಾರೆ.

ಶೋಚನೀಯಾವಸ್ಥೆಯಲ್ಲಿದೆ

ಮಣ್ಣಂಗುಳಿಯಿಂದ ಕೋಡಿಬೈಲು ಹಾಗೂ ಉಪ್ಪಳ ಪತ್ವಾಡಿ ರಸ್ತೆಯಿಂದ ಕೋಡಿಬೈಲು ಪ್ರದೇಶಕ್ಕೆ ಸಂಗಮಿಸುವ ಈ ರಸ್ತೆಗಳು ಶೋಚನೀಯಾವಸ್ಥೆಯಲ್ಲಿದೆ. ಈ ಪ್ರದೇಶದಲ್ಲಿ ನೂರಾರು ಮನೆಗಳು ಹೊಂದಿದ್ದು ಅಲ್ಲದೆ ಶಾಲೆ ಸಹಿತ ನೂರಾರು ವಾಹನಗಳು ದಿನನಿತ್ಯ ಸಂಚರಿಸುತ್ತಿದೆ. ಈ ರಸ್ತೆಯ ಅಲ್ಲಲ್ಲಿ ಡಾಮರೀಕರಣ, ಕಾಂಕ್ರೀಟ್, ಇಂಟರ್‌ಲಾಕ್ ರಸ್ತೆಗಳು ಹೊಂದಿಕೊಂಡಿದ್ದು ಇವುಗಳೆಲ್ಲ ಹೊಂಡ ಗುಂಡಿಗಳಿಂದ ಕೂಡಿ ಸಂಚಾರ ದುಸ್ತರವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಹದಗೆಟ್ಟ ರಸ್ತೆಗಳನ್ನು ದುರಸ್ತಿಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸುತ್ತಮುತ್ತ

ಇಂದು ಭೂಗತ ಚರಂಡಿ ದುರವಸ್ಥೆ ಕುರಿತು ವಿಶೇಷ ಉಪನ್ಯಾಸ

ಉಡುಪಿ: ನಗರಸಭಾ ವ್ಯಾಪ್ತಿಯಲ್ಲಿನ ಅವ್ಯವಸ್ಥಿತ ಭೂಗತ ಚರಂಡಿ ವ್ಯವಸ್ಥೆಯಿಂದ ಜಲಮೂಲಗಳು ಕಲುಷಿತಗೊಳ್ಳುತ್ತಿರುವ ಕುರಿತು ಜಾಗೃತಿ ಮೂಡಿಸಲು ಮಾ. 14 ರಂದು ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ. 'ಬಹುಜನ ಹಿತಾಯ – ಬಹುಜನ ಸುಖಾಯ' ಸರಣಿಯ 4ನೇ ಉಪನ್ಯಾಸ ಮಾಲಿಕೆಯು ಶನಿವಾರ ಸಂಜೆ 5 ಗಂಟೆಗೆ ಉಡುಪಿಯ ಯಕ್ಷಗಾನ ಕಲಾರಂಗದ ಸಭಾಭವನದಲ್ಲಿ ನಡೆಯಲಿದೆ. ಮಾನವ ಹಕ್ಕು ರಕ್ಷಣಾ ಪ್ರತಿಷ್ಠಾನದ ಅಧ್ಯಕ್ಷ ಡಾ. ರವೀಂದ್ರನಾಥ ಶಾನುಭಾಗ್ ಅವರು ನಾಗರಿಕರಿಗೆ ಮಾರ್ಗದರ್ಶನ ನೀಡಲಿದ್ದಾರೆ. ನಗರದ ಹೆಚ್ಚಿನ ಬಾವಿನೀರು ಕುಡಿಯಲು ಯೋಗ್ಯವಾಗಿಲ್ಲದ ಸ್ಥಿತಿ ತಲುಪಿದ್ದು ಈ ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಮತ್ತು ಕಾನೂನಾತ್ಮಕ ಹೋರಾಟ ಸಂಘಟಿಸಲು ಈ ವೇದಿಕೆ ಸಿದ್ಧವಾಗಿದೆ ಎಂದುಪ್ರಕಟಣೆ ತಿಳಿಸಿದೆ.

ಶ್ರೀ ದುರ್ಗಾಪರಮೇಶ್ವರಿ ಸೊಸೈಟಿ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಉಡುಪಿ: ಸೊಸೈಟಿಯ 2026 ರಿಂದ ಮುಂದಿನ ಐದು ವರ್ಷದ ಅವಧಿಗೆ ನೂತನ ಅಧ್ಯಕ್ಷರಾಗಿ ನರಸಿಂಹ ನಾಯಕ್ ಮಣಿಪಾಲ ಉಪಾಧ್ಯಕ್ಷರಾಗಿ ಮಹೇಶ್ ನಾಯಕ್ ಅಂಬಲಬೆಟ್ಟು ಅವಿರೋಧವಾಗಿ ಆಯ್ಕೆಯಾದರು. ಚುನಾವಣಾ ನಿರ್ವಚನಾಧಿಕಾರಿಯಾಗಿ ರೋಹಿತ್ ಆರ್ ಕಾರ್ಯನಿರ್ವಹಿಸಿದರು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಸಂಸ್ಥೆಯ ಮುಖ್ಯಕಾರ್ಯನಿರ್ವಹಣಾಧಿಕಾರಿ ನಿತ್ಯಾನಂದ ನರಸಿಂಗೆ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಇಲ್ಲೀಗ ಇಕ್ಕಟ್ಟು!

ಗ್ಯಾಸ್ ಸಿಲಿಂಡರ್ ಲಭ್ಯವಾಗದ ಹಿನ್ನೆಲೆಯಲ್ಲಿ ಗುರುವಾರ ಕೆಲ ಹೊಟೇಲ್‌ಗಳು ಇಡೀ ದಿನ ಬಂದ್ ಆಗಿದ್ದವು. ನಗರದ ರಥಬೀದಿಯ ಪ್ರಸಿದ್ಧ ಹೊಟೇಲ್‌ವೊಂದು ಗುರುವಾರ ಇಡೀ ದಿನ ಬಂದ್ ಆಗಿರುವುದು ಕಂಡುಬಂತು. ಕೆಲ ಹೊಟೇಲ್‌ಗಳು ಬೆಳಗ್ಗೆ ಬಾಗಿಲು ತೆರೆದು ಹೊತ್ತು ಏರುತ್ತಿದ್ದಂತೆ ಬಂದ್ ಬಾಗಿಲು ಮುಚ್ಚಿದವು.
ಕೊಡಗಿನಲ್ಲಿಯೂ ಅಡುಗೆ ಅನಿಲದ ಕೊರತೆಯಿಂದಾಗಿ ಹೊಟೇಲ್ ವ್ಯಾಪಾರಿಗಳು ಕಂಗಾಲಾಗಿದ್ದಾರೆ. ಇದೇ ಕಾರಣಕ್ಕಾಗಿ ಗ್ರಾಹಕರು ಸಹಕರಿಸುವಂತೆ ಕೋರಿ ಹೊಟೇಲ್‌ಗಳ ಮುಂಭಾಗದಲ್ಲಿ ಫಲಕಗಳನ್ನು ಹಾಕಲಾಗಿದೆ. ಗೃಹ ಬಳಕೆಯ ಸಿಲಿಂಡರ್ ಬಳಸುವುದನ್ನು ಇದೀಗ ಎಸ್ಮಾ ಸೇರಿದಂತೆ ಕಟ್ಟುನಿಟ್ಟಿನ ನಿಯಮಗಳೊಂದಿಗೆ ತನಿಖೆಯನ್ನು ಬಿಗಿಗೊಳಿಸಲಾಗಿದೆ. ವ್ಯಾಪಾರ ಕಡಿಮೆಯಾದರೂ ನೌಕರರ ದಿನಗೂಲಿಯನ್ನು ನೀಡಲೇಬೇಕಾಗಿರುವುದು ಅನಿವಾರ್ಯ . ಇದರಿಂದ ಅನೇಕ ಹೋಟೆಲ್ ಗಳು ವಾರಾಂತ್ಯದೊಂದಿಗೆ ಮುಚ್ಚುವ ಪರಿಸ್ಥಿತಿಯನ್ನು ಎದುರಿಸುತಿದೆ ಎಂದು ಪಟ್ಟಣದ 'ಉಡುಪಿ ಹೊಟೇಲ್' ಮಾಲಿಕ ಗಣೇಶ್ ತಮ್ಮ ಅಸಹಾಯಕತೆಯನ್ನು ವಿವರಿಸಿದರು.
ಉಡುಪಿ ಜಿಲ್ಲೆಯಲ್ಲಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಅಭಾವ ಮುಂದುವರಿದಿದ್ದು, ಹೋಟೆಲ್ ಉದ್ಯಮ ಸಂಪೂರ್ಣವಾಗಿ ಕಂಗೆಟ್ಟಿದೆ. ಕೆಲವು ಹೋಟೆಲ್‌ಗಳು ಬಾಗಿಲು ಹಾಕುವ ಭೀತಿ ಎದುರಿಸುತ್ತಿದ್ದು ಶುಕ್ರವಾರ ನಗರದ ಪ್ರಮುಖ ಹೋಟೆಲ್‌ಗಳಲ್ಲಿ ಗ್ರಾಹಕರಿಗೆ ನಿಗದಿತ ಮೆನು ನೀಡಲು ಸಾಧ್ಯವಾಗುತ್ತಿಲ್ಲ. ಉಡುಪಿ ನಗರದ ಅಜ್ಜರಕಾಡು, ಸಿಟಿ ಬಸ್ ನಿಲ್ದಾಣ ಮತ್ತು ಪರ್ಕಳದ ಆಸುಪಾಸಿನ ಅನೇಕ ಸಣ್ಣ ಹೋಟೆಲ್‌ಗಳು ಮತ್ತು ಕೆಫೆಟೇರಿಯಾಗಳು ಮಧ್ಯಾಹ್ನದ ವೇಳೆಗೆ ಸ್ವಿಚ್ ಆಫ್ ಮಾಡಿವೆ. ಕೆಲವು ಹೋಟೆಲ್ ಮಾಲೀಕರು ಪರಿಸ್ಥಿತಿ ನಿಭಾಯಿಸಲು ಹಳೆಯ ಪದ್ಧತಿಯಂತೆ ಸೌದೆ ಒಲೆಗಳ ಮೊರೆ ಹೋಗುತ್ತಿರುವುದು ಕಂಡುಬಂದಿದೆ.

ಪಂಜೆ ಭವನ

ಮಂಗಳೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಜಿಲ್ಲಾ ರಂಗಮಂದಿರ ಕಾಮಗಾರಿಯ ಜತೆಗೆ ಬಂಟ್ವಾಳದಲ್ಲಿ ನಿರ್ಮಾಣ ಗೊಳ್ಳುತ್ತಿರುವ ಪಂಜ ಮಂಗೇಶರಾಯ ಸ್ಮಾರಕ ಭವನ ತ್ವರಿತವಾಗಿ ಪೂರ್ಣಗೊಳಿಸಲು ಸೂಚನೆ ನೀಡಿದ್ದರು. ಸಚಿವರ ಈ ನಿರ್ದೇಶನದಿಂದ ಬಂಟ್ವಾಳದ ಸಾಹಿತ್ಯ,ಸಾಂಸ್ಕೃತಿಕ ರಂಗಕರ್ಮಿಗಳಲ್ಲಿ ಸಣ್ಣದಾದ ಆಶಾಭಾವನೆಯೊಂದು ಮೂಡಿಸಿತ್ತು. ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಪಂಜೆ ಮಂಗೇಶರಾಯರು ಹುಟ್ಟಿದ ಬಂಟ್ವಾಳದ ಅವರ ಮನೆ ಸನಿಹವೇ ಈ ಭವನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸುಪರ್ದಿಯಲ್ಲಿ ನಿರ್ಮಾಣವಾಗುತ್ತಿದೆ. ಮಳೆ, ಬಿಸಿಲಿಗೆ ಸದ್ಯ ಕಟ್ಟಡಕ್ಕೆ ಪೂರ್ತಿ ಪಾಚಿ ಹಿಡಿದಿದೆ. ಈ ಕಟ್ಟಡದಲ್ಲಿ ಅನಾಥ, ದಿಕ್ಕುದೆಸೆ ಇಲ್ಲದ ವೃದ್ಧ ದಾಸಯ್ಯರೋರ್ವರು ಕಣ್ಣು ಕಾಣದ ವೃದ್ಧ ಪತ್ನಿಯ ಜತೆ ಬೀಡು ಬಿಟ್ಟಿದ್ದಾರೆ. ಮುಂಭಾಗದ ಮುಖ್ಯದ್ವಾರಕ್ಕೆ ತಗಡು ಶೀಟಿನ ಬಾಗಿಲು ಅಳವಡಿಸಲಾಗಿದ್ದು,ಹಗಲು ಹೊರಗಡೆ, ರಾತ್ರಿಒಳಭಾಗದಲ್ಲಿ ಕಾಲಕಳೆಯತ್ತಾರೆ.
ನಿರ್ಮಾಣದ ಕೊನೇ ಹಂತದಲ್ಲಿರುವ ಈ ಕಟ್ಟಡ ಪೂರಕ ಅನುದಾನದ ಕೊರತೆಯಿಂದಾಗಿ ಇನ್ನೂ ಅಂತಿಮವಾಗಿಲ್ಲ, ಹೆಚ್ಚಿನ ಹಣಕಾಸಿನ ನೆರವಿನ ಕುರಿತು ಈಗಾಗಲೇ ಸರಕಾರದ ಮಟ್ಟದಲ್ಲಿ ಪತ್ರ ವ್ಯವಹಾರಗಳು ನಡೆಯುತ್ತಿದ್ದು ಅದಾದರೆ ಬಂಟ್ವಾಳದ ಸಾಂಸ್ಕೃತಿಕ ಚಟುವಟಿಕೆಗಳಿಗೆ ವೇಗ ದೊರಕಲಿದೆ. ಭವನದ ಕಾಮಗಾರಿ ಪೂರ್ಣಗೊಂಡಾಗ ಬಂಟ್ವಾಳದ ಜನತೆಯ ರಂಗಮಂದಿರದ ಬಹುಕಾಲದ ಕನಸು ನನಸಾಗಲಿದೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರು ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ, ಪರಿಶೀಲನೆ

ಸರ್ಕಾರಿ ಮಾರ್ಗಸೂಚಿಯಡಿ ದಾಖಲೆ ನಿರ್ವಹಣೆಗೆ ಸೂಚನೆ

ಉಡುಪಿ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಎಸ್. ಕೋಸಂಬೆ ಶುಕ್ರವಾರ ನಗರದ ಕೂಸಮ್ಮ ಶಂಭು ಶೆಟ್ಟಿ ಹಾಜಿ ಅಬ್ದುಲ್ಲಾ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ ಆಸ್ಪತ್ರೆಯ ವಿಶೇಷ ನವಜಾತ ಶಿಶುಗಳ ಚಿಕಿತ್ಸಾ ಘಟಕ, ತಾಯಿ ಆರೈಕೆ ಕೇಂದ್ರಗಳಲ್ಲಿ ಪರಿಶೀಲನೆ ನಡೆಸಿದರು.
ವಿಶೇಷ ನವಜಾತ ಶಿಶು ಚಿಕಿತ್ಸಾ ಘಟಕದಲ್ಲಿ ನವಜಾತ ಶಿಶುಗಳಿಗೆ ಆರೈಕೆ ನೀಡುತ್ತಿರುವ ಬಗ್ಗೆ ಮಾಹಿತಿ ಪಡೆದು ಈ ಘಟಕದಲ್ಲಿ ನಿರ್ವಹಿಸುತ್ತಿರುವ ರಿಜಿಸ್ಟರ್‌ಗಳನ್ನು ಹಾಗೂ ಕಡತಗಳನ್ನು ಪರಿಶೀಲಿಸಿದ ಅವರು, ಸರಕಾರದ ಮಾರ್ಗಸೂಚಿ ಅನ್ವಯ ರಿಜಿಸ್ಟರ್‌ಗಳನ್ನು ನಿರ್ವಹಿಸಬೇಕು ಎಂದು ಅಲ್ಲಿನ ಸಿಬ್ಬಂದಿಗೆ ಸೂಚಿಸಿದರು. ಚಿಕಿತ್ಸೆ ಪಡೆಯುತ್ತಿರುವ ನವಜಾತ ಶಿಶುಗಳ ಕೇಸ್-ಶೀಟ್‌ಗಳಲ್ಲಿ ಮಕ್ಕಳ ಹೆಸರು ಅಥವಾ ಅವರ ತಂದೆ-ತಾಯಿಗಳ ಹೆಸರು ನಮೂದಿಸದೇ ಇರುವುದು ಕಂಡುಬಂದ ಹಿನ್ನೆಲೆಯಲ್ಲಿ ಅವುಗಳ ನಿರ್ವಹಣೆಯನ್ನು ನಿಯಮಾನುಸಾರ ಮಾಡಬೇಕು ಎಂದು ಅಲ್ಲಿನ ವೈದ್ಯರಿಗೆ ತಿಳಿಸಿದ ಅವರು, ಸರಿಯಾಗಿ ನಿರ್ವಹಿಸದೇ ಇರುವ ವೈದ್ಯಾಧಿಕಾರಿಗಳ ವಿರುದ್ಧ ಕ್ರಮವನ್ನು ಕೈಗೊಳ್ಳಲು ಸಹ ಜಿಲ್ಲಾ ಸರ್ಜನ್ ಅವರಿಗೆ ತಿಳಿಸಿದರು.



ಆರೋಗ್ಯ ಶಿಕ್ಷಣ ಮಾಹಿತಿ

ತಾಯಿ ಆರೈಕೆ ಘಟಕ ಹಾಗೂ ಹಾಲುಣಿಸುವ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ವ್ಯವಸ್ಥೆ ವೈಜ್ಞಾನಿಕವಾಗಿ ಇಲ್ಲದೇ ಇರುವುದು ಕಂಡು ಬಂದ ಹಿನ್ನೆಲೆಯಲ್ಲಿ ಇಲ್ಲಿಗೆ ಮೂಲಭೂತ ಸೌಕರ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಕಲ್ಪಿಸಬೇಕೆಂದು ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದ ಅವರು, ತಾಯಂದಿರಿಗೆ ಆರೋಗ್ಯ ಶಿಕ್ಷಣ ಮಾಹಿತಿ ನೀಡಬೇಕು ಎಂದರು.

ಪೌಷ್ಟಿಕ ಪುನಶ್ಚೇತನ ಕೇಂದ್ರ ತೆರೆಯಿರಿ ಬವ

ಜಿಲ್ಲಾ ಕೇಂದ್ರದಲ್ಲಿ ಮಕ್ಕಳ ಪೌಷ್ಟಿಕ ಪುನಶ್ಚೇತನ ಕೇಂದ್ರ ಇಲ್ಲದೇ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಕೇಂದ್ರದಲ್ಲಿ ಇವೆ. ಇಂದು ಸಂಜೆಯ ಒಳಗಾಗಿ ಜಿಲ್ಲಾ ಕೇಂದ್ರದಲ್ಲಿ ಮಕ್ಕಳ ಪೌಷ್ಟಿಕ ಪುನಶ್ಚೇತನ ಕೇಂದ್ರವನ್ನು ತೆರೆಯಬೇಕೆಂದು ಇಲ್ಲಿನ ಸ್ಥಳೀಯ ವೈದ್ಯಾಧಿಕಾರಿಗಳಿಗೆ ಸೂಚನೆ ಕೊಡುವುದರ ಜೊತೆಗೆ ದೂರವಾಣಿ ಮೂಲಕ ಎನ್‌ಆರ್‌ಸಿ ಕೇಂದ್ರದ ಉಪ ನಿರ್ದೇಶಕ ಕಲಾವತಿ ಅವರೊಂದಿಗೆ ಚರ್ಚಿಸಿದರು. ಜಿಲ್ಲಾ ಕೇಂದ್ರದಲ್ಲಿ ಉತ್ತಮವಾದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಖಾಸಗಿ ವತಿಯಿಂದ ನಿರ್ಮಿಸಿದ್ದಾರೆ. ಅವರು ಮತ್ತು ಅವರ ಕುಟುಂಬದವರಿಗೆ ಧನ್ಯವಾದಗಳು, ಆದರೆ ಕಳೆದ 4 ವರ್ಷಗಳಿಂದ ಸರಕಾರದ ಸುಪರ್ದಿಗೆ ಈ ಆಸ್ಪತ್ರೆ ವಹಿಸಿದ್ದಾರೆ. ಇಲ್ಲಿನ ಆರೋಗ್ಯ ಸೇವೆಗಳು ಜನರಿಗೆ ಮತ್ತು ಮಕ್ಕಳಿಗೆ ಸರ್ಮಕವಾಗಿ ಸಿಗಬೇಕು ಎಂದರು.
ನಗರದ ಆದರ್ಶ ಆಸ್ಪತ್ರೆಯ ಸ್ಕ್ಯಾನಿಂಗ್ ಸೆಂಟರ್‌ಗೆ ಭೇಟಿ ನೀಡಿ, ಅಲ್ಲಿನ ಕಡತಗಳು, ನಿಗದಿತ ನಮೂನೆಯ ರಿಜಿಸ್ಟರ್‌ಗಳ ನಿರ್ವಹಣೆ, ಸೂಚನಾ ಫಲಕಗಳ ಅಳವಡಿಕೆ, ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿರುವುದರ ಬಗ್ಗೆ ಪರಿಶೀಲಿಸಿದ ಅವರು, ಸರಕಾರದ ಮಾರ್ಗಸೂಚಿ ಅನ್ವಯ ದಾಖಲೆಗಳನ್ನು ನಿರ್ವಹಣೆ ಮಾಡಬೇಕು. ಗರ್ಭಿಣಿ ಮಹಿಳೆಯರಿಗೆ ಸ್ಕ್ಯಾನಿಂಗ್ ಮಾಡುವ ಮುನ್ನ ಸರಕಾರದ ಪೋರ್ಟಲ್ ಬಾಲಿಕಾ ಸಾಫ್ಟ್‌ವೇರ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಬೇಕು ಎಂದರು.
ಈ ಸಂದರ್ಭದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಾ. ತಿಪ್ಪೇಸ್ವಾಮಿ ಕೆ.ಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ, ಜಿಲ್ಲಾ ಸರ್ಜನ್ ಡಾ. ಅಶೋಕ್, ವಾರ್ತಾಧಿಕಾರಿ ಮಂಜುನಾಥ್ ಬಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಾಗರತ್ನ ನಾಯಕ್, ಆರ್.ಸಿ.ಎಚ್ ಅಧಿಕಾರಿ ಜ್ಯೋತ್ಸ್ನಾ ಬಿ.ಕೆ., ನಿವಾಸಿ ವೈದ್ಯಾಧಿಕಾರಿ ವಾಸುದೇವ್ ಮತ್ತಿತರರು ಉಪಸ್ಥಿತರಿದ್ದರು.

ಸಹಾಯವಾಣಿ ನಮೂದಿಸಿ

ಬ್ರಹ್ಮಾವರ ಪೊಲೀಸ್ ಠಾಣೆ, ಹಂದಾಡಿಯ ಗ್ರಾ.ಪಂ. ಕಚೇರಿಗೆ ಅಲ್ಲಿನ ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳಿಗೆ ಆಯೋಗದ ಅಧ್ಯಕ್ಷ ಭೇಟಿ ನೀಡಿ, ಪರಿಶೀಲಿಸಿದರು. ಮಕ್ಕಳ ಸಹಾಯವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ಎಲ್ಲಾ ಕಚೇರಿಗಳಲ್ಲಿಯೂ ನಮೂದಿಸಬೇಕು. ಗ್ರಾ.ಪಂ.ಲ್ಲಿ ಮಕ್ಕಳ ಗ್ರಾಮಸಭೆ, ಮಕ್ಕಳ ರಕ್ಷಣಾ ಸಮಿತಿ ಸಭೆ ಹಾಗೂ ಶಿಕ್ಷಣ ಕಾರ್ಯಪಡೆಯ ಸಭೆಯನ್ನು ಆಗಿಂದಾಗ್ಗೆ ನಡೆಸಬೇಕೆಂದರು.

ಬಂಟಕಲ್ ಕಾಲೇಜಿನಲ್ಲಿ ರಾಷ್ಟ್ರಮಟ್ಟದ ಸ್ಪರ್ಧೆ 'ವರ್ಣೋತ್ಸವ ಸಮಾರೋಪ

ಕಲಿಕೆಯು ನಿರಂತರವಾಗಿರಲಿ: ಶ್ರೀ ವಿಶ್ವವಲ್ಲಭ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ರಾಷ್ಟ್ರ ಮಟ್ಟದ ತಾಂತ್ರಿಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ 'ವರ್ಣೋತ್ಸವ 2026' ಸಮಾರೋಪ ಸಮಾರಂಭವು ಗುರುವಾರ ಕಾಲೇಜಿನ ಆವರಣದಲ್ಲಿ ವಿಜೃಂಭಣೆಯಿಂದ ಜರುಗಿತು. ವಿವಿಧ ತಾಂತ್ರಿಕ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜುಗಳ ಸುಮಾರು 550ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀ ಸೋದೆ ವಾದಿರಾಜ ಮಠ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದರು ಅಧ್ಯಕ್ಷತೆ ವಹಿಸಿ ವಿವಿಧ ತಾಂತ್ರಿಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಬಹುಮಾನ ವಿತರಿಸಿ ತಮ್ಮ ಆಶೀರ್ವಚನದಲ್ಲಿ ಕಲಿಕೆಯು ನಿರಂತರವಾಗಿ ಹರಿಯುತ್ತಿರಬೇಕು. ಕೃತಕ ಬುದ್ಧಿಮತ್ತೆಯ ಈ ಯುಗದಲ್ಲಿ ಕಲಿಕೆ ಎಂದಿಗೂ ನಿಲ್ಲದ ಪ್ರಕ್ರಿಯೆಯಾಗಿರಬೇಕು ಎಂದು ಹೇಳಿದರು.
ಶ್ರೀ ಸೋದೆ ವಾದಿರಾಜ ಮಠ ಶಿಕ್ಷಣ ಪ್ರತಿಷ್ಠಾನ ಕಾರ್ಯದರ್ಶಿ ರತ್ನಕುಮಾರ್ ಮಾತನಾಡಿ, ಯುವ ಇಂಜಿನಿಯರ್‌ಗಳು ತಮ್ಮ ಕಲ್ಪನೆಗಳನ್ನು ಕಾರ್ಯರೂಪಕ್ಕೆ ತಂದು ಆತ್ಮನಿರ್ಭರ ಭಾರತ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದರು.



ಜವಹಾರ್ ಲಾಲ್ ಕಾಲೇಜು ಚಾಂಪಿಯನ್

ಶಿವಮೊಗ್ಗದ ಜವಹಾರ್ ಲಾಲ್ ನೆಹರು ನ್ಯೂ ತಾಂತ್ರಿಕ ಕಾಲೇಜು ತಂಡ 'ವರ್ಣೋತ್ಸವ 2026' ಚಾಂಪಿಯನ್ ಶಿಪ್ ಬಹುಮಾನ ಪಡೆದುಕೊಂಡರೆ ಮೂಡಬಿದಿರೆಯ ಮಂಗಳೂರು ತಾಂತ್ರಿಕ ಮಹಾವಿದ್ಯಾಲಯವು ದ್ವಿತೀಯ ಸ್ಥಾನದೊಂದಿಗೆ ರನ್ನರ್ಸ್ ಅಪ್ ಬಹುಮಾನ ಪಡೆದುಕೊಂಡಿತು. ಈ ವರ್ಷ ವಿಶೇಷವಾಗಿ ತಾಂತ್ರಿಕ ಸ್ಪರ್ಧೆ ಚಾಂಪಿಯನ್‌ಶಿಪ್ ಸೈಂಟ್ ಜೋಸೆಫ್ ಇಂಜಿನಿಯರಿಂಗ್ ಕಾಲೇಜು ಹಾಗೂ ಸಾಂಸ್ಕೃತಿಕ ವಿಭಾಗದಲ್ಲಿ ಎನ್‌ಎಂಎ ಎಂಐಟಿ, ನಿಟ್ಟೆ ಪಡೆದುಕೊಂಡಿತು.

ಬೆಂಗಳೂರಿನ ಪ್ರತಿಷ್ಠಿತ ಕಂಪೆನಿ ಲೀಪ್ ಫ್ರಾಗ್ ಪ್ರೈವೇಟ್ ಲಿಮಿಟೆಡ್, ಭೀಮಾ ಜ್ಯುವೆಲ್ಲರ್ಸ್ ಪ್ರೈವೇಟ್ ಲಿಮಿಟೆಡ್, ಎಸರ್ ಪ್ರೈವೇಟ್ ಲಿಮಿಟೆಡ್, ಸಿಸ್-ಕಾಂಪ್, ಪ್ರಕಾಶ್ ಶೆಟ್ಟಿಗಾರ್ ಬಂಟಕಲ್ ಹಾಗೂ ಇತರ ಹಿತೈಷಿಗಳು ಇವರು ವರ್ಣೋತ್ಸವ 2026 ಪ್ರಾಯೋಜಕತ್ವ ನೀಡಿ ಸಹಕರಿಸಿದರು.
ಸಂಸ್ಥೆಯ ಪ್ರಾಂಶುಪಾಲ ಡಾ. ನಾಗರಾಜ್ ಭಟ್ ಸ್ವಾಗತಿಸಿದರು.. ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷ ಪಿ. ಶ್ರೀನಿವಾಸ ತಂತ್ರಿ, ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ.ಡಾ. ರಾಧಾಕೃಷ್ಣ ಎಸ್ ಐತಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಡಾ. ರೆನಿಟಾ ಶರೋನ್ ಮೋನಿಸ್ ವರ್ಣೋತ್ಸವ 2026 ಇದರ ವರದಿ ವಾಚಿಸಿದರು. ಪ್ರಾಧ್ಯಾಪಕ ರಾಘವೇಂದ್ರ ಜಿ ಎಸ್ ವಿವಿಧ ತಾಂತ್ರಿಕ-ಸಾಂಸ್ಕೃತಿಕ ಮತ್ತು ಮ್ಯಾನೇಜ್‌ಮೆಂಟ್ ಸ್ಪರ್ಧೆಗಳ ವಿಜೇತರ ಪಟ್ಟಿ ವಾಚಿಸಿದರು. ಸಂಜೆ ಕಾಲೇಜಿನ ಯಕ್ಷಗಾನ ಸಂಘ 'ಯಕ್ಷಸಿಂಚನ'ದಿಂದ ಯಕ್ಷಗಾನ ಪ್ರದರ್ಶನ ನಡೆಯಿತು.

ಪ್ರತಿ ಮನೆ ಮನೆಗೂ ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಕ್ರಮ

ಜೆಜೆಎಂ ಸಮರ್ಪಕ ಜಾರಿ: ಶಾಸಕ ಗುರುರಾಜ್

ಉಪ್ಪುಂದ: ಪ್ರತಿ ಮನೆ ಮನೆಗೂ ಸಮರ್ಪಕ ಕುಡಿಯುವ ನೀರು ಜಲಜೀವನ್ ಮಿಷನ್ ಯೋಜನೆ ಮೂಲಕ ಪೂರೈಕೆಯಾಗಬೇಕು ಎನ್ನುವ ಪ್ರಧಾನಿ ನರೇಂದ್ರ ಮೋದಿಯವರ ಕನಸು ಹಾಗೂ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆ ಬೈಂದೂರು ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯಲ್ಲಿ ದೊರೆಯಬೇಕು ಎಂದು ಸಂಸದ ಬಿ.ವೈ. ರಾಘವೇಂದ್ರ ವಿಶೇಷ ಮುತುವರ್ಜಿವಹಿಸಿದ್ದಾರೆ. ಶಾಸಕನಾಗಿ ಈಗಾಗಲೇ ನಾಲ್ಕೈದು ಬಾರಿ ಈ ವಿಷಯದ ಕುರಿತು ಅಧಿಕಾರಿಗಳ ಸಭೆ ನಡೆಸಿದ್ದೇನೆ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.
ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರಂಭದಿಂದ ಈ ಯೋಜನೆ ಪ್ರತಿ ಗ್ರಾಮದಲ್ಲೂ ಹತ್ತಾರು ಸಮಸ್ಯೆಯಿಂದ ಸುದ್ದಿಯಾಗಿದ್ದು, ಹಲವು ಬಾರಿ ಸಭೆ ನಡೆಸಲಾಗಿದೆ. ಕಳೆದ ಬಾರಿ ಸಂಸದರು ಈ ಬಗ್ಗೆ ವಿಶೇಷ ಸಭೆ ನಡೆಸಿ ಸದ್ಯ ಗ್ರಾಮ ಪಂಚಾಯತ್ ಸಂಪರ್ಕಕ್ಕೆ ಜೋಡಣೆ ಮಾಡುವ ಸಲಹೆ ನೀಡಿದಾಗ ಒಂದಿಷ್ಟು ಕಡೆ ನೀರಿನ ಪೂರೈಕೆಯಾಗುತ್ತಿದೆ. ಈ ಬಗ್ಗೆ ಅಧಿಕಾರಿಗಳಿಂದ ಪೂರ್ಣ ಮಾಹಿತಿ ಪಡೆದು ಯೋಜನೆ ಸಮರ್ಪಕವಾಗಿ ಅನುಷ್ಠಾನ ಮಾಡಲಾಗುವುದು ಎಂದರು.

ವಿಶೇಷ ಚೇತನರಿಗೆ ಉದ್ಯೋಗ ಹಬ್ಬ ಇಂದು

ಸಮೃದ್ಧ ಬೈಂದೂರು ಸಹಕಾರದೊಂದಿಗೆ ಅಸಿಸ್ಟ್ ಟೆಕ್ ಫೌಂಡೇಶನ್ ನೇತೃತ್ವದಲ್ಲಿ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ಆದಿದ್ವಾರ ಜಾಬ್ ಹಬ್ಬ (ವಿಶೇಷ ಚೇತನರಿಗಾಗಿ ಉದ್ಯೋಗ ಹಬ್ಬ) ಮಾ.14ರಂದು ಬೆಳಗ್ಗೆ ಗಂಟೆ 9ರಿಂದ ಸಂಜೆ ಗಂಟೆ 5 ವರೆಗೆ ಕುಂದಾಪುರ ಎಂ.ಐ.ಟಿ. ಕಾಲೇಜಿನಲ್ಲಿ ನಡೆಯಲಿದೆ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು. ವಿಶೇಷ ಚೇತನರಿಗೆ ಅವರ ಕೌಶಲ ಗುರುತಿಸಿ ಅಗತ್ಯ ತರಬೇತಿ ಒದಗಿಸಿ ಸಮಾಜಮುಖಿಯಾಗಿ ಬದುಕುವಂತೆ ಮಾಡಲು ಈ ಸಂಸ್ಥೆ ಕೆಲಸ ಮಾಡುತ್ತಿದೆ. ಇದರಲ್ಲಿ ಭಾಗವಹಿಸಲು ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯ ಒದಗಿಸಲಾಗಿದೆ ಎಂದು ಶಾಸಕರು ತಿಳಿಸಿದರು.



ಅಪಪ್ರಚಾರ ನೋವು ತಂದಿದೆ

ಕಳೆದ ಹಲವು ದಿನಗಳಿಂದ ಬೈಂದೂರು ಶಾಸಕನಾದ ನನ್ನ ತೇಜೋವಧೆ ಮಾಡುವ ಪ್ರಯತ್ನ ನಡೆಯುತ್ತಿದೆ. ಸಾಕಷ್ಟು ಅಪಪ್ರಚಾರ ಮಾಡಲಾಗುತ್ತಿದೆ. ಈ ವಿಷಯದ ಬಗ್ಗೆ ಪ್ರತಿಕ್ರಿಯೆ ನೀಡಲು ಒತ್ತಡ ಇದ್ದರೂ ಸಹ ನಾನು ಈ ಬಗ್ಗೆ ಮಾತನಾಡಲು ಇಚ್ಛಿಸುವುದಿಲ್ಲ ಎಂದರು.

ಸ್ವಯಂ ಚಾಲಿತ ಕೈ ಅಳವಡಿಕೆ

ವಿಕಲಚೇತನರಿಗೆ ಅನುಕಂಪ ತೋರುವ ಬದಲು ಅವರನ್ನು ಸಮಾಜದಲ್ಲಿ ಸ್ವಾವಲಂಬಿಗಳನ್ನಾಗಿ ರೂಪಿಸುವ ಆಸೆ ಹಲವು ವರ್ಷಗಳಿಂದ ಇದ್ದು ಇದು ಅಸಿಸ್ಟ್ ಟೆಕ್ ಕಂಪನಿಯ ಮೂಲಕ ಸಾಧ್ಯವಾಗಲಿದೆ. ಎರಡು ಕೈಗಳನ್ನು ಅಥವಾ ಕಾಲುಗಳನ್ನು ಕಳೆದುಕೊಂಡವರಿಗೆ ಈ ಕಂಪನಿಯ ಮೂಲಕ ಎಐ ಹ್ಯಾಂಡ್ (ಮನಸ್ಸಿನ ಸೂಚನೆಯಂತೆ ಕೆಲಸ ಮಾಡುವ ಸ್ವಯಂ ಚಾಲಿತ ಕೈ) ಅಳವಡಿಕೆ ಮಾಡಿ ಅವರ ಅನುಕೂಲಕ್ಕೆ ತಕ್ಕಂತಹ ಉದ್ಯೋಗ ನೀಡಲಾಗುತ್ತದೆ ಎಂದರು.
ಸುದ್ದಿಗೋಷ್ಠಿಯಲ್ಲಿ ಸಮೃದ್ಧ ಜನಸೇವಾ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಬಿ. ಎಸ್. ಸುರೇಶ ಶೆಟ್ಟಿ, ಬೈಂದೂರು ಬಿಜೆಪಿ ಮಂಡಲದ ಅಧ್ಯಕ್ಷೆ ಅನಿತಾ ಆರ್. ಕೆ., ಗೋಪಾಲ ಪೂಜಾರಿ ವಸ್ರೆ, ಕರಣ್ ಪೂಜಾರಿ, ಶ್ರೀಗಣೇಶ ಗಾಣಿಗ ಇದ್ದರು.

ಬಂಟಕಲ್ಲು ಶಾಲಾ ಶತ ಸಂಭ್ರಮ – ಶಾಲಾ ಕ್ರೀಡೋತ್ಸವಕ್ಕೆ ಚಾಲನೆ



ಶಿರ್ವ: ಏ. 11 ಮತ್ತು 12ರಂದು ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ಅನುದಾನಿತ ಹಿರಿಯ ಪ್ರಾಥಮಿಕ ಶಾಲಾ ಶತಮಾನೋತ್ಸವದ ಸಮಾರೋಪ ಸಮಾರಂಭ 'ಶತ ಸಂಭ್ರಮ' ಜರುಗಲಿದ್ದು ಪೂರ್ವಭಾವಿಯಾಗಿ ಶಾಲಾ ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿ ಪೋಷಕರಿಗೆ ಶುಕ್ರವಾರ ಸ್ವಾತಂತ್ರ್ಯ ಹೋರಾಟಗಾರ ಬಂಟಕಲ್ಲು ಕೆ.ಎಲ್. ಶರ್ಮಾ ಕ್ರೀಡಾಂಗಣದಲ್ಲಿ ಜರುಗಿದ ಶಾಲಾ ಕ್ರೀಡೋತ್ಸವಕ್ಕೆ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇವಳದ ಆಡಳಿತ ಮೊಕ್ತೇಸರ ಗಂಪದಬೈಲು ಜಯರಾಮ ಪ್ರಭು ದೀಪ ಪ್ರಜ್ವಲನದ ಮೂಲಕ ಚಾಲನೆ ನೀಡಿದರು.
ಅಧ್ಯಕ್ಷತೆಯನ್ನು ಶಾಲಾ ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಮಾಧವ ಕಾಮತ್ ವಹಿಸಿದ್ದರು. ಶಾಲಾ ಸಂಚಾಲಕ ರಾಮದಾಸ್ ಪ್ರಭು, ಶಾಲಾ ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ನವೀನ್ ಸನಿಲ್, ಶಾಲಾ ಮುಖ್ಯ ಶಿಕ್ಷಿ ಸಂಗೀತಾ ಆರ್ ಪಾಟ್ಕರ್, ಸಮಿತಿಯ ಸದಸ್ಯರು ಹಾಗೂ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಾದ ಎಸ್ .ಎಸ್. ಪ್ರಸಾದ್ ವೇದಿಕೆಯಲ್ಲಿದ್ದರು. ಶತಮಾನೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ಆರ್.ಪಾಟ್ಕರ್ ನಿರೂಪಿಸಿದರು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ರವೀಂದ್ರ ಪಾಟ್ಕರ್, ಸಮಿತಿಯ ಕೋಶಾಧಿಕಾರಿ ವಿಶ್ವನಾಥ್ ಬಾಂದೇಲ್ಕರ್, ಸಹಿತ ಶಿಕ್ಷಕಿಯರು, ವಿದ್ಯಾರ್ಥಿಗಳು, ವಿದ್ಯಾರ್ಥಿಗಳ ಪೋಷಕರು, ಶತಮಾನೋತ್ಸವ ಸಮಿತಿ ಸದಸ್ಯರು, ಶಾಲಾ ಹಳೆವಿದ್ಯಾರ್ಥಿಗಳು ಉಪಸ್ಥಿತರಿದ್ದರು. ನಂತರ ಶಾಲಾ ವಿದ್ಯಾರ್ಥಿಗಳಿಗೆ, ಅಂಗನವಾಡಿ ಪುಟಾಣಿಗಳಿಗೆ, ವಿದ್ಯಾರ್ಥಿಗಳ ಪೋಷಕರಿಗೆ ವಿವಿಧ ಆಟೋಟ ಸ್ಪರ್ಧೆಗಳು ಜರುಗಿದವು.

ಕಲಾತ್ಮಕ ಮುತ್ತು-ಮಣಿಗಳ ಲೋಕದಲ್ಲಿ ಅರಳಿದ ಬಬ್ಬುಸ್ವಾಮಿ

■ ಸುದೀಪ್ ರಾಜ್ ಸುಳ್ಯ

ಉಡುಪಿ: ಕರಾವಳಿಯ ಜಾನಪದ ಸಂಸ್ಕೃತಿಯಲ್ಲಿ ದೈವಾರಾಧನೆಗೆ ಭಕ್ತಿಪೂರ್ವಕವಾದ ಹಿನ್ನೆಲೆಯಿದೆ. ಈ ಪರಂಪರೆಯನ್ನು ಕಲೆಯ ಮೂಲಕ ಅಷ್ಟೇ ಭವ್ಯವಾಗಿ ಕಟ್ಟಿಕೊಡುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ.
ಈಗ ಮಣಿಪಾಲದ ಕಲಾವಿದ ಶ್ರೀನಾಥ್ ಮಣಿಪಾಲ ಅವರು ಮುತ್ತು ಮತ್ತು ಮಣಿಗಳನ್ನು ಬಳಸಿ ಕೊಂಡು ಸಿದ್ಧಪಡಿಸಿರುವ ಬಬ್ಬುಸ್ವಾಮಿ ದೈವದ ಕಲಾಕೃತಿಯು ಕಲಾಭಿಮಾನಿಗಳ ಅಪಾರ ಮೆಚ್ಚುಗೆಗೆ ಪಾತ್ರವಾಗಿದೆ. ದೈವದ ರೂಪವು ಅತ್ಯಂತ ಸೌಮ್ಯ ಹಾಗೂ ಕಲಾತ್ಮಕವಾಗಿ ಮುತ್ತುಗಳಲ್ಲಿ ಅರಳಿ ನಿಂತಿರುವುದು ಈ ಕೃತಿಯ ವೈಶಿಷ್ಟ್ಯ. ಸಾಮಾನ್ಯವಾಗಿ ಚಿತ್ರಕಲೆಯಲ್ಲಿ ಬಣ್ಣಗಳ ಬಳಕೆ ಹೆಚ್ಚಾಗಿರುತ್ತದೆ. ಆದರೆ ಶ್ರೀನಾಥ್ ಅವರು ಇಲ್ಲಿ ವಿಭಿನ್ನ ಹಾದಿ ತುಳಿದಿದ್ದಾರೆ. ಕೇವಲ ಮಣಿಗಳು ಮತ್ತು ಮುತ್ತುಗಳನ್ನೇ ಪ್ರಧಾನವಾಗಿಸಿಕೊಂಡು ಈ ಕಲಾಕೃತಿಯನ್ನು ರೂಪಿಸಲಾಗಿದೆ. ಸುಮಾರು 6 ಅಡಿ ಎತ್ತರ ಹಾಗೂ 4 ಅಡಿ ಅಗಲದ ಈ ಬೃಹತ್ ಕಲಾಕೃತಿಯನ್ನು ಸಿದ್ಧಪಡಿಸಲು ಸುಮಾರು 8 ಕೆಜಿಗೂ ಅಧಿಕ ತೂಕದ ವೈವಿಧ್ಯಮಯ ಮುತ್ತು ಮತ್ತು ಮಣಿಗಳನ್ನು ಬಳಸಲಾಗಿದೆ. ಈ ಪ್ರತಿಯೊಂದು ಮಣಿಯನ್ನು ಅತ್ಯಂತ ಜಾಗರೂಕತೆಯಿಂದ ದೈವದ ಮುಖವರ್ಣಿಕೆಗೆ ತಕ್ಕಂತೆ ಜೋಡಿಸಲಾಗಿದೆ. ದೈವದ ಪ್ರಭಾವಳಿ, ಆಭರಣಗಳು ಮತ್ತು ಶಿರಸ್ತ್ರಾಣದ (ಮುಟ್ಟಾಳೆ) ಸೂಕ್ಷ್ಮ ವಿನ್ಯಾಸಗಳನ್ನು ಮೂಡಿಸಲು ವಿವಿಧ ಗಾತ್ರ, ಬಣ್ಣದ ಮಣಿಗಳನ್ನು ಪೋಣಿಸಲಾಗಿದೆ.



ಈ ಕಲಾಕೃತಿಯನ್ನು ಹತ್ತಿರದಿಂದ ಗಮನಿಸಿದಾಗ ಕಲಾವಿದನ ತಾಳ್ಮೆ ಮತ್ತು ಶ್ರದ್ಧೆ ಎದ್ದು ಕಾಣುತ್ತದೆ. ದೈವದ ತೀಕ್ಷ್ಣವಾದ ಕಣ್ಣುಗಳು ಮತ್ತು ಮುಖದ ಗಂಭೀರತೆ ಮಣಿಗಳಲ್ಲಿ ಮೂಡಿಸುವುದು ಒಂದು ಸವಾಲಿನ ಕೆಲಸ. ಆದರೆ ಶ್ರೀನಾಥ್ ಅನುಭವದ ಮೂಲಕ ಈ ದೃಶ್ಯ ವೈಭವವನ್ನು ಮುತ್ತುಗಳ ಹೊಳಪಿನಲ್ಲಿ ಅತ್ಯಂತ ನೈಜವಾಗಿ ಸೆರೆಹಿಡಿದಿದ್ದಾರೆ. ದೈವಾರಾಧನೆಯ ಚೌಕಟ್ಟನ್ನು ಕಲಾತ್ಮಕವಾಗಿ ಜಾಗತಿಕ ಮಟ್ಟಕ್ಕೆ ಪರಿಚಯಿಸುವ ಇಂತಹ ಪ್ರಯತ್ನಗಳು ತುಳುನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮತ್ತಷ್ಟು ಹೆಚ್ಚಿಸಿವೆ.

ಕೋಟ: ಹಿರಿಯ ನಾಗರಿಕರ ಆರೋಗ್ಯ ಪಾಲನೆ-ಮಾನಸಿಕ ನೆಮ್ಮದಿ ಉಪನ್ಯಾಸ



ಕೋಟ: ಹಿರಿಯ ನಾಗರಿಕರ ವೇದಿಕೆ ಕೋಟ ಗಿಳಿಯಾರು ಮಾಸಿಕ ಸಭೆಯಲ್ಲಿ ಹಿರಿಯ ನಾಗರಿಕರ ಆರೋಗ್ಯ ಪಾಲನೆ ಮತ್ತು ಮಾನಸಿಕ ನೆಮ್ಮದಿ ಕುರಿತು ಉಪನ್ಯಾಸ ಕಾರ್ಯಕ್ರಮ ಮೂಡುಗಿಳಿಯಾರಿನ ಅಲ್ಸೆಕೆರೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಸಭಾಂಗಣದಲ್ಲಿ ಇತ್ತೀಚಿಗೆ ನಡೆಯಿತು.
ವೇದಿಕೆ ಅಧ್ಯಕ್ಷ ಹಂದಕುಂದ ಸೋಮಶೇಖರ ಶೆಟ್ಟಿ ಗಿಳಿಯಾರು ಅಧ್ಯಕ್ಷತೆ ವಹಿಸಿ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಕುರಿತು ಮಾಹಿತಿ ನೀಡಿದರು. ಉಡುಪಿ ಡಾ. ಎ.ವಿ. ಬಾಳಿಗಾ ಆಸ್ಪತ್ರೆಯ ಖ್ಯಾತ ಮನೋರೋಗ ತಜ್ಞ ಡಾ. ವಿರೂಪಾಕ್ಷ ದೇವರುಮನೆ ಹಿರಿಯ ನಾಗರಿಕರ ಸ್ವಸ್ಥ ಜೀವನ ಸದೃಢ ಆರೋಗ್ಯದ ಬಗ್ಗೆ ಮಾನಸಿಕ ನೆಮ್ಮದಿಯ ಕುರಿತು ಸರಳ ವ್ಯಾಯಾಮದ ಬಗ್ಗೆ ವಿಚಾರಗೋಷ್ಠಿ ನಡೆಸಿಕೊಟ್ಟರು.
ಈ ಸಂದರ್ಭದಲ್ಲಿ ಹೊಸತಾಗಿ ಸೇರ್ಪಡೆಗೊಂಡ ಸದಸ್ಯರಾದ ಗೋಪಾಲ ಕೃಷ್ಣ ಜೋಗಿ, ಸಿ.ಎ. ಬ್ಯಾಂಕ್ ಮಾಜಿ ಅಧ್ಯಕ್ಷ ತಿಮ್ಮ ಪೂಜಾರಿ, ನಿವೃತ್ತ ಉಪನ್ಯಾಸಕ ಶ್ರೀಪತಿ ಜೋಗಿ ಇವರನ್ನು ಮುಖ್ಯ ಅತಿಥಿ ವಿರೂಪಾಕ್ಷ ದೇವರುಮನೆ ಗೌರವಿಸಿದರು. ಹುಟ್ಟುಹಬ್ಬ ಆಚರಿಸಿಕೊಂಡ ಜಿ. ಸರಸ್ವತಿಯಮ್ಮ, ಸುಬ್ರಹ್ಮಣ್ಯ ಹೇರ್ಳೆ, ಸುಶೀಲ ಶೆಟ್ಟಿ, ಶಶಿಕಲಾ ಭಟ್, ಕೃಷ್ಣಮೂರ್ತಿ ಮರಕಾಲ, ಎಂ. ಭಾಸ್ಕರ ಶೆಟ್ಟಿ ಇವರನ್ನು ಅಧ್ಯಕ್ಷರು ಅಭಿನಂದಿಸಿದರು. ಕಾರ್ಯದರ್ಶಿ ಶಂಕರ ಆಚಾರ್ ವರದಿ ವಾಚಿಸಿ,ನಿರೂಪಿಸಿ, ವಂದಿಸಿದರು.

ಪ್ರವಾಸಿಗರನು ಸೆಳೆಯಲು ನೂತನ ಯೋಜನೆ | 1.5 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿದೆ ನೃತ್ಯ ಕಾರಂಜಿ

ಸುಂದರ ಸರೋವರದಲ್ಲಿ ಕಂಗೊಳಿಸುವ ಕಾರ್ಕಳ ಆನೆಕೆರೆ ಬಸದಿಗೆ ಹೊಸ ಮೆರುಗು

ಕಾರ್ಕಳ: ಕಾರ್ಕಳ ಸುಂದರ ಸರೋವರದಲ್ಲಿ ಕಂಗೊಳಿಸುವ ಆನೆಕೆರೆ ಬಸದಿಗೆ ಹೊಸ ಮೆರುಗು ದೊರೆಯಲಿದೆ. ಬಾಹುಬಲಿಮಹಾಮಸ್ತಕಾಭಿಷೇಕದ ಹೊಸ್ತಿಲಲ್ಲಿ ಆನೆಕೆರೆಯನ್ನು ಆಕರ್ಷಕಗೊಳಿಸಿ ದೊಡ್ಡ ಪ್ರಮಾಣದಲ್ಲಿ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಸುಮಾರು 1.5 ಕೋಟಿ ರೂ. ವೆಚ್ಚದಲ್ಲಿ ನೃತ್ಯ ಕಾರಂಜಿ ನಿರ್ಮಾಣವಾಗಲಿದೆ.
ಈ ಮೂಲಕ ಆನೆಕೆರೆಯಲ್ಲಿ ಹೊಸ ಕಳೆ ಮೂಡಲಿದ್ದು, ಧಾರ್ಮಿಕ ಕೇಂದ್ರದೊಂದಿಗೆ ಪ್ರವಾಸಿ ತಾಣವಾಗಿಯೂ ಪ್ರಸಿದ್ಧಿ ಪಡೆಯಲಿದೆ.

ಕಾರ್ಕಳದ ರಮಣೀಯ ತಾಣ

5 ಶತಮಾನಗಳಷ್ಟು ಪ್ರಾಚೀನ, ಐವರು ತೀರ್ಥಂಕರರ ದಿವ್ಯ ಬಿಂಬಗಳಿಂದ ಕೂಡಿರುವ ಆನೆಕೆರೆ ಬಸದಿ ಜೀರ್ಣೋದ್ಧಾರಗೊಂಡು 2024 ಜ. 18ರಿಂದ ಜ. 22ರವರೆಗೆ ಪಂಚಕಲ್ಯಾಣ ಮಹೋತ್ಸವವು ವೈಭವ, ಸಂಭ್ರಮದಿಂದ ಜರುಗಿತ್ತು. ಭೈರವ ಅರಸು ವಂಶದ ಪಾಂಡ್ಯಪ್ಪೊಡೆಯ ಕಟ್ಟಿಸಿರುವ ಈ ಬಸದಿಯು ಸುಮಾರು 24.66 ಎಕ್ರೆ ವಿಸ್ತೀರ್ಣದ ಕೆರೆ ಹೊಂದಿದ್ದು ಕಾರ್ಕಳದ ರಮಣೀಯ ತಾಣಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ.
1545ರಲ್ಲಿ ನಿರ್ಮಿಸಿದ ಆನೆಕೆರೆ ಬಸದಿಯಲ್ಲಿ ಪೂರ್ವಾಭಿಮುಖವಾಗಿ ಭಗವಾನ್ ಶ್ರೀ ಆದಿನಾಥ ಸ್ವಾಮಿ, ಪಶ್ಚಿಮಾಭಿಮುಖವಾಗಿ ಶ್ರೀ ಶಾಂತಿನಾಥ ಸ್ವಾಮಿ, ದಕ್ಷಿಣಾಭಿಮುಖವಾಗಿ ಶ್ರೀ ಚಂದ್ರಪ್ರಭ ಸ್ವಾಮಿ, ಉತ್ತರಾಭಿಮುಖವಾಗಿ ಶ್ರೀ ಮಹಾವೀರ ಸ್ವಾಮಿ ಹಾಗೂ ಮೇಗಿನ ನೆಲೆಯಲ್ಲಿ ಶ್ರೀ ಪಾರ್ಶ್ವನಾಥ ಸ್ವಾಮಿಯ ಪ್ರತಿಮೆ ಪ್ರತಿಷ್ಠಾಪಿಸಲಾಗಿದ್ದು ನಿತ್ಯ ಪೂಜೆ ನೆರವೇರುತ್ತಿದೆ.



ಖುಷಿಯ ವಿಚಾರ

ಸುಮಾರು 4.90 ಕೋಟಿ ರೂ. ವೆಚ್ಚದಲ್ಲಿ ಬಸದಿ ಜೀರ್ಣೋದ್ಧಾರಗೊಂಡಿತ್ತು. ಗೋಪುರ, ಸುತ್ತುಪೌಳಿ, ವಿದ್ಯುತ್ ದೀಪಾಲಂಕಾರ, ವಾಕಿಂಗ್ ಟ್ರ್ಯಾಕ್, ಟ್ರ್ಯಾಕ್‌ಗೆ ಲೈಟಿಂಗ್, ಹಾಸು ಕಲ್ಲು, ಗಾರ್ಡನ್ ನಿರ್ಮಾಣ ಮಾಡಲಾಗಿತ್ತು. ಅಂದು ಸಚಿವರಾಗಿದ್ದ ವಿ. ಸುನೀಲ್ ಕುಮಾರ್ ಸರ್ಕಾರದಿಂದ ದೊಡ್ಡ ಮೊತ್ತದ ಅನುದಾನ ಒದಗಿಸಿಕೊಟ್ಟಿದ್ದರು. ಈಗ ಕಾರಂಜಿ ರಚನೆ ಬಹಳ ಖುಷಿಯ ವಿಚಾರ.
● ಮಹಾವೀರ ಹೆಗ್ಡೆ, ಅಧ್ಯಕ್ಷರು, ಆನೆಕರೆ ಬಸದಿ ಅಭಿವೃದ್ಧಿ ಸಮಿತಿ

ಪ್ರವಾಸಿ ತಾಣವಾಗಿಸಲು ಸರ್ವ ಪ್ರಯತ್ನ

2027ರ ಮಹಾಮಸ್ತಕಾಭಿಷೇಕ ಹಿನ್ನೆಲೆಯಲ್ಲಿ ಹತ್ತಾರು ಯೋಜನೆ ರೂಪಿಸಲಾಗಿದೆ. ಆನೆಕೆರೆಯನು ಮತ್ತಷ್ಟು ಆಕರ್ಷಕಗೊಳಿಸುವ ನಿಟ್ಟಿನಲ್ಲಿ ಮೈಸೂರು ಕೆಆರ್‌ಎಸ್ ನಂತೆಯೇ ಸಂಗೀತ ಕಾರಂಜಿ ನಿರ್ಮಾಣವಾಗಲಿದೆ. ಇದಕ್ಕಾಗಿ ಸರಕಾರದಿಂದ 1.5 ಕೋಟಿ ರೂ. ಬಿಡುಗಡೆಗೊಳ್ಳಲಿದೆ.. ಕೇಂದ್ರ, ರಾಜ್ಯ ಸರಕಾರದ ಅನುದಾನ ಬಳಸಿ ಕಾರ್ಕಳವನು ಪ್ರವಾಸಿ ಕೇಂದ್ರವಾಗಿಸುವ ನಿಟ್ಟಿನಲ್ಲಿ ಸರ್ವ ಪ್ರಯತ್ನ ಮಾಡಲಾಗುವುದು.
● ವಿ. ಸುನಿಲ್ ಕುಮಾರ್, ಶಾಸಕರು,